ಕವಿರಾಜಮಾರ್ಗ

ಸಾಂಸ್ಕೃತಿಕ ಮುಖಾಮುಖಿ

ಸಂಪಾದಕ
ರಹಮತ್ ತರೀಕೆರೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಕವಿರಾಜಮಾರ್ಗ

ಸಾಂಸ್ಕೃತಿಕ ಮುಖಾಮುಖಿ

ಸಂಪಾದಕ
ರಹಮತ್ ತರೀಕೆರೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

KAVIRAJAMARGA : SAMSKRUTHIKA MUKHAMUKHI

Edited by
Rahamath Tarikere
Professor
Depatment of Kannada Literature Studies
Kannada University, Hampi
Vidyaranya 538 276

Published by
Prof. Mallepuram G.Venkatesha
Director, Prasaranga
Kannada University, Hampi
Vidyaranya 583 276

Pp: xvi+110, **Price: 60/-**

First Impression 2000
Second Impression(revised) 2008

www.kannadauniversity.org

ಪ್ರಕಾಶನ
ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಬೆಲೆ : ರೂ. ೬೦/-

ಮುಖಪುಟ : ಕೆ.ಕೆ.ಮಕಾಳಿ

ಅಕ್ಷರ ಸಂಯೋಜನೆ
ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್
ನೃಪತುಂಗನಗರ, ವಿದ್ಯಾರಣ್ಯ ೫೮೩ ೨೭೬

ಮುದ್ರಣ
ಆದಿತ್ಯ ಪ್ರಿಂಟರ್ಸ್
ನಂ. 1, ಶ್ರೀ ರಾಮಾಂಜನೇಯ ರಸ್ತೆ
ಹನುಮಂತನಗರ, ಬೆಂಗಳೂರು - 560 019
ದೂ : 2660 6776 / 3200 6630 ಫ್ಯಾಕ್ಸ್ : 2660 6566
ಇ-ಮೇಲ್ : prakash@ adityaprinters.com
ವೆಬ್‌ಸೈಟ್ : www.adityaprinters.com

ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕ

ಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆ ಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ : ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ದೇಶೀಯ ಚಿಂತನೆಗಳನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ದೇಶೀಯತೆಯನ್ನು ಹಾಗೂ ಪ್ರಾದೇಶಿಕ ಭಾಷೆಗಳ ನಡುವಿನ ಸಂಬಂಧಗಳನ್ನು ಗಟ್ಟಿಗೊಳಿಸುವ ಆವಶ್ಯಕತೆ ಇದೆ. ಪ್ರಾಚೀನ ಕೃತಿಗಳನ್ನು ಸಾಂಪ್ರದಾಯಿಕ ನೆಲೆಯ ಜೊತೆ ಜೊತೆಗೆ ಹೊಸ ಆಲೋಚನೆಗಳ ನೆಲೆಯಲ್ಲಿ ಚಿಂತಿಸುವುದು ಇಂದಿನ ಅಗತ್ಯವಾಗಿದೆ. ಒಂದು ಕೃತಿಯನ್ನು ಕೇವಲ ಪಠ್ಯವಾಗಿ ಪರಿಗಣಿಸದೆ ಅದರ ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ ಆಲೋಚಿಸುವ ಕ್ರಮ ಕೃತಿಗಳ ಇನ್ನಿತರ ಆಯಾಮಗಳನ್ನು ತೆರೆದಿಡುತ್ತದೆ. ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದಂತಹ ಪ್ರಕ್ರಿಯೆಗಳನ್ನು ಅನುಲಕ್ಷಿಸಿ ಭಾಷಿಕ ಬದಲಾವಣೆಯ ಹಿಂದಿನ ನಿಯಮಗಳನ್ನು ವಿವರಿಸುವ ಪ್ರಯತ್ನ ಕವಿರಾಜಮಾರ್ಗಕಾರನ ಕಾಲದಿಂದಲೂ ನಡೆದೇ ಇದೆ. ಶಿಷ್ಟ ಭಾಷಾ ರೂಪ ಹಾಗೂ ಆಡುಭಾಷಾ ರೂಪಗಳನ್ನು ಗುರುತಿಸಿ ಪರಿಗಣಿಸುವ

ಕ್ರಮ ಅಂದಿನಿಂದಲೇ ಕೆಲಮಟ್ಟಿಗೆ ನಡೆದಿದೆ. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತಮತಿಗಳ್- ಎಂಬ ಮಾತು ಆಡುಮಾತನ್ನು ಗೌರವಿಸುವಂತಹದೇ ಆಗಿದೆ.

ಕವಿರಾಜಮಾರ್ಗ ಒಂದು ಐತಿಹಾಸಿಕ ಕೃತಿ, ನಾಡು-ನಾಡವರು- ನುಡಿ ಮುಂತಾದ ವಿವರಗಳನ್ನು ಉಳ್ಳ ಕೃತಿ. ಇದೊಂದು ಐತಿಹಾಸಿಕ ಕೃತಿಯೂ ಹೌದು. ಇಂದಿನ ಭಾಷಿಕ, ಸಾಹಿತ್ಯಿಕ, ನಾಡು, ಇನ್ನಿತರ ಬಹುಮುಖ್ಯ ವಿಚಾರಗಳ ಸಂದರ್ಭದಲ್ಲಿ ಪ್ರಸ್ತುತ ಗ್ರಂಥ ಆಕರವಾಗಿ ಉಲ್ಲೇಖಿತವಾಗುತ್ತಿರುವುದು ಈ ಕೃತಿಯ ಮೌಲಿಕತೆಯನ್ನು ಎತ್ತಿ ಹಿಡಿಯುತ್ತದೆ ಎಂಬುದು ಈ ಅಧ್ಯಯನದಿಂದ ತಿಳಿಯುತ್ತದೆ. ಹೀಗಾಗಿ **ಕಾವೇರಿಯಿಂದಮಾ ಗೋದಾವರಿ ವರಮಮಿರ್ದ** ಎಂಬ ಉಕ್ತಿ, **ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್** ಎಂಬ ಉಕ್ತಿ ಹಾಗೂ **ದಕ್ಷಿಣೋತ್ತರ ಮಾರ್ಗ** ಎಂಬ ಭಾಷಿಕ ವಿಭಜನೆ ಇವು ಇಂದಿಗೂ ಮೇಲಿಂದ ಮೇಲೆ ಉಲ್ಲೇಖವಾಗುತ್ತಿವೆ. ಇದರ ಹಿಂದಿನ ಪ್ರೇರಣೆ ಹಾಗೂ ಪರಿಣಾಮಗಳನ್ನು ವಿಸ್ತೃತವಾಗಿ ಅವಲೋಕಿಸುವುದು ಆಗತ್ಯ. ಸಂಸ್ಕೃತ ಹಾಗೂ ಪಾಶ್ಚಿಮಾತ್ಯ ಪ್ರೇರಣೆಗಳನ್ನು ಗಮನದಲ್ಲಿಟ್ಟು ನಡೆವ ಅಧ್ಯಯನಕ್ಕಿಂತ ಭಿನ್ನವಾಗಿ-ಡಾ.ಶೆಟ್ಟರ್ ಅವರು ತಿಳಿಸುವಂತೆ- ಪ್ರಾದೇಶಿಕ ಪ್ರೇರಣೆಯನ್ನು ಸಹ ಗಮನಿಸುವುದು ಅಗತ್ಯವಾಗಿದೆ. ಕನ್ನಡ ಸಾಹಿತ್ಯ ಹಾಗೂ ಭಾಷೆಯ ಮೇಲೆ ಸೋದರ ಭಾಷೆಗಳಾದ ತಮಿಳು ತೆಲುಗು ಭಾಷೆಗಳು, ಅಂತೆಯೇ ವಿದೇಶಿ ಭಾಷೆಗಳಾದ ಇಂಗ್ಲಿಶ್, ಅರಾಬಿಕ್, ಪರ್ಶಿಯನ್ ಇನ್ನಿತರ ಭಾಷೆಗಳ ಪ್ರಭಾವವನ್ನು ಗುರುತಿಸಬೇಕಾಗಿದೆ. ಸಂಸ್ಕೃತ ಭಾಷೆ ಧಾರ್ಮಿಕವಾಗಿ ಮತ್ತು ಭಾವನಾತ್ಮಕವಾಗಿ ಪ್ರಭಾವ ಬೀರಿದಂತೆ, ವಿದೇಶಿ ಭಾಷೆಗಳು ವೈಚಾರಿಕವಾಗಿ, ಆಡಳಿತಾತ್ಮಕವಾಗಿ ಒತ್ತಡವನ್ನು ಹೇರಿವೆ. ಈ ಒತ್ತಡಗಳು ಕನ್ನಡ ಭಾಷೆಯ ಭಾಷಾ ಸ್ವರೂಪ ಹಾಗೂ ಶೈಲಿಯ ಮೇಲೆ ತಮ್ಮ ಪ್ರಭಾವವನ್ನು ಬೀರಿರುವುದು ಖಚಿತವಾಗಿದೆ. ಸ್ವೀಕೃತ ಭಾಷೆಗಳನ್ನು ಪ್ರಮಾಣೀಕರಿಸುವ ನೆಲೆಯಲ್ಲಿ ಸಾಂಪ್ರದಾಯಿಕ ವ್ಯಾಕರಣ ಆರಂಭದಿಂದಲೂ ಅಧ್ಯಯನ ಮಾಡಿದೆ. ಈ ಎಲ್ಲ ನೆಲೆಗಳಲ್ಲೂ ಕನ್ನಡ ಸಾಹಿತ್ಯ ಕೃತಿಗಳನ್ನು ಅವಲೋಕಿಸುವುದು ಉಚಿತವಾಗಿದೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಅಭಿನಂದನೆಗಳು.

ಡಾ. ಎ. ಮುರಿಗೆಪ್ಪ
ಕುಲಪತಿ

ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು

ಮೊದಲ ಮುದ್ರಣದ ಮುನ್ನುಡಿ

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ, ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ವ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಸಂಸ್ಕೃತಿ ಎನ್ನುವುದು ಸಮೂಹಸಮ್ಮತ ಜೀವನ ಪದ್ಧತಿಯಾಗಿದೆ. ಕನ್ನಡಿಗರ ಇಂತಹ ಜೀವನ ಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ಮಾನ ದಲ್ಲಿ ಆರ್ಯ-ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕು ಮಾಡಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲೀಷ್ ದ್ವಿಭಾಷಾ ಸಂದರ್ಭ, ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲೀಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶಿ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ, ವಿಸ್ಮೃತಿಯ ಸಾಗರದಲ್ಲಿ ಮುಳುಗಿ ಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ-ಪ್ರಕ್ರಿಯೆ ರೂಪದ 'ಸ್ವದೇಶಿ ಸತ್ಯ'ಗಳನ್ನು ಶೋಧಿಸುವುದು. ಬಳಿಕ ಆ ಶೋಧದಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ ಸರಿಸಿ ಗುಣಾಂಶಗಳನ್ನು ಗುರುತಿಸುವ, ಜೊತೆಗೆ ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರ ವಹಿಸಿ ತುಂಬಿಕೊಳ್ಳುವ ಕೆಲಸ ನಮ್ಮಲ್ಲಿ ನಡೆಯಬೇಕಾಗುತ್ತದೆ. ಒಟ್ಟಾರೆ ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು ಕನ್ನಡವನ್ನು ಸ್ಥಾನಿಕದಲ್ಲಿ

ಬದುಕಿಸಬೇಕಾಗಿದೆ. ಜಾಗತಿಕದಲ್ಲಿ ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕ ವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆ ಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, 'ಎಲ್ಲ ರಸ್ತೆಗಳು ರೋಮ್‌ದ ಕಡೆಗೆ' ಎಂಬಂತೆ, ಕನ್ನಡದ ಎಲ್ಲ ಹಾದಿಗಳು ಹಂಪಿ ಕಡೆಗೆ ಕೇಂದ್ರೀಕರಣಗೊಳ್ಳುವ ಮತ್ತು ಇಲ್ಲಿಂದಲೇ ಜಗತ್ತಿನ ಅಂಚಿನತ್ತ ವಿಕೇಂದ್ರೀಕರಣಗೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ಈ ರೀತಿ ಐತಿಹಾಸಿಕ ಪರಂಪರೆ ಮತ್ತು ಭೌಗೋಳಿಕ ಪರಿಸರಗಳಲ್ಲಿ ಶ್ರಮಿಸಬೇಕಾಗಿರುವ ಕನ್ನಡ ವಿಶ್ವವಿದ್ಯಾಲಯ "ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗೃತವಾಗಿರುವಂತೆಯೂ ನೋಡಿಕೊಳ್ಳಬೇಕಾಗಿದೆ.

ಈ ಎಲ್ಲ ನೆಲೆಗಳಲ್ಲಿ ಸೃಷ್ಟಿಯಾಗುವ ತನ್ನ ಶೋಧನೆ-ಚಿಂತನೆಗಳನ್ನು ದಾಖಲಿಸಬೇಕೆಂಬ ಮತ್ತು ಸಂವಹನಗೊಳಿಸಬೇಕೆಂಬ ತೀವ್ರ ಹಂಬಲದಿಂದ ಈ ವಿಶ್ವವಿದ್ಯಾಲಯ 'ಪ್ರಸಾರಾಂಗ' ಹೆಸರಿನ ಪ್ರಸಾರ ಮಾಧ್ಯಮ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದಿದೆ. ಶ್ರವ್ಯ, ದೃಶ್ಯ, ವಾಚನ ಸಾಮಗ್ರಿಗಳ ಉತ್ಪಾದನೆ-ವಿತರಣೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಂಡಿರುವ ಇದು, ವಾಚನ ಸಾಮಗ್ರಿಯಾಗಿರುವ ಪುಸ್ತಕಗಳ ಉತ್ಪಾದನೆಗೆ ವಿಶೇಷ ಕಾಳಜಿ ವಹಿಸಿದೆ. ಆಂತರಿಕ ಸತ್ವ, ಬಾಹ್ಯ ಸೌಂದರ್ಯಗಳಿಂದ ಕೂಡಿರುವ ವಿಶಿಷ್ಟ 'ಪುಸ್ತಕಸಂಸ್ಕೃತಿ'ಯನ್ನು ಅಸ್ತಿತ್ವಕ್ಕೆ ತಂದಿದೆ. ಈ ನಿಟ್ಟಿನಲ್ಲಿ ಪ್ರಕಟವಾದ ಹೊಸ ಪುಸ್ತಕ 'ಕವಿರಾಜಮಾರ್ಗ : ಸಾಂಸ್ಕೃತಿಕ ಮುಖಾಮುಖಿ'.

ದೇಶ ಮತ್ತು ದೇಶಭಾಷೆಯನ್ನು ಮುಖಾಮುಖಿಯಾಗಿ ನಿಲ್ಲಿಸಿ, ಅವುಗಳಲ್ಲಿ ಅನ್ಯೋನ್ಯತೆಯನ್ನು ಸ್ಥಾಪಿಸಲು ಪ್ರಯತ್ನಿಸಿದ "ಕವಿರಾಜಮಾರ್ಗ"ದ ಹೊಸ ಓದು ಒಂದು ವಿಶಿಷ್ಟ ಪ್ರಯೋಗ. ವಿಚಾರ ಸಂಕಿರಣದ ಮೂಲಕ ಈ ಪ್ರಯೋಗವನ್ನು ಅರ್ಥಪೂರ್ಣಗೊಳಿಸಿದ "ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ"ದ ಅಧ್ಯಾಪಕರ ಶ್ರಮವನ್ನು ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಎಂ.ಎಂ.ಕಲಬುರ್ಗಿ

ಕುಲಪತಿ

ಪರಿಷ್ಕೃತ ಆವೃತ್ತಿಯ ಮಾತು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗವು 'ಸಾಂಸ್ಕೃತಿಕ ಮುಖಾಮುಖಿ' ಎನ್ನುವ ಹೆಸರಿನಲ್ಲಿ ಪ್ರಾಚೀನ ಸಾಹಿತ್ಯದ ಮಹತ್ವದ ಪಠ್ಯಗಳನ್ನು ಕುರಿತು ಹೊಸಚರ್ಚೆಯನ್ನು ಆರಂಭಿಸಬೇಕು ಎಂದು ನಿರ್ಧರಿಸಿದಾಗ(೧೯೯೯) ಮೊದಲನೆಯದಾಗಿ ಕೈಗೆತ್ತಿಕೊಂಡಿದ್ದು ಶ್ರೀ ವಿಜಯನ 'ಕವಿರಾಜಮಾರ್ಗ'ವನ್ನು. ನಂತರ ಈ ಸರಣಿ ವಿಭಾಗವು ಊಹೆ ಮಾಡಿರದಷ್ಟು ಜನಪ್ರಿಯತೆಯನ್ನು ಪಡೆಯಿತು. ನಂತರದ ಒಂಬತ್ತು ವರ್ಷಗಳಲ್ಲಿ ೧೮ ಕೃತಿಗಳ ಮೇಲೆ ಸಂವಾದ ಕಾರ್ಯಕ್ರಮ ನಡೆದವು. ಇವುಗಳ ಫಲವಾಗಿ ೧೫ ಪುಸ್ತಕಗಳು ಪ್ರಕಟವಾಗಿವೆ. ಉಳಿದ ೩ ಪುಸ್ತಕಗಳು ಪ್ರಕಟವಾಗುತ್ತಿವೆ. ಹೀಗೆ ವಿಚಾರ ಸಂಕಿರಣ ಹಾಗೂ ಪುಸ್ತಕ ಪ್ರಕಟಣೆಯ ಯಶಸ್ವೀ ಸರಣಿಯೊಂದನ್ನು ಉದ್ಘಾಟನೆ ಮಾಡಿದ್ದು ಆರಂಭ ಹಾಕಿದ್ದು ಪ್ರಸ್ತುತ 'ಕವಿರಾಜಮಾರ್ಗ: ಸಾಂಸ್ಕೃತಿಕ ಮುಖಾಮುಖಿ'.

ಈ ಕೃತಿ ಪ್ರಕಟವಾಗಿ ಎಂಟು ವರ್ಷಗಳಾದವು. ಎರಡೇ ವರ್ಷದಲ್ಲಿ ಎಲ್ಲ ಪ್ರತಿಗಳು ಮುಗಿದುಹೋದವು. ಇದಕ್ಕೆ ವಿದ್ಯಾರ್ಥಿಗಳಿಂದಲೂ ವಿದ್ವಾಂಸರಿಂದಲೂ ಸತತ ಬೇಡಿಕೆಯಿತ್ತು. ಕವಿರಾಜಮಾರ್ಗವನ್ನು ಕುರಿತು ಶ್ರೀಯುತರಾದ ಮುಳಿಯ ತಿಮ್ಮಪ್ಪಯ್ಯನವರೂ ಎಂ.ವಿ.ಸೀತಾರಾಮಯ್ಯನರೂ ಎಂ.ಎಂ.ಕಲಬುರ್ಗಿಯವರೂ ರಚಿಸಿದ ಮತ್ತು ಸಂಪಾದಿಸಿದ ವಿಶ್ಲೇಷಣ ಕೃತಿಗಳಿದ್ದರೂ ಈ ಕೃತಿಗೆ ಬೇಡಿಕೆ ಇರುವುದು ವಿಶೇಷವಾಗಿದೆ. ಇದಕ್ಕೆ ಒಂದು ಕಾರಣ, ಹೊಸ ಬಗೆಯ ಹುಡುಕಾಟವನ್ನು ಮಾಡಲು ಯತ್ನಿಸಿರುವ ಇಲ್ಲಿನ ವಿದ್ವಾಂಸರ ಹೊಸನೋಟಗಳುಳ್ಳ ಬರೆಹಗಳೇ ಇರಬಹುದು. ಸಂಸ್ಕೃತಿ ಚಿಂತಕರಾಗಿ ಕೆ.ವಿ.ಸುಬ್ಬಣ್ಣನವರು, ಭಾಷಾತತ್ವದ ಹಿನ್ನೆಲೆಯಿಂದ ಕೆ.ವಿ.ನಾರಾಯಣ ಅವರು, ಆಕ್ಟಿವಿಸ್ಟಾಗಿ ಬಂಜಗೆರೆಯವರು, ಸಂಸ್ಕೃತ ಮತ್ತು ತತ್ವಶಾಸ್ತ್ರದ ಹಿನ್ನೆಲೆಯಿಂದ ಪಾದೇಕಲ್ ನರಸಿಂಹಭಟ್ಟರು, ಸಾಹಿತ್ಯ ಚಿಂತಕರಾಗಿ ಬಸವರಾಜ ಕಲ್ಗುಡಿಯವರು, ಸಾಂಸ್ಕೃತಿಕ ಚರಿತ್ರೆಯ ವಿದ್ವಾಂಸರಾಗಿ ಎಂ.ಎಂ.ಕಲಬುರ್ಗಿಯವರು ಕಾವ್ಯಮೀಮಾಂಸೆಯ ಚರಿತ್ರೆಯ ಹಿನ್ನೆಲೆಯಲ್ಲಿ ಜಿ.ಎಸ್.ಶಿವರುದ್ರಪ್ಪನವರು ಹಾಗೂ ಕನ್ನಡ ಕಾವ್ಯಪರಂಪರೆಯ ಹಿನ್ನೆಲೆಯಿಂದ ಕಿರಂ ಅವರು- ಹೀಗೆ ಬೇರೆ ಬೇರೆ ದೃಷ್ಟಿಕೋನಗಳಿಂದ ಪ್ರವೇಶ ಮಾಡಿದ ಲೇಖನಗಳು ಇದರಲ್ಲಿವೆ. ಇಲ್ಲಿನ ವಿದ್ವಾಂಸರಲ್ಲಿ ಕೆ.ವಿ.ಸುಬ್ಬಣ್ಣನವರು ಈಗ ನಮ್ಮೊಡ ನಿಲ್ಲ. ಅವರು ನಂತರ ಪ್ರಕಟಿಸಿದ 'ಕವಿರಾಜಮಾರ್ಗ ಕನ್ನಡ ಜಗತ್ತು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿತು. ಇದು ಕವಿರಾಜಮಾರ್ಗ ಕುರಿತ ಚರ್ಚೆಗಳಿಗೆ

ಮತ್ತಷ್ಟು ಹೊಸ ಆಯಾಮವನ್ನು ಕೊಟ್ಟಿತು. ಪಶ್ಚಿಮದ ಖ್ಯಾತ ಇಂಡಾಲಜಿಸ್ಟ್ ಆಗಿರುವ ಶೆಲ್ಡನ್ ಪೊಲಾಕ್ ಅವರು 'ಕವಿರಾಜಮಾರ್ಗ' ಕುರಿತು ಬರೆದ ಬರೆಹವು ಕೂಡ ಈಚೆಗೆ ಕನ್ನಡದಲ್ಲಿ ಚರ್ಚೆಗೆ ಒಳಗಾಗುತ್ತಿದೆ. ಹೀಗೆ ನಾನಾ ಕಾರಣಕ್ಕಾಗಿ 'ಕವಿರಾಜ ಮಾರ್ಗ'ವು ವಿದ್ವಾಂಸರನ್ನು ಕೆಣಕುತ್ತಿದೆ. ಈ ಸಾಲಿನಲ್ಲಿ ಶ್ರೀ ಷ.ಶೆಟ್ಟರ್ ಅವರ ಕೃತಿಯು ಇತ್ತೀಚಿನದಾಗಿದೆ. ಕರ್ನಾಟಕ ಪ್ರಾಚೀನ ಚರಿತ್ರೆಯ ವಿಷಯದಲ್ಲಿ ದೊಡ್ಡ ವಿದ್ವಾಂಸರಾಗಿರುವ ಶೆಟ್ಟರ್ ಅವರು 'ಕವಿರಾಜಮಾರ್ಗ: ಸಾಂಸ್ಕೃತಿಕ ಮುಖಾಮುಖಿ' ಯಲ್ಲಿರುವ ವಾಗ್ವಾದಗಳಿಂದ ಪ್ರೇರಿತರಾದರು. ಇಲ್ಲಿನ ಅನೇಕ ಪ್ರಮೇಯಗಳನ್ನು ತಮ್ಮ 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು- ನುಡಿ'(೨೦೦೭) ಕೃತಿಯಲ್ಲಿ ಚರ್ಚೆಗೊಳ ಪಡಿಸಿದರು. ಹೀಗಾಗಿ ಶ್ರೀ ಶೆಟ್ಟರ್ ಅವರ ಮೇಲ್ಕಾಣಿಸಿದ ಕೃತಿಯಿಂದ ಒಂದು ಅಧ್ಯಾಯವನ್ನು ಇಲ್ಲಿ ಸೇರಿಸಿದೆ. ಇದು ತಮಿಳಿನ ಆದಿಮ ಗ್ರಂಥಗಳಲ್ಲಿ ಒಂದಾಗಿರುವ 'ತೋಲ್ಕಾಪ್ಪಿಯಂ' ಜತೆಗೆ ಕವಿರಾಜಮಾರ್ಗವನ್ನು ಇಟ್ಟು ಅಪೂರ್ವವಾದ ವಿಶ್ಲೇಷಣೆಯನ್ನು ಮಾಡುವ ಬರೆಹವಾಗಿದೆ. ಈ ಬರೆಹದ ಸೇರ್ಪಡೆಯಿಂದ ದ್ರಾವಿಡ ಪರಂಪರೆಯಲ್ಲಿ ಕವಿರಾಜ ಮಾರ್ಗವನ್ನು ಇಟ್ಟು ನೋಡುವ ಮಹತ್ವದ ಆಯಾಮವೊಂದು ಈ ಪುಸ್ತಕಕ್ಕೆ ಸೇರ್ಪಡೆಯಾದಂತಾಗಿದೆ. ಇದರ ಜತೆಗೆ ಕೃತಿಯ ಕೊನೆಗಿರುವ ಕವಿರಾಜಮಾರ್ಗ ಕುರಿತ ಅಧ್ಯಯನ ಸೂಚಿಯನ್ನು ಸಹ ಪರಿಷ್ಕರಿಸಲಾಗಿದೆ.

ತಮ್ಮ ಬರೆಹವನ್ನು ಇಲ್ಲಿ ಸೇರಿಸಲು ಉದಾರವಾಗಿ ಅನುಮತಿ ಕೊಟ್ಟ ಷ.ಶೆಟ್ಟರ್ ಅವರಿಗೂ, ಪುಸ್ತಕದ ಪ್ರಕಾಶಕರಾದ ನ.ರವಿಕುಮಾರ್ ಅವರಿಗೂ ವಿಶ್ವವಿದ್ಯಾಲಯದ ವತಿಯಿಂದ ಕೃತಜ್ಞತೆ ಸಲ್ಲಿಸುತ್ತೇನೆ. ಹೊಸ ಕುಲಪತಿಗಳಾದ ಡಾ.ಎ.ಮುರಿಗೆಪ್ಪನವರು ಈ ಕೃತಿಗೆ ಒಳ್ಳೆಯ ಮಾತುಗಳನ್ನು ಬರೆದಿದ್ದಾರೆ. ಅವರಿಗೂ ಕೃತಿಯನ್ನು ಪ್ರಕಟಿಸುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ.ಮಲ್ಲೇಪುರಂ ಅವರಿಗೂ, ವಿನ್ಯಾಸ ಮಾಡಿದ ಸುಜ್ಞಾನಮೂರ್ತಿ ಹಾಗೂ ಮುಖಪುಟ ಬಿಡಿಸಿದ ಕೆ.ಕೆ.ಮಕಾಳಿ ಅವರಿಗೂ, ಅಕ್ಷರ ಸಂಯೋಜಿಸಿದ ಶ್ರೀಮತಿ ರಶ್ಮಿ ಕೃಪಾಶಂಕರ್ ಅವರಿಗೂ ವಂದನೆಗಳು.

ರಹಮತ್ ತರೀಕೆರೆ

ಮುನ್ನುಡಿ

೨೦ನೇ ಶತಮಾನದ ಕೊನೆಯ ಭಾಗದಲ್ಲಿ ಎದ್ದು ಕಾಣುವ ಒಂದು ಸಂಗತಿಯೆಂದರೆ ಕನ್ನಡದಂತಹ ದೇಸಿಭಾಷೆಗಳ ಬಗ್ಗೆ ಚಿಂತಿಸುತ್ತಿರುವವರು ಒಂದು ಬಗೆಯ ಆತಂಕಕ್ಕೆ ಒಳಗಾಗಿರುವುದು; ತಮ್ಮ ಸಮುದಾಯ ಭಾಷೆಗಳ ಅನನ್ಯತೆಯನ್ನು ಗುರುತಿಸಿಕೊಳ್ಳುವ ಹಾಗೂ ರಕ್ಷಿಸಿಕೊಳ್ಳುವ ಒತ್ತಡಗಳಿಗೆ ಸಿಲುಕಿರುವುದು. ಇಂತಹ ಸನ್ನಿವೇಶ ಹುಟ್ಟಲು, ದೊಡ್ಡ ಬಿರುಗಾಳಿಯಂತೆ ಬೀಸುತ್ತಿರುವ ಜಾಗತೀಕರಣವೂ ಇದಕ್ಕಿರುವ ಪ್ರಭುತ್ವಗಳ ಒತ್ತಾಸೆಯೂ ಮುಖ್ಯ ಕಾರಣಗಳಿರಬೇಕು. ಮೂಲತಃ ಆರ್ಥಿಕ-ರಾಜಕೀಯ ರೂಪಿಯಾದ ಜಾಗತೀಕರಣದ ಬೆಳವಣಿಗೆಗಳು ಸಮುದಾಯಗಳ ಭಾಷೆ, ಸಂಸ್ಕೃತಿ ಹಾಗೂ ಆಲೋಚಿಸುವ ರೀತಿಗಳಲ್ಲಿ ಬದಲಾವಣೆ ತರಲಿರುವುದೂ ಅಷ್ಟೇ ಸಹಜ; ಈ ಜಾಗತೀಕರಣವು 'ನಮ್ಮ ಸಂಸ್ಕೃತಿ'ಯ ಮೇಲೆ ಯಾವ ಬಗೆಯಲ್ಲಿ ಪರಿಣಾಮ ಬೀರುತ್ತದೆ? ಇದಕ್ಕೆ ಯಾವ ರೀತಿಯ ಪ್ರತಿರೊಧ ಒಡ್ಡಬೇಕು? ಯಾವ ಉಪಾಯದಲ್ಲಿ ತಮ್ಮ ಭಾಷೆಗಳನ್ನು ಉಳಿಸಿಕೊಳ್ಳಬೇಕು?- ಎಂದು ಆತಂಕ ಪಡುವವರಲ್ಲಿ ಒಂದು ವೈಚಾರಿಕ ಸ್ಪಷ್ಟತೆ ಇದ್ದಂತಿಲ್ಲ. ಆದರೆ ಸುಳಿದು ಸುತ್ತುತ್ತಿರುವ ಆತಂಕ ಮಾತ್ರ ನಿಜವಾಗಿದೆ. ಇದರ ಜತೆಯಲ್ಲೇ ಮರೆಯಬಾರದ ಸಂಗತಿಯೆಂದರೆ, ರಾಜಕೀಯ ಮತ್ತು ಆರ್ಥಿಕ ಯಜಮಾನಿಕೆಯುಳ್ಳ ಭಾಷೆಗಳ ಎದುರಲ್ಲಿ, ತಮ್ಮ ಅನನ್ಯತೆಗಳನ್ನು ರಕ್ಷಿಸಿಕೊಳ್ಳುವ, ವ್ಯಾಖ್ಯಾನಿಸಿಕೊಳ್ಳುವ ಹಾಗೂ ಉಲ್ಲಂಘಿಸಿ ಬೆಳೆಯುವ ಕಷ್ಟವು ಕನ್ನಡವನ್ನೂ ಒಳಗೊಂಡಂತೆ ಭಾರತದ ದೇಶಭಾಷೆಗಳಿಗೆ ಹೊಸ ಅನುಭವವೇನಲ್ಲ. ಈಗಲೂ ಈ ಸವಾಲನ್ನು ಅನೇಕ ಬಗೆಯಲ್ಲಿ ಎದುರಿಸುತ್ತಿವೆ ಕೂಡ.

ಇಂತಹ ಸಂದರ್ಭದಲ್ಲಿ ಕನ್ನಡದ ಪಠ್ಯಗಳನ್ನು, ಅದರಲ್ಲೂ 'ಪ್ರಾಚೀನ' ಕೃತಿಗಳನ್ನು ಹೇಗೆ ಮುಖಾಮುಖಿ ಮಾಡಬೇಕು? ಕನ್ನಡದ ಅಂದು ಇಂದಿನ ನಮಗೆ ಹೇಗೆ ಕಾಣುತ್ತಿದೆ? ಹಾಗೆ ಕಂಡದ್ದರ ಬೆಳಕಿನಲ್ಲಿ ನಮ್ಮ ನಾಳೆಯನ್ನು ಹೇಗೆ ರೂಪಿಸಿಕೊಳ್ಳ ಬಹುದು?- ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನವನ್ನು ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗವು ಮಾಡಬಯಸಿದೆ. ಅದರಲ್ಲೂ ಈ ಹೊತ್ತು ನಮ್ಮ ಸುತ್ತ ಸಂಭವಿಸುತ್ತಿರುವ ಆರ್ಥಿಕ, ರಾಜಕೀಯ ವಿದ್ಯಮಾನಗಳ ಗಾಢ ಅರಿವಿನಲ್ಲಿ ನಿಂತು, ನಮ್ಮ ಹಿರೀಕರ ಕೃತಿಗಳೊಡನೆ ಅನುಸಂಧಾನ ಮಾಡುವುದು, ಹೊಸ ಅನುಭವ ಹಾಗೂ ಚಿಂತನೆಗಳಿಗೆ ಕಾರಣವಾಗಬಲ್ಲದು; ವರ್ತಮಾನದಲ್ಲಿ ಕನ್ನಡ ಸಾಹಿತ್ಯ ಅಧ್ಯಯನಗಳು ಹೊಸದಿಸೆ ಮತ್ತು ಹೊಸ

ಚೈತನ್ಯವನ್ನು ಪಡೆದುಕೊಳ್ಳಲು ಕೂಡ ನೆರವಾಗಬಲ್ಲದು ಎಂಬ ಆಶಯವನ್ನು ಇಟ್ಟುಕೊಂಡಿದೆ. ಕೃತಿಗಳ 'ಸಾಂಸ್ಕೃತಿಕ ಮುಖಾಮುಖಿ' ಎಂದರೆ ಇದೇ ಆಗಿದೆ. ಇದು ನಮ್ಮ ವಿಭಾಗದ ಅಕಡಮಿಕ್ ಒಳ ಅಗತ್ಯ ಹಾಗೂ ಹೊಣೆಗಾರಿಕೆ ಕೂಡ. ಇದಕ್ಕಾಗಿ ಹೆಚ್ಚು ಚರ್ಚೆಗೊಳಗಾಗದ ಆದರೆ ಸಾಂಸ್ಕೃತಿಕವಾಗಿ ಮಹತ್ವವುಳ್ಳ ಕನ್ನಡ ಪಠ್ಯಗಳನ್ನು ಆರಿಸಿಕೊಳ್ಳಬೇಕು; ಕನ್ನಡ ಸಾಹಿತ್ಯ ಪರಂಪರೆಯೊಂದಿಗೆ ಅನೇಕ ಬಗೆಯಲ್ಲಿ ಸಂವಾದ ಮಾಡುತ್ತಿರುವ ಮನಸ್ಸುಗಳನ್ನು ಒಂದೆಡೆ ಕೂಡಿಸಿ ಚರ್ಚೆ ಏರ್ಪಡಿಸಬೇಕು; ಈ ಚರ್ಚೆಯ ಫಲಿತಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕು; ಈ ಸಂವಾದ ಕಾರ್ಯಕ್ರಮವನ್ನು ಒಂದು ಸರಣಿಯನ್ನಾಗಿ ಮುಂದುವರಿಸಬೇಕು -ಮುಂತಾದ ಉದ್ದೇಶಗಳನ್ನುಳ್ಳ ಒಂದು ಯೋಜನೆಯನ್ನು ವಿಭಾಗವು ರೂಪಿಸಿಕೊಂಡಿದೆ. ಈ ಯೋಜನೆಯ ಭಾಗವಾಗಿ ಮೊದಲ ವರ್ಷ(೧೯೯೯) ಕನ್ನಡದ ಮೊದಲ ಕೃತಿಯೂ ವಿಶಿಷ್ಟ ಪಠ್ಯವೂ ಆಗಿರುವ ಕವಿರಾಜಮಾರ್ಗವನ್ನು ಕೇಂದ್ರವಾಗಿಟ್ಟುಕೊಂಡು ಸಂವಾದವನ್ನು ಏರ್ಪಡಿಸಲಾಯಿತು. ಅದರ ಫಲವೇ ಈ ಪುಸ್ತಕ.

ದಿನಾಂಕ ೭.೦೭.೧೯೯೯ರಂದು, ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಈ ಸಂವಾದ ಕಾರ್ಯಕ್ರಮದಲ್ಲಿ ನಾಡಿನ ಅನೇಕ ವಿದ್ವಾಂಸರು ಭಾಗವಹಿಸಿದರು. ಇವರು ಭಿನ್ನ ಭಿನ್ನ ದೃಷ್ಟಿಕೋನಗಳಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಕುರಿತು ಚಿಂತನೆ ನಡೆಸುತ್ತಿರುವವರು; ತಮ್ಮ ಅಕೆಡಮಿಕ್ ವಿದ್ವತ್ತಿನಿಂದ ಮಾತ್ರವಲ್ಲದೆ, ನಾಡು ನುಡಿ ಕುರಿತ ತಮ್ಮ ಕಾಳಜಿ ಹಾಗೂ ಚಳುವಳಿಗಾರತನದಿಂದ ಸಾಂಸ್ಕೃತಿಕ ವ್ಯಕ್ತಿತ್ವ ಪಡೆದುಕೊಂಡವರು. ನಮ್ಮ ಕರೆಯನ್ನು ಮನ್ನಿಸಿ ಬಂದ ಇವರೆಲ್ಲರನ್ನು ಅದರದಿಂದ ನೆನೆಯುತ್ತೇನೆ.

ಈ ಕಾರ್ಯಕ್ರಮವನ್ನು ಪ್ರಬಂಧ ಮಂಡನೆಯ ಮಾಮೂಲು ವಿಧಾನ ಕೈಬಿಟ್ಟು ಆಸಕ್ತಿ ವಿದ್ವಾಂಸರು ಮಾತ್ರ ಭಾಗವಹಿಸಬಹುದಾದ ಸಂಕಿರಣವನ್ನಾಗಿ ರೂಪಿಸಲಾಗಿತ್ತು. 'ಒಂದು ಪ್ರಸ್ತಾವಿಕ ಮಾತು, ಒಂದು ಆಶಯ ಭಾಷಣ, ಎರಡು ಟಿಪ್ಪಣಿಗಳು ಹಾಗೂ ಒಂದು ಸಮಾರೋಪ ಭಾಷಣ ಇರಬೇಕು; ಟಿಪ್ಪಣಿಕಾರರು ತಮ್ಮ ಶೋಧಗಳನ್ನು ಸಂಕ್ಷಿಪ್ತವಾಗಿ ಮಂಡಿಸಬೇಕು. ಅವುಗಳ ಬಗ್ಗೆ ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರು ಹಾಗೂ ಆಹ್ವಾನಿತ ವಿದ್ವಾಂಸರು ಸುದೀರ್ಘವಾದ ಚರ್ಚೆ ಮಾಡಬೇಕು; ಸಂವಾದ ಕಾರ್ಯಕ್ರಮದಲ್ಲಿ ನಡೆದ ಟಿಪ್ಪಣಿ ಮಂಡನೆ ಹಾಗೂ ನಡೆದ ಚರ್ಚೆಗಳನ್ನು ಧ್ವನಿಮುದ್ರಣ ಮಾಡಿ ಅವನ್ನು ಬರೆಹರೂಪದಲ್ಲಿ ಕೊಡಬೇಕು; ಕೊನೆಯಲ್ಲಿ ಇದುವರೆಗೆ 'ಕವಿರಾಜ ಮಾರ್ಗ'ದ ಬಗೆಗೆ ನಡೆದಿರುವ ಅಧ್ಯಯನದ ಆಕರಸೂಚಿಯನ್ನು ಕೊಟ್ಟು, ಅವುಗಳ ಚರ್ಚೆಯನ್ನು ವಿಮರ್ಶಾತ್ಮಕ ವ್ಯಾಖ್ಯಾನದೊಂದಿಗೆ ಸೇರಿಸಬೇಕು-ಇದು ಯೋಜನೆಯ ಮೂಲ ನಕಾಶೆ ಯಾಗಿತ್ತು. ಆದರೆ ಸಂವಾದ ಕಾರ್ಯಕ್ರಮದ ಧ್ವನಿ ಮುದ್ರಣದ ಬರೆಹ ರೂಪವನ್ನು ನೋಡಿದ ಮೇಲೆ, ಅವನ್ನು ಆಯಾ ವಿದ್ವಾಂಸರಿಗೆ ಮತ್ತೆ ಕಳಿಸಿ, ಲೇಖನ ರೂಪದಲ್ಲಿ

ಬರೆಯಿಸಿ ಕೊಡುವುದು ಉಚಿತ ಅನಿಸಿತು. ಕಿ.ರಂ.ನಾಗರಾಜ ಅವರ ಭಾಷಣವನ್ನು ಮಾತ್ರ ಅನಿವಾರ್ಯವಾಗಿ ನಾವೇ ಎಡಿಟ್ ಮಾಡಬೇಕಾಯಿತು.

ಈ ಪುಸ್ತಕದಲ್ಲಿರುವ ಲೇಖನಗಳು ಕರ್ನಾಟಕದ ರಾಜಕಾರಣ, ಆರ್ಥಿಕತೆ, ಸಮಾಜ, ಭಾಷೆ, ಸಾಹಿತ್ಯ, ಮೀಮಾಂಸೆ- ಹೀಗೆ ಅನೇಕ ದೃಷ್ಟಿಕೋನಗಳಿಂದ 'ಕವಿರಾಜಮಾರ್ಗ'ವನ್ನು ಪ್ರವೇಶಿಸಿ ಚರ್ಚೆ ನಡೆಸಲು ಗಂಭೀರ ಪ್ರಯತ್ನ ಮಾಡುತ್ತಿವೆ. ಕಾರಣ ಎಲ್ಲ ಲೇಖನಗಳೂ ಈ ಕೃತಿಯನ್ನು ಕೇವಲ ಅಲಂಕಾರ ಶಾಸ್ತ್ರದ ಪುಸ್ತಕವನ್ನಾಗಿ ನೋಡದೆ, ಕರ್ನಾಟಕ ಸಂಸ್ಕೃತಿಯ ಬಹುಮುಖ್ಯ ಪಠ್ಯಗಳಲ್ಲಿ ಒಂದು ಎಂದು ಪರಿಗಣಿಸಿರುವುದು. ಹೀಗಾಗಿ ಹಿಂದಣ ನಮ್ಮ ಸಂಶೋಧಕರಿಗೆ ಕಾಡಿದ 'ಇದನ್ನು ಬರೆದವನು ನೃಪತುಂಗನೋ ಶ್ರೀವಿಜಯನೋ, ಅವನ ಕಾಲ ಯಾವುದು' ಇತ್ಯಾದಿ ಪ್ರಶ್ನೆಗಳು ಇಲ್ಲಿ ಅಷ್ಟು ಮುಖ್ಯವಾಗಿಲ್ಲ. ಬದಲಿಗೆ ೨೦ನೇ ಶತಮಾನದ ಭಾರತದ ರಾಜಕೀಯ ಭಾಷಿಕ ಚಳುವಳಿಗಳ ಚರಿತ್ರೆಯ ವಿಶಾಲ ಚೌಕಟ್ಟಿನಲ್ಲಿ ಒಂದು ಭಾಷಿಕ ಸಮುದಾಯವು ತನ್ನ ಐಡೆಂಟಿಟಿಯನ್ನು ಕಂಡುಕೊಳ್ಳಲು ಮಾಡುತ್ತಿರುವ ಸೆಣಸಾಟ; ಒಂದು ದೇಸೀ ಭಾಷೆಯು ಅಧಿಕಾರಸ್ಥ ಭಾಷೆಗಳ ಜತೆಗೆ ಮುಖದಿರುವ ಇಲ್ಲವೇ ಶರಣಾಗುವ ಅತಿಗಳನ್ನು ಬಿಟ್ಟು ಆರೋಗ್ಯಕರವಾದ ವಿಧಾನದಲ್ಲಿ ಒಡನಾಡಬೇಕಾದ ಉಪಾಯಗಳು; ತನ್ನ ಒಳಗೇ ಇರುವ ಅನೇಕ ಪ್ರಾದೇಶಿಕ ರೂಪಗಳ ಜತೆ ಒಡನಾಡಲು ಬೇಕಾದ ಡೆಮಾಕ್ರಟಿಕ್ ಸಹನೆ; ಬಹುಭಾಷಿಕ ಬಹುಧಾರ್ಮಿಕ ಬಹುಸಾಂಸ್ಕೃತಿಕ ಸಮಾಜದಲ್ಲಿ ಬಹುಸಂಖ್ಯಾತರೂ ಪ್ರಭುತ್ವವೂ ತಾಳಬೇಕಾದ ಸೆಕ್ಯುಲರ್ ನಿಲುವು -ಹೀಗೆ ಆಧುನಿಕ ಕಾಲದಲ್ಲಿ ನಾವು ಕಾಳಜಿಯಿಂದ ಚಿಂತಿಸುತ್ತಿರುವ ಅನೇಕ ಮೌಲ್ಯಗಳ ನೆಲೆಯಲ್ಲಿ ಮಹತ್ವದ ಪ್ರಶ್ನೆಗಳನ್ನು ಎತ್ತಿ ಚರ್ಚೆಗೆ ಆಹ್ವಾನಿಸುವ ಒಳನೋಟಗಳು ಇಲ್ಲಿನ ಲೇಖನಗಳಲ್ಲಿವೆ. ಒಂದು ಪ್ರಾಚೀನ ಕೃತಿಯನ್ನು ಆಧುನಿಕ ಸಂವೇದನೆಯಿಂದ ಮುಖಾಮುಖಿಗೆ ತೊಡಗಿರುವ ಕೆಲವೇ ಯತ್ನಗಳಲ್ಲಿ ಒಂದಾಗಿರುವ ಈ ಪುಸ್ತಕವು, ನಾವು ಇಟ್ಟುಕೊಂಡಿದ್ದ ಉದ್ದೇಶವನ್ನು ಯಶಸ್ವಿಯಾಗಿ ಸಫಲಗೊಳಿಸಿದೆ.

ಈ ಪುಸ್ತಕ ಪ್ರಕಟವಾಗುತ್ತಿರುವ ಹೊತ್ತಿನಲ್ಲಿ, ಹಿರಿಯ ಲೇಖಕರಾದ ಜಿ.ಎಸ್. ಶಿವರುದ್ರಪ್ಪ ಅವರನ್ನು ಮೊದಲಿಗೆ ನೆನೆಯಬೇಕು. ಅವರು ಬೆಂಗಳೂರು ವಿಶ್ವವಿದ್ಯಾಲಯ ದಲ್ಲಿ ಕನ್ನಡ ವಿಭಾಗವನ್ನು ಕಟ್ಟಿದ ರೀತಿ, ನಡೆಸಿದ ವಿಚಾರ ಸಂಕಿರಣಗಳು ಹಾಗೂ ಅವುಗಳ ಫಲವಾಗಿ ಹೊರಬಂದ ಪುಸ್ತಕ ರೂಪಗಳು ಈ ಹೊತ್ತಿನ ಕನ್ನಡ ಸಾಹಿತ್ಯ ಅಧ್ಯಯನಗಳಲ್ಲಿ ಗುಪ್ತವಾಗಿ ಕೆಲಸ ಮಾಡುತ್ತಿವೆ. ನಮ್ಮ ವಿಭಾಗಕ್ಕೆ ಇದೊಂದು ಆದರ್ಶದಂತೆ ಕಂಡಿದೆ. ಮೊದಲಿನಿಂದಲೂ ನಮ್ಮ ವಿಭಾಗದ ಮೇಲೆ ಪ್ರೀತಿ ತೋರುತ್ತಾ ಬಂದಿರುವ ಶ್ರಿ ಜಿಎಸ್‌ಎಸ್ ಅವರು ಪ್ರಸ್ತುತ 'ಕವಿರಾಜಮಾರ್ಗ' ಸಂವಾದ ಕಾರ್ಯಕ್ರಮ ನಡೆಯುವಲ್ಲಿ ನೀಡಿದ ಸೂಚನೆಗಳು ಉಪಯುಕ್ತವಾಗಿದ್ದವು; ವಿಭಾಗದ ಕೆಲಸಗಳಿಗೆ ಯಾವತ್ತೂ ಪ್ರೋತ್ಸಾಹ ನೀಡುವ ಕುಲಪತಿಯವರಾದ ಎಂ.ಎಂ.ಕಲಬುರ್ಗಿ ಅವರು, ಈ

ಕಾರ್ಯಕ್ರಮದಲ್ಲಿ ಒಬ್ಬ ವಿದ್ವಾಂಸರಾಗಿಯೂ ಭಾಗವಹಿಸಿದ್ದಾರೆ. ಉದ್ದಕ್ಕೂ ನಮ್ಮ ವಿಭಾಗದ ಯೋಜನೆಗಳು ರೂಪುಗೊಳ್ಳುವಲ್ಲಿ ಹಾಗೂ ಚರ್ಚೆಯ ಮೂಲಕ ಸ್ಪಷ್ಟತೆ ತಂದುಕೊಳ್ಳುವ ಕೆಲಸದಲ್ಲಿ ಕೆ.ವಿ.ನಾರಾಯಣ ಅವರು ಕೊಡುತ್ತ ಬಂದಿರುವ ನೆರವು ದೊಡ್ಡದು. ನಮ್ಮ ವಿಭಾಗಕ್ಕೆ ಮುಖ್ಯಸ್ಥರಾಗಿ ಕೆಲಸ ಮಾಡಿ ತೆರಳಿರುವ ಎಚ್.ಎಸ್.ರಾಘವೇಂದ್ರರಾವ್ ಹಾಗೂ ಓ.ಎಲ್.ನಾಗಭೂಷಣಸ್ವಾಮಿ ಅವರು ಅಗತ್ಯವಾದ ಸಲಹೆಗಳನ್ನು ನೀಡುತ್ತ ಬಂದಿದ್ದಾರೆ. ಈ ಪುಸ್ತಕ ಹೊರಬರುವಲ್ಲಿ ವಿಭಾಗದ ಗೆಳೆಯರಾದ ಅಮರೇಶ ನುಗಡೋಣಿ, ಬಿ.ಎಂ.ಪುಟ್ಟಯ್ಯ, ಶಿವಾನಂದ ವಿರಕ್ತಮಠ, ವೆಂಕಟೇಶ ಇಂದ್ವಾಡಿ ಅವರು ದುಡಿದಿದ್ದಾರೆ. ವಿಭಾಗದ ಸಂಶೋಧನ ವಿದ್ಯಾರ್ಥಿ ವೆಂಕಟೇಶಮೂರ್ತಿ, ಕಚೇರಿಯ ಸದಸ್ಯರಾದ ಸತ್ಯನಾರಾಯಣಶೆಟ್ಟಿ, ಶಂಕರ್ ಹಾಗೂ ರೇಖಾ ಅವರು ಅನೇಕ ರೀತಿಯಲ್ಲಿ ಸಹಾಯ ಮಾಡಿದ್ದಾರೆ. ಪ್ರಸಾರಾಂಗದ ನಿರ್ದೇಶಕರಾದ ಎ.ವಿ.ನಾವಡ ಅವರು ಪುಸ್ತಕವನ್ನು ಪ್ರಕಟಿಸುತ್ತಿದ್ದಾರೆ. ಇವರೆಲ್ಲರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ರಹಮತ್ ತರೀಕೆರೆ

ಪರಿವಿಡಿ

೧

ಕವಿರಾಜಮಾರ್ಗ : ಪ್ರಸ್ತಾವನೆ

ರಹಮತ್ ತರೀಕೆರೆ

ಮಾನ್ಯರೆ,

'ಕವಿರಾಜಮಾರ್ಗ' ಸಂವಾದ ಕಾರ್ಯಕ್ರಮಕ್ಕೆ ಆಗಮಿಸಿರುವ ಎಲ್ಲ ವಿದ್ವಾಂಸರಿಗೂ, ಕನ್ನಡ ವಿಶ್ವವಿದ್ಯಾಲಯದ ಎಲ್ಲ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ಸ್ವಾಗತ ಕೋರುತ್ತಾ, ಈ ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕವಾಗಿ ಕೆಲವು ಮಾತುಗಳನ್ನು ಆಡಬಯಸುತ್ತೇನೆ. ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ ಹಾಕಿಕೊಂಡಿರುವ 'ಪ್ರಾಚೀನ' ಕೃತಿಗಳನ್ನು ಮುಖಾಮುಖಿ ಮಾಡುವ ಯೋಜನೆಯ ಭಾಗವಾಗಿ ಈ ಕಾರ್ಯಕ್ರಮ ನಡೆಯುತ್ತಿದೆ. ಕಳೆದ ವರುಷ ವಿಭಾಗವು, ೭ನೇ ಶತಮಾನ ಆರಂಭವಾಗುತ್ತಿರುವ ಹೊತ್ತಲ್ಲಿ ಸಾಹಿತ್ಯ ಅಧ್ಯಯನ ಮಾಡುವ ತಾತ್ವಿಕ ಸವಾಲುಗಳು ಯಾವುವು ಎಂಬ ಬಗೆಗೆ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿತ್ತು; ಅಲ್ಲಿ ನಡೆದ ಚರ್ಚೆಗಳ ಫಲವಾಗಿ, ಪ್ರತಿ ವರುಷ, ಕನ್ನಡದ ಒಂದೊಂದು ಕೃತಿಯನ್ನು ಆಯ್ದುಕೊಂಡು ಆಳವಾದ ಪರಿಶೀಲನೆಗೆ ಒಳಪಡಿಸಬೇಕೆಂದೂ, ಅದರ ನೆಪದಲ್ಲಿ ಇಡೀ ಕನ್ನಡ ಸಾಹಿತ್ಯ ಪರಂಪರೆಯನ್ನು ಮರುಪರಿಶೀಲನೆಗೆ ಯತ್ನಿಸಬೇಕೆಂದೂ ನಿರ್ಧರಿಸಲಾಯಿತು. ಅದರಲ್ಲೂ ಮೂಲಕೃತಿಗಳ ಆಪ್ತ ಓದು ಮಾಡದೆ, ಸಾಹಿತ್ಯ ಚರಿತ್ರಕಾರರೂ ವಿಮರ್ಶಕರೂ ಅವುಗಳ ಬಗೆಗೆ ಮಾಡಿರುವ ಚರ್ಚೆಯ ಸಾರಾಂಶ ರೂಪವನ್ನು ಇಟ್ಟುಕೊಂಡು, ಪರಂಪರೆಯ ಬಗೆಗೆ ಸಾಧಾರಣೀಕರಿಸುವ ಚಾಳಿ ಕನ್ನಡದಲ್ಲಿ ಹೆಚ್ಚಾಗುತ್ತಿರುವ ಈ ಹೊತ್ತಿನಲ್ಲಿ, ಕೃತಿಗಳ ಸೂಕ್ಷ್ಮ ಮತ್ತು ಆಪ್ತ ಓದಿನ ಕೆಲಸ ಅಗತ್ಯವಾಗಿದೆ ಎಂದು ಭಾವಿಸಲಾಯಿತು. ನಮ್ಮ ಕಾಲದ ಅನೇಕ ತಲ್ಲಣ-ಹಂಬಲಗಳ ಸಮ್ಮುಖದಲ್ಲಿ, ಬೇರೊಂದು ಕಾಲದಲ್ಲಿ ಸೃಷ್ಟಿಯಾದ ಕೃತಿಗಳನ್ನು ಹೊಸ ಓದಿಗೆ ಒಳಪಡಿಸುವುದರಿಂದ, ಕನ್ನಡ ಸಾಹಿತ್ಯ ಅಧ್ಯಯನದಲ್ಲಿ ಹೊಸಹಾದಿಗಳು ಮೈದೆಗೆಯಬಹುದು ಎಂಬ ಆಶಯವೂ ವ್ಯಕ್ತವಾಯಿತು. ಈ ಹಿನ್ನೆಲೆಯಲ್ಲಿ ಪ್ರಾಚೀನ ಕೃತಿಗಳ ಮರುಪರಿಶೀಲನೆಯ ಪ್ರಯತ್ನವನ್ನು ವಿಭಾಗವು ಕೈಗೆತ್ತಿಕೊಂಡಿದೆ. ಅದನ್ನು ಈಗ 'ಕವಿರಾಜಮಾರ್ಗ'ದ ಮೂಲಕ ಆರಂಭಿಸುತ್ತಿದೆ.

ಯೋಜನೆಯ ಆರಂಭದ ಕೃತಿಯಾಗಿ 'ಕವಿರಾಜಮಾರ್ಗ'ವನ್ನು ಆಯ್ದುಕೊಳ್ಳಲು ಅನೇಕ ಕಾರಣಗಳಿವೆ. ಅವೆಂದರೆ, ಇದು ನಮಗೆ ದಕ್ಕಿರುವ ಕನ್ನಡದ ಮೊಟ್ಟಮೊದಲ ಪುಸ್ತಕ; ಇದು ರಚನೆಯಾಗಿ ಸಾವಿರ ವರುಷಗಳು ಹಾಗೂ ಪ್ರಕಟವಾದ ನೂರು ವರುಷಗಳು ಕಳೆದಿವೆ; ಕಳೆದ ಹತ್ತು ಶತಮಾನಗಳ ಉದ್ದಕ್ಕೂ ಕನ್ನಡವು 'ಕವಿರಾಜಮಾರ್ಗ'ವನ್ನು ತನ್ನ ಕಾಲದ ಇಕ್ಕಟ್ಟು ಹಾಗೂ ಅಗತ್ಯಗಳಿಗೆ ತಕ್ಕಂತೆ ಓದಿಸಿಕೊಳ್ಳುತ್ತಾ ಅರ್ಥೈಸಿಕೊಳ್ಳುತ್ತ ಚೈತನ್ಯವನ್ನು ಉಳಿಸಿಕೊಂಡು ಬಂದಿದೆ. ೨೦ನೇ ಶತಮಾನದಲ್ಲೂ ಈ ಬಗೆಯ ಓದು ಮತ್ತು ಬಳಕೆ ಮುಂದುವರೆದಿದೆ. ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಏರ್ಪಟ್ಟ ಅನೇಕ ಹೋರಾಟಗಳಲ್ಲಿ ರೂಪುಗೊಂಡ "ನಮ್ಮ" ಸಂಸ್ಕೃತಿಯ ಅಭಿಮಾನದಲ್ಲಿ 'ಕವಿರಾಜಮಾರ್ಗ'ದ ನೆನಪುಗಳು ಇದ್ದವು; ಕರ್ನಾಟಕದ ಏಕೀಕರಣದ ಹೊತ್ತಲ್ಲಿ ಇದರ ವರ್ಣನೆ ಮತ್ತು ಹೇಳಿಕೆಗಳು ಬಳಕೆಯಾದವು; ಈಗಲೂ ಹೊಗೆಯಾಡುತ್ತಿರುವ ಕರ್ನಾಟಕದ ಗಡಿವಿವಾದಗಳಲ್ಲಿ ಈ ಪಠ್ಯ ಉಲ್ಲೇಖಗೊಳ್ಳುತ್ತಿದೆ; ಒಂದು ಭಾಷಿಕ ಸಮುದಾಯವು (ಅಂದರೆ ರಾಜಕೀಯ ಪ್ರಜ್ಞೆ ಪ್ರದರ್ಶಿಸುವ ಅದರ ಚಿಕ್ಕ ವರ್ಗವು) ತನ್ನ ನಾಡಿನ ಅಸ್ಮಿತೆಯನ್ನು ಕಂಡುಕೊಳ್ಳುವ ಸಂದರ್ಭಗಳಲ್ಲೆಲ್ಲ ಒಂದು ಪಠ್ಯವು ಭಾವನಾತ್ಮಕ ಆತ್ಮವಿಶ್ವಾಸವನ್ನು ತುಂಬುವ ಈ ಪರಿ ವಿಶೇಷವಾದುದು. ಬಹುಶಃ ವರ್ತಮಾನವನ್ನು ನೇರವಾಗಿ ಮತ್ತು ಸರಿಯಾಗಿ ಎದುರಿಸಲು ಆಗದೆ ಹೋದಾಗ ಚರಿತ್ರೆಯ ನೆನಪುಗಳು ನೆರವಾಗುವ ಈ ಪ್ರಕ್ರಿಯೆಗೆ, ಇನ್ನೊಂದು ಮುಖವಿದೆ. ಅದೆಂದರೆ ಭಾಷಾ ಮೂಲಭೂತವಾದ. ಕರ್ನಾಟಕದಲ್ಲಿರುವ ಕನ್ನಡೇತರ ಭಾಷಿಕ ಸಮುದಾಯಗಳ ಮೇಲೆ ಹಗೆ ಸಾಧಿಸುವುದನ್ನೇ ಕನ್ನಡಕ್ಕೆ ತೋರಿಸುವ ಅಭಿಮಾನ ಎಂದು ತಿಳಿದಿರುವ ಈ ಭಾಷಾ ಮೂಲಭೂತವಾದಿಗಳು ನಿಜಶತ್ರುಗಳನ್ನು ಅರಿಯದೆ ಹಸಿಶತ್ರುಗಳನ್ನು ಹುಡುಕಿಕೊಳ್ಳುತ್ತಾರೆ. 'ಕವಿರಾಜಮಾರ್ಗ'ದಿಂದ ಇವರು ಕೂಡ ಪ್ರೇರಣೆ ಪಡೆಯುತ್ತಿದ್ದಾರೆ.

ಹೀಗೆ 'ಕವಿರಾಜಮಾರ್ಗ'ವು ಕನ್ನಡ ಭಾಷಿಕ ಸಮುದಾಯದ ಬೇರೆ ಬೇರೆ ಕಾಲದ ಸುಖ ದುಃಖಗಳಲ್ಲಿ, ಆ ಸಮುದಾಯವು ತನ್ನನ್ನು ರಕ್ಷಿಸಿಕೊಳ್ಳುವ ಹಾಗೂ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುವ ಕೆಲಸಗಳಲ್ಲಿ, ಅನೇಕ ರೀತಿಯ ಪ್ರೇರಣೆಗಳನ್ನು ನೀಡಿದೆ. ಇದಕ್ಕೆಲ್ಲ ಕಾರಣ, ಅದು ಕರ್ನಾಟಕದ ನೆಲ ಭಾಷೆ, ಜನ ಹಾಗೂ ಅದರ ವಿಶೇಷತೆಗಳನ್ನು ಕುರಿತು ಮಾಡಿರುವ ಅಭಿಮಾನದ ವರ್ಣನೆಗಳು. ಮೇಲುನೋಟಕ್ಕೆ ಇದೊಂದು ಅಲಂಕಾರ ಗ್ರಂಥ. ಇದರಲ್ಲಿ ಕನ್ನಡ ಭಾಷೆ ವ್ಯಾಕರಣ ಕಾವ್ಯಮೀಮಾಂಸೆ ಛಂದಸ್ಸು ಮುಂತಾದ 'ಸಾಹಿತ್ಯಕ' ಸಂಗತಿಗಳನ್ನು ಕುರಿತ ವಿವರಣೆಗಳಿವೆ. ಜತೆಗೆ ಇದು, ಕವಿಗಳಿಗೆ ರಾಜಮಾರ್ಗವನ್ನು ತೋರಲು ಪ್ರಭುತ್ವದ ಗಾಢನೆರಳಿನಲ್ಲಿ ಜನಿಸಿದ ಕೃತಿ. ಆದರೆ, ಆಳದಲ್ಲಿ ಇದರೊಳಗೆ, ಕನ್ನಡದಂತಹ ದೇಸಿಭಾಷೆ ಮತ್ತು ಸಾಹಿತ್ಯಗಳು ಎದುರಿಸುತ್ತಿದ್ದ ಕಷ್ಟ-ಸವಾಲುಗಳು ಸಹ ವ್ಯಕ್ತವಾಗಿವೆ; ಕನ್ನಡ ಭಾಷಿಕ ಸಂಸ್ಕೃತಿಯು, ಪ್ರತಿಷ್ಠಿತವಾದ ಸಂಸ್ಕೃತ ಭಾಷೆ-ಸಾಹಿತ್ಯಗಳ ಎದುರು ತಲೆಯೆತ್ತಿ ಸುಳಿದೆಗೆದು ಬೆಳೆಯಬೇಕಾದ ಒತ್ತಡಗಳಲ್ಲಿದ್ದಾಗ, ಅದಕ್ಕೆ ಆತ್ಮವಿಶ್ವಾಸ ಮತ್ತು ಘನತೆ ತಂದು ಕೊಡುವುದು ಹೇಗೆ

ಎಂದು ಮಾಡಿದ ಕಾಳಜಿಗಳಿವೆ. ಅನುಕರಿಸುವ ಗೀಳು, ಹೊಂದಾಣಿಕೆಯ ಮೆದುತನ, ಸ್ಪರ್ಧಿಸುವ ಛಲಗಾರಿಕೆ, ತನ್ನ ವಿಶಿಷ್ಟತೆಗಳ ಸಮರ್ಥನೆ ಇತ್ಯಾದಿ ಪಟ್ಟುಗಳನ್ನು ಹಾಕುತ್ತ, ಕನ್ನಡ ಬೆಳೆಯ ಬಯಸಿದ ಹವಣಿಕೆಯನ್ನು ಇದು ಸೂಕ್ಷ್ಮವಾಗಿ ದಾಖಲಿಸಿದೆ. ಕನ್ನಡದ ಸಮಸ್ಯೆಗಳನ್ನು ಕವಿರಾಜಮಾರ್ಗಕಾರ ಅರ್ಥ ಮಾಡಿಕೊಂಡ ರೀತಿ ಹಾಗೂ ಅವಕ್ಕೆ ಅವನು ಸೂಚಿಸುವ ಪರಿಹಾರಗಳ ವಿಷಯದಲ್ಲಿ, ಈಗಿನ ನಮಗೆ ಭಿನ್ನಾಭಿಪ್ರಾಯ ಹುಟ್ಟುವುದು ಸಹಜ. ಆದರೆ ಅದು ಅಷ್ಟು ಮುಖ್ಯವಲ್ಲ. ಮುಖ್ಯವೆಂದರೆ, ಇರುವ ತೊಡಕುಗಳನ್ನು ಮೀರಬೇಕೆನ್ನುವ ತುಡಿತ ಹಾಗೂ ಮೀರಲಾಗದ ಕಷ್ಟ, ಕಣ್ಣ ಮುಂದಿನ ಆದರ್ಶ ಹಾಗೂ ಕಾಲಕೆಳಗಿನ ವಾಸ್ತವ -ಇವುಗಳ ಇಕ್ಕಟ್ಟಿನಲ್ಲಿ ಭಾಷಿಕ ಸಂಸ್ಕೃತಿಯೊಂದು ಮಾಡುವ ತೊಳಲಾಟಗಳು; ಆತ್ಮಪ್ರತ್ಯಯ ಹಾಗೂ ಆತ್ಮವಿಮರ್ಶೆಗಳ ಇಬ್ಬಾಯ ಕತ್ತಿಯನ್ನು ಹಿಡಿದುಕೊಂಡು ಅರ್ಥಪೂರ್ಣವಾದ ಹೊರಹಾದಿ ಹುಡುಕಲು ಮಾಡುವ ಯತ್ನಗಳು. ಇವು ಸಾಂಸ್ಕೃತಿಕವಾಗಿ ಸೂಕ್ಷ್ಮವಾದವು. ಪ್ರಪಂಚೀಕರಣದ ತೆಂಕಣಗಾಳಿ ಬೀಸುತ್ತಿರುವ ಈ ಹೊತ್ತಿನಲ್ಲಿ, ಜಗತ್ತಿನ ಎಷ್ಟೋ ಜನಭಾಷೆಗಳಂತೆ ಕನ್ನಡವೂ ತನ್ನ ಅಸ್ತಿತ್ವ ಹಾಗೂ ಹೊಸ ಸಲ್ಲುವಿಕೆಗಳಿಗಾಗಿ ಅನೇಕ ಬಗೆಯ ಸ್ವವಿಮರ್ಶೆ ಮತ್ತು ಸ್ವಪ್ರಯತ್ನಗಳ ಹುನ್ನಾರಗಳನ್ನು ಹೂಡಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಹನ್ನೊಂದು ಶತಮಾನಗಳ ಹಿಂದೆ ಹೆಚ್ಚು ಕಡಿಮೆ ಇಂತಹುದೇ ಇಕ್ಕಟ್ಟುಗಳ ದಾಖಲೆಯಾಗಿರುವ 'ಕವಿರಾಜಮಾರ್ಗ'ದ ಓದು ಈಗ ಅರ್ಥಪೂರ್ಣವಾದುದು ಎಂದು ಅನಿಸುತ್ತದೆ. ಎಂತಲೇ ಈ ಶತಮಾನದ ಅನೇಕ ಚಿಂತಕರು ಇದನ್ನು ಒಂದು ಅಲಂಕಾರ ಗ್ರಂಥವೆಂದು ಮಾತ್ರ ಭಾವಿಸದೆ, ಬಹು ಆಯಾಮವುಳ್ಳ ಸಾಂಸ್ಕೃತಿಕ ಪಠ್ಯವೆಂದು ಗ್ರಹಿಸಿ ವ್ಯಾಖ್ಯಾನಿಸುತ್ತ ಬಂದಿದ್ದಾರೆ.

ಹೀಗಾಗಿ ಪ್ರಸ್ತುತ ಸಂವಾದ ಕಾರ್ಯಕ್ರಮವು ಕೇವಲ 'ಕವಿರಾಜಮಾರ್ಗ' ಎಂಬ ಒಂದು ಕೃತಿಯ ಬಗೆಗಿನ ಚರ್ಚೆಯಲ್ಲ ಅಥವಾ ಅದರ ಸಾಹಿತ್ಯ ತತ್ವಗಳ ಬಗೆಗಿನ ಅಕೆಡಮಿಕ್ ಪರಿಶೀಲನೆಯಲ್ಲ(ಸಾಹಿತ್ಯ ಮೀಮಾಂಸೆ ಕೂಡ ಯಾವತ್ತೂ ಒಂದು ಭಾಷಿಕ ಸಮುದಾಯದ ರಾಜಕೀಯ ಸಾಮಾಜಿಕ ಆಶೋತ್ತರಗಳ ಭಾಗವಾಗಿಯೇ ಇರುತ್ತದೆ). ಬದಲಾಗಿ ಒಂದು ಕೃತಿಯ ನೆಪದಲ್ಲಿ ಈ ಹೊತ್ತು ಕನ್ನಡ ಭಾಷೆ, ನಾಡು ಹಾಗೂ ಸಮುದಾಯಗಳು ಎದುರಿಸುತ್ತಿರುವ ಕಷ್ಟಸುಖಗಳ ವಿಶ್ಲೇಷಣೆಯ ಯತ್ನ ಕೂಡ. ವರ್ತಮಾನದ ಅನುಭವಗಳ ಮೂಲಕ ಗತವನ್ನು ನೋಡುವ, ಗತದ ಅರಿವಿನ ಮೂಲಕ ವರ್ತಮಾನವನ್ನು ಪ್ರವೇಶಿಸುವ ಪ್ರಯತ್ನವುಳ್ಳ ಈ ಕಾರ್ಯಕ್ರಮಕ್ಕೆ ಸಾಂಸ್ಕೃತಿಕ ರಾಜಕಾರಣದ ಸುಪ್ತ ಆಶಯವಿದೆ. ಇಲ್ಲಿ ಬಂದಿರುವ ಎಲ್ಲರೂ ಈ ಸಂವಾದ ಕಾರ್ಯದಲ್ಲಿ ಪಾಲುಗೊಂಡು, ನಮ್ಮ ಯತ್ನವನ್ನು ಸಫಲಗೊಳಿಸಬೇಕು ಎಂದು ಕೋರುತ್ತೇನೆ; ಈ ಕಾರ್ಯಕ್ರಮದ ಫಲವಾಗಿ ಪ್ರಕಟವಾಗಲಿರುವ ಕೃತಿಯು ಪ್ರಾಚೀನ ಕೃತಿಗಳ ಮುಖಾಮುಖಿ ಮಾಡಲು ಅತ್ಯುತ್ತಮ ಪ್ರವೇಶಿಕೆಯಂತಾಗಬೇಕು ಎಂಬುದು ವಿಭಾಗದ ಆಸೆಯಾಗಿದೆ. ನಮಸ್ಕಾರ.

೨

ಕವಿರಾಜಮಾರ್ಗ : ಹೊಸ ಓದು

ಕೆ.ವಿ.ಸುಬ್ಬಣ್ಣ

'ಕವಿರಾಜಮಾರ್ಗ'ವನ್ನು ಕುರಿತು ಇವತ್ತಿನ ವಿದ್ವದ್ಗೋಷ್ಠಿಯಲ್ಲಿ ನಾನು ಪ್ರಾಸ್ತಾವಿಕ ಮಾತುಗಳನ್ನು ಹೇಳಬೇಕಾಗಿದೆ. ಇದಕ್ಕೆ 'ನಮ್ಮ ಪ್ರಾಚೀನ ಕೃತಿಗಳ ಸಾಂಸ್ಕೃತಿಕ ಓದು' ಎನ್ನುವ ಶೀರ್ಷಿಕೆಯನ್ನು ಸೂಚಿಸಲಾಗಿದೆ. 'ಸಾಂಸ್ಕೃತಿಕ ಓದು' ಎಂಬ ವಿಶೇಷಣ ಸಮೇತವಾದ ನುಡಿಗಟ್ಟು ನನ್ನನ್ನು ಆತಂಕಗೊಳಿಸುತ್ತಿದೆ. ಕಾರಣಗಳೆಂದರೆ-

೧. ಸಂಸ್ಕೃತಿ (ಎಂದರೆ, ಕಲ್ಚರ್) ಎಂಬ ಶಬ್ದವನ್ನು ನಾವು ಈ ಶತಮಾನದಲ್ಲಿ ಪಶ್ಚಿಮದಿಂದ ತಂದುಕೊಂಡಿದ್ದೇವೆ. ಪಶ್ಚಿಮದಲ್ಲಿ, ಕಳೆದ ಸುಮಾರು ೧೫೦ ವರ್ಷಗಳ ಅವಧಿಯಲ್ಲಿ ಈ ಶಬ್ದದ ಅರ್ಥವು ಗುರುತು ಸಿಕ್ಕದಷ್ಟು ಬದಲಾಗಿದೆ. ಅಪಾರವಾಗಿ ಬೆಳೆದಿದೆ. ಸ್ಥೂಲ ಉಪಮೆಯಲ್ಲಿ ಹೇಳುವುದಾದರೆ, ಆಗ ಸಂಸ್ಕೃತಿಯನ್ನು ಮಾನವ ಜೀವನವೆಂಬ ತೋಟದ ಹೂವು ಎಂದು ಪರಿಗಣಿಸುತ್ತಿದ್ದರು ಮತ್ತು ಈಗ ಇಡೀ ತೋಟವೇ ಸಂಸ್ಕೃತಿ ಎಂದು ವಾದಿಸುವವರಿದ್ದಾರೆ. ಈ ಮಧ್ಯದ ಅವಧಿಯಲ್ಲಿ ಪಶ್ಚಿಮವು ರೂಢಿಸಿಕೊಂಡ ಔದ್ಯೋಗಿಕರಣ, ವಸಾಹತುಕರಣ, ಹೊಸನಾಗರಿಕತೆ, ಅಲ್ಲಿ ಸಂಭವಿಸಿದ ಎರಡು ಮಹಾಯುದ್ಧಗಳು, ನಿರ್ವಸಾಹತುಕರಣ ಮತ್ತು ಮುಖ್ಯವಾಗಿ ಅತ್ಯಪಾರವಾಗಿ ಬೆಳೆದ ಪ್ರಸಾರ ಮಾಧ್ಯಮಗಳು ಇತ್ಯಾದಿಗಳು ಒಂದು ಕಡೆ : ತತ್ತ್ವಶಾಸ್ತ್ರ, ಮನಶ್ಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಇತ್ಯಾದಿಗಳೇ ಅಲ್ಲದೆ ನೂತನವಾಗಿ ಹುಟ್ಟಿಕೊಂಡ ಸಮಾಜಶಾಸ್ತ್ರ, ಮಾನವಶಾಸ್ತ್ರ, ಭಾಷಾಶಾಸ್ತ್ರ, ಸಂಜ್ಞಾಶಾಸ್ತ್ರ, ಪರಿಜ್ಞಾನಶಾಸ್ತ್ರ, ಭವಿಷ್ಯಶಾಸ್ತ್ರ ಇತ್ಯಾದಿ ಬಹು ರೋಚಕವಾದ ಕಲ್ಪನೆಗಳು ಇನ್ನೊಂದು ಕಡೆ; ಇವೆಲ್ಲ ಕೂಡಿ ಸಾಹಿತ್ಯ ಸಂಸ್ಕೃತಿ ಮೀಮಾಂಸೆಗಳ ಮೇಲೆ ಬಹು ಗಾಢವಾದ ಪ್ರಭಾವವನ್ನು ಬೀರಿವೆ; ಸಂಸ್ಕೃತಿಯೆಂಬ ಕಲ್ಪನೆಯನ್ನು ಹೊಸದುಗೊಳಿಸಿಬಿಟ್ಟಿವೆ.

೧೯ನೇ ಶತಮಾನದ ಮ್ಯಾಥ್ಯೂ ಆರ್ನಾಲ್ಡನ ಸಂಸ್ಕೃತಿಯ ಕಲ್ಪನೆಗೂ ೨೦ನೇ ಶತಮಾನದ ಉತ್ತರಾರ್ಧದಲ್ಲಿ ರೊಲೆಂಡ್ ಬಾರ್ತೆ, ರೇಮಾಂಡ್ ವಿಲಿಯಮ್ಸ್

ಮುಂತಾದವರ ಪ್ರಭಾವದಿಂದ ಬೆಳೆದ 'ಸಾಂಸ್ಕೃತಿಕ ಅಧ್ಯಯನ' (ಕಲ್ಚರಲ್ ಸ್ಟಡೀಸ್) ಎಂಬ ಹೊಸ ಅಧ್ಯಯನ ಶಾಖೆಯು ರೂಪಿಸಿಕೊಂಡಿರುವ ಕಲ್ಪನೆಗೂ ಇರುವ ಅಪಾರ ಭಿನ್ನತೆಗಳನ್ನು ನಾನಿಲ್ಲಿ ಸೂಚಿಸುತ್ತಿದ್ದೇನೆ.

೨. ವಸಾಹತುಕರಣ, ನಿರ್ವಸಾಹತುಕರಣ, ನವವಸಾಹತುಕರಣ ಮುಂತಾದ ಹಲವು ಪ್ರಕ್ರಿಯೆಗಳ ಮೂಲಕ, ಪಶ್ಚಿಮ ಮತ್ತು ಪೂರ್ವರಾಜ್ಯಗಳ (ಅಥವಾ ಈಚಿನ ನಾಮಕರಣದಂತೆ ಉತ್ತರ ಮತ್ತು ದಕ್ಷಿಣ ರಾಷ್ಟ್ರಗಳ) ಕಲ್ಪನೆಗಳಲ್ಲಿ 'ಸಂಸ್ಕೃತಿ' ಎಂಬುದಕ್ಕೆ ಭಿನ್ನ ಅರ್ಥಗಳು ಹುಟ್ಟಿಕೊಳ್ಳುತ್ತಿವೆ. 'ಸಂಸ್ಕೃತಿ'ಯೆಂಬ ಕಲ್ಪನೆಯು ಆ-ಈ ರಾಷ್ಟ್ರಬಣಗಳಲ್ಲಿ ಹುಟ್ಟಿಸುವ ಅಪೇಕ್ಷೆಗಳು ಭಿನ್ನವಾಗುತ್ತಿವೆ. ವಿರುದ್ಧವಾಗುತ್ತಿವೆ. ಸ್ಥೂಲವಾಗಿ ಹೇಳುವುದಾದರೆ, ಸಂಸ್ಕೃತಿಯೆನ್ನುವುದು ಅವರಿಗೆ ತಮ್ಮ ವರ್ತಮಾನವನ್ನು ಅರಿವುಗೊಳಿಸಿಕೊಳ್ಳುವ ಸಾಧನವಾಗಿ ತೋರುತ್ತಿದ್ದರೆ, ಇವರಿಗೆ ಅದು ತಮ್ಮ ಸ್ವಂತಿಕೆಯನ್ನು ಶೋಧಿಸುವ ಹಾಗೂ ಆ ಸ್ವಂತಿಕೆಯ ಅಸ್ತಿವಾರದ ಮೇಲೆ ತಮ್ಮನ್ನು ಸ್ಥಾಪಿಸಿಕೊಳ್ಳುವ ಕಾರಣಕ್ಕೆ ಕೈವಾರಿಯಾಗಿ ಒದಗುವಂಥದ್ದು ಎಂದು ಕಾಣಿಸುತ್ತದೆ.

೩. ಪಶ್ಚಿಮದ ಚಿಂತನಗಳ ಜೊತೆ ಸಂವಾದವಿಟ್ಟುಕೊಂಡು ಬಂದ ಕನ್ನಡದಲ್ಲೂ ಅದು, ಡಿ.ವಿ.ಜಿ. ನಿರೂಪಣೆಯಿಂದ ಮೊದಲಾಗಿ ಅನಂತಮೂರ್ತಿ, ಡಿ.ಆರ್.ನಾಗರಾಜ ಮುಂತಾದವರ ನಿರೂಪಣೆಗಳ ತನಕ ಬದಲಾಗುತ್ತ ಬಂದಿದೆ, ಬೆಳೆದಿದೆ. ಇಂಥ ಹಿನ್ನೆಲೆಯಲ್ಲಿ 'ಸಂಸ್ಕೃತಿ'ಯೆಂಬ ಶಬ್ದವನ್ನು ಬಳಸುವುದಿದ್ದರೆ, ಅದರ ಬದಲಿಕೆ ಬೆಳವಣಿಗೆಗಳನ್ನೆಲ್ಲಾ ಚರ್ಚಿಸಿ, ಒಂದು ನಿಶ್ಚಿತ ಅರ್ಥವನ್ನು ಕೊಟ್ಟುಕೊಂಡೇ ಬಳಸಬೇಕು. ಹಾಗಲ್ಲದಿದ್ದರೆ ಅದು, ಗೊಂದಲ ಗೋಜಲುಗಳನ್ನಷ್ಟೇ ಹುಟ್ಟಿಸಿಬಿಡಬಹುದು. ನನ್ನ ಪ್ರಸ್ತಾವನೆಯ ಮಿತಿಯಲ್ಲಿ 'ಸಂಸ್ಕೃತಿ'ಯೆಂಬುದರ ಚರ್ಚೆಯು ಸಾಧ್ಯವಿಲ್ಲವಾದ ಕಾರಣ, ಆ ಶಬ್ದವನ್ನು ಇದ್ದಕ್ಕಿದಂತೆ ಎತ್ತಿ ಬಳಸಲಿಕ್ಕೆ ನನಗೆ ಆತಂಕವಾಗುತ್ತದೆ.

೪. 'ಸಾಂಸ್ಕೃತಿಕ ಓದು' ಎನ್ನುವಾಗ ನನ್ನಲ್ಲಿ ಹುಟ್ಟುವ ಇನ್ನೊಂದು ದೊಡ್ಡ ಆತಂಕವೆಂದರೆ, ಒಂದು ವಿಶಿಷ್ಟ ಬಗೆಯ ಓದನ್ನು ಎತ್ತಿ ಹೇಳುವ ಮೂಲಕ ನಾವು ಇನ್ನಿತರ ಬಗೆಯ ಓದುಗಳನ್ನು ನಿರಾಕರಿಸಿದಂತಲ್ಲವೆ, ಓದಿನ ಸಮಗ್ರತೆಯನ್ನು ನಿಯಂತ್ರಿಸಿದಂತಲ್ಲವೆ, ಎನ್ನುವುದು. 'ಸಾಂಸ್ಕೃತಿಕ' ಎಂಬ ಶಬ್ದವು 'ಸರ್ವಗ್ರಾಹಿ'ಯಾದದ್ದು ಎನ್ನುವ ಸಮಾಧಾನ ಹೇಳುವವರಿರಬಹುದು. ಆಗಲೂ ಓದು ಎಂಬುದಷ್ಟೇ ಸಾಕಾಗುತ್ತದಲ್ಲ? ಅದಕ್ಕೆ ವಿಶೇಷಣ ಯಾತಕ್ಕೆ? ಇಂಥ ವಿಂಗಡಣೆಯ ಕ್ರಮಗಳು ಪಶ್ಚಿಮದಲ್ಲಿ ರೂಢಿಯಾಗಿರುವಂಥವು. ವಿಶ್ಲೇಷಣೆಯ ವಿಧಾನದಿಂದ ಜ್ಞಾನವನ್ನು ಗ್ರಹಿಸಲು ಪ್ರಯತ್ನಿಸುವುದು ಸಾಮಾನ್ಯವಾಗಿ ಪಶ್ಚಿಮದ ಜಾಯಮಾನ. ಹಾಗಾಗಿ ಬಹುಶಃ ಅವರು, ವಿಶ್ಲೇಷಣ ವಿಭಾಗವನ್ನೇ 'ವಿದ್ವದಧ್ಯಯನದ (ಅಕಡಮಿಕ್) ಕ್ರಮ' ಎಂದು ಪರಿಗಣಿಸುತ್ತಾರೆ. ಪೌರ್ವಾತ್ಯರ ಜಾಯಮಾನವು ಪ್ರಾಯಃ, ಬೇರೆ ರೀತಿಯದು. ಅದು

ಧ್ಯಾನ ಸ್ಥಿತಿಯಲ್ಲಿ ಸಮ್ಯಗ್ ದರ್ಶನ ಪಡೆದುಕೊಳ್ಳಲು ಪ್ರಯತ್ನಿಸುವ ವಿಧಾನ. ಈಗಲಾದರೂ ನಾವು ನಮ್ಮ ಜಾಯಮಾನಕ್ಕನುಗುಣವಾಗಿ ತಮ್ಮದೇ ಆದ ಧ್ಯಾನಮಾರ್ಗದ ಅಧ್ಯಯನ ಕ್ರಮವನ್ನು ರೂಢಿಸಿಕೊಳ್ಳಬೇಕು ಎನ್ನುವುದನ್ನು ನಾನಿಲ್ಲಿ ಒತ್ತಿ ಸೂಚಿಸುತ್ತಿದ್ದೇನೆ. ನಮ್ಮನ್ನು ಈಗ ಇಲ್ಲಿ ಕೂಡಿಸಿರುವ ನಮ್ಮ ಕನ್ನಡ ವಿಶ್ವವಿದ್ಯಾಲಯದ ಎದುರು ಈ ನನ್ನ ಸೂಚನೆಯನ್ನು ಮಂಡಿಸಲಿಕ್ಕೂ ತವಕಗೊಂಡಿದ್ದೇನೆ.

'ಸಾಂಸ್ಕೃತಿಕ'ದ ಮಾತಾದ ಮೇಲೆ 'ಓದು' ಎನ್ನುವ ಪರಿಕಲ್ಪನೆಯನ್ನು ಕುರಿತೂ ಕೊಂಚ ಯೋಚಿಸಬೇಕು ಎನ್ನಿಸುತ್ತದೆ. ಇಲ್ಲಿಯೂ ಪಶ್ಚಿಮದ ಪರಿಕಲ್ಪನೆಗಳಿಗಿಂತ ಪೂರ್ವದ ಪರಿಕಲ್ಪನೆಗಳು ತುಂಬಾ ಭಿನ್ನವಾದರೂ, ಪಶ್ಚಿಮದ ಪರಿಕಲ್ಪನೆಯಲ್ಲಿ ಹಾಗೂ ಈ ಶತಮಾನದುದ್ದ ನಾವು ರೂಢಿಸಿಕೊಂಡ ಆಧುನಿಕ ಶಿಕ್ಷಣದ ಪರಿಕಲ್ಪನೆಯಲ್ಲಿ, 'ಓದು' ಎನ್ನುವುದು ಸಂವಹನ(ಕಮ್ಯುನಿಕೇಶನ್) ಕ್ರಿಯೆ. ಸ್ಥೂಲವಾಗಿ ಅದು, ಒಂದು ಮನಸ್ಸಿನಲ್ಲಿ ಉತ್ಪನ್ನಗೊಂಡ ಅರಿವನ್ನು ಇನ್ನೊಂದು ಮನಸ್ಸಿಗೆ ಸಾಗಣೆ ಮಾಡುವ ಸಾಧನ ಅಥವಾ 'ವಾಹನ'. ಆದರೆ ಪೌರ್ವಾತ್ಯ ಚಿಂತನ ಪರಂಪರೆಗಳಲ್ಲಿ ಬಹುಶಃ 'ಸಂವಹನ'ವೆಂಬಂಥ ಶಬ್ದವಾಗಲಿ ಅಥವಾ ಕಲ್ಪನೆಯಾಗಲಿ ಕಾಣಿಸುವುದಿಲ್ಲ. ಜಗತ್ತಿನ ಸಮಸ್ತ ಜ್ಞಾನವೂ ಪ್ರತಿಯೊಬ್ಬ ವ್ಯಕ್ತಿಯಲ್ಲೂ, ಮಾತ್ರವಲ್ಲ, ಜೀವಾಜೀವಿ ಕಣಗಳಲ್ಲೂ, ಅ ಇ ಸೂಕ್ಷ್ಮರೂಪದಲ್ಲಿ ಗುಪ್ತವಾಗಿ ಸಂಗೋಪಿತವಾಗಿ ಇದ್ದಿರುತ್ತದೆ. ಭಾಷೆಯ ಮೂಲಕ ವಕ್ತಾರನು ತನ್ನಲ್ಲಿ ಆಗ ಉದ್ದೀಪ್ತವಾಗಿರುವ ಯಾವುದೇ ಒಂದು ವಿಶಿಷ್ಟ ಜ್ಞಾನಕಣವು, ಅದೇ ಬಗೆಯಲ್ಲಿ ಶ್ರೋತಾರನಲ್ಲೂ ಉದ್ದೀಪ್ತವಾಗುವಂತೆ ಮಾಡುತ್ತಾನೆ; ಇದು ಜ್ಞಾನೋದ್ದೀಪನದ ಕ್ರಮ. ಓದಿನಿಂದ ಉಂಟಾಗುವುದು ಇದೇ ಅದಕ್ಕೆ ಇದನ್ನು 'ಸಂವಹನ'ವೆನ್ನದೆ, 'ಸಹೃದಯತ್ವ' ಎನ್ನುತ್ತಾರೆ. ಇದಕ್ಕೆ 'ವ್ಯಂಜನೆ' 'ಅಭಿವ್ಯಕ್ತಿ' 'ಉದ್ದೀಪನ' 'ಅಭಿಜ್ಞಾನ' ಇತ್ಯಾದಿ ಶಬ್ದಗಳನ್ನು ಬಳಸುತ್ತಾರೆ. ವಕ್ತಾರನ ವಾಕ್ಕು ಸ್ಪಂದಿಸುತ್ತಿರುವ ಹಾಗೆ, ಶ್ರೋತಾರನಾದವನು ಸಹೃದಯತ್ವ ಸಿದ್ಧಿಗಾಗಿ, ತನ್ನ ಅಂತರಂಗವನ್ನು ಮುಚ್ಚಿ ಹೊದ್ದಿರುವ ಅಹಮಿಕತೆಯ ಪರಿಚ್ಛೇದಗಳೆಲ್ಲವನ್ನೂ ಕಿತ್ತುಹಾಕಿ, ಆ ವಾಕ್ ಸ್ಪಂದನವು ತನ್ನ ಯಾಯಾವ ಮರ್ಮಸ್ಥಾನಗಳನ್ನು ಉದ್ದೀಪ್ತಗೊಳಿಸೀತೋ ಎಂಬ ನಿರೀಕ್ಷೆ-ಕೌತುಕ-ಕಾತರಗಳಿಂದ ಜಾಗೃತವಾಗಿ ನಿಲ್ಲಬೇಕು. ಅಂಥ ಓದು ನನ್ನ ಪಾಲಿಗೆ ಸಮಗ್ರ ಓದು, ಮುಕ್ತ ಓದು, ಆದರ್ಶ ಓದು.

ಇನ್ನು - ಪ್ರಸ್ತಾವನೆಯ ಶೀರ್ಷಿಕೆಯಲ್ಲಿ 'ನಮ್ಮ ಪ್ರಾಚೀನ ಕೃತಿಗಳ' ಎನ್ನುವ ಮಾತಿದೆ. ನನ್ನ ಆದರ್ಶದ ಓದು, ಹಳೆಯ -ಹೊಸ ಎಂಬ ವಿಂಗಡಣೆಯ ಬಗ್ಗೆಯಾಗಲಿ, ಕಾವ್ಯ-ಶಾಸ್ತ್ರ-ವ್ಯವಾಹಾರಿಕ ವಾಙ್ಮಯ ಇತ್ಯಾದಿ ವಿಂಗಡಣೆಗಳ ಬಗ್ಗೆಯಾಗಲಿ ಅಥವಾ ಕವಿತೆ-ಕಥೆ ಕಾದಂಬರಿ-ನಾಟಕ ಇತ್ಯಾದಿ ವಿಂಗಡಣೆಗಳನ್ನು ಕುರಿತು ಕೂಡಾ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಅಂದರೆ, ವಾಙ್ಮಯ ರಾಶಿಯಲ್ಲಾಗಲಿ ಅಥವಾ ಸಾಹಿತ್ಯದಲ್ಲೇ

ಆಗಲಿ ವಿಂಗಡಣೆಗಳ ಅಗತ್ಯವೇ ಇಲ್ಲ ಅಂತ ನಾನು ಹೇಳುವುದಿಲ್ಲ. ಅವೆಲ್ಲಾ ಅತ್ಯಗತ್ಯ. ಅವು ಓದಿನ ವ್ಯಾಕರಣವೇ. ಆದರೆ ವ್ಯಾಕರಣವು ಓದಿಗೆ ತೊಡಕಾಗಬಾರದು ಎನ್ನುವ ಹಾಗೆ, ಈ ವಿಭಜನೆಗಳು ಮುಕ್ತವಾದ ಓದಿಗೆ ತೊಡಕಾಗಬಾರದು. ಓದಿನಲ್ಲಿ ಹಳೆಯದೂ ಹೊಸದೇ. ಓದು ಎನ್ನುವುದೇ ವರ್ತಮಾನ ತತ್ ಕ್ಷಣದಲ್ಲಾಗುವ ಸ್ಫೋಟ. ರಂಗನಾಟಕವನ್ನು ನೋಡುವಾಗ ನಮಗೆ ಈ ಮಾತು ಹೆಚ್ಚು ಸ್ಪಷ್ಟವಾಗಿ ಅರಿವಾಗಬಹುದು. ಇನ್ನು, ಸಾಹಿತ್ಯಕ-ವ್ಯಾವಹಾರಿಕ-ಶಾಸ್ತ್ರೀಯ ಇತ್ಯಾದಿಗಳು ಗ್ರಹಿಕೆಯ ಪ್ರಾಥಮಿಕ ತಯ್ಯಾರಿಗೆ ಒದಗುವಂಥವು. ಆದರೆ ಅಂತಿಮವಾಗಿ ಯಾವುದೇ ವಾಙ್ಮಯವೂ ಇಂಥ 'ಕೇವಲತ್ವ'ದ ವಿಂಗಡಣೆಗೆ ಸಿಕ್ಕಿಕೊಳ್ಳಲಾರದು. ಯಾವುದೋ ರೈಲ್ವೆ ಗೈಡಿನಲ್ಲಿರುವ ವ್ಯಾವಹಾರಿಕ ವಿವರಣೆಯ ಒಂದು ಸಾಲು ಕೂಡಾ, ಪ್ರಸಂಗವಶಾತ್, ಕಾವ್ಯ ಸಂವೇದನೆಯನ್ನು ಊಂಟು ಮಾಡಿಬಿಡಬಹುದು. ಹಾಗೆ ಓದುಗನು ಪ್ರಾಂಜಲನಾಗಿ, ನಗ್ನನಾಗಿ, ಸಮಸ್ತ ಜಾಗೃತನಾಗಿ ಕಾದು ನಿಲ್ಲಬೇಕು.

ದೀರ್ಘವಾದ ಈ ಪೀಠಿಕೆಯಾದ ಮೇಲೆ, 'ಕವಿರಾಜಮಾರ್ಗ'ದ ನನ್ನ ಓದನ್ನು ಕುರಿತು ಹೇಳುತ್ತೇನೆ. ೧೯೭೨ರ ಸಮಯದಲ್ಲಿ ಗುರುಗಳಾದ ಪರಮೇಶ್ವರ ಭಟ್ಟರು, ನಾಲ್ಕಾರು ದಿನ ನನ್ನನ್ನು ಕೂರಿಸಿಕೊಂಡು ಇದನ್ನು ಓದು ಹೇಳಿದ್ದರು. ಆ ಮೇಲೆ ನಾನು ಅದನ್ನು ಆಗಾಗ ಓದುತ್ತ ಬಂದಿದ್ದೇನೆ. ಆದರೆ ಈ ಗ್ರಂಥವು ನನ್ನಲ್ಲಿ ನಿಜವಾಗಿ ಸ್ಫೋಟಿಸಿದ್ದು ೧೯೮೦ರ ದಶಕದಲ್ಲಿ.

ಗೋಕಾಕ್ ವರದಿಯ ಪರವಾದ ಚಳವಳಿಯು ಆಗ ಪ್ರಾರಂಭವಾಗಿತ್ತು ಅಥವಾ ಆಗಿ ಮುಗಿದಿತ್ತು ಅಂತ ನೆನಪು. ಆಗ ಓದುವಾಗ 'ಕವಿರಾಜಮಾರ್ಗವು' ಆತನಕ ಓದಿದ್ದಕ್ಕಿಂತ ತುಂಬಾ ಭಿನ್ನವಾದ ಬೇರೆಯೇ ಹೊಸ ಗ್ರಂಥವೆನ್ನುವಂತೆ ಕಂಡಿತು. ಬಹುಪಾಲು ನನ್ನೆದುರೇ ನಡೆದಿದ್ದ ನಮ್ಮ ಈಚಿನ ಇತಿಹಾಸ ವಾಹಿನಿಯೊಂದರ ಮೇಲೆ ಇದು ಇಡಿಯಾಗಿ ಬೆಳಕು ಚೆಲ್ಲಿ ಕಾಣಿಸುತ್ತಿರುವಂತೆ ಭಾಸವಾಯಿತು. ಅಂದರೆ-

೧. ಸ್ವಾತಂತ್ರ್ಯ ಪೂರ್ವದ ಸುಮಾರು ಒಂದು ಶತಮಾನದುದ್ದವೂ ಭಾರತವು ರೂಢಿಸಿಕೊಂಡು ಬಂದ, ಸ್ವಾಯತ್ತ ಭಾಷಾರಾಜ್ಯಗಳು ಮತ್ತು ಅವುಗಳ ಒಕ್ಕೂಟವಾದ ಸ್ವತಂತ್ರ-ಅಖಂಡ-ವಿಕೇಂದ್ರೀಕೃತ-ಪ್ರಜಾಸತ್ತಾತ್ಮಕ ಭಾರತದ ಭಾರೀ ಕನಸು; ಮತ್ತು ಸ್ವಾತಂತ್ರ್ಯ ಪ್ರಾಪ್ತಿಯಾಗುತ್ತಿರುವಾಗಲೇ ಧಾರ್ಮಿಕ ಭಿನ್ನತೆಯ ನೆಪಗಳಿಂದಾಗಿ ನಡೆದ ಭಾರತದ ದೇಹಚ್ಛೇದ;

೨. ಅನಂತರ ನಡೆದ ಭಾಷಾರಾಜ್ಯ ಹೋರಾಟಗಳು; ಆಂಧ್ರದ ಪೊಟ್ಟಿ ಶ್ರೀರಾಮುಲು ಅವರ ಆಮರಣಾಂತ ಉಪವಾಸ ಮತ್ತು ಸಾವು ; ಅದರ ಪರಿಣಾಮವಾಗಿ ಭಾಷಾರಾಜ್ಯಗಳ ಉದಯ; ೧೯೫೬ರಲ್ಲಿ ಕರ್ನಾಟಕ(ವಿಶಾಲ ಮೈಸೂರು) ರಾಜ್ಯದ ಸ್ಥಾಪನೆ;

೩. ಈ ಮಧ್ಯದ ತಮಿಳುನಾಡಿನ ದ್ರಾವಿಡ ಚಳುವಳಿ; ಪ್ರತ್ಯೇಕ ದ್ರಾವಿಡ ರಾಷ್ಟ್ರವನ್ನು ನಿರ್ಮಿಸುವ ಬೆದರಿಕೆ; ಅಕಾಲಿಗಳ ಪ್ರತ್ಯೇಕತೆಯ ಚಳುವಳಿ : ಕಾಶ್ಮೀರದ ಆಕ್ರಮಣ ಮತ್ತು ಅದು ಇಬ್ಭಾಗವಾಗುವ ಭಯ;

೪. ಈ ಹಿನ್ನೆಲೆಯಲ್ಲಿನ ಭಾಷಾ ರಾಜ್ಯಗಳ ತೀವ್ರ ವಿರೋಧ; ಜನಾಂಗ-ಧರ್ಮ ಜಾತಿಗಳ ಹಾಗೆಯೇ ಭಾಷೆಯೂ ವಿಭಜಕವಾದೀತು ಎನ್ನುವ ವಾದ; ಭಾಷಾರಾಜ್ಯ ಕುರಿತು ನೆಹರು ಅವರ ಅಸಮಾಧಾನ, ಅಸಮ್ಮತಿ; ಕರ್ನಾಟಕ ಏಕೀಕರಣಕ್ಕೆ ಒಳಗಿನಿಂದಲೇ ಕೆಲವು ವಿರೋಧಗಳು; ಡಿ.ವಿ.ಜಿ ಅವರ ಐದು ಕರ್ನಾಟಕಗಳಿರಲಿ ಎಂಬ ವಾದ;

೫. ಭಾಷಾರಾಜ್ಯಗಳು ಉದಯವಾದ ಮೇಲಿನ ಗಡಿವಿವಾದ ಜಗಳಗಳು ; ಬೆಳಗಾವಿ, ಬಳ್ಳಾರಿ, ಬೆಂಗಳೂರು, ದಕ್ಷಿಣ ಕನ್ನಡ ಮುಂತಾಗಿ ನಾಲ್ಕೂ ಮೂಲೆಗಳಲ್ಲಿ ಕನ್ನಡದ ನೆಲವು ಕತ್ತರಿಸಿಹೋದದ್ದು; ನದಿ ವಿವಾದಗಳು, ವಲಸೆ ವಿವಾದಗಳು, ಚಳುವಳಿಗಳು, ಹಿಂಸಾತ್ಮಕ ಚಳುವಳಿಗಳು.

೬. ಕಾಶ್ಮೀರ-ಪಂಜಾಬ್ -ಅಸ್ಸಾಂ ಮತ್ತು ಪೂರ್ವಾಂತ ರಾಜ್ಯಗಳಲ್ಲಿನ ಪ್ರತ್ಯೇಕತಾ ಚಳುವಳಿಗಳು ಮತ್ತು ಅವಕ್ಕೆ ವಿದೇಶಗಳಿಂದ ಕುಮ್ಮಕ್ಕು; ಸೈನಿಕ ಕಾರ್ಯಾಚರಣೆಗಳು, ಪಂಜಾಬ್‌ನಲ್ಲಿ ನಡೆದ ಹತ್ಯಾಕಾಂಡ ಮತ್ತು ಅದರ ದೀರ್ಘ ಭಯಾನಕ ಹಿಂಸ್ರ ಪರಿಣಾಮಗಳು ; ಮಹಾರಾಷ್ಟ್ರದಲ್ಲಿ ಶಿವಸೇನೆಯು ಹುಟ್ಟು ಬೆಳೆಯುತ್ತ ಅಲ್ಲಿ ಬೆಳೆದ ಭಯೋತ್ಪಾದಕ ಚಳುವಳಿಗಳು : ಬಾಂಗ್ಲಾದೇಶವು ಪಾಕಿಸ್ತಾನದಿಂದ ವಿಭಜನೆಗೊಂಡದ್ದು ಮತ್ತು ಅದರಲ್ಲಿ ಭಾರತದ ಕಿಂಚಿತ್ ಹಸ್ತಕ್ಷೇಪ;

೭. ಕರ್ನಾಟಕದಲ್ಲಿನ ಕನ್ನಡ ಚಳುವಳಿಗಳು; ಗೋಕಾಕ್ -ಸರೋಜಿನಿ ಮಹಿಷಿ ಆಯೋಗಗಳ ವರದಿ-ಪರವಿರೋಧಿ ಚಳುವಳಿಗಳು, ಜಾತಿಪ್ರಾತಿನಿಧ್ಯ ಕುರಿತ ಚಳುವಳಿಗಳು; ತಮಿಳು ವಲಸೆಗಾರರ ವಿರುದ್ಧ ಕಾವೇರಿ ವಿವಾದಕ್ಕೆ ಸಂಬಂಧಿಸಿ ಚಳುವಳಿಗಳು, ಹಿಂಸಾತ್ಮಕ ಘಟನೆಗಳು; ಗೋಕಾಕ್ ವರದಿ ವಿರುದ್ಧ ಬರೆದ 'ಡೆಕ್ಕನ್ ಹೆರಾಲ್ಡ್' ಸಂಪಾದಕೀಯಕ್ಕೆ ಪ್ರತಿಭಟನೆ; ಬೆಂಗಳೂರಲ್ಲಿ ಬೆಳೆದ ಕನ್ನಡ ಚಳುವಳಿ ಪರಂಪರೆ;

೮. ಇವಕ್ಕೆ ಇತ್ತೀಚಿನ ಕೊಡಗು-ಉತ್ತರ ಕರ್ನಾಟಕ-ಹೈದರಾಬಾದು ಕರ್ನಾಟಕ-ತಮಿಳುನಾಡು-ಮಲೆನಾಡು ಕರಾವಳಿ ಪ್ರಾಂತ ಇತ್ಯಾದಿ ಪ್ರತ್ಯೇಕತಾ ಕೂಗುಗಳು ಇತ್ಯಾದಿ ಇತ್ಯಾದಿ.

ಹೀಗೆ ನಡೆದಿರುವ ಇತಿಹಾಸ ಸರಣಿಯಲ್ಲಿ ನಾವು ಯಾಯಾವ ಸಮಸ್ಯೆ ಸವಾಲುಗಳನ್ನು ಎದುರಿಸುತ್ತಾ ಕಂಗೆಟ್ಟಿದ್ದೇವೋ ಕಳವಳಗೊಂಡಿದ್ದೇವೋ, ಅಂಥ ಸಮಸ್ಯೆಗಳ ಮೂಲವನ್ನು ಎಂದರೆ ಬಹುಶಃ ಕನ್ನಡತನದ ತಾತ್ವಿಕತೆ ಮತ್ತು ಅನುಷ್ಠಾನದ ಸಮಸ್ಯೆಗಳನ್ನು, ಸಂಬೋಧಿಸಿಯೇ 'ಕವಿರಾಜಮಾರ್ಗ'ವು ಮಾತಾಡುತ್ತಿದೆ ಹಾಗೂ ಈ ಸಮಸ್ಯೆಗಳ ಜೊತೆ ಅನುಸಂಧಾನಕ್ಕೆ ಬೇಕಾದ ವಿವೇಕ ಉಪಾಯಗಳ ಬಗ್ಗೆ ಚಿಂತಿಸುತ್ತಿದೆ ಎನ್ನಿಸಿತು. ಹೇಗೂ ಕನ್ನಡ ರಾಜ್ಯವೆಂಬುದು ಪ್ರಪ್ರಥಮವಾಗಿ ಸ್ಥಾಪಿತವಾಗುತ್ತಿದ್ದ ಸಂದರ್ಭದಲ್ಲಿ ಅಂದಿನ

ರಾಜಕಾರಣದ ಕೇಂದ್ರಬಿಂದುವಿನಲ್ಲಿ ನಿಂತು ರಚಿತವಾಗಿರುವ ಗ್ರಂಥ ಇದು ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ನೆಬ್ರಿಜಾ ಎಂಬುವನ ಕಥೆ ಹೇಳುತ್ತಾರೆ. ೧೫ನೇ ಶತಮಾನದ ತುತ್ತತುದಿಯಲ್ಲಿ, ರಾಣಿ ಇಸಬೆಲ್ಲಾಳ ಆಳ್ವಿಕೆಯ ಸ್ಪೇನ್‌ನಲ್ಲಿ ಕೊಲಂಬಸ್‌ನಿಗೆ ಸಮಕಾಲೀನನಾಗಿ ಇದ್ದವನು ಅವನು. ಆ ಹೊತ್ತಿಗೆ ಇಸಬೆಲ್ಲಾಳು ಕೊಲಂಬಸನಿಗೆ, ಖಂಡಾಂತರ ಸಮುದ್ರಯಾನಕ್ಕಾಗಿ ರಾಜಾಶ್ರಯ ರಾಜಸಹಾಯಗಳನ್ನು ನೀಡಿದ್ದಳು. ಆಗಲೇ ನೆಬ್ರಿಜಾ ಕೂಡ ರಾಣಿಗೆ ಒಂದು ವಿಜ್ಞಾಪನ ಪತ್ರವನ್ನು ಸಲ್ಲಿಸಿದ. 'ಸ್ಪೇನ್ ಸಾಮ್ರಾಜ್ಯದ ನಿರ್ಮಾಣಕ್ಕೆ ಅಸ್ತಿವಾರವಾಗ ಬಹುದಾದ ಸಂಗತಿಯೆಂದರೆ, ಖಂಡಾಂತರ ಸಮುದ್ರಯಾನದ ಸಾಹಸವಲ್ಲ; ಅದಕ್ಕೂ ಮೊದಲು ಸ್ಪಾನಿಶ್ ಭಾಷೆಯ ಹತ್ತು ಹಲವು ಗ್ರಾಮ್ಯರೂಢಿಗಳನ್ನು ಏಕೀಕರಿಸಿ, ಅದನ್ನು ಶುದ್ಧೀಕರಿಸಿ ಒಂದು ಅಧಿಕೃತ ರಾಜಭಾಷೆಯನ್ನು ಸಿದ್ಧಗೊಳಿಸಬೇಕು; ಅದಕ್ಕೆ ಸ್ಪಾನಿಶ್ ಭಾಷೆಯ ಸಮರ್ಥ ಅಧಿಕೃತ ವ್ಯಾಕರಣವು ಅತ್ಯಗತ್ಯ; ನಾನು ವ್ಯಾಕರಣ ರಚನೆ ಮಾಡುತ್ತೇನೆ, ನನಗೆ ರಾಜಸಹಾಯವನ್ನು ನೀಡಿ' ಅಂತ. ಆಮೇಲೆ ರಾಣಿಯ ನೆರವಿನಿಂದ ಆತ ಸ್ಪಾನಿಶ್ ಭಾಷೆಯ ಅಧಿಕೃತ ವ್ಯಾಕರಣವನ್ನು ತಯಾರಿಸಿದ. ಪ್ರಾಯಶಃ ಇದು ಐರೋಪ್ಯ ಸ್ಥಳಭಾಷೆಗಳಲ್ಲಿ ಬಂದ ಮೊತ್ತ ಮೊದಲನೆಯ ವ್ಯಾಕರಣ ಗ್ರಂಥ.

ಒಂದು ರಾಜ್ಯ ಅಥವಾ ಸಾಮ್ರಾಜ್ಯದ ನಿರ್ಮಾಣಕ್ಕೆ ಮೊದಲು ಭಾಷೆಯ ನಿರ್ಮಾಣ ವಾಗಬೇಕು ಹಾಗೂ ಭಾಷೆಯಲ್ಲಿ ಭಾವೀ ರಾಜ್ಯದ ಅಸ್ತಿವಾರ ನಕ್ಷೆಯನ್ನು ಸಿದ್ಧಪಡಿಸಿಕೊಳ್ಳಬೇಕು ಎನ್ನುವಂಥ ಆಲೋಚನೆಯು, ನೆಬ್ರಿಜಾನಿಗಿಂತ ತುಂಬ ಹಳೆಯದೇ. ನೆಬ್ರಿಜಾನಿಗಿಂತ ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ಭಾರತದ ಬಹುಶಃ ಮೊತ್ತ ಮೊದಲನೆಯ ಸಾಮ್ರಾಜ್ಯವನ್ನು ನಿರ್ಮಿಸಲು ನಂದರು ಪ್ರಯತ್ನಿಸತೊಡಗಿದಾಗ, ಅದಕ್ಕೆ ಬುನಾದಿಯಾಗಿ 'ಅರ್ಥಶಾಸ್ತ್ರ'ವು (ಅಲ್ಲಿ 'ಅರ್ಥಶಾಸ್ತ್ರ'ವೆಂದರೆ, ರಾಜ್ಯಶಾಸ್ತ್ರ ಮತ್ತು ಆಡಳಿತಶಾಸ್ತ್ರವೇ) ರಚನೆಯಾಯಿತು. ಆಮೇಲೆ ಅಶೋಕನ ಕಾಲಕ್ಕೆ 'ಸಾಮ್ರಾಜ್ಯ ನಿರ್ಮಾಣವೆಂದರೆ ಕೇವಲ ರಾಜ್ಯಶಾಸ್ತ್ರ ಆಡಳಿತ ಶಾಸ್ತ್ರಗಳ ಬುನಾದಿಯಷ್ಟೇ ಸಾಲದು, ಭಾಷೆಯ ಮೂಲಕ ಪ್ರಜಾಜನರನ್ನು ಶಿಕ್ಷಣ ಕೊಟ್ಟು ಸಂಸ್ಕಾರಗೊಳಿಸುವ ಕಾರ್ಯವೂ ನಡೆಯಬೇಕು' ಎಂಬ ಭಾವನೆಯುಂಟಾಯ್ತು. ಅದಕ್ಕಾಗಿಯೇ ಅಶೋಕನ ಉಪದೇಶ ಶಾಸನಗಳು ನಿರ್ಮಿತವಾದವು. ಈ ಪ್ರಕ್ರಿಯೆಯಲ್ಲಿಯೇ ಪ್ರಾಯಶಃ ನಮ್ಮಲ್ಲಿ 'ಲಿಪಿ'ಗಳ ವ್ಯಾಪಕ ಬಳಕೆಯು ತೊಡಗಿದ್ದು. ಅದಕ್ಕೂ ಮುಂದೆ ಬಂದ ಗುಪ್ತರು, ತಮ್ಮ ಸಾಮ್ರಾಜ್ಯ ನಿರ್ಮಾಣದ ಪ್ರಯತ್ನದ ಜೊತೆಜೊತೆಗೆ, ಅದಕ್ಕೆ ಅಸ್ತಿಯಾಗಿ ಒಂದು ಮಹಾ ವಾಙ್ಮಯ ಸಾಮ್ರಾಜ್ಯವನ್ನೂ ನಿರ್ಮಿಸುವ ಬೃಹತ್ ಸಾಹಸ ಮಾಡಿದರು. ಪ್ರಭುವರ್ಗ ಪ್ರಜಾವರ್ಗಗಳ ಸೀಮಿತ ರಾಜಕೀಯ ಶಿಕ್ಷಣದಷ್ಟೇ ಅಲ್ಲ, ಬಹು ವ್ಯಾಪಕವಾಗಿ ಇಡೀ ಉಪಖಂಡದಲ್ಲಿ ಒಂದೇ ಬಗೆಯ ಸಂಭಾವಿತ ಸಂಸ್ಕೃತಿಯನ್ನು ಹಬ್ಬಿಸುವ ಸಲುವಾಗಿ, ಅಷ್ಟಾದಶ ಪುರಾಣ-ಪುಣ್ಯಕಥೆಗಳಿಂದ ತೊಡಗಿ ಗಣಿತ-ಜ್ಯೋತಿಷ್ಯ-ಕಾವ್ಯ-ನಾಟಕ-ಕಾಮಶಾಸ್ತ್ರಗಳ ತನಕವೂ

ಗ್ರಂಥರಾಶಿಗಳು ನಿರ್ಮಾಣಗೊಂಡವು. ಈ ಹಿನ್ನೆಲೆಯಲ್ಲಿ, 'ಕವಿರಾಜಮಾರ್ಗ'ದ ರಚನೆಯು ಕನ್ನಡ ರಾಜ್ಯನಿರ್ಮಾಣದ ಜೊತೆಗೂಡಿಕೊಂಡೇ ನಡೆಯಿತೆಂಬುದನ್ನು ನೆನಪಿಸುತ್ತಿದ್ದೇನೆ.

ಕನ್ನಡ ಭಾಷೆಯು ಕ್ರಿಸ್ತಪೂರ್ವದಲ್ಲೇ ಮೂಲದ್ರಾವಿಡದಿಂದ ಅಥವಾ ಕಂದಮಿಳಿನಿಂದ ಒಡೆದುಕೊಂಡು ಪ್ರತ್ಯೇಕ ಸ್ವತಂತ್ರ ಭಾಷೆಯಾಗಿ ರೂಪುಗೊಳ್ಳಲಿಕ್ಕೆ ಪ್ರಾರಂಭವಾಗಿರಬೇಕು ಮತ್ತು ಕ್ರಿಸ್ತನ ಕಾಲಕ್ಕಾಗಲೇ ಅದು ತನ್ನ ಲಿಪಿವ್ಯವಸ್ಥೆಯನ್ನು ರೂಪಿಸಿಕೊಳ್ಳಲಿಕ್ಕೆ ತೊಡಗಿರಬೇಕು. ಶಾತವಾಹನ-ಕದಂಬ-ಚಾಳುಕ್ಯ-ಗಂಗ-ರಾಷ್ಟ್ರಕೂಟ ಮುಂತಾದ ವಂಶಾಡಳಿತಗಳ ಮೂಲಕ, ಸುಮಾರು ಏಳೆಂಟುನೂರು ವರ್ಷಗಳ ದೀರ್ಘ ಅವಧಿಯಲ್ಲಿ ಇದು ಭಾಷೆಯಾಗಿ, ಜನಪದವಾಗಿ, ಸಂಸ್ಕೃತಿಯಾಗಿ, ಭಿನ್ನ ಭಿನ್ನ ಆಕೃತಿಗಳಲ್ಲಿ ಗಟ್ಟಿಗೊಳ್ಳುತ್ತ ಪ್ರಾಯಶಃ ನೃಪತುಂಗನ ಕಾಲಕ್ಕೆ ಭಾಷೆ-ಸಮುದಾಯ-ಸಂಸ್ಕೃತಿ-ಏಕಚ್ಛತ್ರಾಡಳಿತವುಳ್ಳ ಭೌಗೋಲಿಕ ರಾಜ್ಯ ಮುಂತಾದ ಎಲ್ಲಾ ರೂಪಗಳ ಸಂಯುಕ್ತ ಘಟಕವಾಗಿ ಹರಳುಗಟ್ಟಿಕೊಂಡಿತು. ಕನ್ನಡವು ಹಾಗೆ ಸಾವಯವ ಸಮಗ್ರ ಸಂಯುಕ್ತ ಘಟಕವಾಗಿ ಆಕಾರಗೊಳ್ಳುವ ಹೊತ್ತಿನಲ್ಲಿ, ಅದಕ್ಕೆ ಯಾವತ್ಕಾಲಕ್ಕೂ ಆಧಾರವಾಗುವ ಅಸ್ತಿವಾರ ಪುಸ್ತಕವಾಗಿ 'ಕವಿರಾಜಮಾರ್ಗ'ವು ರಚಿತವಾಯಿತು ಅಂತ ನಾನಿಲ್ಲಿ ಸೂಚಿಸುತ್ತಿದ್ದೇನೆ. ಕನ್ನಡ ಎನ್ನುವ ಈ ಮೂರಕ್ಷರಗಳ ನುಣುಪು ನುಡಿಯು ಮೊತ್ತಮೊದಲು ದಾಖಲೆಯಲ್ಲಿ ಸಿಗುವುದು 'ಕವಿರಾಜಮಾರ್ಗ'ದಲ್ಲೇ. ಅದು, ಭಾಷೆ-ಜನಪದ-ನಾಡು-ವಿಷಯ ಇತ್ಯಾದಿ ಹಲವಾರು ವಿಶೇಷಣಗಳೆಲ್ಲವಕ್ಕೂ 'ಕನ್ನಡ' ಎನ್ನುವ ಒಂದೇ ಹೆಸರನ್ನು ಬಳಸಿ, ಅವೆಲ್ಲವನ್ನು ಒಗ್ಗೂಡಿಸಿದ ಸಂಯುಕ್ತ ಘಟಕ ಇದು ಎಂಬುದನ್ನು ನಿಸ್ಸಂದಿಗ್ಧವಾಗಿ ಸೂಚಿಸುತ್ತದೆ.

ಅರ್ಥಶಾಸ್ತ್ರದಿಂದ ಹಿಡಿದು ಸ್ಪಾನಿಕ್ ವ್ಯಾಕರಣದವರೆಗಿನ ಒಂದು ಸರಣಿಯನ್ನು ಹೇಳಿ, ಆ ಸರಣಿಯಲ್ಲಿ ನಾನು 'ಕವಿರಾಜಮಾರ್ಗ'ವನ್ನೂ ಸೇರಿಸಿದ್ದೇನೆ. ಆದರೆ ಇಲ್ಲಿ, 'ಕವಿರಾಜಮಾರ್ಗ'ಕ್ಕಿರುವ ಗಣನೀಯವಾದ ಭಿನ್ನತೆ ಮತ್ತು ಅಪೂರ್ವವಾದ ಅನನ್ಯತೆಗಳನ್ನು ಗಮನಿಸಲೇಬೇಕು. ನಂದರಿಂದ ಹಿಡಿದು ಗುಪ್ತರ ತನಕ ಬಂದ ರಾಜಕಾರಣ ವಾಙ್ಮಯವಷ್ಟು ಹೆಚ್ಚಾಗಿ ಸಂಸ್ಕೃತ ಭಾಷೆಯಲ್ಲಿ ರಚಿತವಾದದ್ದು. ಆ ಕಾಲಕ್ಕೂ ಸಂಸ್ಕೃತವು ಆಡುಭಾಷೆಯಲ್ಲ; ನಿಶ್ಚಿತ ಸ್ಥಳದ ನೆಲೆಯಿಲ್ಲದ 'ಗ್ರಂಥಭಾಷೆ' ಅದು; ಸಾಮಾನ್ಯತೆಯಲ್ಲಿ ಇಡೀ ಜಗತ್ತನ್ನೇ ಸಂಬೋಧಿಸುತ್ತಿದ್ದ ವಿಶ್ವಭಾಷೆ ಅದು. ಆ ವಾಙ್ಮಯ ರಾಶಿಯ ಹಿಂದಿದ್ದ ಸಂಕಲ್ಪವೆಂದರೆ, ಒಂದು ಸಮಗ್ರ ಆರ್ಯಾವರ್ತ ಅಥವಾ ಆಸೇತು ಹಿಮಾಚಲ ಭಾರತವೆಂಬ, ಅನೇಕ ಜನಪದ ಸಮೇತವಾದ, ಸಂಯುಕ್ತ ಸಾಮ್ರಾಜ್ಯದ ನಿರ್ಮಾಣ.

ಇನ್ನು ವೈಯಾಕರಣ ನೆಬ್ರಿಜಾನದು ಸ್ಥಳಭಾಷೆಯ ರಾಜಕಾರಣವೇ ಆಗಿದ್ದರೂ, ಅವನಿಗಿದ್ದ ಸಂಕಲ್ಪವು 'ಕವಿರಾಜಮಾರ್ಗ'ಕ್ಕಿದ್ದ ಸಂಕಲ್ಪಕ್ಕಿಂತ ಭಿನ್ನವಾದದ್ದು; ಅದಕ್ಕೆ ವಿರುದ್ಧವಾದದ್ದು ಎಂದರೂ ತಪ್ಪಲ್ಲ. ಸುಪ್ರಸಿದ್ಧ ಚಿಂತಕರಲ್ಲೊಬ್ಬನಾದ ಇವಾನ್

ಇಲ್ಲಿಚನು, ರಾಣಿಗೆ ನೆಬ್ರಿಜಾನು ಸಲ್ಲಿಸಿದ್ದ ದೀರ್ಘ ವಿಜ್ಞಾಪನಪತ್ರವನ್ನು ವಿವರವಾಗಿ ವಿಶ್ಲೇಷಿಸಿದ್ದಾನೆ. ಆತನ ಪ್ರಕಾರ ನೆಬ್ರಿಜಾನ ಪ್ರಯತ್ನವು ಪಶ್ಚಿಮದಲ್ಲಿ ಆಗಷ್ಟೇ ಪ್ರಾರಂಭವಾಗಿದ್ದ ಪ್ರಪಂಚ ವಿಜಯದ ಮಹತ್ವಾಕಾಂಕ್ಷೆಯನ್ನು ಪ್ರತಿನಿಧಿಸುವಂಥದು; ಅದು ಹೊಸ ವಸಾಹತು ಯುಗವನ್ನು ಪ್ರಾರಂಭಿಸಲು ಸಿದ್ಧಗೊಳಿಸಿದ ನೀಲನಕ್ಷೆ.

'ಕವಿರಾಜಮಾರ್ಗ'ಕ್ಕೆ ಬಂದರೆ, ನೃಪತುಂಗನು ಪೂರ್ವೇತಿಹಾಸದಿಂದಲೂ ಮತ್ತು ಬಹುದೀರ್ಘಕಾಲ ಆಡಳಿತ ನಡೆಸಿದ ತನ್ನ ಸ್ವಂತ ಅನುಭವಗಳಿಂದಲೂ ಪಾಠ ಕಲಿತಿದ್ದ. ಸದಾ ವಿಸ್ತರಣಶೀಲತೆಯ ಸಂಕಲ್ಪದಲ್ಲಿ ರಾಜ್ಯವು ಚಂಚಲಶೀಲ ಆಕೃತಿಯನ್ನು ತಾಳಿಕೊಳ್ಳುತ್ತ ಪ್ರಭುವರ್ಗ-ಪ್ರಜಾವರ್ಗಗಳೆರಡಕ್ಕೂ ಸದಾ ಆತಂಕಕಾರಿಯಾಗಿಯೇ ಉಳಿಯಬೇಕಾಗುತ್ತದೆ. ಇದನ್ನರಿತ ನೃಪತುಂಗನು, ತನ್ನ ಹಿರಿಯರಂತೆ ತನ್ನ ಕುದುರೆಗಳಿಗೆ ಹಿಮವತ್ ಪರ್ವತದ ಹಿಮಕಣಗಳನ್ನು ತಿನ್ನಿಸುವ, ಆನೆಕುದುರೆಗಳನ್ನು ಗಂಗಾನದಿಯಲ್ಲಿ ಮೀಯಿಸುವ ಹೆಗ್ಗನಸುಗಳನ್ನೆಲ್ಲ ಬಿಟ್ಟುಕೊಟ್ಟು, ನಿಶ್ಚಿತವಾದ ಸೀಮಿತ ಮೇರೆಯಲ್ಲಿ ನೆಮ್ಮದಿಯಿಂದ ಬಾಳಬಹುದಾದ ಭಾಷಾರಾಜ್ಯದ ನಿರ್ಮಾಣಕ್ಕೆ ಸಂಕಲ್ಪ ಕೈಗೊಂಡ.

ಅಂದರೆ, ಭಾರತದ ರಾಜ್ಯ-ರಾಜ್ಯಾಧಿಕಾರ ರಾಜ್ಯಾಡಳಿತದ ಇತಿಹಾಸದಲ್ಲಿ ಇದೊಂದು ಹೊಸಘಟ್ಟ-ಪ್ರಾಚೀನ ಜನಪದರಾಜ್ಯ-ಗ್ರಾಮರಾಜ್ಯ-ಗಣರಾಜ್ಯಗಳ ಯುಗವು ನಂದರ ಕಾಲದಲ್ಲಿ ಸಾಮ್ರಾಜ್ಯಯುಗಕ್ಕೆ ಪರಿವರ್ತನೆಗೊಂಡಂತೆ, ನೃಪತುಂಗನ ಕಾಲದಲ್ಲಿ ಈ ಸಾಮ್ರಾಜ್ಯಯುಗವು ಪ್ರದೇಶರಾಜ್ಯ-ಭಾಷಾರಾಜ್ಯಗಳ ಯುಗಕ್ಕೆ ಪರಿವರ್ತನೆಗೊಳ್ಳಲು ಮೊದಲಿಟ್ಟಿತು. ಈ ಹೊಸ ಯುಗದ ಹರಿಕಾರನಾಗಬೇಕಾದ ನೃಪತುಂಗನು, ಹಿಂದಿಗಿಂತ ತೀರಾ ಬೇರೆಯೇ ಆದ ರಾಜಕಾರಣದ ತಾತ್ತ್ವಿಕತೆ ಅನುಷ್ಠಾನ ಮಾರ್ಗಗಳನ್ನು ರೂಢಿಸಿಕೊಳ್ಳಬೇಕಾಗಿತ್ತು; ಮಾತ್ರವಲ್ಲ, ಹೊಸ ಸಂಸ್ಕೃತಿಯ ಸಮಗ್ರ ಲೋಕಾಕಾರವನ್ನ ಧ್ಯಾನಿಸಿ ನಿರ್ಮಿಸಿಕೊಳ್ಳಬೇಕಾಗಿತ್ತು. ಕವಿರಾಜಮಾರ್ಗದ ಲಕ್ಷ್ಯವಿರುವುದು ಇಂಥ ಮೌಲಿಕ ಚಿಂತನ ವಿವೇಕಗಳಲ್ಲಿ.

ಅರ್ಥಶಾಸ್ತ್ರದಿಂದ ಸ್ಪಾನಿಕ್ ವ್ಯಾಕರಣ ತನಕದ ಈ ಸರಣಿಯಲ್ಲಿ 'ಕವಿರಾಜಮಾರ್ಗ'ವೂ ಇನ್ನೂ ಒಂದು ಬಗೆಯ ಅನನ್ಯತೆಯುಳ್ಳದ್ದು. ಸಾಮಾನ್ಯವಾಗಿ ಒಪ್ಪಿತವಾಗಿರುವ ಹಾಗೆ, ಇದರ ಮೂಲ ಕರ್ತೃ ಶ್ರೀವಿಜಯ; ಅನಂತರ ಅದರಲ್ಲಿ ನೃಪತುಂಗನ ಕೈವಾಡವೂ ಸೇರಿಕೊಂಡಿತು. ಹೇಗೋ ಅದಕ್ಕಿರುವ ಅಂತಿಮ ಅಧಿಕೃತ ಮುದ್ರೆ ರಾಜಾ ನೃಪತುಂಗನದೇ. ಮೊದಲಿಗೆ ಶ್ರೀ ವಿಜಯನು 'ಕವಿಮಾರ್ಗ'ವೆಂಬ ಗ್ರಂಥವನ್ನು ಬರೆದಿರಬೇಕು ಮತ್ತು ಆಮೇಲೆ ನೃಪತುಂಗನ ಸಹಭಾಗಿತ್ವದೊಂದಿಗೆ ಅದು 'ಕವಿರಾಜಮಾರ್ಗ'ವೆಂಬ ಹೊಸ ಆವೃತ್ತಿಯಾಗಿ ಹೊರಬಂದಿರಬೇಕು- ಅಂತ ಕೆಲವರ ಊಹೆ.

ಇದ್ದೀತು. ಈಗ ಈ 'ಕವಿರಾಜಮಾರ್ಗ'ವೆಂಬ ಗ್ರಂಥಶೀರ್ಷಿಕೆಗೆ, 'ಕವಿಯ ಅಥವಾ ಕವಿಗಳ ರಾಜಮಾರ್ಗ' ಮತ್ತು 'ಕವಿರಾಜನು ಸಮೆದುಕೊಟ್ಟಿರುವ ಮಾರ್ಗ' ಎಂಬ ಎರಡು ಅರ್ಥಗಳು ಹೊರಡುವುದನ್ನು ಎಲ್ಲರೂ ಗಮನಿಸಿದ್ದಾರೆ. ಈ ತನಕ

ಗಮನಿಸದಿರುವ, ಈ ಶೀರ್ಷಿಕೆಗಿರುವ ಮೂರನೆಯ ಬಹು ಮುಖ್ಯವಾದ ಅರ್ಥವನ್ನು ನಾನಿಲ್ಲಿ ಸೂಚಿಸುತ್ತಿದ್ದೇನೆ. ಅದು - 'ಕವಿಯೂ ರಾಜನೂ ಕೂಡಿ ನಿರ್ಮಿಸಿರುವ ಮಾರ್ಗ' ಎನ್ನುವುದು. ಮೇಲಕ್ಕೆ ಕಾಣುವ ಹಾಗೆ, ಶ್ರೀವಿಜಯನು ಕವಿ, ನೃಪತುಂಗನು ರಾಜ. ಆದರೆ ವಾಸ್ತವವಾಗಿ ಇವರಿಬ್ಬರೂ ಕೂಡಿ ರಚಿಸಿರುವ ಗ್ರಂಥ ಇದು. ತಾತ್ತ್ವಿಕವಾಗಿ ಇಲ್ಲಿ ಕವಿ ಪ್ರಯತ್ನ ಮತ್ತು ರಾಜಪ್ರಯತ್ನಗಳು ಅರ್ಥಾತ್ ಭಾಷಾಪ್ರಯತ್ನ ಮತ್ತು ಪ್ರಭುತ್ವಪ್ರಯತ್ನಗಳು ಕೂಡಿ ಒಂದು ಮಾರ್ಗ ನಿರ್ಮಾಣವಾಗಿದೆ. ಒಂದು ಭಾವದ ಸ್ತರಕ್ಕೆ ಸಂಬಂಧಿಸಿದ್ದು, ಇನ್ನೊಂದು ಭವದ ಸ್ತರಕ್ಕೆ ಸಂಬಂಧಿಸಿದ್ದು. ಭಾವದ ಅಸ್ತಿವಾರವನ್ನು ಹಿಂಬಾಲಿಸಿ ಅವಲಂಬಿಸಿ ಭವದ ನಿರ್ಮಾಣವಾಗಬೇಕಷ್ಟೆ? ಭಾವಕನ್ನಡ-ಭವಕನ್ನಡಗಳ ಏಕತ್ರ ಸೃಷ್ಟಿಗೆ ಕೈಚಾಚಿರುವುದು, 'ಕವಿರಾಜಮಾರ್ಗ'ದ ಅಸಾಧಾರಣ ಅನನ್ಯತೆ. ಶೀರ್ಷಿಕೆಯ ಈ ಮೂರನೆಯ ಮುಖ್ಯ ಅರ್ಥವನ್ನು ಗಮನಿಸದಿದ್ದುದರಿಂದ, ಈ ತನಕ 'ಕವಿ' ಪದದ ಮೇಲೆ ಮಾತ್ರವೇ ಒತ್ತು ಬಿದ್ದು, ಗ್ರಂಥದ ಸ್ವರೂಪವೂ ಪೂರ್ತಾ ಸ್ಪಷ್ಟವಾಗಲಿಲ್ಲ ಅಂತ ನನ್ನ ಸಂದೇಹ. ಹಾಗೆ ಇದು, ಕವಿಯ ಮಾರ್ಗವೂ ಅಲ್ಲ. ರಾಜನ ಮಾರ್ಗವೂ ಅಲ್ಲ; ಕವಿ ಮತ್ತು ರಾಜ ಕೂಡಿ ನಿರ್ಮಿಸಿದ ಕನ್ನಡದ ಕನ್ನಡತನದ ಮಾರ್ಗ.

'ಕವಿರಾಜಮಾರ್ಗ'ವು ನನ್ನ ಓದಿನಲ್ಲಿ ನಮ್ಮ ಈ ಕಾಲದ ತವಕ ತಲ್ಲಣಗಳ ಮೇಲೆ ಬೆಳಕು ಚೆಲ್ಲಿದ್ದನ್ನು ಹೇಳಿಕೊಂಡೆ. ಅದಕ್ಕೂ ನಮಗೂ ಕೂಡಿಸುವ ಬಲು ಕೌತುಕದ ಒಂದು ಕೊಂಡಿಯಿದೆ ಎನ್ನುವುದನ್ನು ಗಮನಿಸಬೇಕು. 'ಕಾವೇರಿಯಿಂದಮಾ ಗೋದಾವರಿವರ ಮಿರ್ದ ನಾಡು' ಎಂಬ ಮಾತು ಕನ್ನಡದ ನಕಾಶೆಯನ್ನು ರಚಿಸಿಟ್ಟಿದೆ. ಅದಕ್ಕೆ ಹಿಂದೆ, ಯಾವುದೇ ವಾಙ್ಮಯದಲ್ಲು - ಸಂಸ್ಕೃತ ವಾಙ್ಮಯದಲ್ಲು - ಇಂಥ ನಕಾಶೆ ನಿರ್ದೇಶನದ ಉಲ್ಲೇಖಗಳು ಪ್ರಾಯಃ ಕಾಣುವುದಿಲ್ಲ. ಆಸೇತು ಹಿಮಾಚಲ ಇತ್ಯಾದಿ ಅಮೂರ್ತ ವ್ಯಾಪಕ ಕಲ್ಪನೆಗಳಿಲ್ಲದೆ, ಹೀಗೆ ನದಿಗಳ ಗೆರೆಹೊಡೆದು ಒಳರಾಜ್ಯವೊಂದರ ನಕಾಶೆಯನ್ನು ಸಾಕಷ್ಟು ಖಚಿತವಾಗಿ ನಿರ್ದೇಶಿಸಿರುವುದು ಇದಕ್ಕೆ ಮೊದಲು ಪ್ರಾಯಶಃ ಇನ್ನೆಲ್ಲೂ ಕಾಣಿಸದು. ಅದಿರಲಿ, ಈ ನಕಾಶೆಯ ಕನ್ನಡ ರಾಜ್ಯವು ನೃಪತುಂಗನ ಆಳ್ವಿಕೆಯ ಒಂದು ನಿರ್ದಿಷ್ಟ ಅವಧಿಯಲ್ಲಾದರೂ ಅಸ್ತಿತ್ವ ಕಂಡಿತ್ತು ಎನ್ನುವುದು ನಿಸ್ಸಂದೇಹ. ನೃಪತುಂಗನ ಅನಂತರದಲ್ಲಿ ಮಾಯವಾಗಿ ಹೋದ ಈ ನಕಾಶೆಯ ರಾಜ್ಯವು, ಮತ್ತೆ ಸುಮಾರಾಗಿಯಾದರೂ ಗೋದಾವರಿಯಲ್ಲದಿದ್ದರೆ ಕೃಷ್ಣೆಯಿಂದಾದರೂ, ಕಾವೇರಿಯ ತನಕ ಅದೇ ಆಕೃತಿಯ ಭಾಷಾರಾಜ್ಯವಾಗಿ ಅಸ್ತಿತ್ವ ಕಂಡದ್ದು, ೧೧ ಶತಮಾನಗಳ ನಂತರ, ೧೯೫೬ರಲ್ಲಿ, ನಮ್ಮ ಕಾಲದಲ್ಲಿಯೇ.

'ಕಾವೇರಿಯಿಂದಮಾ ಗೋದವರಿವರಮಿರ್ದ' ಎಂಬ ಬಹುಪ್ರಸಿದ್ಧವಾದ ಕಿರುಕಂದವು ಕನ್ನಡತ್ವ ಎಂಬುದರ ಪ್ರಾಣಲಕ್ಷಣವನ್ನು ಹೇಳುವ ಮಹಾಸೂತ್ರವೆಂಬಂತಿದೆ. ಇಲ್ಲಿನ 'ವಸುಧಾವಲಯ ವಿಲೀನ-ವಿಶದ-ವಿಷಯ-ವಿಶೇಷಂ' ಎಂಬ ಪದಗುಂಫನವನ್ನು ನೋಡಬೇಕು. 'ವಸುಧಾವಲಯ' ಇದು ಅಖಂಡ ಬ್ರಹ್ಮಾಂಡದಲ್ಲಿರುವ ಒಂದು ವಲಯ

ಅಷ್ಟೇ. ಅಂಥ 'ವಸುಧಾವಲಯ'ದಲ್ಲಿ ಸಮರಸವಾಗಿ ವಿಲೀನವಾಗಿರುವ ನಾಡು ಅಥವಾ 'ವಿಷಯ' ಇದು. ವಸುಧೆಯಲ್ಲಿ ವಿಲೀನವಾಗಿ ಕಂಡರೂ ಇದು ವಿಶೇಷವಾದುದು. ಸ್ವಂತಿಕೆಯ ನಿಶ್ಚಿತ ಚಹರೆಗಳಿಂದ ಅನನ್ಯವಾಗಿರುವಂಥದ್ದು. ಇಲ್ಲಿ 'ವಿಶದ' ಎನ್ನುವ ಮತ್ತೊಂದು ಬಹುಮುಖ್ಯವಾದ ವಿಶೇಷಣವಿದೆ. ಈ ಕನ್ನಡವು 'ವಸುಧೆ'ಯಲ್ಲಿ ವಿಲೀನಗೊಂಡಂತಿದ್ದರೂ ಇದು ಆ 'ವಸುಧೆ'ಯಷ್ಟೇ ವಿಶದವಾಗಿದೆ. ಯಾಕೆಂದರೆ ಇದು 'ವಸುಧಾವಲಯ ವಿಲೀನ'; ಇಲ್ಲಿ 'ವಸುಧಾವಲಯ ವಿಲೀನ' ಎಂಬುದರ ಇನ್ನೊಂದು ಅರ್ಥವನ್ನು ಮನಗೊಳಿಸಿಕೊಳ್ಳಬೇಕು. 'ವಿಶದ'ಯಾತಕ್ಕೆಂದರೆ, ಇದು ಸಮಗ್ರ ವಸುಧೆಯನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡಿದೆ.; ತನ್ನ ಕಿರುಜಗತ್ತಿನಲ್ಲಿ ಆ ಮಹಾ ಜಗತ್ತನ್ನು ಅರಗಿಸಿಕೊಂಡಿದೆ.

'ಕನ್ನಡದೊಳ್ ಭಾವಿಸಿದ ಜನಪದಂ' ಎಂಬ ಮಾತನ್ನು ಗಮನವಿಟ್ಟು ನೋಡಬೇಕು. ಯಾವ ಕಾಲಕ್ಕೂ ಹರಿಯುತ್ತಲೇ ಇರುವ ಎರಡು ಮಹಾನದಿಗಳ ಬಾಧೆಯಿಲ್ಲದ ಮೇರೆಯಲ್ಲಿ ಖಚಿತವಾಗಿ ಸ್ಥಾಪಿತವಾಗಿರುವ ಭೌತಿಕ ರಾಜ್ಯವಿದು. ಆದರೆ ಅಷ್ಟೇ ಅಲ್ಲ, ಕನ್ನಡದೊಳ್ ಅಂದರೆ 'ಕನ್ನಡ'ವೆಂಬುದರ ಒಳಗಡೆಗೆ - ಕನ್ನಡವೆಂಬ ಚಿಪ್ಪಿನೊಳಗಡೆಯೆನ್ನಿ - ಭಾವಿತವಾದದ್ದು. ಕನ್ನಡ ಅಥವಾ ಕನ್ನಡತ್ವವೆಂಬುದು ಮೇರೆಯಲ್ಲಿದ್ದ ಕಾಲದೇಶಗಳನ್ನು ಮೀರಿರುವಂಥದು. ಆ ಭಾವಕತ್ವವೇ ಈ ಭೌತಿಕ ರಾಜ್ಯದ ಅಸ್ತಿವಾರ. ಅದನ್ನೇ ದುರ್ಗಸಿಂಹನು ಮನೋಜ್ಞ ರೂಪಕದಲ್ಲಿ 'ಕನ್ನಡಿಯುಂ ಕೈದೀವಿಗೆಯುಂ' ಅಂತ ನಿರ್ದೇಶಿಸಿದ್ದಾನೆ. ಅವತ್ತಿನ ಕನ್ನಡ ರಾಜ್ಯವು ಹೇಗಿತ್ತು ಎನ್ನುವುದನ್ನು ಕೆಲಮಟ್ಟಿಗೆ ಕಾಣಿಸುವ ಕನ್ನಡಿ 'ಕವಿರಾಜಮಾರ್ಗ'; ಅಷ್ಟೆ ಅಲ್ಲದೆ ಜೊತೆಗೆ ಅದು ಕನ್ನಡದ 'ಕನಸು' ಅಥವಾ 'ದರ್ಶನ'ವೆಂಬ ಕೈದೀವಿಗೆ. ಈ ಜನಪದವು ಯಾವತ್ಕಾಲವೂ ಆ ಕನ್ನಡತ್ವದ ಅಥವಾ ಭಾವ ಕನ್ನಡದ ಕೈದೀವಿಗೆ ಬೆಳಕಿನಲ್ಲಿ ತನ್ನನ್ನು ಹೊಸಹೊಸದಾಗಿ ನಿರ್ಮಿಸಿಕೊಳ್ಳಲೇ ಹೋಗಬೇಕು.

೧೯೫೬ರಲ್ಲಿ ಕರ್ನಾಟಕ ಏಕೀಕರಣವಾದ ಪ್ರಥಮ ರಾಜ್ಯೋತ್ಸವ ಸಮಾರಂಭದಲ್ಲಿ ಕಾಳಿಂಗರಾಯರು 'ಉದಯವಾಗಲಿ' ಎಂಬುದನ್ನು ಬದಲಿಸಿ, 'ಉದಯವಾಗಿದೆ ನಮ್ಮ ಚೆಲುವ ಕನ್ನಡ ನಾಡು' ಅಂತ ಹಾಡಿದರಂತೆ. ಬೇಂದ್ರೆ ಆಮೇಲೆ 'ಛೆ ಛೆ, ಹಾಗೆ ಬದಲಿಸ ಕೂಡದು, ಅದು ತಪ್ಪು' ಅಂದರಂತೆ. ಭಾವಕನ್ನಡವೆಂಬುದು ಪ್ರಾಯಶಃ ಯಾವತ್ತೂ ಉದಯವಾಗದ, ಆದರೆ ಯಾವದ್ಭವಿಷ್ಯದಲ್ಲೂ ಅದರ ಉದಯಕ್ಕಾಗಿ ಹೊಸಹೊಸ ಪ್ರಯತ್ನಗಳನ್ನು ನಡೆಸುತ್ತಲೇ ಹೋಗಲು ಸವಾಲುಹಾಕಿ ಛಲ ಹುಟ್ಟಿಸುವ - ಕೈಲಿದ್ದೂ ಕೈಗೆಟುಕದೆ ಕನ್ನಡ ಜನಪದವನ್ನು ಮುಂದುಮುಂದಕ್ಕೆ ಬೆಳಕು ಬೀರಿ ಕೊಂಡೊಯ್ಯುವ - ಕೈದೀವಿಗೆ.

ಯಾಕೆ ಇದನ್ನು ಒತ್ತಿ ಹೇಳುತ್ತಿದ್ದೇನೆಂದರೆ, ಮೂಲ ನಿಷ್ಠವಾದ (Fundamentalism) ಹುಟ್ಟುವ ಜಾಗವೇ ಇದು. ಕನ್ನಡದ ಸ್ವರ್ಣಯುಗವೊಂದು ಇತ್ತು ಅಂತ ತಿಳಿಯುವವನು

ಅದಕ್ಕೆ ಓಂದೆ ಹೋಗಲು ಕಾತರಿಸುತ್ತಾನೆ. ಮೂಲನಿಷ್ಠವಾಗುತ್ತಾನೆ. ನನ್ನ ಪಾಲಿಗೆ ಪೂರ್ವದ ಭವಕನ್ನಡವು ಈಗಿನಷ್ಟೇ ಯಾಕೆ, ಇದಕ್ಕಿಂತಲೂ ಹೆಚ್ಚು ಕೊಳಕಾದದ್ದು, ದುಷ್ಟವಾದದ್ದು. ಆದರೆ ಪೂರ್ವದ ಯುಗಯುಗಗಳ ಭಾವಕನ್ನಡದ ಸ್ಮೃತಿಯು ಇವತ್ತಿಗೂ ನನಗೆ ಸಂಜೀವಿನಿ. ಹಳೆಯದನ್ನು ಅಗೆದಗೆದು ಹುಡುಕಲು ನಾನು ಹೋಗುವುದು, ಕನ್ನಡ ಭಾವಕ್ಕಾಗಿ, ಕನ್ನಡ ಸ್ಮೃತಿಗಾಗಿ.

ಈ ನನ್ನ ಪ್ರಾಸ್ತಾವಿಕಕ್ಕೆ ಪಠ್ಯದ ಒಳಾಂಗಣಕ್ಕಿಳಿದು ವಿರಾಮವಾಗಿ ಅಲೆದಾಡುವ ವ್ಯವಧಾನವಿಲ್ಲ. ಆದ ಕಾರಣ, ಇನ್ನೊಂದು ಮುಖ್ಯ ಸಂಗತಿಯನ್ನು ಹೇಳಿ ಮುಗಿಸುತ್ತೇನೆ.

'ಕವಿರಾಜಮಾರ್ಗ'ವು ವಸುಧೆ ಮತ್ತು ಕನ್ನಡಕ್ಕೆ ಕಲ್ಪಿಸಿರುವ ದ್ವಂದ್ವಾತ್ಮಕ ಸಂಕೀರ್ಣ ಸಂಬಂಧಗಳನ್ನೇ, ಸಂಸ್ಕೃತ-ಕನ್ನಡಗಳ ಮಧ್ಯೆ, ಮಾರ್ಗ-ದೇಸಿಗಳ ಮಧ್ಯೆ ಹಾಗೂ ವಿವಿಧ ಧರ್ಮ ಮತ್ತು ಮಾನವಧರ್ಮಗಳು ಮಧ್ಯೆ ಕಲ್ಪಿಸುತ್ತದೆ. ಇಂಥ ಸಂಬಂಧದ ಕಲ್ಪನೆಗೆ ಅದು, ಪಠ್ಯದ ಮೂಲೆಯ ಲಕ್ಷ್ಯಪಠ್ಯವೊಂದರಲ್ಲಿ, ಸೈರಣೆಯೆಂಬ ಸೂತ್ರವನ್ನು ಹಾಕಿಕೊಳ್ಳುತ್ತದೆ.

'ಸ್ವ' ಮತ್ತು 'ಅನ್ಯ' (ಸೆಲ್ಫ್ ಅಂಡ್ ದಿ ಅದರ್) ಯಾವೊತ್ತಿನಿಂದಲೂ ಪಶ್ಚಿಮದ ಚಿಂತಕರನ್ನು ಕಾಡಿರುವ ಸಂಗತಿ. ಈಚಿನ ದಶಕಗಳಲ್ಲಂತೂ ಈ ಸೆಲ್ಫ್ ಮತ್ತು ಅದರ್ ಎನ್ನುವುದು, ಅವರಲ್ಲಿ ಸರ್ವಸಮ್ಮತ ಮೌಲಿಕ ಪರಿಕಲ್ಪನೆಗಳಾಗಿ ಕಾತರಗೊಳಿಸಿವೆ; ವಿಚಾರ ಪರಂಪರೆಗಳ ರಾಶಿರಾಶಿಗಳನ್ನೇ ಹುಟ್ಟಿಸಿವೆ. ನಮ್ಮ ಪೌರ್ವಾತ್ಯ ಚಿಂತನೆಗಳಲ್ಲಿ ಈ ಸ್ವ ಮತ್ತು ಅನ್ಯಗಳೆಂಬುವು 'ಪ್ರಕೃತಿ'ಯಲ್ಲ; ನಮ್ಮ ವ್ಯಕ್ತಿ-ಸಮುದಾಯಗಳ ಅಸ್ತಿತ್ವದಲ್ಲಿ ಅನೇಕಾನೇಕ ಸ್ತರಗಳಲ್ಲಿ ಅನೇಕಾನೇಕ ರೂಪ ತಾಳಿ ಪ್ರತಿಭಾಸವಾಗುವ 'ವಿಕಲ್ಪ', ಅಷ್ಟೇ.

ಅಸ್ತಿತ್ವದ ಲೌಕಿಕ ಸ್ತರಗಳಲ್ಲಿ ನಾವು ಈ ಸ್ವ ಮತ್ತು ಅನ್ಯದ ಭಿನ್ನತೆಗಳನ್ನು ಕಾಣುತ್ತಿರುತ್ತೇವೆ. ಅನ್ಯವು ಸ್ವಗೆ ಮುಖಾಮುಖಿಯಾಗುವ ಸಂಘರ್ಷಕ ಅಂತಲೂ ಅದನ್ನು ನೋಡಬಹುದು. ಅಥವಾ ಸ್ವಗಿಂತ ಭಿನ್ನವಾದದ್ದು, ಆದರೆ ಸ್ವದ ಜೊತೆಯಲ್ಲಿ ಹೊಂದಾಣಿಕೆಗೊಂಡು ಬಾಳಬೇಕಾದ್ದು ಮತ್ತು ಅಂಥ ಹೊಂದಾಣಿಕೆಯನ್ನು ಸಾಧಿಸುವುದೇ ಜೀವಿತ ಅಂತ ಕೂಡಾ ತಿಳಿಯಬಹುದು. ಈ ಎರಡನೆಯ ಕಲ್ಪನೆಯಲ್ಲಿ 'ಸ್ವ'ವು ಅನ್ಯವನ್ನು ಸಂಘರ್ಷಕವೆಂದು ಭಾವಿಸಿ, ಎದುರು ಬಂದು ಸಂಶ್ಲೇಷಣೆಯ ಸಾಧನೆಗಾಗಿ ಸವಾಲು ಹಾಕುವ ಪ್ರತ್ಯಂಗವಾಗಿರುತ್ತದೆ. ಹೀಗೆ ಭಾವಿಸುವಾಗ ಹುಟ್ಟುವ ಕಲ್ಪನೆಯೇ ಸೈರಣೆ. ಉದಾಹರಣೆಗೆ-ರಾಜ ನೃಪತುಂಗನೂ ಕವಿ ಶ್ರೀವಿಜಯನೂ ಭಿನ್ನ ಧರ್ಮೀಯರು. ಅವರು ಪರಸ್ಪರರನ್ನು 'ಸೈರಿಸಿ'ಕೊಂಡು ಸೃಜಿಸಿಕೊಂಡಿರುವ ಅನುಸಂಧಾನವನ್ನು, ಈ ಪಠ್ಯವು ಮನೋಜ್ಞವಾಗಿ ಸಾಬೀತುಗೊಳಿಸಿಕೊಡುತ್ತದೆ. ನಮ್ಮ ಇವತ್ತಿನ ಸೆಕ್ಯುಲರ್ ಕಲ್ಪನೆಯಿಂದ ನೋಡಿದರೆ, ಈ ಇಬ್ಬರು ಸೆಕ್ಯುಲರ್ ಅಲ್ಲವೇ ಅಲ್ಲ. ಇಬ್ಬರೂ ತಮ್ಮ ತಮ್ಮ ಧರ್ಮದಲ್ಲಿ ದೃಢ ನಿಷ್ಠರು. ಆದರೆ 'ಸೈರಣೆ'ಯೆಂಬ ಪರಿಕಲ್ಪನೆಯ ಮೂಲಕ ಅವರು ಸೆಕ್ಯುಲರಿಸಮ್ ಏನನ್ನು ಹಂಬಲಿಸುತ್ತದೋ ಅಂಥದನ್ನು ಸಾಧಿಸಿದವರಾಗಿದ್ದಾರೆ.

ಇಷ್ಟಾದ ಮೇಲೆ ನನಗೆ ಕಂಡಿರುವ 'ಕವಿರಾಜಮಾರ್ಗ'ದ ಸ್ವರೂಪವನ್ನು ಒಟ್ಟಿನಲ್ಲಿ ಸಂಕ್ಷೇಪವಾಗಿ ಈಗ ಹೇಳಿಬಿಡುತ್ತೇನೆ. ಇದು 'ಮುಖ್ಯವಾಗಿ ಅಲಂಕಾರ ಶಾಸ್ತ್ರವಾಗಿದ್ದರೂ ಆನುಷಂಗಿಕವಾಗಿ ಕನ್ನಡ ಭಾಷೆ-ಸಂಸ್ಕೃತಿ-ಜನಪದಗಳ ಬಗ್ಗೆ ಉಪಯುಕ್ತವಾದ ಸಂಗತಿಗಳನ್ನು ಹೇಳಿದೆ' ಎನ್ನುವುದು ಈತನಕದ ಅಧ್ಯಯನದಲ್ಲಿ ಕಂಡಿರುವ ರೂಪ. ಬಹುಶಃ ಈತನಕ ನಾವು ತಲೆಕೆಳಗಾಗಿ ಅದರ ರೂಪವನ್ನು ಗ್ರಹಿಸಿದ್ದೇವೆ ಅಂತ ನನಗೆ ತೋರಿಸಿದೆ. ನನ್ನ ಅಧ್ಯಯನದಲ್ಲಿ ಇದು ಮುಖ್ಯವಾಗಿ ಕನ್ನಡತ್ವದ ಲಕ್ಷಣಗ್ರಂಥವಾಗಿದ್ದು ಆ ಲಕ್ಷಣಗಳ ವಿವರಣೆಗಾಗಿ ಕಾವ್ಯಾಲಂಕಾರದ ವಿವರಣೆಯನ್ನು ಕೊಡುವಂಥದು ಎಂದು ನಿಚ್ಚಳವಾಗಿ ಕಂಡಿದೆ. ಸೊಂಪಾದ ಒಂದು ಮರವನ್ನು ನೋಡಿದಾಗ ಅದರ ಕೊಂಬೆ-ಟೊಂಗೆ-ಗೆಲ್ಲು ಹಸಿರೆಲೆ ಚಿಗುರೆಲೆಗಳ ಗಾತ್ರ ಮೊತ್ತವು ಮಾತ್ರವೇ ನಮ್ಮ ಕಣ್ಸೆಳೆಯುತ್ತದೆ; ಬುಡ ಬೊಡ್ಡೆ ಬೇರುಗಳ ಮೊತ್ತವು ಹೋಲಿಕೆಯಲ್ಲಿ ಚಿಕ್ಕದೇ ಮತ್ತು ಹಾಗೆ ಕಂಗೊಳಿಸುವಂಥದೂ ಆಗಿರುವುದಿಲ್ಲ. 'ಕವಿರಾಜ ಮಾರ್ಗ'ದ ಸ್ವರೂಪವು ಆ ಥರದ್ದು ಅಂತ ನಾನು ಸೂಚಿಸುತ್ತೇನೆ.

ಚರ್ಚೆಗಳು

ಎಂ.ಎಂ. ಕಲಬುರ್ಗಿ : ಶ್ರೀ ಸುಬ್ಬಣ್ಣನವರು ಬಹಳ ಮೌಲಿಕವಾದ ಮಾತುಗಳನ್ನು ಆಡಿದ್ದಾರೆ. ನನ್ನ ಗಮನಕ್ಕೆ ಬಾರದ ಅನೇಕ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ಕೆಲವು ಸಂಗತಿಗಳನ್ನು ಮಾತ್ರ ಇಲ್ಲಿ ವ್ಯಕ್ತಪಡಿಸ್ತಾ ಇದ್ದೀನಿ. 'ಕವಿರಾಜಮಾರ್ಗ'ದಲ್ಲಿ "ಕಾವೇರಿಯಿಂದ ಗೋದಾವರಿಯವರೆಗೆ" ಎಂಬ ಮಾತು ಬರುತ್ತಿದ್ದು, ಇದು ಮೊಟ್ಟಮೊದಲನೆಯದು ಅಂತ ಅವರು ಹೇಳಿದರು. ಆದರೆ ತಮಿಳು 'ತೊಲ್ಕಾಪ್ಪಿಯಂ' ದೊಳಗ ತಮಿಳುನಾಡಿನ ವ್ಯಾಪ್ತಿಯನ್ನು ಹೇಳುವಾಗ ಇಂತಹ ಭೌಗೋಳಿಕ ವ್ಯಾಪ್ತಿಯ ಸೂಚನೆ ಇದೆ. ಕೆಲವು ದಿನಗಳ ಹಿಂದೆ 'ತೊಲ್ಕಾಪ್ಪಿಯಂ ಮತ್ತು ಕವಿರಾಜಮಾರ್ಗ'ವೆಂಬ ಒಂದು ಸಣ್ಣ ಟಿಪ್ಪಣಿಯನ್ನು ಬರೆದು, ಎರಡಕ್ಕೂ ಸಮಾನವಾದ ಕೆಲವು ಅಂಶಗಳು ಹೇಗಿವೆ ಎಂಬುದನ್ನು ಪರಿಶೀಲಿಸಿದೆ. 'ಕವಿರಾಜಮಾರ್ಗ' ಕೇವಲ ಅಲಂಕಾರ ಗ್ರಂಥವಾಗಿ ಉಳಿದಿಲ್ಲ. ಅದಕ್ಕೆ ಸಮಾನವಾದ ಕೆಲವು ವಿಚಾರಗಳು 'ತೊಲ್ಕಾಪ್ಪಿಯಂ'ದೊಳಗ ಅದಾವ. 'ಕವಿರಾಜಮಾರ್ಗ' ದಂಡಿಯನ್ನು ಒಂದು ಅಂತರದಲ್ಲಿ ಇಟ್ಟುಕೊಂಡ ಮಿಶ್ರಶಿಲ್ಪದ ಸಂಪ್ರದಾಯ. ಅಂದ್ರೆ ಕಾವ್ಯಮೀಮಾಂಸೆಯನ್ನು ಕುರಿತು ಹೇಳುವಾಗ, ಕೇವಲ ಕಾವ್ಯಮೀಮಾಂಸೆಗೆ ಸೀಮಿತವಾಗದೆ, ಅದರಲ್ಲಿ ಅಲಂಕಾರ, ವ್ಯಾಕರಣ, ಛಂದಸ್ಸು, ಜನ, ದೇಶ, ಜನರ ಸಂಸ್ಕೃತಿ ಎಲ್ಲ ಸೇರಬೇಕು. ಇಂಥ ಒಂದು ರಚನಾವಿನ್ಯಾಸ ದ್ರಾವಿಡ ವಿನ್ಯಾಸ ಅಂತ ಕಾಣಸ್ತದ. ದಂಡಿಯನ್ನು ಆತ ಕೇವಲ ಒಂದು ಮಾಡಲ್ ಆಗಿ ಇಟ್ಕೊಂಡಿದ್ದ. ಆದ್ದರಿಂದ 'ತೊಲ್ಕಾಪ್ಪಿಯಂ' ಮತ್ತು 'ಕವಿರಾಜಮಾರ್ಗ'ಗಳ ತೌಲನಿಕ ಅಧ್ಯಯನ ಬಹಳ ಅವಶ್ಯ ಇದೆ. ಇದರ ಬೇರುಗಳು ಸಂಸ್ಕೃತದ ಕಡೆಗೆ ಹೋಗದೆ

ದ್ರಾವಿಡದ ಕಡೆಗೆ ಹೋಗ್ತವೆ. ಆ ದಿಶೆದೊಳಗ ನಾವು ವಿಚಾರ ಮಾಡಬೇಕು ಅಂತ ನನಗ ಅನಿಸ್ತಾ ಇದೆ.

ಕೆ.ವಿ.ಸುಬ್ಬಣ್ಣ : ಮೊದಲನೆಯದಾಗಿ ಈ ದ್ರಾವಿಡ ಆರ್ಯ ಇದೆಯಲ್ಲ, ಈ ಪರಿಕಲ್ಪನೆ ಬಗ್ಗೆ ಮೊದಲನೆಯದಾಗಿ ನನಗೆ ಕೆಲವು ಸಂದೇಹಗಳಿವೆ. ಎರಡನೆಯದಾಗಿ ನೀವು 'ತೊಲ್ಕಾಪ್ಪಿಯಂ' ಬಗ್ಗೆ ಮತ್ತು ದಂಡಿಯ ಬಗ್ಗೆ ಹೇಳಿದಿರಲ್ಲ, ಅದಕ್ಕಿಂತ ಈ ವಿಷಯ ಕುರಿತು ಭರತನ 'ನಾಟ್ಯಶಾಸ್ತ್ರ' ಒಂದು ಅದ್ಭುತವಾದ ಟೆಕ್ಸ್ಟ್. 'ನಾಟ್ಯಶಾಸ್ತ್ರ' ಅಂತ ಅಂದ್ರೆ ಶಾಸ್ತ್ರ ಅಲ್ಲವೇ ಅಲ್ಲ. ಶಾಸ್ತ್ರ ಅನ್ನೋದು ಬಂದಿದ್ದು ಆಮೇಲೆ, ದಂಡಿ ಭಾಮಹ ಇವರಿಂದಲೇ ಶುರುವಾಗಿದ್ದು. ಈ ಆದಿಮವಾದ ಟೆಕ್ಸ್ಟ್‌ಗಳೆಲ್ಲಾ ಮಿಶ್ರವಾದವು. ಅದೇ ರೀತಿಯಲ್ಲಿ ಒಂದು ಹೊಸ ರಾಜಕೀಯ ಪ್ರಕ್ರಿಯೆ ಶುರುವಾಗುವ ಹೊತ್ತಿಗೆ ಇರುವ ಟೆಕ್ಸ್ಟ್‌ಗಳೆಲ್ಲ ಅದೇ ರೀತಿ ಆಗ್ತಾವೋ ಏನೋ?

ಎಂ.ಎಂ.ಕಲಬುರ್ಗಿ : ಅಂದ್ರೆ ನೀವು ಹೇಳುವ ಹಾಗೆ ಈ 'ನಾಟ್ಯಶಾಸ್ತ್ರ' 'ತೊಲ್ಕಾಪ್ಪಿಯಂ' ಇವೆಲ್ಲಾ ಹಾಗೆ ಇದ್ವು ಅಂತ.

ಸುಬ್ಬಣ್ಣ : ಹೌದು ಹೌದು. ಅದರಿಂದ ಈ ದ್ರಾವಿಡ ಅನ್ನೋ ಕಲ್ಪನೆ ಇದೆಯಲ್ಲ, ಇದು ಬಹಳ ತಪ್ಪು ಅಂತ ಕಾಣ್ಸುತ್ತೆ. ನಾವು ಇವತ್ತು ನೋಡುತ್ತಿರುವ ದ್ರಾವಿಡ ಕಲ್ಪನೆ ಇದೆಯಲ್ಲ, ಇದಕ್ಕೆ ತತ್ತ್ವಜ್ಞಾನಿಗಳಲ್ಲಿ ಈಗ ಹೊಸ ಹೊಸದಾಗಿ ಯಾವ ಆಧಾರವೂ ಇಲ್ಲ.

ಎಂ.ಎಂ. ಕಲಬುರ್ಗಿ : ಇತ್ತೀಚೆಗೆ ಆ ವಾದ ಬಂದಿದೆ. ಆದ್ರೆ ನನಗೆ ದ್ರಾವಿಡ ಪರಂಪರೆಗೇ ಒಂದು ಥಿಂಕಿಂಗ್ ಅದೆ ಅಂತ ಕಾಣಿಸ್ತದೆ. ಯಾಕಂದ್ರೆ ನಮ್ಮಲ್ಲಿ ಮಾರ್ಗ-ದೇಶಿ, ವಸ್ತುಕ-ವರ್ಣಕ ಮುಂತಾದ ವಿಚಾರಗಳೆಲ್ಲ ಇವೆ. ಅದರಿಂದ ಪ್ರಾಚೀನ ಕಾವ್ಯಗಳನ್ನ ಗಾಢವಾಗಿ ಅಧ್ಯಯನ ಮಾಡಿದ್ರೆ, ನಮ್ಮವು ಅನ್ನೋ ವಿಚಾರಗಳು ಏನು, ಸ್ವತಂತ್ರ ವಿಚಾರಗಳು ಏನು, ಎಂದು ಗುತ್ತಾಗ್ತದ. ಅವನ್ನೆಲ್ಲಾ ಸಂಗ್ರಹಿಸಿ ನಮ್ಮದೇ ಆದಂತಹ ಸ್ವರೂಪ ಏನದೆ ಅದನ್ನು ಗ್ರಹಿಸೋದು ಬಹಳ ಅವಶ್ಯ ಇದೆ ಅಂತ ನನಗೆ ಅನಿಸ್ತದ.

ಕೆ.ವಿ.ಸುಬ್ಬಣ್ಣ : ಅಂದ್ರೆ ನಾವು ಸಮಾನತೆಯ ವಿಷಯವನ್ನೇ ಮರೆತುಬಿಡುತ್ತಿದ್ದೇವೆ ಅಂತ ಕಾಣಿಸ್ತದೆ. ಇದನ್ನು ತಮಿಳುನಾಡು ಮಾಡ್ತು. ನಾನು ಬೇರೆ ಬೇರೆ ಅಂತ ಅಂದಾಗ, ಈ ಪ್ರಪಂಚ ಬಹುಮುಖವೋ ಏಕಮುಖವೋ? ಗಾಂಧಿ ಹೋಗಿ ನಾರಾಯಣಗುರು ಅವರನ್ನು ಭೇಟಿ ಮಾಡ್ತಾರೆ. ನಾರಾಯಣಗುರು ಬಹಳ ದೊಡ್ಡ ಅದ್ವೈತಿ. ಇಬ್ಬರು ಒಂದು ದೊಡ್ಡ ಮರದ ಹತ್ರ ಕೆಳಗಡೆ ಕೂತ್ಕೊಂಡಿರ್ತಾರೆ. ಗಾಂಧಿ ಒಂದು ರೀತಿಯಲ್ಲಿ ದ್ವೈತಿ. 'ದೇವರೂ ನಾನೂ ಒಂದೇ ಅಂತ ಹೇಳುವ ತಾಕತ್ತು ನನಗಿಲ್ಲ' ಅಂತ ಹೇಳ್ತಿದ್ದೋರು. ಅವರು ನಾರಾಯಣಗುರು ಅವರನ್ನು ಕೇಳ್ತಾರೆ : "ಅಲ್ಲ ಗುರೂಜಿ, ನೀವು ಇದೆಲ್ಲ ಏಕಮುಖವಾದುದು, ಅದ್ವೈತ ಅಂತ ಹೇಳ್ತಿರಿ. ಈ ನಾವು ಕೂತಿರುವ ಮರನೋಡಿ. ಎಷ್ಟು

ಎಲೆಗಳಿದಾವೆ! ಅವರಲ್ಲಿ ಒಂದು ಎಲೆ ಹಾಗೆ ಇನ್ನೊಂದು ಇದೆಯೋ ಹೇಳಿ?"; ಅದಕ್ಕೆ ನಾರಾಯಣಗುರು ಅವರು "ಹೌದು ನೀವು ಹೇಳಿದ್ದು ಸರಿ. ಆದ್ರೆ ಅದನ್ನು ಅಗಿದು ನೋಡಿ ರುಚಿ ಎಲ್ಲ ಒಂದೇ." ಅಂದ್ರೆ ಇದು ನಾರಾಯಣಗುರುಗೂ ಗೊತ್ತಿತ್ತು. ಗಾಂಧಿಗೂ ಗೊತ್ತಿತ್ತು. ಈ ಎರಡೂ ಮುಖವನ್ನ ನಾವು ಮರೆಯಬಾರದು ಅಂತ. ಅಂದ್ರೆ ತಮಿಳಿನ 'ತೊಲ್ಕಾಪ್ಪಿಯಂ' ಅದನ್ನು ಮರೆಯಿತು. ನಮ್ಮಲ್ಲಿ ಮರೆಯಲಿಲ್ಲ. ಈ ಎರಡು ರೀತಿಯ ಸಂಬಂಧ ಇದೆಯಲ್ಲ ಸಾಮಾನ್ಯ ಮತ್ತು ವಿಶಿಷ್ಟ, ಇದನ್ನು ಮರೆಯಬಾರದು.

ಕೆ.ಜಿ.ನಾಗರಾಜಪ್ಪ : ಸುಬ್ಬಣ್ಣನವರು ಕೆಲವು ಬೆಲೆಯುಳ್ಳ ಮಾತುಗಳನ್ನು ಆಡಿದ್ದಾರೆ. ಆದ್ರೆ ನನಗೆ ಇಡೀ ಅವರ ಧ್ವನಿಯಲ್ಲಿ ಒಂದು ಅಂಶ ಎದ್ದು ಕಾಣುತ್ತದೆ. ಅದು ಏನೂ ಅಂದ್ರೆ, ಭಾರತೀಯತೆ ಅನೇಕ ಪ್ರಾಂತೀಯ ಭಾಷೆಗಳಲ್ಲಿ ಕಟ್ಟಲ್ಪಟ್ಟಿದೆ. ಯಾಕಂದ್ರೆ ನಮಗೆ 'ವಸುಧಾ ವಲಯವಿಲೀನ..' ಅನ್ನೋ ಮಾತನ್ನು ತೆಗೆದುಕೊಂಡಾಗ ಒಂದು ಪರ್ಟಿಕ್ಯುಲಾರಿಟಿ, ಇನ್ನೊಂದು ಯೂನಿವರ್ಸಲ್. ಒಂದು ವ್ಯಷ್ಟಿ, ಇನ್ನೊಂದು ಸಮಷ್ಟಿ. ಸಮಷ್ಟಿ ವ್ಯಷ್ಟಿಗಿಂತ ಭಿನ್ನ ಅಲ್ಲ ಎಂಬ ಧೋರಣೆ ಅವರ ಮಾತಿನಲ್ಲಿತ್ತು. ಆದರೆ ಇದಕ್ಕೆ ಮರದ ದೃಷ್ಟಾಂತವನ್ನು ಕೊಟ್ಟಾಗ ಭಿನ್ನ ಭಿನ್ನವಾದ ಮರಗಳ ಎಲೆಗಳು ರುಚಿ ಭಿನ್ನ ಭಿನ್ನವಾಗಿರುತ್ತದೆ ಎಂಬುದನ್ನು ನಾವು ಕಾಣ್ತೇವಿ. ಒಟ್ಟಿನಲ್ಲಿ ನನ್ನ ಮಾತುಗಳ ಸಾರವಿಷ್ಟು, ಸಂಸ್ಕೃತದ ಏಕಸಂಸ್ಕೃತಿ ಮತ್ತು ಏಕಸಮಾಜ ತತ್ವಗಳನ್ನು ಹೇಳೋದಾದ್ರೆ, ಬಹುಸಮಾಜ ಮತ್ತು ಬಹುಸಂಸ್ಕೃತಿಗಳ ಗತಿ ಏನು ಅಂತ.

ಎರಡನೆಯದಾಗಿ ನಾನು ಹೇಳುವಂಥದ್ದು, ಒಂದು ಮಾತು ಸಹೃದಯ ಮತ್ತು ಶ್ರೋತೃ ಆಡ್ತಾ ಇರ್ತಾರೆ. ವಕ್ತಾರ ಮತ್ತು ಶ್ರೋತೃವನ್ನು ಕುರಿತು ಮಾತಾಡುವ ಸಂದರ್ಭದಲ್ಲಿ ಶ್ರೋತೃವಿಗೆ ನಗ್ನತೆಯ ಸ್ವರೂಪ ಇರ್ತದೆ. ಆದರೆ ವಕ್ತಾರನಿಗೆ ಅದೇ ಮನಸ್ಸು ಬೇಡವೇ? ಇದುವರೆಗೆ ಬಂದಿರುವ ಕೃತಿಗಳಲ್ಲಿ ಅಥವಾ ಸಾಹಿತ್ಯದಲ್ಲಿ ಅಂತಹ ಪ್ರಾಂಜಲ ಮನಸ್ಸಿನ ಕೃತಿಗಳು ಹುಟ್ಟಿವೆಯೇ? ನಗ್ನ ಮನಸ್ಸಿನ ಕೃತಿಗಳು ಹುಟ್ಟಿವೆಯೇ? ಏಕೆ ಅನೇಕ ಸಂಸ್ಕೃತಿಗಳು ಸಪ್ರೆಸ್ ಆಗಿವೆ? ಇವತ್ತು ನಾವು ಈ ಬೆಳಕಿನ ಹಿನ್ನೆಲೆಯಲ್ಲಿ ನೋಡಿದಾಗ, ನಮಗೆ ಈ ಇತಿಹಾಸ ಅನ್ನುವಂಥದ್ದು ಏನಿದೆಯೋ, ಒಂದು ಮುಖ್ಯ ರಸ್ತೆಗಳ ವ್ಯಾಪಾರವಾಗಿದೆಯೇ ಹೊರತು ಗಲ್ಲಿಗಳನ್ನು ಅದು ಪರಿಗಣಿಸಿಲ್ಲ. ಒಟ್ಟಿನಲ್ಲಿ ಸಾಮಾನ್ಯ ಜನರ ಬದುಕು ಅವರ ಚಿಂತನೆ ಮತ್ತು ಆಲೋಚನೆಗಳು ಪರಿಗಣಿಸಿಲ್ಲ. ಅವು ಅವಜ್ಞೆಗೆ ಗುರಿಯಾಗಿವೆ ಅನ್ನುವಂಥ ಪ್ರಶ್ನೆಯಿದೆ.

ಮೂರನೇ ಅಂಶ, ಈ ಚಳುವಳಿಗಳು ಹಿಂಸೆಯನ್ನು ಪ್ರಚೋದಿಸಿದವು. ಸಮಾನತೆ ಮತ್ತು ಸಾಮರಸ್ಯ ಅತ್ಯಗತ್ಯ. ಸಾಮರಸ್ಯ ಹೊಂದಾಣಿಕೆ ಬರುವುದು ಯಾವಾಗ? ಹೇಳುಗ ಕೇಳುಗ ಸಮಾನವಾಗಿದ್ದ ತತ್ವದ ಮೇಲೆ ಬದುಕನ್ನು ರೂಪಿಸಿಕೊಂಡಾಗ. ಯಾವಾಗ ಹೇಳುಗ ಅಥವಾ ಒಂದು ಪ್ರಭುತ್ವ ಅಧಿಕಾರವನ್ನು ಅಥವಾ ವಿಚಾರವನ್ನು ಹೇರುವುದಕ್ಕೆ ಹೋಗ್ತಾನೊ, ೬೯ ಕೇಳುಗ ಬರೀ ಕಿವಿ ಆಗ್ತಾನೆ. ನಾಲಿಗೆ ಆಗುವುದಿಲ್ಲ. ಈಗ ನನಗೆ

'ಕವಿರಾಜಮಾರ್ಗ' ಅನ್ನುವಂಥದ್ದು, ಕನ್ನಡ ಅನ್ನುವಂಥದ್ದು ಕನ್ನಡವೇ ಅಲ್ಲ. ಅದು ಒಂದು ನೆಲ. ಕನ್ನಡಕ್ಕೆ ಸೀಮಿತವಾಗಿರುವಂತಹ ನೆಲ. ಅದು ಭೌಗೋಳಿಕವಾಗಿ ಐತಿಹಾಸಿಕವಾಗಿ ವ್ಯತ್ಯಾಸ ಪಡೆದಿರಬಹುದು. ಆದ್ರೆ ಒಂದು ನೆಲ ಇದೆ. ಆ ನೆಲಕ್ಕೆ ತಕ್ಕಂತೆ ಜನ ಇದ್ದಾರೆ. ಜನಕ್ಕೆ ತಕ್ಕಂತೆ ಭಾಷೆ ಇದೆ. ಭಾಷೆಗೆ ತಕ್ಕಂತೆ ಒಂದು ಸಂಸ್ಕೃತಿ ಇದೆ. ಈ ನಾಲ್ಕೂ ಘಟಕಗಳನ್ನು ನಾವು ಕನ್ನಡ ಅಂತ ಪರಿಗಣಿಸಬೇಕು. ಈ ನಾಲ್ಕು ಘಟಕಗಳು ಸಮಗ್ರವಾಗಿ ಅಭಿವೃದ್ಧಿ ಆದಾಗ ಕನ್ನಡದ ಅಭಿವೃದ್ಧಿ ಆಗುತ್ತೆ. ಆದ್ರೆ ಕೆಲವು ಸಂದರ್ಭದಲ್ಲಿ ಭಾಷೆಯನ್ನು ಮಾತ್ರ ತೆಗೆದುಕೊಳ್ಳುತ್ತೇವೆ. ಕೆಲವು ಸಂದರ್ಭದಲ್ಲಿ ಜನರನ್ನು ಮಾತ್ರ ತೆಗೆದುಕೊಳ್ಳುತ್ತೇವೆ. ಸಮಗ್ರವಾದ ದೃಷ್ಟಿ ಅನ್ನುವಂಥದ್ದು ಇನ್ನೂ ಬರಬೇಕು. 'ಕವಿರಾಜಮಾರ್ಗ'ವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಕಲಬುರ್ಗಿಯವರು ಹೇಳಿದರು - ಸಂಸ್ಕೃತದ ದೃಷ್ಟಿಯಿಂದ ಅದನ್ನು ಅಧ್ಯಯನ ಮಾಡಿರುವುದು ಹೆಚ್ಚಾಗಿದೆಯೇ ಹೊರತು, ಇನ್ನು ದಕ್ಷಿಣದ ಇತರೆ ಪ್ರಾಂತೀಯವಾಗಿರುವಂತಹ ಭಾಷೆಗಳಲ್ಲಿ ಬೆಳೆದಿರುವಂತಹ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನ ಹೆಚ್ಚಾಗಿಲ್ಲ. ಇದು ನಿಜ. ಜತೆಗೆ ಲಿಖಿತ ಮತ್ತು ಅಲಿಖಿತವಾಗಿರುವಂತಹ ಅಂಶಗಳನ್ನೂ ತೆಗೆದುಕೊಂಡು ಅಧ್ಯಯನ ಮಾಡಿದಾಗ ಮಾತ್ರ, ಸಮಗ್ರತೆ ಹೊಂದಾಣಿಕೆ ಬರುತ್ತೆ. ಆ ವಿಶಿಷ್ಟವಾದ ಕುಂದು ಸಮಷ್ಟಿಯಲ್ಲಿ ಎಷ್ಟಿದೆ? ಇಲ್ಲಾ ಘರ್ಷಣೆ ಇದೆಯಾ? ಆ ಘರ್ಷಣೆಯಿಂದ ಸಾಮರಸ್ಯ ಸಾಧ್ಯವೆ ಅನ್ನುವಂತಹದನ್ನು ಚರ್ಚಿಸಬಹುದು ಅಂತ ಅನ್ನಿಸುತ್ತೆ.

ಕೆ.ವಿ.ನಾರಾಯಣ : ಸುಬ್ಬಣ್ಣನವರು ಹೇಳಿದ ವಿಚಾರಕ್ಕೆ ಪೂರಕವಾದುದು ಅಥವಾ ಅದರ ಜೊತೆಗೇ ಆಲೋಚನೆ ಮಾಡುವಂತಹದ್ದು. 'ಭಾರತೀಯ ಕಾವ್ಯಮೀಮಾಂಸೆ'ಯನ್ನು ಸಂಸ್ಕೃತ ಕಾವ್ಯಮೀಮಾಂಸೆ ಅಂತ ಕರೀಬೇಕು ಅಂತ ಹೇಳಲಾಯಿತು. ಅದನ್ನು 'ಭಾರತೀಯ' ಅಂತ ಹೇಳಿದಾಗ ನಮ್ಮ ಒಳಗಣೇನೆ ನಡೆದಿರುವ ಚಿಂತನಾ ಕ್ರಮಗಳಿವೆಯಲ್ಲ, ಅವು ಪ್ರತ್ಯೇಕವಾದವೊ ಪೂರಕವಾದವೋ? ಪರಸ್ಪರ ಒಂದಕ್ಕೊಂದು ಕೊಟ್ಟು ಪಡೆದುಕೊಳ್ಳುವಂತಹ ಪ್ರಕ್ರಿಯೆ ಇರುತ್ತದೆ ಎನ್ನುವಂಥದನ್ನು ಮರೆತುಬಿಡುತ್ತೇವೆ. ಯಾಕೆಂದರೆ 'ಭಾರತೀಯ ಕಾವ್ಯಮೀಮಾಂಸೆ' ಅಂತ ಒಂದೇ ಒಂದನ್ನು ಗಮನಿಸಿದಾಗ, ಇದರ ಒಳಗಡೆನೇ ಇರುವಂಥ ಪ್ರಕ್ರಿಯೆಯನ್ನು ಮರೆತುಬಿಡುತ್ತೇವೆ. ನಾಗರಾಜಪ್ಪನವರ ಆತಂಕವೂ ಅದೇ ರೀತಿಯದು ಅಂತ ನಾನು ತಿಳಿದಿದ್ದೀನಿ. ಪ್ರತ್ಯೇಕವಾಗಿರುತ್ತವೆ ಅಂತ ಹೇಳಿದಾಗ ಆತಂಕ ಇರುವಂಥದ್ದು, ಪ್ರಕ್ರಿಯೆಗಳನ್ನು ಮರೆತುಬಿಡುತ್ತೇವೆ ಅಂತ. ಆನಂದವರ್ಧನನ ಧ್ವನಿಸಿದ್ಧಾಂತಕ್ಕೆ ಆಕರಗಳು, ಅಂದರೆ ತಾತ್ವಿಕವಾದ ಆಕರಗಳು, ಸಂಸ್ಕೃತ ಸಾಹಿತ್ಯದಿಂದ ಬಂದವಲ್ಲ. ಸಂಸ್ಕೃತೇತರವಾದ ಭಾರತೀಯ ಭಾಷೆಗಳನ್ನು ಅಧ್ಯಯನ ಮಾಡಿದಾಗ ಗೊತ್ತಾಗುತ್ತೆ. ಸಾಹಿತ್ಯೇತರವಾದ ಅದು ಇತರೆ ಜ್ಞಾನಶಿಸ್ತುಗಳಿಂದ ತನ್ನ ಆಕರಗಳನ್ನು ಪಡೆದುಕೊಂಡಿತು. ಅಂದ್ರೆ ಕೊಡುಕೊಳು ಅನ್ನೋದು ಬಹಳ

ವಿಚಿತ್ರವಾದ ರೀತಿಯಲ್ಲಿ, ಸಾಹಿತ್ಯ ಮತ್ತು ಸಾಹಿತ್ಯೇತರವಾದ ಬರವಣಿಗೆಯಲ್ಲಿ ಮತ್ತು ಸಂಸ್ಕೃತದ ಇತರ ಮಾರ್ಗ ಪರಂಪರೆಗಳಲ್ಲಿ ಕಂಡುಬರುತ್ತದೆ. ಇದು ಒಂದು ಅಂಶ.

ಎರಡನೆಯದು ಅತ್ಯಂತ ಕುತೂಹಲಕಾರಿಯಾದುದು, ಸಂಸ್ಕೃತ ಕಾವ್ಯ ಮೀಮಾಂಸಕರ ಹೆಚ್ಚು ಪ್ರಭಾವ ಅಂತ ಪರಿಗಣಿಸುವುದು ರಾಜಶೇಖರ ಅಂತ ಒಬ್ಬ ಕವಿ. ಕಾವ್ಯಮೀಮಾಂಸೆ ಅನ್ನೋದು ಅವನ ಕೃತಿ ('ಕವಿರಾಜಮಾರ್ಗ'ವೆ ಮೊದಲನೆಯದು. ಅನಂತರದ್ದು ಅದು). ಆತ ಬಹಳ ಕುತೂಹಲಕಾರಿಯಾದ ಒಂದು ಕತೆಯನ್ನು ಹೇಳುತ್ತಾನೆ. ಆ ಕತೆಯಲ್ಲಿ ಕಾವ್ಯಪುರುಷ ಅಂತ ಒಬ್ಬ ಬರ್ತಾನೆ. ಸಾಹಿತ್ಯವಿದ್ಯೆ ಒಬ್ಬಳನ್ನು ಸೃಷ್ಟಿಮಾಡುವಂಥದ್ದು. ಕಾವ್ಯ ಬೇರೆ ಬೇರೆ ರೂಪಗಳನ್ನು ತಾಳ್ತಾ ಹೋಗೋದು ಹೇಗೆ? ಬೇರೆ ಬೇರೆ ಪ್ರದೇಶಗಳಿಗೆ ಹೋದಾಗ ಬೇರೆ ಬೇರೆ ರೂಪಗಳನ್ನು ತಾಳುವುದು ಹೇಗೆ ಅನ್ನೋ ಮಾತು ಬಂದಾಗ, ಬೇರೆ ಬೇರೆ ಪ್ರದೇಶದ ಭಾಷಾ ವಿವರಗಳನ್ನು ಸಾಹಿತ್ಯವಿದ್ಯೆ, ತನ್ನ ಉಡುಪುಗಳಾಗಿ ವಿನ್ಯಾಸಗಳನ್ನಾಗಿ ತೊಟ್ಟುಕೊಂಡಾಗ, ಅದು ಬೇರೆಬೇರೆ ಆಗುತ್ತೆ. ಅದು ವಿಭಿನ್ನ ಪ್ರದೇಶಗಳ ಕಾವ್ಯ ಲಕ್ಷಣಗಳನ್ನು ಪಡೆದುಕೊಳ್ಳುತ್ತೆ ಅಂತ. ಆ ರೂಪಕದ, ಆ ಚಿತ್ರದ ವಿವರಗಳನ್ನು ಇಲ್ಲಿ ಹೇಳಲು ಪ್ರಯತ್ನಿಸುತ್ತಿಲ್ಲ. ನಾನು ಹೇಳಲು ಪ್ರಯತ್ನಿಸುತ್ತಿರುವುದು ಏನೆಂದರೆ, ಬಹುತ್ವವನ್ನು ಅವರು ಪರಿಗ್ರಹಿಸಿದ ರೀತಿ ಯಾವುದು? ಅಂದ್ರೆ ಬೇರೆ ಬೇರೆ ರೀತಿಯ ಕಾವ್ಯಗಳು ಹುಟ್ಟುವುದು ಮತ್ತು ಬೇರೆ ಬೇರೆ ದೇಶಗಳಲ್ಲಿ ಅವನ್ನು ರಿಲೇಟ್ ಮಾಡುವಂಥದ್ದು ಅಥವಾ ಅದನ್ನು ಪ್ರಾಕೃತ ಮತ್ತು ಸಂಸ್ಕೃತದ ಸಂಬಂಧದಲ್ಲಿ ನೋಡ್ತಾ ಇದ್ದರೂ ಕೂಡಾ, ಕರ್ನಾಟಕದಲ್ಲಿ ಈ ಮಾತು ನಿಜ.

ಒಂದು ಮಾತನ್ನು ಸುಬ್ಬಣ್ಣನವರು ಬಹಳ ಸ್ಪಷ್ಟವಾಗಿ ಹೇಳಿದರು. ಇದು ಸಾಮ್ರಾಜ್ಯ ನಿರ್ಮಾಣ ಹಂತದಲ್ಲಿ ಹುಟ್ಟಿಕೊಂಡ ಕಾವ್ಯ ಅಂತ. ಬಹಳ ಮುಖ್ಯವಾದ ಮಾತು ಅದು. ಯಾಕೆಂದರೆ ಸಾಮ್ರಾಜ್ಯ ನಿರ್ಮಾಣದ ಹಂತದಲ್ಲಿ ಯಾವಾಗಲೂ ಬಹುತ್ವದ ನಿರಾಕರಣೆ ಕೂಡ ಇರುತ್ತೆ. 'ಕವಿರಾಜಮಾರ್ಗ' ತನಗೇ ಗೊತ್ತಿಲ್ಲದ ಹಾಗೆ ಈ ಅಂಶವನ್ನೂ ಕೂಡ ಮಾಡ್ತಾ ಇದೆ. ಅಂದ್ರೆ ಬಹುತ್ವವನ್ನು ಅದು ನಿರಾಕರಿಸುತ್ತಿದೆ. ಕನ್ನಡಂಗಳನ್ನು ನಿರಾಕರಿಸಿ ಕನ್ನಡವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಆದರೆ ಅದರ ಒಳಗಡೆಗೆ ಕನ್ನಡಗಳು ಇದ್ದವು ಮತ್ತು ಆ ಕನ್ನಡಗಳಿಗೊಂದು ಸ್ವತಂತ್ರ ಅಸ್ತಿತ್ವವಿತ್ತು - ಬಹುತ್ವಕ್ಕೆ ಒಂದು ಅಸ್ತಿತ್ವವಿತ್ತು ಎನ್ನುವಂಥದ್ದು ಕುತೂಹಲಕಾರಿ ಮತ್ತು ಮುಖ್ಯವಾದುದು. ಅದರಿಂದಾಗಿ ಯಾವುದಕ್ಕೆ ಸಾಮ್ರಾಜ್ಯದ ಒತ್ತಡವಿರುವುದಿಲ್ಲವೊ ಅಲ್ಲಿ ಭಾಷೆ ಅಥವಾ ಸಂಸ್ಕೃತಿ ಬಹುತ್ವದ ಲಕ್ಷಣಗಳನ್ನು ಉಳಿಸಿಕೊಂಡಿರುತ್ತೆ. ತುಳು ಇದಕ್ಕೆ ಬಹಳ ಒಳ್ಳೆಯ ಉದಾಹರಣೆ. ತುಳುವಿನಲ್ಲಿ ೪ ಪ್ರಧಾನ ಉಪಭಾಷೆಗಳು ಇವತ್ತಿಗೂ ಕೂಡ ಉಳಿದುಕೊಂಡಿವೆ. ಬಹುಶಃ ತುಳುವಿಗೆ ಒಂದು ಸಾಮ್ರಾಜ್ಯದ ಅಥವಾ ಒಂದು ರಾಜ್ಯ ನಿರ್ಮಾಣದ ಒತ್ತಡ ಇದ್ದಿದ್ದರೆ, ಆ ೪ ಪ್ರಧಾನ ಉಪಭಾಷೆಗಳಲ್ಲಿ ಒಂದು ಮಾತ್ರ ಪ್ರಧಾನವಾಗಿ, ಉಳಿದ ಮೂರು ಹಿನ್ನೆಲೆಗೆ ಹೋಗುತ್ತಿದ್ದವು. ಅಂದರೆ 'ಕವಿರಾಜಮಾರ್ಗ'ವು ನೃಪತುಂಗ ಹಾಗೂ

ಶ್ರೀವಿಜಯ ಇಬ್ಬರೂ ಸೇರಿಕೊಂಡು ಕನ್ನಡಗಳ ನಡುವೆ ಕನ್ನಡವನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಪ್ರವೃತ್ತವಾದಂತಿದೆ. ಅದು ಹಾಗೆ ಉಳಿಯಿತೇ? ಅನಂತರ ವಚನಕಾರರಲ್ಲಿ ಏನಾಯಿತು? ಕುಮಾರವ್ಯಾಸನಲ್ಲಿ, ಲಕ್ಷ್ಮೀಶನಲ್ಲಿ ಏನಾಯಿತು? ಇದು ಮುಂದಿನ ಚರಿತ್ರೆಯ ಮಾತು.

ಕೆ.ವಿ.ಸುಬ್ಬಣ್ಣ : ಕನ್ನಡಂಗಳ್ ಇದನ್ನು ವಿರೋಧಿಸುತ್ತಲೇ ಕವಿರಾಜಮಾರ್ಗಕಾರ ಕೊನೆಗೆ ೩ ಮಾರ್ಗಗಳಿವೆ ಅಂತ ಹೇಳ್ತಾನೆ. ದಕ್ಷಿಣ ಮಾರ್ಗ, ಉತ್ತರ ಮಾರ್ಗ, ಉತ್ತರೋತ್ತರ ಮಾರ್ಗ, ಇಲ್ಲಿ ಬಹುತ್ವವನ್ನು ಒಪ್ಪುತ್ತಾನಲ್ಲವೆ?

ಕೆ.ವಿ.ನಾರಾಯಣ : ಹೌದು, ಮೂರು ಮಾರ್ಗಗಳನ್ನು ಹೇಳಿರುವುದು ನಿಜ. ಅವನು ದೋಷಯುಕ್ತವಾದ ರಚನೆಗೆ ಒಂದು ಉದಾಹರಣೆ ಕೊಡ್ತಾನೆ. ಅದನ್ನು ದೋಷಮುಕ್ತವಾಗಿ ಪರಿವರ್ತಿಸುವುದು ಹೇಗೆ? ಅದಕ್ಕೂ ಉದಾಹರಣೆ ಕೊಡ್ತಾನೆ. ಅಂದರೆ ಸ್ವೀಕೃತ ರೂಪ ಯಾವುದು ಅಂತ? ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ಈ ಪರಂಪರೆ ಹೇಗೆ ಮುಂದುವರಿದುಕೊಂಡು ಈ ಎಲ್ಲಾ ಕಾವ್ಯಗಳಲ್ಲಿ ದೇಶದ ವರ್ಣನೆ ಮಾಡುವಾಗ ಬಿಡದೆ ಒಂದರ ವರ್ಣನೆ ಮಾಡುತ್ತಾನೆ. ಇದು ಬಹಳ ಕುತೂಹಲಕಾರಿ. ಲಕ್ಷ್ಮೀಶನಲ್ಲಿ ಇದು ಇನ್ನೂ ವಿಶೇಷ. ಭಾಷೆಯಲ್ಲಿ ಇರುವಂತಹ 'ಕೊಡೆ' ಎನ್ನುವಂತಹ ಪದವನ್ನು ದೇಶದ ಜನರು ಛತ್ರಿ ಅನ್ನೋ ಅರ್ಥದಲ್ಲಿ ಬಳಸ್ತಾರೆಯೇ ಹೊರತು 'ಕೊಡುವುದಿಲ್ಲ' ಎಂಬ ಅರ್ಥದಲ್ಲಿ ಬಳಸುವುದಿಲ್ಲ. 'ಕೊಡುವುದಿಲ್ಲ' ಎನ್ನುವಂಥ ಅರ್ಥ ಕನ್ನಡಕ್ಕಿದೆ. ಆ ದೇಶದ ಜನರು 'ಕೊಡೆ' ಎನ್ನುವ ಪದವನ್ನು 'ಛತ್ರಿ' ಎಂಬ ಅರ್ಥದಲ್ಲಿ ಬಳಸುತ್ತಾರೆ. ಅಂದರೆ ಕ್ರಿಯಾಪದಗಳ ಸಾಧ್ಯತೆಗಳನ್ನು ನಿರಾಕರಿಸಿ ಅದನ್ನು ಕೇವಲ ನಾಮಪದ ರೂಪದಲ್ಲಿ ಬಳಸುತ್ತಾರೆ. ಈ ಎಲ್ಲಾ ಚಿಂತನ ಕ್ರಮದಲ್ಲಿ ಬಹುತ್ವವನ್ನು ಹೇಳ್ತಾ ಇರ್ತಾರೆ. ಆದರೆ ಅದರ ಜೊತೆಲೇನೆ ಯಾವುದೋ ಒಂದನ್ನು ಆಯ್ಕೆ ಮಾಡ್ತಾ ಇರ್ತಾರೆ. ಇದು ಪ್ರಾರಂಭವಾಗಿದ್ದು 'ಕವಿರಾಜಮಾರ್ಗ'ದ ಈ ಚಿಂತನಕ್ರಮದಿಂದ ಅಂತ ನಾನು ಅಂದುಕೊಂಡಿದೀನಿ. ಇದನ್ನು ನಾನು ಒಂದು ವಸ್ತುಸ್ಥಿತಿಯನ್ನಾಗಿ ಹೇಳುತ್ತಿದ್ದೇನೆ. ಅವರು ಹಾಗೆ ಬಹುತ್ವ ಇದೆ ಅಂತ ಹೇಳಿದ್ದೇ ಒಂದು ಮಹತ್ವದ ಸಂಗತಿ ಅಂತ ನಾನು ಅಂದುಕೊಂಡಿದಿನಿ.

೩

ದೇಸೀ ಚಹರೆಗಳ ಕ್ರಿಯಾಶೀಲತೆ

ಬಸವರಾಜ ಕಲ್ಗುಡಿ

ಭಿನ್ನ ಓದಿನ ಅವಶ್ಯಕತೆ

ಕಳೆದ ಮೂರು ವರ್ಷಗಳಲ್ಲಿ 'ಕವಿರಾಜಮಾರ್ಗ' ಕೃತಿ ಕುರಿತ ಚರ್ಚೆ ಅನೇಕ ಸ್ವರೂಪದ್ದಾಗಿದೆ. ೨೦ನೇ ಶತಮಾನದ ಪ್ರಾರಂಭದಲ್ಲಿ ಈ ಕವಿಯ ಕರ್ತೃ ಮತ್ತು ಕಾಲ ಕುರಿತ ಚರ್ಚೆ ಮುಖ್ಯವಾ ತ್ತು. ಕರ್ನಾಟಕ ಪ್ರಾಂತ್ಯ ಕುರಿತ ಆಲೋಚನೆ, ಈ ಶತಮಾನದ ಪ್ರಾರಂಭದ ಆದ ಇನ್ನೊಂದು ಘಟನೆ. ಈ ಸಂದರ್ಭದಲ್ಲಿ 'ಕವಿರಾಜಮಾರ್ಗ'ದ ನೆನಪು ನಾಡು, ನುಡಿಯ ಹಿನ್ನೆಲೆಯಲ್ಲಿ ಮತ್ತೊಮ್ಮೆ ತೀವ್ರವಾಗಿ ಕಾಡಿದೆ. ಶಂಬಾ ಜೋಶಿಯಂಥ ಚಿಂತಕರು, ಕರ್ನಾಟಕದ ನಾಡು ನುಡಿಯ ಮೇರೆಗಳ ಬಗ್ಗೆ ಚಿಂತನೆ ಮಾಡುವ ತಮ್ಮ ಗ್ರಂಥಗಳಲ್ಲಿ, 'ಕವಿರಾಜಮಾರ್ಗ'ವನ್ನು ಒಂದು ಪ್ರಮುಖ ಮೂಲವನ್ನಾಗಿ ನೋಡಿದ್ದಾರೆ. ನಂತರದ ಅನೇಕ ಸಂಶೋಧನ ಕೃತಿಗಳು ಹಾಗೂ ಬರಹಗಳು, ಈ ಹಿಂದಿನವೆಲ್ಲವನ್ನೂ ಒಗ್ಗೂಡಿಸಿ ನೋಡಲು ಪ್ರಯತ್ನಿಸಿವೆ. ಈಗಲೂ ಭಾಷೆ ಮತ್ತು ಗಡಿಯ ಪ್ರಶ್ನೆ ಬಂದಾಗಲೆಲ್ಲ, ಕವಿರಾಜಮಾರ್ಗಕಾರನು ಗುರುತಿಸುವ ಕನ್ನಡದ ಗಡಿಗಳ ಹಾಗೂ ಭಾಷಿಕರ ಬಗೆಗಿನ ಉಲ್ಲೇಖವು ಒಂದು ಭಾವನಾತ್ಮಕ ನೆನಪಾಗಿ ಅನೇಕರಿಗೆ ಕಾಡುತ್ತದೆ. ಆದರೆ ಕನ್ನಡದ ಈಗಿನ ಸಂ ಧ ಪರಿಸ್ಥಿತಿಯ ನಿವಾರಣೆಯ ಸೂಚನೆಗಳ ಅನ್ವೇಷಣೆಯನ್ನು ಈ ಚಿಂತಕರು ಮಾಡಿದ ಹಾಗಿಲ್ಲ. ಆಧುನಿಕ ಯುಗದ ಕನ್ನಡದ ಚರಿತ್ರೆಯ ಮುಖ್ಯ ಲಕ್ಷಣವೆಂದರೆ, ತನ್ನ ಅಸ್ತಿತ್ವಕ್ಕಾಗಿ ಅದು ದ ಹಾಗೂ ನಡೆಸುತ್ತಿರುವ ಪ್ರಯತ್ನವೆಂದೇ ಹೇಳಬಹುದು. ವಸಾಹತುಶಾಹಿ ಪ್ರಭಾವದ ಪರಿಣಾಮ, ಇಂಗ್ಲಿಷ್ ನಮ್ಮ ನಡುವೆ ಯಜಮಾನ ಭಾಷೆಯಾಗಿ ರೂಪುಗೊಳ್ಳುತ್ತಿರುವುದು, ಆಧುನಿಕ ಬದುಕನ್ನು ರೂಪಿಸುತ್ತಿರುವ ಜಾಗತಿಕ ಮಾರುಕಟ್ಟೆ - ಇವು ಕನ್ನಡದ ಉಳಿಯುವಿಕೆಗೆ ಒಂದು ಸಮಸ್ಯೆಯಾಗಿ ರೂಪುಗೊಳ್ಳುತ್ತಿರುವ ಸಂದರ್ಭದಲ್ಲಿ, ಇಂಥ ಪರಿಸ್ಥಿತಿಯ ನಿವಾರಣೆಯನ್ನು ಅಥವಾ ದಾಟುವಿಕೆಯನ್ನು ಆಗುಮಾಡುವ ಒಂದು ಮಾದರಿಯನ್ನು ವಿವರಿಸಲಾಗುತ್ತದೆ. ಅದು ಅನುಸಂಧಾನದ ಮಾದರಿ. ಯಾವುದು ವಿಶ್ವಸ್ಥಗುಣವುಳ್ಳದ್ದೋ

(Cosmpolitan) ಅಂಥದ್ದರ ಜೊತೆಗೆ ದೇಶಿಯ ಲಕ್ಷಣವು ಅನುಸಂಧಾನ ಮಾಡಿಕೊಳ್ಳ ಬೇಕಾದ ಬಗೆ ಇದು; ಯಾವುದು ಪ್ರಭುತ್ವಶಕ್ತಿಯೋ ಅದರ ಜೊತೆಗೆ ದೇಶ್ಯವು ತನ್ನನ್ನು ಗುರುತಿಸಿಕೊಳ್ಳುವ ಬಗೆ ಇದು. ಈ ಮಾದರಿಯ ಸ್ವರೂಪವನ್ನು, 'ಕವಿರಾಜಮಾರ್ಗ'ವು ಗುರುತಿಸುತ್ತಿರುವ ಕನ್ನಡ ಸಂಸ್ಕೃತಿಯ ಲಕ್ಷಣವೆಂದೂ ಕೆಲವು ಅಧ್ಯಯನಗಳು ವಿವರಿಸುತ್ತಿವೆ. ಒಂದು ಪ್ರಾದೇಶಿಕ ಸಮುದಾಯದ ಭಾಷೆ ಮತ್ತು ಸಂಸ್ಕೃತಿಯ ಅಸ್ತಿತ್ವದ ಗುಣಲಕ್ಷಣವನ್ನು, ಆಧುನಿಕತೆಯ ಈ ದ್ವಂದ್ವ(Dual) ಮಾದರಿಯಿಂದ ಅರಿಯಬಹುದು ಎನ್ನುವುದರ ಬಗ್ಗೆ ಗಾಢ ಸಂದೇಹಗಳು ನನಗಿವೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆ, ಸಂಸ್ಕೃತಿಯ ಸ್ವರೂಪ ಕುರಿತಂತೆ 'ಕವಿರಾಜಮಾರ್ಗ'ದ ಓದು ಭಿನ್ನವಾಗಬೇಕೆಂದು ನನಗೆ ಅನ್ನಿಸುತ್ತಿದೆ.

ಪ್ರಾದೇಶಿಕ ಭಾಷಾಸಮುದಾಯ ಉದ್ಭವದ ಚಹರೆಗಳು

'ಕವಿರಾಜಮಾರ್ಗ'ವನ್ನು ಹಿನ್ನೆಲೆಯಾಗಿಟ್ಟುಕೊಂಡು ಈ ವಿವರಗಳನ್ನು ಗ್ರಹಿಸಲು ಇಲ್ಲಿ ಪ್ರಯತ್ನಪಟ್ಟಿದ್ದೇನೆ. ಈ ಸಾಮುದಾಯಕ ಚಹರೆಯನ್ನು 'ಕವಿರಾಜಮಾರ್ಗ'ವು ನಾಡು, ನುಡಿ ಎನ್ನುವ ಎರಡು ಮುಖ್ಯ ಅಂಗಗಳಾಗಿಯೂ, ಸಾಹಿತ್ಯ ಸ್ವರೂಪ(ಲಕ್ಷಣ) ಎನ್ನುವ ಅಂಶಗಳಲ್ಲಿ ಆನುಷಂಗಿಕವಾಗಿಯೂ ಸೂಚಿಸುತ್ತಿದೆ.

ನಾಡು-ನುಡಿ : ಕನ್ನಡ ಭಾಷಾ ಸಮುದಾಯವು, ಪ್ರಾದೇಶಿಕ ನೆಲೆಯ ಒಂದು ಮುಖ್ಯ ಸಂಘಟನಾ ಸ್ವರೂಪವಾಗಿ ರೂಪುಗೊಂಡಿರುವ ಸ್ವರೂಪವನ್ನು ಕವಿರಾಜಮಾರ್ಗಕಾರ ಗ್ರಹಿಸುತ್ತಿದ್ದಾನೆ. ಮೊದಲನೆಯ ಭಾಗದಲ್ಲಿ ಕನ್ನಡದ ಭೌಗೋಳಿಕ ವಿವರ ಹಾಗೂ ಭಾಷಾ ಸ್ವರೂಪ ಕುರಿತ ಮಾತುಗಳು, ಪ್ರಾದೇಶಿಕ ಸಂಸ್ಕೃತಿಯ ಉದ್ಭವದ ಸೂಚನೆಯನ್ನೇ ಸೂಚ್ಯವಾಗಿ ಕೊಡುತ್ತಿವೆ. ಸಂಸ್ಕೃತ ಪ್ರಾಕೃತ ಭಾಷೆಗಳಿಗೂ ಬ್ರಾಹ್ಮೀಲಿಪಿಗೂ ಇದ್ದ ಸಂಬಂಧವು ಸುಮಾರು ೫ನೇ ಶತಮಾನದದವರೆಗೂ ಅವಿಭಾಜ್ಯವಾದದ್ದು ಹಾಗೂ ಪ್ರಾದೇಶಿಕ ನೆಲೆಯನ್ನು ಮೀರಿರುವಂಥದ್ದು. ಕ್ರಿ.ಶ.೭ನೇ ಶತಮಾನದ ಹೊತ್ತಿಗೆ ಪ್ರಾದೇಶಿಕ ಭಾಷೆಗಳು, ಬ್ರಾಹ್ಮೀಲಿಪಿಯನ್ನು ಪ್ರಾದೇಶಿಕ ಭಾಷಾ ಲಿಪಿಯನ್ನಾಗಿ ಪರಿವರ್ತಿಸಿಕೊಂಡವು. ಇದು ಬಹಳ ಮುಖ್ಯ ಘಟನೆ. ಭೌಗೋಳಿಕ, ಭಾಷೆ, ಭಾಷಾ-ಲಿಪಿ, ರಾಜಾಧಿಪತ್ಯ - ಈ ಎಲ್ಲ ನೆಲೆಗಳಲ್ಲಿಯೂ ಪ್ರಾದೇಶಿಕತೆಯ ಅರಿವು ಮತ್ತು ಬೆಳವಣಿಗೆ, ಒಂದು ವಾಸ್ತವವಾಗಿ ಶಕ್ತಿಯಾಗಿ ಈಗ ರೂಪುಗೊಂಡಿದೆ. ಭಾಷೆಯನ್ನು ಆಧರಿಸಿದ ಭೌಗೋಳಿಕ ಗಡಿಯ ಸೂಚನೆಯು, ಭಾಷಾಸಮುದಾಯದ ಒಂದು ಸಾಂಸ್ಕೃತಿಕ ಅವಕಾಶವನ್ನು (space) ಸೂಚಿಸುತ್ತದೆ ಎನ್ನುವ ದೃಷ್ಟಿಯಿಂದ ಬಹಳ ಮುಖ್ಯವಾದದ್ದು. ಹೀಗೆ ತನ್ನದೊಂದು ಭಾಷಾಸಂವೇದನೆಯ ಅವಕಾಶ(space)ದಲ್ಲಿ, ಪ್ರಾದೇಶಿಕ ಸಂಸ್ಕೃತಿ ತನ್ನನ್ನು ಗಟ್ಟಿಗೊಳಿಸಿಕೊಳ್ಳಲು ಮಾಡುವ ಒಂದು ಬಹುಮುಖ್ಯ ಕ್ರಿಯೆ ಎಂದರೆ, ಈ ಭಾಷೆ ಸಂವೇದನೆಯ ಚಹರೆಗಳು ಹೆಚ್ಚು ಹೆಚ್ಚು ವರ್ತಮಾನದಲ್ಲಿ ಕ್ರಿಯಾಶೀಲವಾಗುವಂತೆ, ಸೂಕ್ಷ್ಮವಾಗುವಂತೆ ಮಾಡುವುದು; ಅದೇ ಸಂದರ್ಭದಲ್ಲಿ

ಜನಸಮುದಾಯ ಬಳಸುವ ಭಾಷೆಯ ವೈವಿಧ್ಯತೆಯ ನೆಲೆಗಳನ್ನೂ ಬಹುಮುಖ್ಯವೆಂದು ಗ್ರಹಿಸುವುದು.

ಪ್ರಾದೇಶಿಕ ಭಾಷಾ ಸಂವೇದನೆಯ ಚಹರೆಗಳನ್ನು ಸೂಕ್ಷ್ಮವಾಗುವಂತೆ ಮಾಡುವ ಕೆಲಸವು ಕನ್ನಡದಲ್ಲಿ ಆಗ ಬೇರೆ ಬೇರೆ ಮಟ್ಟಗಳಲ್ಲಿ ನಡೆದಿದೆ ಎನ್ನುವುದನ್ನು 'ಕವಿರಾಜಮಾರ್ಗ' ಸೂಕ್ಷ್ಮವಾಗಿ ತೋರಿಸಿಕೊಡುತ್ತದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ವಿಚಾರಮಾಡಬಹುದು.

ಒಂದನೆಯದು - ಸಂಸ್ಕೃತದ ಪ್ರಾದೇಶಿಕವಲ್ಲದ ಚಹರೆಯನ್ನು ಒಡೆದು, ತನ್ನ ಸ್ಥಿತಿಗೆ ಅದನ್ನು ಬಗ್ಗಿಸಿಕೊಳ್ಳುವುದು; ಇದು ಕನ್ನಡದ ಈಡಿಯಂ ಆಗಿ ಬರುವ ಬಗೆ, ಸಮಸಂಸ್ಕೃತ ಮತ್ತು ತದ್ಭವದ ಬಳಕೆಯ ಸ್ವರೂಪವು, ಕನ್ನಡದ ಜಾಯಮಾನಕ್ಕೆ ಸೇರುವ ಬಗೆಯೊಂದು ಬಹಳ ವಿಶಿಷ್ಟವಾಗಿರುವಂಥದೇ ಆಗಿದೆ. ಇದು ಕೇವಲ ಪರಿಗ್ರಹಿಕೆ ಮತ್ತು ಬಳಕೆಯ ಮಟ್ಟದಲ್ಲಿ ಮಾತ್ರವಲ್ಲ, ಸಂಸ್ಕೃತ ಭಾಷಾವಲಯವು ಸೃಷ್ಟಿಸಿದ ಲೋಕಗ್ರಹಿಕೆಯ ವಿನ್ಯಾಸದಿಂದಲೂ ಬಹಳ ಪ್ರಜ್ಞಾಪೂರ್ವಕವಾದ ವ್ಯತ್ಯಸ್ಥ ಸೃಷ್ಟಿ. ಇದನ್ನು ಕನ್ನಡವು ಮಾಡಿತೆಂದೇ ಹೇಳಬೇಕು. ಕನ್ನಡದೊಳಗಿನ ಬೇರೆ ಬೇರೆ ಪಾತಳಿಯ ಸಾಮಾಜಿಕ ವರ್ಗಗಳ ಸಂವೇದನೆಯೊಳಗೆ ಸಮಸಂಸ್ಕೃತ ಮತ್ತು ತದ್ಭವಗಳು ಸೋಕಿಕೊಂಡಿರುವ ಬಗೆಗಳು, ಒಂದು ಹೊಸ ಬಗೆಯ ಸಾಂಸ್ಕೃತಿಕ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟವು.

ಎರಡನೆಯದು - 'ದೇಸಿ'ಯ ತತ್ವವನ್ನು ಕವಿರಾಜಮಾರ್ಗಕಾರನು ವಿವರಿಸುವಾಗ ದೇಸಿಯ ಅನೇಕ ಬಗೆಗಳನ್ನು ದೋಷವೆಂದು ಹೇಳುತ್ತಿಲ್ಲವೆನ್ನುವುದು ಗಮನಿಸಬೇಕಾದ ಅಂಶ(೧-೪೬). 'ದೇಶಿ' ಎಂದರೆ ಇಲ್ಲಿ ವರ್ತಮಾನದಲ್ಲಿ ಬಳಕೆಯಾಗುತ್ತಿರುವ ಕನ್ನಡದ ಭಿನ್ನ ಭಿನ್ನ ಬಗೆಗಳು; ಈ ಬಗೆಗಳು ತಮ್ಮ ಪ್ರಸ್ತುತತೆಯಿಂದಲೇ ವಿಶಿಷ್ಟ ಮತ್ತು ಮಹತ್ವದವು ಎಂಬ ಸೂಚನೆ 'ಕವಿರಾಜಮಾರ್ಗ'ದಲ್ಲಿದೆ. ಹಾಗಾದರೆ 'ದೋಷ' ಯಾವುದು ಎಂದು ವಿವರಿಸುವಾಗ 'ವರ್ತಮಾನದಿಂದ ಅಪ್ರಸ್ತುತವಾದ, ಭೂತದಲ್ಲಿ ಬಳಕೆಯಾಗಿದ್ದ 'ಹಳಗನ್ನಡ'ವನ್ನು ಕೆಡಿಸಿ ಬಳಸುವುದು' ಎಂದು ಮಾರ್ಗಕಾರನು ಹೇಳುತ್ತಾನೆ(೧-೪೮). ಇದು ದೇಸಿಯಲ್ಲವೆಂದು ಇವನ ಅಭಿಪ್ರಾಯ. ಇದು ಕ್ರಮವಲ್ಲ ಎಂದು ಇದರ ಅರ್ಥ. ಈ ದೋಷಕ್ಕೊಂದು ಉಪಮೆಯನ್ನು ಆತ ಕೊಡುತ್ತಾನೆ. ಈ ರೀತಿಯ ಬಳಕೆ 'ವಯಸ್ಸು ಮೀರಿದ ಹೆಣ್ಣಿನ ಜೊತೆಗೆ ರತಿಕ್ರೀಡೆಯಾಡುವ ರಸಿಕತೆಯ ಹಾಗೆ' ಎಂದು ಹೇಳಿ, ಈ ಪ್ರಯೋಗಗಳು 'ದೇಸಿಗೆ ವಿರಸವೆನಿಸುವವು' ಎನ್ನುತ್ತಾನೆ. ಇಲ್ಲಿ 'ದೇಸಿ'ಗೆ ಭಿನ್ನ ಅರ್ಥಗಳ ಅನ್ವಯ ಮಾಡಬಹುದು. 'ಪ್ರಸ್ತುತ'ವೆನ್ನುವ, 'ಕ್ರಮ'ವೆನ್ನುವ, ಚೆಲುವು ಎನ್ನುವ -ವಿಭಿನ್ನಾರ್ಥಗಳನ್ನು ಇದು ಒಳಗೊಳ್ಳುತ್ತದೆ.

ಕನ್ನಡ ಕಾವ್ಯ ಭಾಷೆಯ ಪ್ರಸ್ತುತತೆಯನ್ನು ಅದರ ವರ್ತಮಾನದ ಗತಿಶೀಲತೆಯ ನೆಲೆಯಲ್ಲಿ ಕವಿರಾಜಮಾರ್ಗಕಾರ ಗುರುತಿಸುತ್ತಿದ್ದಾನೆ ಎನ್ನುವುದನ್ನು ಗಮನಿಸಬೇಕು. ಕನ್ನಡ ಕಾವ್ಯ ರಚನೆಯ ಮುಖ್ಯಗುಣವಾದ ಆದಿಪ್ರಾಸ ಬಳಕೆ, ಯತಿಯನ್ನು

ಬಳಸದಿರುವುದು-ಇವು ಮುಖ್ಯವೆಂದು ಇವನು ಗುರುತಿಸುತ್ತಿದ್ದಾನೆ. ಜೊತೆಗೆ ಕನ್ನಡಕ್ಕೆ ವಿಶಿಷ್ಟವಾಗಿರುವ ಚತ್ತಾಣ ಬೆದಂಡೆಗಳನ್ನು ಕಾರ್ಯರಚನೆಯಲ್ಲಿ ಬಳಕೆಯ ಮುಖ್ಯ ವಿಧಾನವೆಂದೂ ಇವನು ಗುರುತಿಸುತ್ತಿದ್ದಾನೆ.

ಪ್ರಾದೇಶಿಕ ಸಮುದಾಯದ ಸಂವೇದನೆ ಮತ್ತು ರಾಜಾಧಿಪತ್ಯಕ್ಕಿರುವ ಸಂಬಂಧವನ್ನೂ ಈ ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಗುರಿಮಾಡಬಹುದು. 'ರಾಜಾಧಿಪತ್ಯದ ಆಶ್ರಯಕ್ಕೆ ಬಂದ ಭಾಷಾ ಸಂಸ್ಕೃತಿ' ಎಂದು ಈ ಸಂಬಂಧದ ವಿಶ್ಲೇಷಣೆ ಮಾಡಲು ಸಾಧ್ಯವಿಲ್ಲ. ಏಕೆಂದರೆ ಭಾಷಾಗೆ ಒಂದು ಶಕ್ತಿಯ (power) ಸ್ವರೂಪ ಬಂದಿರುವುದು, ರಾಜತ್ವದ ಜೊತೆಗಿನ ಸಂಬಂಧದಿಂದ ಅಲ್ಲ. ಸಾಮುದಾಯಿಕ ದೇಸೀ ಚಹರೆಯೇ ಅದಕ್ಕೆ ಒಂದು ಶಕ್ತಿಯನ್ನು ಕೊಟ್ಟಿದೆ. ಹೀಗಾಗಿ ರಾಜ್ಯಾಧಿಪತ್ಯಕ್ಕೆ ಅಂಥ ಚಹರೆಯ ಶಕ್ತಿ ಸಾಧ್ಯತೆಗಳನ್ನು ಒಪ್ಪುವ, ಅದರೊಡನೆ ತನ್ನನ್ನು ಗುರುತಿಸಿಕೊಳ್ಳುವ ಅನಿವಾರ್ಯತೆ ಉಂಟಾಗುತ್ತದೆ. ಹೀಗಾಗಿ 'ಕವಿರಾಜ ಮಾರ್ಗ'ದಲ್ಲಿ 'ಶ್ರೀ ನೃಪತುಂಗದೇವಾನುಮತಮಪ್ಪ' ಎಂದು ಹೇಳಲಾಗಿದ್ದರೂ, ರಾಜನ ಅಭಿಮತ ಪಡೆದ ಭಾಷಾ ರೀತಿ ಎಂದು (ಈ ಭಾಷಾ ನೀತಿಯನ್ನು) ನಿರ್ಣಯಿಸಬೇಕಾದುದಿಲ್ಲ.ಇದುವರೆಗಿನ ನನ್ನ ಚರ್ಚೆಯ ಹಿನ್ನೆಲೆಯಲ್ಲಿ 'ಕವಿರಾಜಮಾರ್ಗ'ವೆನ್ನುವುದನ್ನು (ಇದನ್ನು ಕವಿಗಳ ರಾಜಮಾರ್ಗವೆಂದಾದರೂ ಅರ್ಥೈಸಬಹುದು ಅಥವಾ ಕವಿಗಳಿಗೂ ರಾಜರಿಗೂ ಅನ್ವಯಿಸುವ ಮಾರ್ಗವೆಂದಾದರೂ ಕರೆಯಬಹುದು) ಪ್ರಾದೇಶಿಕ ಭಾಷಾ ಚಹರೆಯನ್ನುಳ್ಳ ದೇಸಿಯೇ ಎಂದು ನಾನು ವಿವರಿಸಲು ಇಷ್ಟಪಡುತ್ತೇನೆ. ಇಂಥದೊಂದು ಚಹರೆಯ ಸ್ವರೂಪವನ್ನು ಒಡೆಯಲು ಯಾವುದಕ್ಕಾದರೂ ಸಾಧ್ಯವಿದ್ದಿದ್ದರೆ, ಅದು ಮತ ಧರ್ಮಸಂಘರ್ಷದಲ್ಲಿಯೇ ಎನ್ನುವುದು ಬಹುಶಃ ಮಾರ್ಗಕಾರನಿಗೂ ಗೊತ್ತಿರಬೇಕು. 'ಪರವಿಚಾರವನ್ನೂ ಧರ್ಮವನ್ನೂ ಸೈರಿಸುವುದಾದರೆ ಅದೇ ಚಿನ್ನ' ಎನ್ನುವ ಮಾರ್ಗಕಾರನ ಉದಾಹರಣೆ, ಇಂಥದೊಂದು ಸೂಕ್ಷ್ಮವನ್ನು ಸೂಚಿಸುತ್ತಿದ್ದಿರಬಹುದು. ಕನ್ನಡದ ಮುಂದಿನ ಚರಿತ್ರೆಯಲ್ಲಿ ಇಂಥದೊಂದು ಬೆಳವಣಿಗೆಯಾದದ್ದು ನಮಗೆ ಗೊತ್ತಿದೆ. ಕನ್ನಡ ಸಂವೇದನೆ, ಭಾಷಾ ಸಂವೇದನೆಯನ್ನು ಮೀರಿ ಬದುಕಿನ ಸಾಮಾಜಿಕ ಬೇರುಗಳನ್ನು ಅನ್ವೇಷಿಸಿತು ಎನ್ನುವುದನ್ನು ಇಲ್ಲಿ ವಿವರಿಸುವ ಅಗತ್ಯವಿಲ್ಲ.

ಕನ್ನಡ ಭಾಷೆಯ ಈಗಿನ ಸ್ಥಿತಿಗತಿಗಳಿಗೂ, 'ಕವಿರಾಜಮಾರ್ಗ' ಕಾಲದ ಭಾಷೆಯ ಸ್ಥಿತಿಗೂ 'ಒಂದೇ ಥರದ್ದೆನ್ನುವ ರೀತಿ'ಯಲ್ಲಿ ತುಲನೆ ಮಾಡುವ ಮಾತುಗಳಿವೆ; ಕನ್ನಡ ಭಾಷೆಯ ಬಳಕೆ ಇಳಿಮುಖವಾಗುತ್ತಿರುವ ಹಾಗೂ ಇಂಗ್ಲಿಷಿನ ಯಜಮಾನಿಕೆಯ ಎದುರು ದುರ್ಬಲವಾಗುತ್ತಿರುವ ಈಗಿನ ಸ್ಥಿತಿಗೆ ಹೋಲಿಸಿದರೆ, 'ಕವಿರಾಜಮಾರ್ಗ' ಕಾಲದ್ದು ಸಂಪೂರ್ಣ ವಿರುದ್ಧ ಸ್ಥಿತಿ. ಕನ್ನಡದ ಈಗಿನ ಸ್ಥಿತಿಯು ಗತಿಯನ್ನು ಬದಲಾಯಿಸಲು ಇಂಗ್ಲಿಷಿನೊಡನೆ ಅನುಸಂಧಾನ ಮಾಡಿಕೊಳ್ಳಬೇಕೆಂಬ ವಾದವೊಂದಿದೆ. ಹಿಂದೆ ಸಂಸ್ಕೃತದೊಡನೆ ಈ ಅನುಸಂಧಾನ ಮಾಡಿದ್ದರಿಂದ ಅದು ಬೆಳೆಯಿತು ಎನ್ನುವ ತಪ್ಪು

ಗ್ರಹಿಕೆಯನ್ನು ಸಾದೃಶ್ಯವಾಗಿ ನಮ್ಮ ಚಿಂತನೆಯಲ್ಲಿ ಬಲವಾಗಿ ಒಪ್ಪಲಾಗಿದೆ. ಪ್ರಾದೇಶಿಕ ವೈಲಕ್ಷಣವು ಕೀಳು(Inferiar) ಎನ್ನುವ ಆಧುನಿಕ ಗ್ರಹಿಕೆಯಿಂದ ಬಂದ ಚಿಂತನೆಯ ಇನ್ನೊಂದು ಗ್ರಹಿಕೆ. ಆದ್ದರಿಂದ ಯಾವುದು ಚಲನಶೀಲವೋ, ಅಂಥ ಇಂಗ್ಲಿಷಿನೊಡನೆ ಅನುಸಂಧಾನ ಅವಶ್ಯವೆನ್ನುವ ಮಾತನ್ನು ಈ ಚಿಂತನೆ ಹೇಳುತ್ತದೆ.

ಈ ಶತಮಾನದ ಪ್ರಾರಂಭದಲ್ಲಿ ನಮ್ಮ ಚಿಂತಕರ ಆಲೋಚನೆಯ ಭಾಗವೂ ಇಂಥದೇ ಆಗಿತ್ತು. ನವೋದಯದ ಚಿಂತಕರಲ್ಲಿ ಇಂಗ್ಲಿಷಿನಿಂದ ಒದಗುವ ಆಧುನಿಕ ಸಾಂಸ್ಕೃತಿಕ ನೆಲೆಗಳು ಬಹು ಮುಖ್ಯವೆನ್ನಿಸಿದ್ದವು. ಕನ್ನಡದ ಭಾಷೆಯಲ್ಲಿ ಈ ಚಿಂತನೆಯ ಹಲವು ನೆಲೆಗಳು ಇದರಲ್ಲಿ ಪ್ರಕಟಗೊಳ್ಳುತ್ತಿದ್ದು. ಕನ್ನಡ ಭಾಷೆಯು ಬಳಕೆಯ ಭಾಷೆಯೂ ಅರಿವಿನ ಭಾಷೆಯೂ ಆಗಿ ಬೆಳೆಯಬೇಕಾದುದ್ದರ ಬಗ್ಗೆ ಅವರು ಖಚಿತವಾಗಿದ್ದರು. ಇಂಗ್ಲಿಷ್, ಈ ಹಿನ್ನೆಲೆಯಲ್ಲಿ, ಅರಿವಿಗೆ ಪೂರಕವಾದ, ಅದರ ನೆರಳಾಗಿರುವ, ಮರೆಯಲ್ಲಿರುವ, ಒಳಗಿನ ಭಾಷೆಯಾಗಬೇಕೆನ್ನುವುದೂ ಆ ಚಿಂತನೆಯ ಮುಖ್ಯ ಅಂಶವಾಗಿತ್ತು. ಆದರೆ ನಮ್ಮ ಶಿಕ್ಷಣ ನೀತಿ ಮತ್ತು ಆಡಳಿತದ ಧೋರಣೆ, ಇಂಗ್ಲಿಷ್ ಭಾಷೆಯನ್ನು ಪ್ರಧಾನವೆಂದೂ, ಪ್ರಾದೇಶಿಕ ಭಾಷೆಗಳನ್ನು ಆನುಷಂಗಿಕ ಅಥವಾ ಅಪ್ರಧಾನವೆಂದೂ ತಿಳಿದವು. ಅದರ ಪರಿಣಾಮವಾಗಿ ಇಂಗ್ಲಿಷ್ ಭಾಷೆಯು, ಶಿಕ್ಷಣದ ಆಡಳಿತದ, ಇವುಗಳ ಫಲಿತವಾಗಿ ಬಳಕೆಯ ಭಾಷೆಯಾಗಿ ರೂಪುಗೊಳ್ಳುತ್ತಿದೆ. ಕನ್ನಡವು ಬಳಕೆಯ ನೆಲೆಯಲ್ಲಿಯೂ ಜ್ಞಾನವನ್ನು ಪಡೆಯುವ ವಾಹಕವಾಗಿಯೂ ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿದೆ.

ಭಾಷೆ ಬಲಗೊಳ್ಳುವುದು ಅನುಸಂಧಾನದಲ್ಲಿ ಎನ್ನುವ ಅಭಿಪ್ರಾಯವು ಅಷ್ಟು ಸರಿಯಲ್ಲವೆಂದೇ ತೋರುತ್ತದೆ. ಬಹುಮುಖ್ಯವಾಗಿ ಭಾಷೆಯ ಉಳಿವಿನ ಪ್ರಶ್ನೆಯು, ಅದು ಎಷ್ಟು ಪ್ರಮಾಣದಲ್ಲಿ ಸಾಮಾಜಿಕ ಬಳಕೆಗೆ ತನ್ನನ್ನು ತೊಡಗಿಸಿಕೊಳ್ಳುತ್ತದೆ ಎನ್ನುವುದರಲ್ಲಿ ಇದೆ. ಸಾಮಾಜಿಕ ಬಳಕೆಯಲ್ಲೇ ಅದು ಉಪಯುಕ್ತತೆಯನ್ನೂ ಸೂಕ್ಷ್ಮತೆಯನ್ನೂ ಅರಿವಿನ ವಿಸ್ತಾರಕ್ಕೆ ಸಾಧ್ಯವಾಗುವ ಶಕ್ತಿಯನ್ನೂ ಗಳಿಸಿಕೊಳ್ಳುತ್ತದೆ. ಈಗ ಕನ್ನಡ ಬಲಗೊಳ್ಳಬೇಕಾದರೆ ಈ ಅಗತ್ಯವನ್ನು ತೀವ್ರವಾಗಿ ಹೊಂದುವುದು ಅನಿವಾರ್ಯವಾಗಿದೆ. 'ಕವಿರಾಜಮಾರ್ಗ'ದಿಂದ ನಾವು ಅರಿಯಬಹುದಾದ ಪ್ರಮುಖವಾದ ಚಿಂತನೆ ಇದೇ ಎಂದು ತೋರುತ್ತದೆ. 'ಕವಿರಾಜಮಾರ್ಗ'ವನ್ನು ಆಲಂಕಾರಿಕ ಕೃತಿ (work of poetics) ಎಂದು ಕರೆಯುತ್ತಾರಾದರೂ, ಅದರ ಉದ್ದೇಶ ಪ್ರಧಾನವಾಗಿ ಅದಲ್ಲ. ಅದು ಪ್ರಾದೇಶಿಕ ಭಾಷೆಯೊಂದರ ದೇಶ್ಯ ಗುಣವನ್ನು ಅರಿಯುವ ಕೆಲಸ ಮಾಡುತ್ತದೆ. ಪ್ರಾದೇಶಿಕ ಭಾಷೆಯೊಂದು ತನ್ನ ಸೂಕ್ಷ್ಮತೆಗಳನ್ನೂ ಪ್ರಸ್ತುತತೆಯನ್ನೂ ಹೊಂದುವ ಬಗೆಗಳನ್ನು, ಪ್ರಾದೇಶಿಕ ವಾತಾವರಣಕ್ಕೆ ಹೊಂದಿಸಿಕೊಂಡೇ ಪ್ರಧಾನವಾಗಿ ಪಡೆಯಬೇಕಾಗಿದೆ ಎನ್ನುವ ಆಲೋಚನೆಯನ್ನೂ, ಸೂಕ್ಷ್ಮವಾಗಿ ಬಿತ್ತಲು ಇದು ಯತ್ನಿಸುತ್ತದೆ ಎಂದೂ ಹೇಳಬಹುದು.

ಕನ್ನಡದ ಪ್ರಸ್ತುತ ಸನ್ನಿವೇಶ ಅದಕ್ಕೆ ಒಂದು ಸವಾಲೂ ಹೌದು. ಅದು ವರ್ತಮಾನ ಬದುಕಿನ ಉಪಯೋಗೀ ನೆಲೆಗಳಲ್ಲಿ ಪ್ರಸ್ತುತವಾಗಲು, ತನ್ನ ತೊಡಗಿಸಿಕೊಳ್ಳುವಿಕೆಯ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ, ಇಂಗ್ಲಿಷನ್ನು ತನ್ನ ಅನುಕೂಲಕ್ಕೆ ಒಗ್ಗಿಸಿಕೊಳ್ಳುವ ಕಾರ್ಯವನ್ನೂ ಮಾಡಬೇಕಿದೆ. ಹೀಗೆ ಒಗ್ಗಿಸುವ ಮೂಲಕ ಇಂಗ್ಲಿಷನ್ನು ಕೇವಲ ಗ್ರಹಿಸುವ ನೆಲೆಯ 'ನಿಷ್ಕ್ರಿಯತೆ'ಗೆ ಇಳಿಸಬೇಕಿದೆ. ಇದು ಬಹಳ ಪ್ರಯತ್ನಪಟ್ಟು ಮಾಡಬೇಕಾದ ಪ್ರಜ್ಞಾಪೂರ್ವಕ ಕ್ರಿಯೆ ಎಂದು ನಾನು ಅಂದುಕೊಳ್ಳುತ್ತೇನೆ.

೪

ಕವಿರಾಜಮಾರ್ಗ : ಏನಿದರ ಹೆಚ್ಚಳ?

ಕೆ.ವಿ.ನಾರಾಯಣ

೧೮೯೮ರಲ್ಲಿ ಕೆ.ಬಿ.ಪಾಠಕರು 'ಕವಿರಾಜಮಾರ್ಗ'ವೆಂಬ ಗ್ರಂಥವನ್ನು ಮುದ್ರಣ ರೂಪದಲ್ಲಿ ಪ್ರಕಟಿಸಿದರು. ಈ ಗ್ರಂಥವನ್ನು ಕ್ರಿ.ಶ.೮೫೦ರಲ್ಲಿ ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ ಆಸ್ಥಾನದ ಕವಿ ಶ್ರೀವಿಜಯನು ರಚಿಸಿದನೆಂದು ವಿದ್ವಾಂಸರು ಈಗ ಬಹುಮಟ್ಟಿಗೆ ಒಪ್ಪಿದ್ದಾರೆ. ರಚನೆಯಾದ ಒಂದು ಸಾವಿರ ವರ್ಷಗಳವರೆಗೆ ಕನ್ನಡದ ಕವಿಗಳು, ಮೀಮಾಂಸಕರು ಈ ಗ್ರಂಥವನ್ನು ಆಗಾಗ ಉಲ್ಲೇಖಿಸುತ್ತಲೇ ಬಂದಿದ್ದಾರೆ. ಕಳೆದ ಒಂದು ಶತಮಾನದಲ್ಲಿ ಈ ಗ್ರಂಥವನ್ನು ನಾಲ್ಕು ಬಾರಿ ಪರಿಷ್ಕರಿಸಿ ಪ್ರಕಟಿಸಲಾಗಿದೆ. ನಾವೀಗ ಈ ಗ್ರಂಥವನ್ನು ಎರಡು ರೀತಿಗಳಿಂದ ಪರಿಶೀಲಿಸುವುದು ಸಾಧ್ಯ. 'ಕವಿರಾಜಮಾರ್ಗ' ಕೃತಿಯನ್ನು ಅದು ರಚನೆಯಾದ ಕಾಲದ ಹಿನ್ನೆಲೆಯನ್ನು ಗಮನದಲ್ಲಿ ಇರಿಸಿಕೊಂಡು ನೋಡುವುದು ಒಂದು ಬಗೆ. ಈ ಕೃತಿಯನ್ನು ಮತ್ತೆ ನಮ್ಮ ಸಾಹಿತ್ಯ ಸಂಸ್ಕೃತಿಯ ಭಾಗವನ್ನಾಗಿ ಮಾಡಿಕೊಂಡು ಕಳೆದ ಒಂದು ಶತಮಾನದ ನಿಟ್ಟಿನಿಂದ ನೋಡುವುದು ಇನ್ನೊಂದು ಬಗೆ.

ಕನ್ನಡ ಅಸ್ಮಿತೆಯ ಕಾಲ

ಕವಿರಾಜಮಾರ್ಗವನ್ನು ಬರೆದ ಕಾಲವನ್ನು ನಾವು ಕನ್ನಡದ ಅಸ್ಮಿತೆಯ ಉದಯದ ಕಾಲ ಎಂದು ಕರೆಯಬೇಕು. ದೇಶೀಯ ಸಂಸ್ಕೃತಿಗಳು ತಮ್ಮ ಚಹರೆಗಳನ್ನು ಕ್ರಿಸ್ತಶಕೆಯ ಮೊದಲ ಸಹಸ್ರಮಾನದ ವಿವಿಧ ಹಂತಗಳಲ್ಲಿ ಕಂಡುಕೊಂಡವು. 'ಕವಿರಾಜಮಾರ್ಗ' ಕೃತಿಯಲ್ಲಿಯೂ ಈ ಅಸ್ಮಿತೆಯನ್ನು ಕಂಡುಕೊಳ್ಳುವ ಪ್ರಕ್ರಿಯೆ ಕಾಣುತ್ತದೆ. ಕನ್ನಡ ನಾಡು, ನುಡಿ ಮತ್ತು ನಾಡವರ ಬಗೆಗೆ ಮಾತು ಬಂದಾಗಲೆಲ್ಲ, ಬಿಡದೆ ಈ ಕೃತಿಯ ಮಾತುಗಳನ್ನು ಉಲ್ಲೇಖಿಸುತ್ತಾರೆ. ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತಾರವಾಗಿತ್ತು, ಕನ್ನಡಿಗರು ಅಕ್ಷರಸ್ಥರಲ್ಲದಿದ್ದರೂ ಕಾವ್ಯಗಳನ್ನು ನೆನಪಿನಿಂದ ಹಾಡುವುದರಲ್ಲಿ ಪ್ರವೀಣರಾಗಿದ್ದರು ಎಂದು ಶ್ರೀವಿಜಯನು ಹೇಳುತ್ತಾನೆ. ಈಗ ಕನ್ನಡದ ಪರವಾದ

ಅಭಿಮಾನವನ್ನು ಬೆಳೆಸಲು ಯೋಚಿಸುವವರೆಲ್ಲರೂ ಈ ಮಾತುಗಳನ್ನು ನೆನಪಿಸುತ್ತಲೇ ಇದ್ದಾರೆ. ಕರ್ನಾಟಕದ ಭೌಗೋಳಿಕ ವ್ಯಾಪ್ತಿ ಕುಗ್ಗಿದೆಯೆಂದೂ, ಕನ್ನಡಿಗರು ಈಗ ಅಭಿಮಾನ ಶೂನ್ಯರಾಗಿದ್ದಾರೆಂದೂ ಹೇಳುತ್ತಾ, 'ಕವಿರಾಜಮಾರ್ಗ'ದ ಕಾಲದ ಕರ್ನಾಟಕದ ಚಿತ್ರವನ್ನು ನಮ್ಮ ಮುಂದಿಡುತ್ತಾರೆ. ಇದು ನಾವು ಗಮನಿಸಬೇಕಾದ ಸಂಗತಿಯೊಂದಿದೆ. 'ಕವಿರಾಜಮಾರ್ಗ' ರಚನೆಯಾದ ಕಾಲದ ಅಸ್ಮಿತೆಯ ಸಮಸ್ಯೆಯು ಈಗ ನಮ್ಮನ್ನು ಬೇರೊಂದು ರೀತಿಯಲ್ಲಿ ಕನ್ನಡಕ್ಕೆ ಎದುರಾಗಿ ಕಾಡುತ್ತಿದೆ. ಈ ಎರಡೂ ಸಂದರ್ಭಗಳಲ್ಲಿ ಗುಣಾತ್ಮಕ ವ್ಯತ್ಯಾಸವಿದೆ. ಕ್ರಿ.ಶ.೮೫೦ ಸುಮಾರಿನಲ್ಲಿ ಇದ್ದುದು ಸಂಸ್ಕೃತದ ಸವಾಲುಗಳು ಎಂದು ಸಾಮಾನ್ಯವಾಗಿ ತಿಳಿಯುತ್ತೇವೆ. ಆದರೆ ಈ ಹೊತ್ತಿಗೆ ಸಂಸ್ಕೃತಕ್ಕೆ ರಾಜಮನ್ನಣೆ ಕಳೆದುಹೋಗಿತ್ತು. ಸಾಂಸ್ಕೃತಿಕವಾಗಿಯೂ ಅದು ದೇಶೀಯ ಭಾಷೆಗಳ ಸವಾಲುಗಳನ್ನು ಎದುರಿಸುವುದು ಅನಿವಾರ್ಯವಾಗಿತ್ತು. ಅಂದರೆ ಕನ್ನಡದಂತಹ ದೇಶೀ ಭಾಷೆಗಳು ಸಂಸ್ಕೃತದೊಡನೆ ಸಂವಾದವನ್ನು ಮಾಡುವ ನೆಲೆಯಲ್ಲಿ ಇದ್ದವು. 'ಕವಿರಾಜಮಾರ್ಗ'ದಲ್ಲಿ ಕನ್ನಡ ಮತ್ತು ಸಂಸ್ಕೃತಗಳ ಸಂಪರ್ಕದಿಂದ ಉಂಟಾಗಿರುವ ಸಮಸ್ಯೆಗಳನ್ನು ಹೇಗೆ ಎದುರಿಸಬೇಕೆಂಬ ಬಗೆಗೆ ಚರ್ಚಿಸಲಾಗಿದೆ. ಸಂಸ್ಕೃತದ ಪದಗಳನ್ನು, ಪ್ರತ್ಯಯಗಳನ್ನು ಕನ್ನಡದ ಪದ ಮತ್ತು ಪ್ರತ್ಯಯಗಳ ಜೊತೆಗೆ ಹೇಗೆ ಬೆರೆಸುವುದು ಎಂಬ ಬಗೆಗೆ, ಕೈಪಿಡಿಯ ಮಾದರಿಯ ಮಾತುಗಳನ್ನು ಇಲ್ಲಿ ಹೇಳಿದ್ದಾನೆ. ಈ ಮಾತುಗಳು ಕನ್ನಡ ಮತ್ತು ಸಂಸ್ಕೃತಗಳ ನಡುವೆ ಅಸಮ ಸಂಬಂಧ ಇದ್ದಾಗ ಬರುವಂತಹವಲ್ಲ. ಸಂಸ್ಕೃತದೊಡನೆ ಸಮಾನಸ್ಕಂಧವಾಗಿ ನಿಂತು ನಡೆಸುತ್ತಿರುವ ವ್ಯವಹಾರದ ಮಾತುಗಳಿವು. ಅಧಿಕಾರದ ಭಾಷೆಯೊಡನೆ ಇಂಥ ಹೊಂದಾಣಿಕೆಯ ಮಾತುಗಳನ್ನು ಸೂಚಿಸುವುದು ಸಾಧ್ಯವಾಗುವುದಿಲ್ಲ. ಕನ್ನಡವು ಸಂಸ್ಕೃತದಿಂದ ಏನನ್ನು ಪಡೆಯಬಹುದು ಎನ್ನುವುದನ್ನು ಗುರುತಿಸುತ್ತಲೇ ಯಾವ ಯಾವ ಅಂಶಗಳನ್ನು ನಿರಾಕರಿಸಬೇಕು, ಹಾಗೆ ನಿರಾಕರಿಸಲು ಇರುವ ನಿಯಮಗಳು ಯಾವುವು, ಎಂಬುದನ್ನು ಮಾರ್ಗಕಾರ ಹೇಳುತ್ತಾನೆ. ಕ್ರಿ.ಶ.೮೫೦ ರಿಂದ ಒಂದು ಸಾವಿರ ವರ್ಷ ಕಳೆಯುವ ಹೊತ್ತಿಗೆ ನಮ್ಮ ಎದುರು ನಿಂತಿರುವ ಭಾಷೆ ಇಂಗ್ಲಿಶ್. ನಾವು ಇಂಗ್ಲಿಶಿನೊಡನೆ ಕವಿರಾಜ ಮಾರ್ಗಕಾರನ ಹಾಗೆ ವ್ಯವಹರಿಸುವುದು ಆಗುವುದಿಲ್ಲ. ಕಾರಣ ಕನ್ನಡ ಮತ್ತು ಇಂಗ್ಲಿಶ್‌ಗಳ ಸಂಬಂಧ ಭಿನ್ನ ರೀತಿಯದು. ಇಂಗ್ಲಿಶಿಗೆ ಹಲವು ಬಗೆಯ ಅಧಿಕಾರದ ಒತ್ತಾಸೆ ಇದೆ. ನಮ್ಮ ಆತಂಕಗಳನ್ನು ಮೀರಲು ನಮಗೆ ಕವಿರಾಜಮಾರ್ಗದಿಂದ ಉತ್ತರಗಳು ಸಿಗಬಹುದೆಂದು ನನಗೆ ತೋರುತ್ತಿಲ್ಲ.

ಮೂರು ಭಾಗ

ಕವಿರಾಜಮಾರ್ಗಕಾರನ ಕೃತಿಯಲ್ಲಿ ಮೂರು ಭಾಗಗಳಿವೆ. ಮೊದಲ ಭಾಗದಲ್ಲಿ ಹಲವು ದೇಶ, ಭಾಷೆ, ಜನಗಳಿಗೆ ಸಂಬಂಧಿಸಿದ ಸಂಗತಿಗಳಿವೆ. ಜೊತೆಗೆ ಕಾವ್ಯಭಾಷೆಯಲ್ಲಿ ಯಾವ ಬಗೆಯ ದೋಷಗಳು ಇರಬಾರದು ಎಂಬುದನ್ನು ವಿವರಿಸಲಾಗಿದೆ. ಎರಡನೆಯ ಭಾಗದಲ್ಲಿ ಶಬ್ದಾಲಂಕಾರಗಳ ವಿವರಣೆ ಇದೆ. ಮೂರನೆಯ ಭಾಗದಲ್ಲಿ ಅರ್ಥಾಲಂಕಾರ

ಗಳನ್ನು ವಿವರಿಸಲಾಗಿದೆ. ಹಾಗಾಗಿ ಈ ಗ್ರಂಥವನ್ನು ಅಲಂಕಾರ ಗ್ರಂಥವೆಂದು ತಿಳಿಯುತ್ತಾರೆ. ನಿಜ, ಶ್ರೀವಿಜಯನು ತನ್ನ ಗ್ರಂಥವು ಕವಿಗಳಿಗೆ ಕೈಪಿಡಿಯಾಗಬೇಕೆಂದು ಆಶಿಸಿದ್ದನು. ಆದರೆ ಇದು 'ಕವಿರಾಜಮಾರ್ಗ'. ಇದು ಕವಿಗಳ ಮತ್ತು ರಾಜರಮಾರ್ಗ. ಏಕಕಾಲಕ್ಕೆ ಕವಿಗಳ ಮತ್ತು ರಾಜರ ಮಾರ್ಗವನ್ನು ಹೇಳುವುದು ಶ್ರೀವಿಜಯನ ಗುರಿಯಾಗಿದೆ. ಅಂದರೇನು? ಮಾರ್ಗವೆಂದರೆ ಸರಿಯಾದ ದಾರಿ. ಕಾವ್ಯಕ್ಕೆ ಕವಿಗಳು ಮಾತ್ರ ದಾರಿ ತೋರಿಸಿದರೆ ಸಾಲದು, ರಾಜರೂ ಒಪ್ಪಬೇಕು. ಇದು ಮುಖ್ಯ.

ಮತ್ತೆ ಕ್ರಿ.ಶ.೮೫೦ ಪರಿಸ್ಥಿತಿಯನ್ನು ಗಮನಿಸೋಣ. ರಾಷ್ಟ್ರಕೂಟರ ಸಾಮ್ರಾಜ್ಯ ನಿರ್ಮಾಣವಾಗುತ್ತಿದ್ದ ಕಾಲವದು. ಉತ್ತರಾಪಥದಿಂದ ಬೇರಾಗಿ ತನ್ನದೇ ನೆಲೆಗಳನ್ನು ಕಂಡುಕೊಳ್ಳುವುದಕ್ಕೆ ಇಲ್ಲಿನ ರಾಜರು ಯತ್ನಿಸುತ್ತಿದ್ದರು. ರಾಜ್ಯಾಡಳಿತದ ಪರಿಕರಗಳನ್ನು ರೂಪಿಸುವುದು ಮುಖ್ಯವಾಗಿತ್ತು. ಅಂಥ ಪರಿಕರಗಳಲ್ಲಿ ಪ್ರಮಾಣ ಭಾಷೆ ಕೂಡ ಒಂದು. ಕವಿರಾಜಮಾರ್ಗಕಾರನು ಕನ್ನಡದಲ್ಲಿ ಇದ್ದ ಪ್ರಭೇದಗಳನ್ನು ಕುರಿತು ಹೀಗೆ ಹೇಳುತ್ತಾನೆ : 'ಈ ಭೂಮಿಯನ್ನು ಹೊತ್ತಿರುವ ವಾಸುಕಿಗೆ ಸಾವಿರ ನಾಲಗೆಗಳು. ಅಷ್ಟು ನಾಲಗೆಗಳಿರುವ ವಾಸುಕಿಗೂ ಕನ್ನಡದ ಬಗೆಗಳನ್ನು ವರ್ಣಿಸುವುದು ಬೇಸರದ, ಅಂದರೆ ಕಷ್ಟದ ಸಂಗತಿ'. ಕನ್ನಡದಲ್ಲಿ ಅಷ್ಟು ಬಗೆಗಳು ಇದ್ದವೋ ಇಲ್ಲವೋ ಎಂಬುದು ಮುಖ್ಯವಲ್ಲ. ಈ ಎಲ್ಲ ಪ್ರಭೇದವನ್ನು ಬಳಸುತ್ತಿದ್ದ ಪ್ರದೇಶವನ್ನು ಶ್ರೀವಿಜಯನು ಗುರುತಿಸಿದ್ದಾನೆ. ಇಂದಿನ ಕರ್ನಾಟಕದ ಕೊಪ್ಪಳ, ಪಟ್ಟದಕಲ್ಲು, ಲಕ್ಷ್ಮೇಶ್ವರ, ಒಕ್ಕುಂದ ಎಂಬ ಊರುಗಳನ್ನು ಗಡಿಗಳನ್ನಾಗಿ ಹೊಂದಿದ್ದ ಪ್ರದೇಶವದು. ಕುತೂಹಲದ ಸಂಗತಿ ಎಂದರೆ, ಶ್ರೀ ವಿಜಯನು ಇದ್ದ ನೃಪತುಂಗನ ರಾಜಧಾನಿ ಮಾನ್ಯಖೇಟ(ಮಳಖೇಡ) ಇಂದಿನ ಗುಲಬರ್ಗಾ ಜಿಲ್ಲೆಯಲ್ಲಿದೆ. ಆ ಊರು ಈ ಪ್ರಮಾಣ ಕನ್ನಡವನ್ನು ಆಡುತ್ತಿದ್ದ ಪ್ರದೇಶದಿಂದ ಹೊರಗೆ ಇದೆ. ನಮಗೆ ಗೊತ್ತಿರುವ ನಿದರ್ಶನಗಳನ್ನು ನೋಡಿದರೆ ಅಧಿಕಾರದ ಕೇಂದ್ರ ಭೌಗೋಳಿಕವಾಗಿ ಎಲ್ಲಿ ಇರುವುದೋ ಅಲ್ಲಿನ ಭಾಷಾ ಪ್ರಭೇದವೇ ಪ್ರಮಾಣ ಭಾಷೆಯಾಗಿ ಮನ್ನಣೆ ಪಡೆಯುತ್ತದೆ. ಆದರೆ ಇಲ್ಲಿ ಅಧಿಕಾರದ ಕೇಂದ್ರದಿಂದ ಹೊರಗಿರುವ ಭಾಷಾ ಪ್ರಭೇದವು ಪ್ರಮಾಣ ಭಾಷೆಯೆಂದು ಗುರುತಾಗುವುದು ಗಮನಾರ್ಹವಾಗಿದೆ. ಶ್ರೀವಿಜಯನ ಈ ಕೃತಿಯು ಕನ್ನಡದ ಒಂದು ಪ್ರಭೇದವನ್ನು ಮಾರ್ಗಭಾಷೆ (ಇಂದಿನ ಪರಿಭಾಷೆಯಲ್ಲಿ ಪ್ರಮಾಣ ಭಾಷೆ) ಎಂದು ಗುರುತಿಸುತ್ತಾನೆ.

ಆಧುನಿಕ ಚಿಂತಕರು ಶ್ರೀವಿಜಯನ ಚಿಂತನೆಯಲ್ಲಿ ಒಡಕನ್ನು ಗುರುತಿಸುವುದು ಸಾಧ್ಯ. ಒಂದು ಕಡೆ ಕನ್ನಡದ ಒಂದು ಬಗೆಯನ್ನು ಪ್ರಮಾಣವೆಂದು ಹೇಳುತ್ತಾ, ಇನ್ನೊಂದು ಕಡೆ ಕನ್ನಡಿಗರು ಓದಿನಲ್ಲಿ ಪ್ರವೀಣರಲ್ಲದಿದ್ದರೂ ಕಾವ್ಯ ಪ್ರಯೋಗದಲ್ಲಿ ಪರಿಣತರಾಗಿದ್ದರೆಂದು ಹೇಳುವುದು ವಿಚಿತ್ರವಾಗಿ ಕಾಣುತ್ತದೆ. ಆದರೆ ಶ್ರೀವಿಜಯನ ವಿಚಾರದಲ್ಲಿ ಗೊಂದಲವಿದ್ದಂತಿಲ್ಲ. ಕಾವ್ಯ ರಚಿಸುವುದಕ್ಕೇ ಬೇಕಾದ ಭಾಷೆಯ ಲಕ್ಷಣವನ್ನು ಗುರುತಿಸಿದ ಮಾತ್ರಕ್ಕೆ, ಅ ಭಾಷೆ ಜನರಿಂದ ದೂರವೆಂದು ತಿಳಿಯಬೇಕಾಗಿಲ್ಲ. ಹಾಗೆ

ನೋಡಿದರೆ ಜನರನ್ನು ಅವರ ಭಾಷೆಯಲ್ಲಿ ಮಾತ್ರವಲ್ಲದೆ ಆಸ್ಥಾನದ ಭಾಷೆಯಲ್ಲೂ ಪಳಗುವಂತೆ ಮಾಡುವುದರಲ್ಲಿ ಆಡಳಿತದ ಯಶಸ್ಸು ಅಡಗಿದೆ. ಜನರು ಹೀಗೆ ಭಾಷಾ ದ್ವಿಸ್ತರ ಪರಿಸ್ಥಿತಿಗೆ ಹೋಗುವುದೇ ಅವರು ಪಡೆಯುವ ತರಬೇತಾಗಿರುತ್ತದೆ: ಆಡಳಿತದ ಗುರಿಯಾಗಿರುತ್ತದೆ. ಆದ್ದರಿಂದ ಶ್ರೀವಿಜಯನು ಪ್ರಮಾಣ ಭಾಷೆಯನ್ನು ಎತ್ತಿ ಹಿಡಿಯುತ್ತಿರುವಾಗಲೇ ಜನರು ಆ ಭಾಷೆಯ ಬಳಕೆಯಲ್ಲಿ ಆಸಕ್ತನಾಗಿದ್ದರೆಂಬುದನ್ನೂ ಹೇಳುತ್ತಿದ್ದಾನೆ.

ಇನ್ನೂ ಒಂದು ಮುಖ್ಯ ಸಂಗತಿಯನ್ನು ನಾವಿಲ್ಲಿ ಗುರುತಿಸಬೇಕಾಗಿದೆ. ಜನರು ಆಡುತ್ತಿದ್ದ ಕನ್ನಡ ಮತ್ತು ಬರವಣಿಗೆಯಲ್ಲಿ ಬಳಕೆಯಾಗುತ್ತಿದ್ದ ಕನ್ನಡ, ಇವೆರಡಕ್ಕೂ ಇರುವ ಅಂತರವನ್ನು ಶ್ರೀವಿಜಯನು ಗುರುತಿಸುತ್ತಾನೆ. ಮಾತು ಬರೆಹವಾಗುವಾಗ ಅಧಿಕಾರವನ್ನು ಪಡೆದುಕೊಳ್ಳುತ್ತದೆ; ಅಧಿಕೃತೆಯನ್ನು ಪಡೆದುಕೊಳ್ಳುತ್ತದೆ. ಕನ್ನಡ ಮಾತು ಕನ್ನಡ ಬರವಣಿಗೆಗೆ ಇಳಿಯುತ್ತಿದ್ದಾಗ ಈ ಇಕ್ಕಟ್ಟು ಸಹಜವಾಗಿಯೇ ಎದುರಾಗಿದೆ. ಜನರು ಆಡುವ ಭಾಷೆಯಲ್ಲಿ ಬಗೆಗಳು ಹಲವು ಇರಬಹುದು. ಅವು ಹಾಗೆ ಇರಲಿ. ಆದರೆ ಬರೆಯುವ ಭಾಷೆಯಲ್ಲಿ ಮಾತ್ರ ಈ ಭಿನ್ನ ಭಿನ್ನ ರೀತಿಗಳಿಗೆ ಅವಕಾಶವಿಲ್ಲ ಎನ್ನುವುದು 'ಕವಿರಾಜಮಾರ್ಗ'ದ ನಿಲುವು. ಈ ಮಾತಿಗೆ ಸಮರ್ಥನೆಯಾಗಿ ಆ ಕೃತಿಯ ಇನ್ನೊಂದು ವಿಚಾರವನ್ನು ನೋಡಬಹುದು. ಕಾವ್ಯ ಭಾಷೆಯಲ್ಲಿ ಉಂಟಾಗುವ ದೋಷಗಳನ್ನು ಕುರಿತು ಹೇಳುವಾಗ ಮೊದಲಲ್ಲಿ ಶ್ರುತಿಕಷ್ಟ (ಕೇಳಿಸಿಕೊಳ್ಳಲು ಕಷ್ಟ) ಮತ್ತು ಶ್ರುತಿದುಷ್ಟ (ಕೇಳಿಸಿ ಕೊಳ್ಳಲು ಅಸಹ್ಯ) ಎಂಬ ದೋಷಗಳನ್ನು ಚರ್ಚಿಸಿದ್ದಾನೆ. ಈ ದೋಷಗಳ ಲಕ್ಷಣಗಳೇನೇ ಇರಲಿ, ಅವನು ಬರವಣಿಗೆಯ ಭಾಷೆಯನ್ನು ಕುರಿತು ವಿವರಿಸುತ್ತಿರುವುದು ಎಂಬುದು ನಮ್ಮ ನೆನಪಿನಲ್ಲಿ ಇರಬೇಕು. ಅಂದರೆ ಓದಿನ ಭಾಷೆಯ ಲಕ್ಷಣವನ್ನು ಹೇಳುತ್ತಿದ್ದಾನೆ. ಆದರೆ ಆ ಭಾಷೆಯಲ್ಲಿ ಕಿವಿಯ ಅನುಭವಕ್ಕೆ ಸಂಬಂಧಿಸಿದ ದೋಷಗಳನ್ನು ಗುರುತಿಸುತ್ತಿದ್ದಾನೆ. ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಬರೆಹದ ಭಾಷೆಯನ್ನು ಮೌನವಾಗಿ ಓದಿದರೆ ಈ ದೋಷಗಳು ಇರುವುದಿಲ್ಲ. ಆದರೆ ಬರೆದದ್ದನ್ನು ಗಟ್ಟಿಯಾಗಿ ಓದಿದಾಗ ಅದು ಕಿವಿಯ ಅನುಭವವಾಗುತ್ತದೆ. ಆಗ ಕಿವಿಯ ಅನುಭವಕ್ಕೆ ಸಂಬಂಧಿಸಿದ ದೋಷಗಳು ನಿಜವಾಗುತ್ತವೆ. ಮಾರ್ಗಕಾರನ ನಿಜವಾದ ಸಮಸ್ಯೆ ಇಲ್ಲಿ ಎಂದು ನಮಗೆ ಗೊತ್ತಾಗುತ್ತದೆ. ಯಾವುದು ಮಾತಾಗಿರುತ್ತದೋ ಅದು ಕಿವಿಯ ಅನುಭವವಾಗುವುದಕ್ಕೂ ಬರೆಹದ ಭಾಷೆ ಉಕ್ತವಾಗಿ ಕಿವಿಯ ಅನುಭವವಾಗುವುದಕ್ಕೂ ಇರುವ ವ್ಯತ್ಯಾಸವನ್ನು ಶ್ರೀವಿಜಯನು ಗಮನಿಸುತ್ತಿದ್ದಾನೆ. ಆದ್ದರಿಂದ ಯಾವ ಬಗೆಯ ರಚನೆಗಳು ಆಡುಮಾತಿನಲ್ಲಿ ದೋಷಗಳಾಗುವುದಿಲ್ಲವೋ ಅವೇ ರಚನೆಗಳು ಬರೆಹದ ಭಾಷೆಯಲ್ಲಿ ದೋಷಗಳಾಗುತ್ತವೆ. ಇಪ್ಪತ್ತನೇ ಶತಮಾನದ ಕೊನೆಗೆ ಬಂದಿರುವ ನಮಗೆ ಈ ಸಮಸ್ಯೆ ಈಗ ಬೇರೊಂದು ರೀತಿಯಲ್ಲಿ ಕಾಡತೊಡಗಿದೆ. ಆಡುಮಾತಿನ ನೆಲೆಯಲ್ಲಿ ಜನರಲ್ಲಿ ಇದ್ದ ಕನ್ನಡದ ಹತ್ತಾರು ಬಗೆಗಳು, ಈಗ ಅವುಗಳನ್ನು ಬಳಸುವವರ ಅಸ್ಮಿತೆಯ ಲಕ್ಷ್ಮಣವಾಗಿವೆ;

ಸೂಚಕಗಳಾಗಿವೆ. ಈ ಮಾತಿನ ಬಗೆಗಳನ್ನು ಬರೆಹಕ್ಕೆ ತರುವ ಯತ್ನಗಳು ನಡೆಯುತ್ತಿವೆ. ಈಗ ಕನ್ನಡದ ಪ್ರಮಾಣ ಭಾಷೆಯ ಚೌಕಟ್ಟುಗಳು ಈ ಕನ್ನಡದ ಪ್ರಭೇದಗಳ ಬರೆವಣಿಗೆ ಇಕ್ಕಟ್ಟುಗಳನ್ನು ರೂಪಿಸಿದಂತಿದೆ. ಆ ಪ್ರಭೇದಗಳು ಆಶುರೂಪದಲ್ಲಿದ್ದಾಗ ಇದ್ದ ಈ ಸಮಸ್ಯೆ ಸಾಹಿತ್ಯ ಭಾಷೆಯಲ್ಲಿಯೂ ಹಲವಾರು ರೀತಿಯಲ್ಲಿ ಕಾಣಿಸಿಕೊಂಡಿದೆ.

ಮೊದಲ ಶಾಸ್ತ್ರಗ್ರಂಥ

ಈ ಕೃತಿಯನ್ನು ಕನ್ನಡದ ಮೊದಲ ಶಾಸ್ತ್ರಗ್ರಂಥವೆಂದು ಗುರುತಿಸುತ್ತಾರೆ. ಇದರಲ್ಲಿ ಕಾವ್ಯ ಮೀಮಾಂಸೆಗೆ ಸಂಬಂಧಿಸಿದ ವಿಚಾರಗಳಿರುವಂತೆ ವ್ಯಾಕರಣಕ್ಕೆ ಸಂಬಂಧಿಸಿದ ವಿಚಾರಗಳೂ ಇವೆ. ಕೃತಿಕಾರನಿಗೆ ಏನನ್ನು ಹೇಳಬೇಕು ಮತ್ತು ಏನನ್ನು ಹೇಳಬೇಕಾಗಿಲ್ಲ ಎನ್ನುವ ವಿವೇಚನೆ ಇಲ್ಲದೆ ಹೀಗೆ ಮಾಡಿರುವುದಲ್ಲ. ಇದು ಈಗಾಗಲೇ ಹೇಳಿರುವಂತೆ ಭಾಷೆಯನ್ನು ಕುರಿತ ಗ್ರಂಥ. ಹಾಗಾಗಿ ವ್ಯಾಕರಣ ವಿಷಯಗಳು ಬರುವುದು ಸಹಜ. ಹಾಗೆಯೇ ಛಂದಸ್ಸಿಗೆ ಸಂಬಂಧಿಸಿದ ವಿವರಗಳೂ ಬರುತ್ತವೆ. ಮುಂದಿನ ಶಾಸ್ತ್ರಕಾರರು 'ಕವಿರಾಜಮಾರ್ಗ'ದ ವಿಚಾರಗಳನ್ನು ಎತ್ತಿಕೊಂಡೇ ಮುಂದುವರೆಯುವುದು ಅನಿವಾರ್ಯವಾಯಿತು. ಬರೆಹದ ಕನ್ನಡದ ಲಕ್ಷಣವನ್ನು ಮೊದಲ ಬಾರಿಗೆ ನಿರೂಪಿಸುವ ಕೆಲಸವನ್ನು ಮಾಡಿದ ಶ್ರೀವಿಜಯನು ಹೀಗೆ ಎಲ್ಲ ನಿಟ್ಟಿನಿಂದಲೂ ಸಾಮಗ್ರಿಯನ್ನು ತಂದಿದ್ದಾನೆ. ಈ ಮಾದರಿ ಸಂಸ್ಕೃತದಿಂದ ಬಂದದ್ದಲ್ಲ. ನಮ್ಮ ವಿದ್ವಾಂಸರು ಕವಿರಾಜಮಾರ್ಗವನ್ನು ಕುರಿತು ವಿವೇಚಿಸುವಾಗ, ಅದು ಎಷ್ಟರಮಟ್ಟಿಗೆ ಸಂಸ್ಕೃತ ಮೂಲಗಳಿಂದ ವಿಚಾರಗಳ ಮಾದರಿಯನ್ನು ತೆಗೆದುಕೊಂಡಿದೆ ಎನ್ನುವುದನ್ನು ಗುರುತಿಸಲು ಯತ್ನಿಸುತ್ತಾರೆ. ಇದು ಈ ಶತಮಾನದ ಚಿಂತನೆಯ ವಿಧಾನ. ಆದರೆ ನಾವೀಗ ಈ ಮಾದರಿಯಲ್ಲಿ 'ಕವಿರಾಜ ಮಾರ್ಗ'ವನ್ನು ನೋಡಬೇಕಾಗಿಲ್ಲ. ತನ್ನ ವಿಚಾರಗಳನ್ನು ಹೇಳತಕ್ಕ ಮಾದರಿಗಳನ್ನು ಹುಡುಕಿಕೊಳ್ಳಬೇಕಾದ ಸನ್ನಿವೇಶ ಶ್ರೀವಿಜಯನ ಎದುರಿಗೆ ಇತ್ತು. 'ಕವಿರಾಜಮಾರ್ಗ'ವು ಕನ್ನಡ ಆಡುಮಾತು ಕಾವ್ಯಭಾಷೆಯಾಗಿ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ರಚನೆಯಾಗಿದೆ. ಅಲಂಕಾರ ಗ್ರಂಥಗಳಿಗೆ ಅವಶ್ಯವಾದ ಬಲವಾದ ಸಾಹಿತ್ಯ ಪರಂಪರೆ 'ಕವಿರಾಜಮಾರ್ಗ'ಕ್ಕೆ ಇರಲಿಲ್ಲ. ಸಂಸ್ಕೃತ ಅಲಂಕಾರ ಗ್ರಂಥಗಳನ್ನು ಶ್ರೀವಿಜಯನು ಗಮನಿಸಿಲ್ಲವೆಂದಲ್ಲ. ಸಂಸ್ಕೃತವು ಕಾವ್ಯಭಾಷೆಯ ಬಗ್ಗೆ ರೂಪಿಸಿಕೊಂಡಿದ್ದ ಮಾದರಿಗಳು ಕನ್ನಡಕ್ಕೆ ಹೊಂದಿಕೊಳ್ಳುತ್ತವೆಯೇ ಎಂಬುದನ್ನು ಶ್ರೀವಿಜಯನು ಪರಿಶೀಲಿಸುತ್ತಿರುವುದು ಖಚಿತ. ಎಲ್ಲಿ ಆ ಮಾದರಿಯು ಹೊಂದಿಕೊಳ್ಳುವುದಿಲ್ಲವೋ ಅಲ್ಲಿ ಕನ್ನಡಕ್ಕೆ ವಿಶಿಷ್ಟವಾದ ಲಕ್ಷಣವನ್ನು ನಿರೂಪಿಸುತ್ತಾನೆ. ಸಂಸ್ಕೃತದ ಛಂದಸ್ಸನ್ನು ಕನ್ನಡಕ್ಕೆ ಅಳವಡಿಸುವ ಅವನ ಪ್ರಯತ್ನವನ್ನು ಉದಾಹರಣೆಯಾಗಿ ನೋಡಬಹುದು.

ಸಂಸ್ಕೃತದೊಡನೆ ಮುಖಾಮುಖಿ

ಶ್ರೀವಿಜಯ ಸಂಸ್ಕೃತದೊಡನೆ ನಡೆಸಿರುವ ಮುಖಾಮುಖಿ ಇನ್ನೂ ಹಲವು ನೆಲೆಗಳಲ್ಲಿ ಕಾಣಿಸುತ್ತಿದೆ. ಶಬ್ದಾಲಂಕಾರಗಳಿಗಾಗಿ ಒಂದು ಅಧ್ಯಾಯವನ್ನು ಮೀಸಲಾಗಿರಿಸಿದ್ದಾನೆಂದು

ಈ ಮೊದಲೇ ಹೇಳಿದ್ದೇನೆ. ಶಬ್ದಾಲಂಕಾರಗಳು ಭಾಷೆಯ ಶಬ್ದಸ್ತರವನ್ನು ಅವಲಂಬಿಸಿರುತ್ತವೆ. ಪ್ರತಿಭಾಷೆಗೂ ಅವರದ್ದೇ ಆದ ಶಬ್ದ ಸ್ತರವಿರುತ್ತದೆ. ಶಬ್ದರಚನೆಗೆ ಸಂಬಂಧಿಸಿದ ನಿಯಮಗಳು ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗುತ್ತ ಹೋಗುತ್ತವೆ. ಸಂಸ್ಕೃತ ಆಲಂಕಾರಿಕರು ಆ ಭಾಷೆಯ ಶಬ್ದ ರಚನೆಯ ಸಾಧ್ಯತೆಗಳನ್ನು ಅವಲಂಬಿಸಿ ಶಬ್ದಾಲಂಕಾರಗಳನ್ನು ನಿರೂಪಿಸಿರುವುದು ಖಚಿತ. ಆ ಶಬ್ದಾಲಂಕಾರಗಳನ್ನು ಯಥಾವತ್ತಾಗಿ ಕನ್ನಡಕ್ಕೆ ಹೊಂದಿಸಿಕೊಳ್ಳುವುದು ಆಗದ ಮಾತು. ಏಕೆಂದರೆ, ಕನ್ನಡಕ್ಕೆ ಅದರದೇ ಆದ ಶಬ್ದ ರಚನೆಯ ನಿಯಮಗಳು ಇವೆ. ಈ ಇಕ್ಕಟ್ಟನ್ನು ಶ್ರೀವಿಜಯನು ಎದುರಿಸಿರುವ ವಿಧಾನ ಆಸಕ್ತಿದಾಯಕವಾಗಿದೆ. ಕನ್ನಡ ಕಾವ್ಯ ಭಾಷೆಯು ಸಂಸ್ಕೃತ ಕಾವ್ಯ ಭಾಷೆಯ ಹಾಗೆ ತೋರಬೇಕು. ಆದರೆ ಕನ್ನಡ ಸಹಜ ಲಕ್ಷಣಗಳು ಆ ಕಾವ್ಯಭಾಷೆಯಿಂದ ದೂರವಾಗಬಾರದು; ಈ ಹೊಂದಾಣಿಕೆಯ ಮಾದರಿಯಲ್ಲಿ ಅವನು ಕನ್ನಡ ಕಾವ್ಯ ಭಾಷೆಯ ಲಕ್ಷಣಗಳನ್ನು ನಿರೂಪಿಸುತ್ತಾನೆ. ಸಂಸ್ಕೃತಕ್ಕೆ ಅಪರಿಚಿತವಾದ ಆದಿಪ್ರಾಸವನ್ನು ಕನ್ನಡಕ್ಕೆ ನಿಗದಿಪಡಿಸುತ್ತಾನೆ. ಪದ್ಯದ ಎರಡನೆಯ ಅಕ್ಷರದ ಆದಿ ವ್ಯಂಜನ ಮತ್ತು ಸ್ವರ ಕೇಂದ್ರಗಳು ಪ್ರತಿ ಪಾದದಲ್ಲೂ ಪುನರಾವರ್ತನೆಯಾಗುವುದನ್ನು ನಿಗದಿಪಡಿಸುವಾಗ, ಅವನು ಸಂಸ್ಕೃತದ ಮಾದರಿಯನ್ನು ಮೀರುತ್ತಿದ್ದಾನೆ; ಹೀಗೆ ಹೊಸ ನಿಯಮವನ್ನು ರೂಪಿಸಲು ಕಾರಣ ಕನ್ನಡ ಭಾಷೆಯ ರಚನೆಯಲ್ಲೇ ಅಡಗಿದೆ. ಈ ಹೊಸ ಮಾದರಿ ಮುಂದೆ ಒಂದು ವಿಶೇಷ ಸೌಲಭ್ಯವನ್ನು ಕಲ್ಪಿಸಿಕೊಟ್ಟಿತ್ತು. ಈ ದಿನಗಳಲ್ಲಿ ಶ್ರೀವಿಜಯನ ಈ ಮಾದರಿ ರಚನೆ ತುಂಬಾ ಸರಳವಾಗಿ ನಮಗೆ ತೋರಬಹುದು. ಈಗ ನಾವು ಎದುರಿಸುತ್ತಿರುವ ಸಮಸ್ಯೆಯನ್ನು ಗಮನಿಸಿದರೆ, ಶ್ರೀವಿಜಯನ ಮಾದರಿಯ ಮಹತ್ವ ಗೊತ್ತಾಗುತ್ತದೆ. ಇಂಗ್ಲಿಶ್ ಭಾಷಾ ರಚನೆ ಮತ್ತು ಕನ್ನಡ ಭಾಷೆ ರಚನೆಗಳ ಮುಖಾಮುಖಿಯಲ್ಲಿ ಯೋಗ್ಯವಾದ ಮಾದರಿಯನ್ನು ನಾವಿನ್ನೂ ಹುಡುಕುವುದು ಸಾಧ್ಯವಾಗಿಲ್ಲ. ಕೇವಲ ಭಾಷಾ ಮಿಶ್ರಣದಿಂದ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದು ಎಂದುಕೊಂಡಿದ್ದೇವೆ. ಆದರೆ ಇದಿಷ್ಟೇ ಸಾಲದು.

'ಕವಿರಾಜಮಾರ್ಗ'ದ ಹುಡುಕಾಟ ಕನ್ನಡಕ್ಕೊಂದು ಕಾವ್ಯಭಾಷೆಯನ್ನು ರೂಪಿಸಿ ಕೊಡುವುದಾಗಿತ್ತು. ಆ ಕಾವ್ಯಭಾಷೆ ರಾಜಾಸ್ಥಾನದ ಮನ್ನಣೆಯ ಭಾಷೆಯೂ ಆಗಿರಬೇಕೆಂಬುದು ಕೃತಿಯ ಆಶಯ. ರಾಜಮನ್ನಣೆಯ ಭಾಷೆ ಮತ್ತು ಸಾಹಿತ್ಯ ಸಂಸ್ಕೃತಿಯ ಭಾಷೆ ಬೇರೆ ಬೇರೆಯಾಗಿರುವುದಿಲ್ಲ. ಇವೆರಡರ ನಡುವೆ ವಿಚಿತ್ರ ಹೊಂದಾಣಿಕೆ ಇರುತ್ತದೆ. ಕೆಲವು ಕಾಲಗಳಲ್ಲಿ ಕವಿಗಳು ರಾಜಾಸ್ಥಾನದ, ಅಂದರೆ ಅಧಿಕಾರ ಕೇಂದ್ರ ಭಾಷೆಯಲ್ಲಿ ಮಾತಾಡುತ್ತಿದ್ದಾರೆಂದು ಅನಿಸಿದರೆ, ಮತ್ತೆ ಕೆಲವೊಮ್ಮೆ ಅಧಿಕಾರ ಕೇಂದ್ರವು ಸಾಹಿತ್ಯ ಸಂಸ್ಕೃತಿಯ ಭಾಷೆಯಲ್ಲಿ ಮಾತಾಡುತ್ತಿದೆ ಎಂದು ಕಾಣುತ್ತದೆ. ಚರಿತ್ರೆಯಲ್ಲಿ ಇವೆರಡೂ ಮಾದರಿಗಳಿಗೆ ನಿದರ್ಶನಗಳಿವೆ. ಕನ್ನಡದ ಮಟ್ಟಿಗೆ ಈ ಎರಡೂ ಪ್ರಭೇದಗಳು ಒಂದೇ ಹಂತದಲ್ಲಿ ಮೈತಳೆದವು. ಸಾಮ್ರಾಜ್ಯಗಳ ನಿರ್ಮಿತಿಯೊಡನೆ ಸಾಹಿತ್ಯ ಸಂಸ್ಕೃತಿಯಲ್ಲಿ

ಆಗುವ ಬದಲಾವಣೆಯನ್ನು ನಾವು ಕಳೆದ ಒಂದು ಸಾವಿರ ವರ್ಷಗಳ ಚರಿತ್ರೆಯಲ್ಲಿ ನೋಡುತ್ತೇವೆ. ಈಗಲೂ ಬೇರೊಂದು ರೀತಿಯಲ್ಲಿ ಇದೇ ತಾಕಲಾಟ ಮುಂದುವರೆದಿದೆ.

'ಕವಿರಾಜಮಾರ್ಗ'ವನ್ನು ಕೇವಲ ಕನ್ನಡಿಗರ ಅಭಿಮಾನವನ್ನು ರೂಪಿಸಲು ಅನುಕೂಲವಾಗುವ ಕೃತಿಯೆಂದು ನೋಡುವ ಬಗೆಯಾಗಲೀ, ಈ ಕೃತಿಯು ವ್ಯರ್ಥವಾಗಿ ಸಂಸ್ಕೃತ ಅಲಂಕಾರಿಕರ ಮಾದರಿಯನ್ನು ಕನ್ನಡಕ್ಕೆ ಕಲ್ಪಿಸಲು ಅನುಕರಣೆಯ ಹಾದಿಯನ್ನು ಹಿಡಿದಿದೆ ಎಂದು ತಿಳಿಯುವುದಾಗಲೀ ಅತಿರೇಕಗಳು. ಕನ್ನಡದಂತಹ ಭಾಷೆಗಳು ಅಧಿಕಾರದ ಭಾಷೆಯ ನೆರಳಿನಲ್ಲಿ ಇರುತ್ತಲೇ ತಮ್ಮದೇ ಒಂದು ಅಧಿಕಾರದ ಕೇಂದ್ರವನ್ನು ರೂಪಿಸಿಕೊಳ್ಳುವಾಗ, ಅಸ್ಮಿತೆಯನ್ನು ಕಾಯ್ದುಕೊಳ್ಳಲು ಯತ್ನಿಸುವಾಗ, ಎದುರಿಸುವ ಸಮಸ್ಯೆಗಳೇನು ಎನ್ನುವುದನ್ನು ತಿಳಿಯಲು 'ಕವಿರಾಜಮಾರ್ಗ'ವನ್ನು ಒಂದು ಪಠ್ಯವನ್ನಾಗಿ ಓದುವುದು ಸರಿಯಾದ ಮಾರ್ಗ.

೫

ಹೊಸ ಭಾಷೆಯೊಂದರ ನಿರ್ಮಾಣ

ಕಿ.ರಂ.ನಾಗರಾಜ

ಗತಕಾಲದ ಸಿದ್ಧಾಂತಗಳಾಗಲೀ ಚಿಂತನೆಗಳಾಗಲೀ ಹಾಗೆ ಸತ್ತು ಹೋಗುವುದಿಲ್ಲ. ಅವುಗಳ ಸೂಕ್ಷ್ಮತೆ ಸೂಕ್ತತೆ ಗಾಂಭೀರ್ಯಗಳು ಮತ್ತೆ ಮತ್ತೆ ಪರಿಶೀಲನೆಗೆ ಒಳಗಾಗುತ್ತಿರುತ್ತವೆ. ಮಹತ್ವದ ಚಿಂತನಕ್ರಮಗಳಲ್ಲಿ ಭಿನ್ನವಾದರೂ ಕೂಡ, ನಮ್ಮ ಹಿಂದಿನ ಕೃತಿಗಳು ನಮ್ಮ ಬೌದ್ಧಿಕ ಚಟುವಟಿಕೆಯ ಭಾಗವಾಗುವಂತೆ, ಅವುಗಳತ್ತ ಗಮನಹರಿಸಬೇಕು. ಯಾವುದೋ ಪ್ರಾಚೀನ ಕೃತಿ ಇವತ್ತು ಅಷ್ಟು ಉಪಯುಕ್ತವಾಗದೆ ಹೋಗಬಹುದು. ಆದರೆ ಒಂದು ಇಂಟಲೆಕ್ಚುವಲ್ ಆಕ್ಟಿವಿಟಿಯಾಗಿ ಅದಕ್ಕೊಂದು ಮಹತ್ವ ಇರುತ್ತದೆ ಎಂದು ನಾವೆಲ್ಲ ತಿಳೀಬೇಕು. ಸಂಸ್ಕೃತ ಲಾಕ್ಷಣಿಕರಾಗಿರಬಹುದು. ಕನ್ನಡ ಲಾಕ್ಷಣಿಕರಾಗಿರಬಹುದು ಅಥವಾ ಪಾಶ್ಚಾತ್ಯ ಕಾವ್ಯಮೀಮಾಂಸಕರಾಗಿರಬಹುದು. ಅವರ ತತ್ವಗಳೆಲ್ಲ ನಾವು ಅಧ್ಯಯನ ಮಾಡುವ ಕೃತಿಗಳಿಗೆ, ಹಾಗಿಂದ ಹಾಗೆ ಸಹಾಯವನ್ನು ಕೊಡ್ತವೆ ಅಂತ ತಿಳೀಬೇಕಾದ ಅಗತ್ಯವಿಲ್ಲ.

ಮೊದಲನೆಯದಾಗಿ, ನನ್ನ ದೃಷ್ಟಿಯಲ್ಲಿ 'ಕವಿರಾಜಮಾರ್ಗ' ಕೇವಲ ಸಾಹಿತ್ಯ ಮೀಮಾಂಸೆಯ ಕೃತಿಯಲ್ಲ. ಸಾಹಿತ್ಯ ಮೀಮಾಂಸೆ ಎನ್ನುವುದು ಮಾರ್ಗಕಾರನಿಗೆ ಒಂದು ನಿಮಿತ್ತ ಅಷ್ಟೆ. ಅವನು ಒಟ್ಟು ಕನ್ನಡ ಭಾಷೆಯನ್ನು ಮೊದಲು ಜ್ಞಾನಾಸಕ್ತಿಗಳಿಗೆ ಸಜ್ಜುಗೊಳಿಸುವುದು ಹೇಗೆ ಎಂದು ಯೋಚನೆ ಮಾಡ್ತಾ ಇದ್ದಾನೆ. ಕನ್ನಡದಲ್ಲಿ ತರ್ಕ ವಿಚಾರಗಳನ್ನು ಅಥವಾ ತಾತ್ವಿಕ ವಿಚಾರಗಳನ್ನು ಪ್ರಸ್ತುತಪಡಿಸುವುದು ಹೇಗೆ ಅನ್ನೋ ಪ್ರಶ್ನೆ ಕೂಡ ಇದೆ. ಈ ತರಹ ಬೇರೆ ಬೇರೆ ಜ್ಞಾನಶಾಖೆಗಳಿಗೆ ಕನ್ನಡವೊಂದು ಸಿದ್ಧಗೊಳ್ಳಬೇಕಾಗಿದೆ. ಹಾಗೆ ಸಿದ್ಧಗೊಳಿಸಿದ್ದು ಕೂಡ ಬಹಳ ಖಚಿತವಾಗಿ ಬಹಳ ಕಾಲದ ತನಕ ನೆಲೆಗೊಂಡಿತು ಎಂದು ಕೂಡ ತಿಳಿಯುವಂತಿಲ್ಲ. ಏಕೆಂದರೆ ನಮಗೇ ಗೊತ್ತಿದೆ, ೧೨ನೇ ಶತಮಾನದ ಸಂದರ್ಭದಲ್ಲೇ ಈ ರೀತಿಯಾದಂತಹ ಚಿಂತನೆಗಳು ಪಲ್ಲಟಗೊಂಡುಬಿಟ್ಟವು. ವಚನಕಾರರ ಕಾಲದಲ್ಲಿ ಕನ್ನಡದ ಭಾಷೆಯಲ್ಲೇ ಒಂದು ವಿಶಿಷ್ಟವಾದಂತಹ ಬದಲಾವಣೆಗಳು ಏರ್ಪಟ್ಟವು. ಹೀಗಾಗಿ ಮಾರ್ಗಕಾರ ನಿರೂಪಿಸಿದಂತಹ

ವಿಚಾರಗಳು ಒಂದೆರಡು ಶತಮಾನಗಳ ತನಕ ಕನ್ನಡದಲ್ಲಿ ಪ್ರಸ್ತುತವಾಗಿದ್ದಿರಬಹುದು. ಇದನ್ನ ಯಾಕೆ ಹೇಳ್ತಾ ಇದ್ದೀನಿ ಅಂದ್ರೆ, ಮಾರ್ಗಕಾರನ ವಿಚಾರಗಳು ಒಂದು ರೀತಿಯಲ್ಲಿ ನಿರ್ದಿಷ್ಟತೆಯನ್ನು ಹಾಗೆ ಪಡೆದುಕೊಳ್ಳಲಿಲ್ಲ ಅಂತ ಅನ್ನುವುದಕ್ಕೆ; 'ಕವಿರಾಜಮಾರ್ಗ'ದಿಂದ ಮುಂದೆ ಕನ್ನಡ ಭಾಷೆಯಲ್ಲಿ ಆಗಿ ಹೋದಂತಹ ಕವಿಗಳ ಪ್ರಯೋಗದಿಂದ ಕೂಡ ಇದನ್ನು ಪರ್ಯಾಲೋಚಿಸಬಹುದು. ಆದ್ದರಿಂದ ಕವಿರಾಜಮಾರ್ಗಕಾರ ತನ್ನ ವಿಚಾರಗಳನ್ನು ಮಂಡಿಸುವುದಕ್ಕೆ ಭಾಷಾತತ್ವಗಳನ್ನ ಮುಖ್ಯವಾಗಿ ಆಧಾರ ಮಾಡಿಕೊಂಡ. ಇದನ್ನು ಇವತ್ತಿನ ಮಾತಿನಲ್ಲಿ ಹೇಳುವುದಾದರೆ, ಆತ ಭಾಷಾಶಾಸ್ತ್ರದ ಮೂಲಕ ವಿಚಾರ ಮಾಡ್ತಿದ್ದಾನೆ; ಒಂದು ರೀತಿ ಭಾಷೆಯ ಗುಣವನ್ನು ಕೇಂದ್ರಮಾಡಿಕೊಂಡೇ ಕಾವ್ಯಮೀಮಾಂಸೆಯನ್ನು ಹೇಳ್ತಾ ಇದ್ದಾನೆ.

ಕವಿರಾಜಮಾರ್ಗಕಾರ ಭಾಷೆಯ ಕೇಂದ್ರವಾಗಿಟ್ಟುಕೊಂಡು ಕಾವ್ಯ ಮೀಮಾಂಸೆಯನ್ನು ಮಾತ್ರವಲ್ಲ; ಭಾಷಾ ಸಂಸ್ಕೃತಿಯ ಇನ್ನಿತರ ವಿಚಾರಗಳನ್ನ ಮಾತನಾಡ್ತಾ ಇದ್ದಾನೆ. ವ್ಯಾಕರಣ ಮತ್ತು ಕನ್ನಡ ಭಾಷೆಯ ಮೊದಲಿನ ಸ್ಥಾನಿಕ ಸ್ತರಗಳು, ಛಂದಸ್ಸು ಇವುಗಳ ಚರ್ಚೆ ಕೂಡ 'ಕವಿರಾಜಮಾರ್ಗ'ದಲ್ಲಿದೆ. ಇದು ಕಾವ್ಯಭಾಷೆಯ ನಿರ್ಮಾಣಕ್ಕೆ ಮಾತ್ರ ಸೀಮಿತವಾದದ್ದಲ್ಲ. ಕನ್ನಡದಲ್ಲಿ ಇಲ್ಲಿಯತನಕ ಬಂದಿರುವ ಚರ್ಚೆಗಳನ್ನು ಗಮನಿಸಿದರೆ, 'ಕವಿರಾಜಮಾರ್ಗ'ವನ್ನು ವಿಶೇಷವಾಗಿ ಒಂದು ಕಾವ್ಯಮೀಮಾಂಸೆಯ ತತ್ವವನ್ನು ಕುರಿತ ವಿಚಾರದ ಗ್ರಂಥವಾಗಿ ಪರಿಭಾವಿಸಿಕೊಂಡು ಬರಲಾಗಿದೆ. ಇಲ್ಲಿನ ಉದ್ದೇಶ ತನ್ನ ಕಾಲದಲ್ಲಿ ಇನ್ನಿತರ ಜ್ಞಾನಶಾಖೆಗಳನ್ನು ಕುರಿತು ಹೇಳೋದಕ್ಕೆ ಕನ್ನಡ ಭಾಷೆಯನ್ನು ಸಜ್ಜುಗೊಳಿಸೋದು. ಸ್ವಲ್ಪ ವ್ಯಾಪಕವಾಗಿದೆ ಅವನ ಕಲ್ಪನೆ. ಅಂದ್ರೆ ಕಾವ್ಯಭಾಷೆ ಎನ್ನುವಂಥದ್ದು ಅವನು ಕೇವಲ ಇವೊತ್ತಿನ ದೃಷ್ಟಿಯಲ್ಲಿ ಹೇಳ್ತಿಲ್ಲ. ಕಾವ್ಯಭಾಷೆಯ ನಿರ್ಮಾಣ ಅಂದ್ರೇನೇ, ಒಳ್ಳೆಯ ಕಾವ್ಯಭಾಷೆಯೊಂದು ಸಂಸ್ಕೃತಿಯಲ್ಲಿ ಬೇರೆ ಬೇರೆ ಜ್ಞಾನಶಾಖೆಗಳಿಗೆ ಕೂಡ ಹಾಯಬಲ್ಲದು ಎನ್ನುವ ಕಲ್ಪನೆ ಅವನಲ್ಲಿ ಇದ್ದ ಹಾಗೆ ತೋರುತ್ತೆ. ಇವತ್ತು ಕನ್ನಡ ಕವಿಗಳು ತುಂಬಾ ಸಮರ್ಥವಾಗಿ ಕಾವ್ಯಭಾಷೆಯನ್ನು ರೂಪಿಸ್ತಾ ಹೋದ್ರೆ, ಅದು ಕಾವ್ಯಕ್ಕೆ ಮಾತ್ರ ಸೀಮಿತವಾಗಬೇಕಾದ್ದಿಲ್ಲ. ಬೇರೆ ಜ್ಞಾನಶಾಖೆಗಳಿಗೂ ಕೂಡ ಕವಿಗಳು ರೂಪಿಸತಕ್ಕಂಥ ಭಾಷೆ ಬಳಕೆ ಆಗಬಹುದು. ಇಷ್ಟು ದೊಡ್ಡದಾದಂತಹ ಕಲ್ಪನೆ ಮಾರ್ಗಕಾರನಿಗೆ ಇದ್ದ ಹಾಗೆ ತೋರುತ್ತಾ ಇದೆ. ಆದ್ದರಿಂದ ಕಾವ್ಯದ ಭಾಷೆ ನಿರ್ಮಾಣ ಅಂದ ತಕ್ಷಣ, ಅದು ಕೇವಲ ಸೀಮಿತವಾದ ದೃಷ್ಟಿಯಲ್ಲಿ ಕಾವ್ಯಕ್ಕೆ ಮಾತ್ರ ಅನ್ವಯಗೊಳ್ಳುವ ಭಾಷೆ ಎಂದು ತಿಳಿಬೇಕಾಗಿಲ್ಲ. ಏಕೆಂದರೆ ಕಾವ್ಯ ಅನ್ನೋದು ಭಾಷಾ ಸಂಸ್ಕೃತಿಯ ಅತ್ಯಂತ ಸೂಕ್ಷ್ಮಾಂಗಗಳಲ್ಲಿ ಒಂದು ಅದು. ಒಬ್ಬ ಕವಿ ಭಾಷಾ ಬಳಕೆಯ ಅತ್ಯಂತ ಸೂಕ್ಷ್ಮವಾದಂತಹ ನೆಲೆಯಲ್ಲಿ ನಿಂತಿರುತ್ತಾನೆ. ಅಂತಹ ಗ್ರಹಿಕೆಯ ಹಿನ್ನೆಲೆಯಲ್ಲಿ ಮಾತನಾಡ್ತಾ ಇದ್ದೀನಿ. ಕಾವ್ಯ ಮತ್ತು ಕಾವ್ಯೇತರ ಎನ್ನುವಂತಹ ವಿಂಗಡಣೆ ನಮ್ಮಲ್ಲಿ ಬೆಳೆದುಕೊಂಡು ಬಂದದ್ದು, ಬಹುಕಾಲದ ನಂತರ; ಅದರಲ್ಲೂ

ಕೂಡ ೧೮-೧೯ನೇ ಶತಮಾನದ ಸಂದರ್ಭದಲ್ಲಿ ಮತ್ತು ಅನಂತರದಲ್ಲಿ, ಕಾವ್ಯ ಮತ್ತು ಕಾವ್ಯೇತರ ಎನ್ನುವಂತಹ ಸ್ಪಷ್ಟವಾದಂತಹ ವಿಭಜನೆ ಸ್ವಲ್ಪ ಕಾಣುತ್ತೆ. ಆದ್ರೆ ಮಾರ್ಗಕಾರನ ಸಂದರ್ಭದಲ್ಲಿ ಆ ರೀತಿಯಾದಂತಹ ಒಂದು ಸ್ಪಷ್ಟ ವಿಂಗಡಣೆ ಇದ್ದ ಹಾಗೆ ತೋರಲ್ಲ.

ಬೆಳಿಗ್ಗೆ ನಾರಾಯಣ್ ಅವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಆ ಹಿನ್ನೆಲೆಯೊಳಗಡೆ ಇನ್ನೊಂದಷ್ಟು ಅಂಶಗಳನ್ನು ಸೇರಿಸಬಹುದು ಅಂದ್ಕೊಂಡಿದ್ದೀನಿ. ಕನ್ನಡಕ್ಕೆ ಒಂದು 'ಪ್ರಮಾಣ ಭಾಷೆ'ಯನ್ನು ನಿರ್ಮಾಣ ಮಾಡುವುದು ಮಾರ್ಗಕಾರನ ಉದ್ದೇಶ ಆಗಿದೆ. ಅಷ್ಟೇ ಅಲ್ಲ, ಅವನಲ್ಲಿ ಮುಖ್ಯವಾದ ಗುರಿ ಅಂದ್ರೆ, ಲಿಖಿತ ಭಾಷೆಯ ಬಗೆಗೆ ವಿಶೇಷ ಒತ್ತು ಇರೋದು. ಲಿಖಿತವಲ್ಲದೇ ಇರೋವಂತಹ ಬೆದಂಡೆ, ಚತ್ತಾಣ, ಮುಂತಾದ ಬೇರೆ ಬೇರೆ ಕಾವ್ಯ ಪ್ರಕಾರಗಳ ಬಗೆಗೆ ಅವನು ಮಾತನಾಡ್ತಾನೆ, ಸರಿ. ಆದ್ರೆ ಮುಂದಕ್ಕೆ ಅವನು ನಿರೂಪಿಸತಕ್ಕಂತಹ ಚಿಂತನೆ ಒಂದ್ ರೀತಿ ಕನ್ನಡದ ಲಿಖಿತ ಭಾಷೆಗೆ ಸಂಬಂಧಿಸಿದ್ದು, ಹೀಗಾಗಿ ಲಿಪಿಗೆ ಒಳಪಡುವ ಭಾಷಾ ಸಂದರ್ಭಕ್ಕೆ ವಿಶೇಷವಾದಂತಹ ಗಮನಕೊಡೋದು ಮಾರ್ಗಕಾರನ ಒಂದು ಆಶಯ ಆಗಿದೆ. ಅಷ್ಟೇ ಅಲ್ಲ, ಹೀಗೆ ಕನ್ನಡ ಭಾಷೆಯನ್ನು ಒಂದು ರೂಪಕ್ಕೆ ತಂದುಕೊಳ್ಳುವುದಕ್ಕೆ, ಇವೊತ್ತು ನಮ್ಮ ಭಾಷಾ ಶಾಸ್ತ್ರದಲ್ಲಿ 'ಸ್ಟ್ಯಾಂಡರ್ಡೈಜೇಶನ್' ಅಂತ ಯಾವುದನ್ನ ಕರಿತೀವಿ. ಅಂತಹ 'ಸ್ಟ್ಯಾಂಡರ್ಡೈಜೇಶನ್'ಗೆ ಆತ ಪ್ರಯತ್ನ ಮಾಡ್ತಾ ಇದ್ದಾನೆ. ಸ್ಟ್ಯಾಂಡರ್ಡೈಜೇಶನ್ ಮಾಡ್ದೆ, ಒಂದ್ ಭಾಷೆಯನ್ನ ಬೇರೆ ಬೇರೆ ಜ್ಞಾನಶಾಖೆಗಳಿಗೆ ಪ್ರಯುಕ್ತಗೊಳಿಸೋದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಕಲ್ಪನೆ ಅವನಿಗೆ ಇತ್ತು. ಹೀಗಾಗಿ ಒಂದು ಪ್ರಮಾಣಬದ್ಧ ಭಾಷೆಯ ನಿರ್ಮಾಣಕ್ಕೆ ಮಾರ್ಗಕಾರ ಪ್ರಯತ್ನ ಪಡ್ತಿದ್ದಾನೆ. ಆಗಲೇ ಈ ಸಮಸಂಸ್ಕೃತದ ಸಂಬಂಧವನ್ನು ಕುರಿತು ಮಾತನಾಡೋದು; ಅಥವಾ ಸಂಸ್ಕೃತ ಪದಗಳೊಡನೆ ಕನ್ನಡ ಪದಗಳನ್ನ ಸಮಾಸ ಮಾಡ್ತಕ್ಕಂತಹ ಕಲ್ಪನೆ ಮತ್ತು ಹಳಗನ್ನಡವನ್ನ ಹೊಸಕಾಲದಲ್ಲಿ ಬಹಳ ಬೇರೆ ರೀತೀಲಿ ಬೆರಸಬಾರದು ಎನ್ನುವಂತಹ ಕೆಲವು ರಿಸ್ಟ್ರಿಕ್ಷನ್ಸ್ ಮಾರ್ಗಕಾರ ಹಾಕ್ತಾನೆ. ಹೀಗೆ ಮಾರ್ಗಕಾರ ಒಂದು ಪ್ರಮಾಣಬದ್ಧ ಭಾಷೆಯ ರೂಪಿಸುವುದರ ಕಡೆಗೆ ವಿಶೇಷವಾದಂತಹ ಗಮನ ಕೊಡ್ತಾನೆ. ಇವನ ದೋಷಕ್ಕೆ ಸಂಬಂಧಪಟ್ಟಂತಹ ಒಟ್ಟು ವಿವರಗಳನ್ನು ಪರಿಶೀಲಿಸಿದ್ರೆ, ಈ ಪ್ರಮಾಣ ಭಾಷೆಯ ನಿರ್ಮಾಣದ ಕಡೆಗೆ ಗಮನ ಇರೋದು ಗೊತ್ತಾಗುತ್ತೆ. ಯಾವುದು ದೋಷ ಅಂತ ಅನ್ನುತ್ತೆ, ಆ ಎಲ್ಲ ದೋಷಗಳು ಕೂಡ ಈ ಪ್ರಮಾಣೀಕರಣದ ಪ್ರಕ್ರಿಯೆಯಲ್ಲಿ ಒಂದು ಸಾಧುವಾದಂತಹ ರೂಪವನ್ನ ಸಾಧಿಸಲಿಕ್ಕೆ ಸಾಧ್ಯವಾಗಲ್ಲ - ದೋಷ ಇದ್ದರೆ. ಹೀಗಾಗಿ ಕನ್ನಡ ಭಾಷೆಯನ್ನು ದೋಷ ರಹಿತವನ್ನಾಗಿ ಮಾಡಬೇಕೆನ್ನುವುದು ಅವನ ಮುಖ್ಯವಾದ ಕಲ್ಪನೆ. ಆದ್ದರಿಂದ ಎರಡು ದೋಷವರ್ಗಗಳನ್ನು ತನ್ನ ಕೃತಿಯಲ್ಲಿ ಹೇಳ್ತಾನೆ. ಒಂದು ದುಷ್ಟವಾದಂತಹ ದೋಷವರ್ಗ, ಅಂದ್ರೆ ಯಾವುದು ಅಸಂಗತವಾಗುತ್ತೊ ಅಂತಹ ದೋಷವರ್ಗವೊಂದನ್ನ ಕಲ್ಪಿಸಿದ್ದಾನೆ.

ಎರಡನೇದಾಗಿ ಒಂದು ಕಷ್ಟವಾದ ದೋಷವರ್ಗ ಅಂತ ಹೇಳ್ತಾನೆ. ಜೊತೆಗೆ ತನ್ನ ಕೃತಿಯ ಮೂಲಕವಾಗಿಯೇ ಕನ್ನಡಕ್ಕೆ ಮೊಟ್ಟ ಮೊದಲನೆ ಬಾರಿಗೆ ವ್ಯಾಕರಣವನ್ನು ನಿರ್ಮಾಣ ಮಾಡುವ ಉದ್ದೇಶ ಅವನಿಗೆ ಇದ್ದ ಹಾಗೆ ಕಾಣ್ತದೆ. ಒಂದು ಸಾದ್ಯಂತವಾದಂತಹ ವ್ಯಾಕರಣವನ್ನ ನಿರ್ಮಾಣ ಮಾಡ್ಲೆ ಹೋದ್ರು ಕೂಡ, ಒಂದು ಭಾಷೆಯ ಮುಖ್ಯವಾದಂತಹ ವ್ಯಾಕರಣದ ನೆಲೆಗಳನ್ನು ತನ್ನ ಕೃತಿಯೊಳಗಡೆ ಆತ ನಿರೂಪಿಸ್ತಾನೆ. ಹೀಗಾಗಿ ಇದು ಒಂದು ರೀತಿಯಲ್ಲಿ ಕನ್ನಡದ ಮೊದಲನೆಯ ವ್ಯಾಕರಣ ಕೃತಿಯೂ ಹೌದು. ತನ್ನ ಕಾಲದ ವ್ಯಾಕರಣವನ್ನ ನಿರ್ಮಾಣ ಮಾಡುವುದರ ಜೊತೆಗೆ ತನ್ನ ಕಾಲದ ಭಾಳಾ ಮುಖ್ಯವಾದಂತಹ ಛಂದಶ್ಯಾಸ್ತ್ರವನ್ನು ಕೂಡ ಮಾರ್ಗಕಾರ ನಿರ್ಮಾಣ ಮಾಡ್ತಾನೆ. ಈ ಛಂದಶ್ಯಾಸ್ತ್ರ ಅನ್ನೋದು ಕೇವಲ ಕಾವ್ಯಕ್ಕೆ ಸಂಬಂಧಪಟ್ಟ ಹಾಗೆ ವಿಚಾರ ಮಾಡಬೇಕಾಗಿಲ್ಲ. ಯಾಕೆಂದರೆ ನಮ್ಮ ಹಿಂದಿನ ಅನೇಕ ಶಾಸ್ತ್ರಗಳು ಛಂದೋಬದ್ಧವಾಗಿಯೇ ನಿರೂಪಿತವಾಗ್ತಾ ಇದ್ದುದರಿಂದ, ಅವನಿಗೆ ಛಂದಸ್ಸನ್ನು ಹೇಳುವ ಉದ್ದೇಶ ಕೂಡ ಇದೆ. ಜೊತೆಗೆ ಕನ್ನಡಕ್ಕೆ ಒಂದು ಕಾವ್ಯತತ್ವವನ್ನು ಹೇಳುವಂತಹ ವಿಚಾರಂತೂ ನಮ್ಮೆಲ್ಲರಿಗೂ ತಿಳಿದಿರುವಂತಹ ಅಂಶವಾಗಿದೆ. ಅಂದ್ರೆ ಇಲ್ಲಿ ಅವನ ಈ 'ದೇಸಿ' ಮತ್ತು 'ಮಾರ್ಗ'ವನ್ನು ಕುರಿತಾದ ಚರ್ಚೆ ವಿಶೇಷವಾಗಿ ಚರ್ಚಿತವಾಗಿರೋ ಅಂಶವಾಗಿದೆ. ಅದನ್ನು ಕುರಿತು ಮುಂದೆ ಪ್ರಸ್ತಾಪ ಮಾಡ್ತೀನಿ ನಾನು.

ಕನ್ನಡ ಭಾಷೆಯಲ್ಲಿ ಬೆಳಿಗ್ಗೆ ಪ್ರಸ್ತಾಪವಾದ ಹಾಗೆ, ಅನೇಕ ಡಿಫರೆನ್ಸ್‌ಗಳು ಇವೆ. ಕನ್ನಡ ಭಾಷೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಾಗಿ ಇರತಕ್ಕಂತಹ ವ್ಯತ್ಯಾಸಗಳಲ್ಲಿ ಪ್ರಯೋಗ ಆಗ್ತಾ ಇದೆ. ಈ ಡಿಫರೆನ್ಸಿನ ಇರುವಿಕೆ ಇದೆಯಲ್ಲ ಅದು, ಒಂದು ರೀತಿಯಲ್ಲಿ ಒಂದು ಭಾಷಾ ಸಂಸ್ಕೃತಿಯ 'ಅಂಥೆಂಟಿಸಿಟಿ'ಗೆ ಸಂಬಂಧಿಸಿದ್ದು. ಕನ್ನಡದಲ್ಲಿ ಇವತ್ತಿಗೂ ಕೂಡ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಆದಂತಹ ಕನ್ನಡ ಭಾಷೆ ಬಳಕೆ ಆಗ್ತಾ ಇರುವುದೇ, ಈ ಸಂಸ್ಕೃತಿಯ ಒಂದು ಅಂಥೆಂಟಿಸಿಟಿಯನ್ನ ಖಚಿತಪಡಿಸುತ್ತೆ. ಸಂಸ್ಕೃತಕ್ಕೆ ಈ ರೀತಿಯಾದಂತಹ ಡಿಫರೆನ್ಸಸ್ ಇದೆಯಾ? ಈವಾಗ ಪಾಂಚಾಲಿ, ಲಾಟಿ, ಗೌಡೀ ಮುಂತಾದ ಪ್ರಬೇಧಗಳು ಸಂಸ್ಕೃತ ಭಾಷೆಯಲ್ಲಿವೆ. ಆದರೆ ಅವು ಒಂದ್ ರೀತೀಲಿ ಮೇಲ್‌ನೋಟಕ್ಕೆ ಗೊತ್ತಾಗದ ರೀತಿಯಲ್ಲಿ ಅಡಗಿವೆ. ಆದ್ದರಿಂದ ಸಂಸ್ಕೃತಕ್ಕೆ ಇಲ್ಲದೇ ಇರುವಂತಹ ಅಂಥೆಂಟಿಸಿಟಿ ಕನ್ನಡ ಭಾಷೆಗಿದೆ. ಅಂದರೆ ಅದನ್ನ ಮಾತನ್ನಾಡುವ ಕಾರಣದಿಂದ, ವ್ಯವಹಾರದಲ್ಲಿ ಬೇರೆ ಬೇರೆ ರೀತೀಲಿ ಬಳಕೆಯಾಗುವ ಕಾರಣದಿಂದ, ಸಾಮಾಜಿಕ ಸ್ತರದಲ್ಲಿ ಬೇರೆ ಬೇರೆ ಜಾತಿ-ಕಸುಬುಗಳಿಗೆ ಸೇರಿದಂತಹ ಜನ, ಬೇರೆ ಬೇರೆ ರೀತಿಯಾದ ಭಾಷೆಯನ್ನ ಬಳಸ್ತಾರೆ ಎನ್ನುವ ಕಾರಣದಿಂದ, ಈ ಅಸಂಖ್ಯವಾದ ಭಾಷಾ ಪ್ರಬೇಧಗಳು ಇದ್ದು. ಅವು ಮಾರ್ಗಕಾರನ ಗಮನಕ್ಕೆ ಬಂದಿವೆ. ಹೀಗಾಗಿ ಇದು ಡಿಫರೆನ್ಸಸ್ ಅಂತನ್ನೋದು ಒಂದು ಭಾಷೆಯ ನಿಜವಾದ ಸತ್ವ. ಆದರೆ ಮಾರ್ಗಕಾರ ಒಂದು ರೀತಿಯಿಂದ ಈ ಡಿಫರೆನ್ಸ್‌ಗಳನ್ನ ಒಂದ್ ರೀತೀಲಿ ಕಳೆವ ಪ್ರಯತ್ನ

ಮಾಡ್ತಾ ಇದಾನೆ. ಪೂರ್ತಿ ಅದನ್ನ ಕಳೀತಾನೆ ಅಂತ ನಾನು ಹೇಳ್ತಾ ಇಲ್ಲ. ಆ ಡಿಫರೆನ್ಸ್‌ಗಳನ್ನ ಅದಷ್ಟೂ ಕಡಿಮೆ ಮಾಡಿದಾಗ ಮಾತ್ರ, ಕನ್ನಡ ಭಾಷೆ ಸಮರ್ಥವಾದ ಒಂದು ಜ್ಞಾನವಾಹಿಯಾಗಿ ಬೇರೆ ಬೇರೆ ಶಾಸ್ತ್ರಗಳಿಗೆ ಒದಗಿ ಬರುತ್ತೆ ಅನ್ನೋ ಕಲ್ಪನೆ ಅವನಿಗೆ ಇದ್ದ ಹಾಗೆ ತೋರ್ತಾ ಇದೆ. ಒಂದ್ ರೀತೀಲಿ ಕನ್ನಡ ಭಾಷೆಯನ್ನು ಒಂದು ಸರ್ವವ್ಯಾಪ್ತೀಕರಣಕ್ಕೆ ಗುರಿಪಡಿಸುವುದು ಹೇಗೆ ಅನ್ನುವ ಪ್ರಶ್ನೆ ಇಲ್ಲಿನದು. ಇದನ್ನ ಬೇಂದ್ರೆಯವರು ತಮ್ಮ 'ಗರಿ' ಪುಸ್ತಕದ ಮುನ್ನುಡಿಯಲ್ಲಿ ಕೂಡ ಬರೀತಾರೆ - 'ಆ ಕನ್ನಡವೆನ್ನದೆ ಈ ಕನ್ನಡವೆನ್ನದೆ ಒಂದು ಕನ್ನಡವಾಗುವ ಕಡೆಗೆ ಇಲ್ಲಿನ ಕವಿತೆಗಳಿವೆ' ಅಂತ. ಅನೇಕ ಕನ್ನಡಗಳು ಇವೆ ಸರಿ. ಆದರೆ ಇಲ್ಲಿ ಒಂದು ದೇಶಿಯನ್ನು ಹುಡುಕುವ ಪ್ರಯತ್ನವಿದೆ ಅಂತನ್ನೋ ಮಾತನ್ನ ತಮ್ಮ ಮುನ್ನುಡಿಯಲ್ಲಿ ಹೇಳ್ತಾರೆ. ದೇಸಿಯನ್ನು ದೇಸಿಯ ಮೂಲಕವೇ ಹುಡುಕಬೇಕಾಗಿದೆ. ಇನ್ನೂ ಮುಂದುವರಿದು ದೇಸಿಯ ಶಬ್ದಕೋಶಗಳು ನಿರ್ಮಾಣವಾಗಬೇಕು ಎನ್ನುವುದನ್ನು ಬೇಂದ್ರೆಯವರು ಸೂಚಿಸ್ತಾರೆ. ಇದು ಕೂಡ ಕನ್ನಡ ಭಾಷೆಯನ್ನು ಒಂದು ಸರ್ವವ್ಯಾಪ್ತಿಯಾಗಿಸುವ ಪ್ರಯತ್ನ.

ಈ ಪ್ರಯತ್ನ ಪಾಶ್ಚಾತ್ಯ ಸಂದರ್ಭದಲ್ಲಿ ರಿನೈಸಾನ್ ಸಂದರ್ಭದಲ್ಲಿ ನಡೆದಂತಹ ರೀತೀಲಿ ನಡೀತು ಅನ್ನಬಹುದು. ಇಂಗ್ಲಿಷ್ ಭಾಷೆ ಅನೇಕ ಕವಲುಗಳಾಗಿ ಅನೇಕ ಪ್ರಭೇದಗಳಾಗಿ ಒಡೆದಿದ್ದಾಗ, ಅವನ್ನೆಲ್ಲಾ ಸಂಘಟಿಸುವ, ಸಂಗೋಪನ ಮಾಡುವ ಪ್ರಯತ್ನ, ಪಾಶ್ಚಾತ್ಯ ಸಂದರ್ಭದಲ್ಲಿ ನಡೀತು. ಹೀಗೆಯೇ ಒಂದು ಕನ್ನಡ ಭಾಷೆಯನ್ನ ಇನ್ನಿತರ ಭಾಷೆಗಳೊಂದಿಗೆ ಸಮಾವೇಶಗೊಳಿಸುವಿಕೆ ಮಾರ್ಗಕಾರನ ಬಹಳ ಮುಖ್ಯವಾದ ಗುರಿ. ಇನ್ನಿತರ ಅಂದ್ರೆ ಇಲ್ಲಿ ಪ್ರಧಾನವಾಗಿ ಕನ್ನಡ ಮತ್ತು ಪ್ರಾಕೃತ. ಇದೊಂದು ರೀತೀಲಿ ಡಿಸ್ಕವರಿ ಕೂಡ ಆಗಿದೆ ನಮಗೆ. ಇನ್ನೊಂದ್ ರೀತೀಲಿ ಕನ್ನಡ ಭಾಷೆಯ ಒಳಗೆ ನಿಂತು ಕನ್ನಡ ಭಾಷೆಯನ್ನ ಮತ್ತೆ ಸಂಘಟಿಸಿಕೊಳ್ಳುವುದು. ಕನ್ನಡದ ಬೇರೆ ಬೇರೆ ಪ್ರಭೇದಗಳ ನಡುವೆ ಒಂದು ಕ್ರಮಬದ್ಧವಾದ ಕನ್ನಡವನ್ನ ನಿರೂಪಿಸಿಕೊಳ್ಳುವುದು. ಇದು ಕನ್ನಡೀಕರಣಕ್ಕೆ ಸಂಬಂಧಪಟ್ಟಂತಹ ಒಂದು ಪ್ರಯತ್ನವಾಗಿದೆ.

ಹೀಗಾಗಿ ಬೇರೆ ಬೇರೆ ಲೇಖಕರು, ಅವನ ಹಿಂದೆ ಬಂದಂತಹ ಹಳಗನ್ನಡ ಕವಿಗಳು, ಒಂದು ನಿರ್ದಿಷ್ಟವಾದ ಭಾಷಾ ಸಂದರ್ಭಕ್ಕೆ ಮಾತ್ರ ಒಳಪಡದೆ, ಬೇರೆ ಬೇರೆ ಡೈಲೆಕ್ಟುಗಳಿಗೆ ಸಂಬಂಧಪಟ್ಟವರಾಗಿರಬಹುದು ಅಂತ ಯೋಚನೆ ಮಾಡೋಕೆ ಸಾಧ್ಯ ಆಯ್ತು. ಮಾರ್ಗಕಾರನಿಗೆ ಅವನ ಹಿಂದಿನ ಕಪಿಗಳು- ಅವರೆಲ್ಲಾ 'ಪಳಗನ್ನಡ' ಕವಿಗಳು- ಯಾಕೆ ಅರ್ಥಪೂರ್ಣವಾಗಿ ಕಾಣುವುದಿಲ್ಲ ಅಂತಂದ್ರೆ, ಅವರೆಲ್ಲಾ ಬೇರೆ ಬೇರೆ ಡೈಲೆಕ್ಟುಗಳಿಗೆ ಸಂಬಂಧಪಟ್ಟು ಬರೀತಾ ಇದ್ದರು. ಪಳಗನ್ನಡ ಅಂತ ಏನ್ ಹೇಳ್ತಾನೆ ಅವನು, ಅದು ಕೂಡ ಅಂತಹ ಒಂದು ಡೈಲೆಕ್ಟಿನಲ್ಲೇ ರಚನೆಯಾಗ್ತಿದ್ದಂತಹ ಕೃತಿಗಳಾಗಿದ್ದಿರ ಬಹುದು ಅಂತ ನಾವು ಊಹಿಸೋದಕ್ಕೆ ಸಾಧ್ಯವಿದೆ. ಹೀಗಾಗಿ 'ಕವಿರಾಜಮಾರ್ಗ'ವು ತನ್ನ ಕಾಲದ ಅನೇಕ ಉಪಭಾಷೆಗಳ ನಡುವೆ ಒಂದು ಪ್ರಮಾಣೀಕರಣಕ್ಕೆ ಪ್ರಯತ್ನ

ಮಾಡುವಂತಹದ್ದು. ಅದನ್ನು ನಿರ್ಮಿಸುವುದು ಅಥವಾ ರೂಪಿಸುವುದು ಮಾರ್ಗಕಾರನ ಉದ್ದೇಶ. ಅಂದ್ರೆ ಅವನು ಇವೆಲ್ಲವೂ ಕೂಡ ಒಂದು ರೀತಿಯಲ್ಲಿ ಪ್ರಭುತ್ವದ ಸಂದರ್ಭಕ್ಕೆ ಪ್ರಮೋಟ್ ಮಾಡುವುದನ್ನ ಮಾಡ್ತಾ ಇದ್ದಾನೆ. ಪ್ರಭುತ್ವದ ಚೌಕಟ್ಟಿಗೆ ಅಸಂಖ್ಯ ಭಾಷೆಗಳನ್ನ ಒಗ್ಗೂಡಿಸುವುದಕ್ಕೆ ಪ್ರಯತ್ನ ಮಾಡ್ತಾ ಇದ್ದಾನೆ. ನಾರಾಯಣ ಅವರು ಅದನ್ನ ಬೆಳಿಗ್ಗೆ ಸೂಚಿಸಿದಂತೆ, ಪ್ರಭುತ್ವದ ಉದ್ದೇಶಕ್ಕೆ ಅನುಗುಣವಾಗಿ ಒಂದು ಭಾಷೆಯನ್ನ ನಿರ್ಮಾಣ ಮಾಡ್ತಾ ಇದ್ದಾನೆ.

ಹಾಗಂದ ಮಾತ್ರಕ್ಕೆ, ಪ್ರಭುತ್ವದ ಭಾಷೆ ಆ ರೀತಿ ಸ್ಥಿರಗೊಂಡಿತು ಎಂದು ತಿಳಿಯಬೇಕಾದ್ದಿಲ್ಲ. ಯಾಕೆಂದರೆ ಮುಂದೆ ಬಂದಂತಹ ಕವಿಗಳು ಕೂಡ ಒಂದು ರೀತಿ 'ಮಾರ್ಗ' ಅಂತಲೇ ಪ್ರಯತ್ನ ಮಾಡಿದರು. ಈಗ ಪಂಪನ ಕಾವ್ಯ ಭಾಷೆಯನ್ನ ಗಮನಿಸಿದರೆ ಅಥವಾ ರನ್ನ ಜನ್ನರ ಕಾವ್ಯಗಳನ್ನ ನೋಡಿದರೆ, ಮಾರ್ಗ ಕಾರಣಕ್ಕೆ ಆಶಯಕ್ಕೆ ಒಳಪಟ್ಟು ಅವರು ತಮ್ಮ ಕಾವ್ಯ ಭಾಷೆಯನ್ನು ರೂಪಿಸಿಕೊಂಡಂತಹವರಲ್ಲ. ಅವರು ತಮ್ಮ ತಮ್ಮ ಸ್ವಾತಂತ್ರ್ಯವನ್ನ ಪಡೆಯೋದರ ಕಡೆಗೆ ಚಲಿಸ್ತಾರೆ. ಹೀಗಾಗಿ ಮಾರ್ಗಕಾರ ತಾನೇ ತನ್ನ ಕಾಲದ ಕವಿಗಳಿಗೆ ಅಥವಾ ಒಟ್ಟು ಕನ್ನಡ ಭಾಷೆಯನ್ನ ಬೇರೆ ಬೇರೆ ಜ್ಞಾನಶಾಖೆಗಳಿಗೆ ರೂಪಿಸುವುದಕ್ಕೆ ಒಂದು ನೆಲೆಯನ್ನ ಕ್ರಿಯೇಟ್ ಮಾಡ್ತಾ ಇದ್ದಾನೆ. ಆದ್ರೆ ಕವಿಗಳು ಆ ನೆಲೆಯಲ್ಲೇ ನಿಲ್ಲಲಿಲ್ಲ. ಯಾಕೆಂದರೆ ಆ ನೆಲೆಯನ್ನ ಮೀರಿ ಬೇರೆ ಬೇರೆ ರೀತಿಯ ಹುಡುಕಾಟಗಳಲ್ಲಿ ನಮ್ಮ ಕವಿಗಳು ತೊಡಗುತ್ತಾರೆ ಅನ್ನೋದನ್ನ ಕನ್ನಡ ಕಾವ್ಯದ ಬೇರೆ ಬೇರೆ ಪ್ರಯೋಗಗಳಿಂದ ತಿಳೀಬಹುದು. ಮಾರ್ಗಕಾರನಿಗೂ ಒಂದು ರೀತಿಯಾದ ಸೋಶಿಯಲ್ ಆದಂತಹ ಪೊಲಿಟಿಕಲ್ ಆದಂತಹ ಲಾಂಗ್ ವೇಜನ್ನ ಕ್ರಿಯೇಟ್ ಮಾಡಬೇಕಂತಾ ಅನಿಸ್ತಾಯಿದೆ. ಅದೇ ರೀತಿ ರಿಲಿಜಿಯಸ್ ಆಗಿ ಕೂಡ, ಕನ್ನಡದಲ್ಲಿ ಧರ್ಮವನ್ನ ವಿವರಿಸೋದಕ್ಕೆ ಒಂದು ಭಾಷೆ ಬೇಕಾಗಿದೆ. ಹೀಗೆ ಎಲ್ಲವು ಕೂಡ ಸಂಸ್ಕೃತಕ್ಕೆ ಪ್ರತಿಯಾಗಿ ಕನ್ನಡ ಭಾಷೆಯನ್ನ ರೂಪಿಸುವ .ಪ್ರಯತ್ನ ಅವನು ಮಾಡ್ತಾ ಇದ್ದಾನೆ. ಆದ್ರೆ ಅವನಿಗೆ ಹೊಸಭಾಷೆಯ ರೂಪಣ ಅನ್ನೋದು ಕನ್ನಡ ಭಾಷೆಯ ಒಳಗೇನೇ ಆಗ್ಬೇಕಾಗಿದೆ. ಅದರ ಜೊತೆಗೆ ತುಂಬಾ ದೊಡ್ಡ ಪ್ರಭಾವಶಾಲಿಯಾಗಿದ್ದಂತಹ ಭಾಷೆಯೊಂದರ ಪ್ರಭಾವ ಅಂತಂದ್ರೆ ಅದು ಸಂಸ್ಕೃತ. ಅದಕ್ಕೆ ಎದುರಾಗಿ ಇದನ್ನ ನಿರ್ಮಾಣ ಮಾಡ್ಬೇಕಾಗಿದೆ. ಇವರೆಲ್ಲಾ ಹೀಗೆ ಮಾಡ್ಬಾಗ ಅವರೆಲ್ಲರಿಗೂ ಕೂಡ ಒಂದು ಕನ್ನಡದ್ದೇ ಆಗಿರತಕ್ಕಂತಹ ಒಂದು ಅನನ್ಯತೆಯನ್ನ ಕ್ರಿಯೇಟ್ ಮಾಡುವ ಉದ್ದೇಶವಿದೆ ಎಂದು ವಿದ್ವಾಂಸರು ತಿಳೀತಾರೆ. ಆದ್ರೆ ಆ ಉದ್ದೇಶ ಇಲ್ಲಾಂತ ಶೆಲ್ಡನ್ ಪೊಲಾಕ್ ತಮ್ಮ ಲೇಖನದಲ್ಲಿ ಹೇಳ್ತಾರೆ. ಇದರೊಳಗಡೆ ಸಂಸ್ಕೃತ ಮತ್ತು ಮಲೆಯಾಳ, ಸಂಸ್ಕೃತ ಮತ್ತು ತಮಿಳು, ಕನ್ನಡ ಇವುಗಳ ಸಂಬಂಧ ಕುರಿತು ಪೋಲಾಕರ ವಿಚಾರಗಳಿವೆ. ಅಂದ್ರೆ ಸಂಸ್ಕೃತದ ಹಾದಿಯಲ್ಲಿಯೇ ಕನ್ನಡವನ್ನು ಒಂದು ಭಾಷೆಯ ನಿರ್ಮಾಣಕ್ಕೆ ಅವನು ಪ್ರಯತ್ನ ಪಡ್ತಾ ಇದ್ದಾನೆ. ಅವನ ಮುಖ್ಯವಾದ ಮಾತೆಂದರೆ-

ನೆಲೆಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ ಸತತಮೆಂದೆ ಪಳಗನ್ನಡಮಂ
ಪೊಲಗೆಡಿಸಿ ನುಡಿವರಾಗಮ ಬಲಹೀನರ್ ದೇಸಿಯಲ್ಲಿದೆಂದಱಿದಿರ್ದು

ಇದು ಕಾವ್ಯಕ್ಕೆ ಸಂಬಂಧಪಟ್ಟಂತಹ ಮಾತು. ದೇಶಿಯನ್ನು ಕುರಿತ ಮಾರ್ಗಕಾರನ ವಿಚಾರ ಒಂದ್ ರೀತಿ ಪ್ರಾದೇಶಿಕವಾಗಿರತಕ್ಕಂತಹ ವ್ಯತ್ಯಾಸ. ಪ್ರಾದೇಶಿಕವಾಗಿರತಕ್ಕಂತಹ ಪರ್ಯಾಯವಾದ ಕನ್ನಡ ಭಾಷೆಗಳ ಬಗ್ಗೆ ಹೇಳ್ತಾನೆ ಈ ಮಾತು. ಅಂದ್ರೆ ಅವನು ಒಂದು ಭಾಷೆಯನ್ನ ಬಳಸುವ ಕ್ರಮ, ಲಿಖಿತ ಭಾಷಾ ಪರಂಪರೆಯೊಂದನ್ನು ಸಮರ್ಥವಾಗಿ ರೂಪಿಸುವ ಉದ್ದೇಶವನ್ನ ಹೊಂದಿದೆ. ಒಂದ್ ರೀತಿ ಡಿಸ್ಕವರಿ ಆಫ್ ಡೈಲೆಕ್ಟ್ ಹಾಗೆ. ಇದು ಕೂಡ ಒಂದ್ ರೀತಿಯಿಂದ ಸಾಂಸ್ಕೃತಿಕವಾದಂತಹ ಒಂದು ಅಥಾರಿಟಿಯನ್ನು ಕ್ರಿಯೇಟ್ ಮಾಡ್ತಾ ಇರಬಹುದು. ಭಾಷೆಯೊಂದನ್ನು ನಿರ್ಮಾಣ ಮಾಡಬೇಕಂತನ್ನೋದು ಕೂಡ ಒಂದು ಅಥಾರಿಟಿಯನ್ನ ನಿರ್ಮಾಣ ಮಾಡುವ ಪ್ರಯತ್ನ.

ಈ ಅಥಾರಿಟಿ ಅಂತನ್ನೋದು ಹಾಗೆ ನೆಲೆಗೊಳ್ಳಲು ಸಾಧ್ಯವಾಗಲಿಲ್ಲ ಅನ್ನೋದನ್ನ ಮುಂದಿನ ಚಾರಿತ್ರಿಕ ಘಟ್ಟಗಳಲ್ಲಿ ನೋಡಬಹುದು. ಅಂದ್ರೆ ೧೨ನೇ ಶತಮಾನದಲ್ಲಿ ಈ ಮಾರ್ಗ ಮತ್ತು ದೇಶಿಗಳ ಬಗೆಗೆ ಆ ಚಿಂತಕರು ವಿಚಾರ ಮಾಡಲೇ ಇಲ್ಲ. ಸಾಮಾನ್ಯವಾಗಿ ನಾವು ೧೨ನೇ ಶತಮಾನದ ಚಿಂತಕರು ಒಂದು ರೀತಿ 'ದೇಶಿ' ಪ್ರಧಾನ ಅಂತ ಯೋಚನೆ ಮಾಡ್ತೀವಿ. ಹಾಗೆ ದೇಶಿ ಪ್ರಧಾನ ಅಂತನ್ನುವುದು ೧೨ನೇ ಶತಮಾನದವರ ಧೋರಣೆ ಅಲ್ಲ. ಹಾಗೆ ಅದನ್ನ ಮಾರ್ಗವೆಂದೋ ದೇಶಿಯೆಂದೋ ಹೇಳಲು ಬರುವುದಿಲ್ಲ. ಅವರು ಮಾರ್ಗಕ್ಕೂ ಮೈಕೊಡದೆ ದೇಶಿಗೂ ಮೈಕೊಡದೆ, ಭಿನ್ನವಾದಂತಹ ಒಂದು ನೆಲೆಯಲ್ಲಿ ನಿಂತವರು. ೧೨ನೇ ಶತಮಾನದ ಅಭಿವ್ಯಕ್ತಿಯು ಆ ಶತಮಾನದಿಂದ ಆಚೆಗೆ ಒಂದ್ ರೀತೀಲಿ ದೇಶೀಯುಗಕ್ಕೆ ಕಾರಣವಾಯ್ತು. ಏಕೆಂದರೆ ದೇಶಿಯೂ ಕೂಡ ಒಂದು ಹೊಸ ವಾತಾವರಣವನ್ನ ಪ್ರವೇಶಿಸಬೇಕು. ಮಾರ್ಗ ಅಂತ ಯಾವುದನ್ನು ಕರೆದುಕೊಂಡು ಬರಲಾಗಿತ್ತೋ ಅದೂ ಕೂಡ ಒಂದು ಹೊಸ ಆರಂಭ ಆಗ್ಬೇಕು. ಹಾಗಾಗಿ ಅಲ್ಲಿ ಕೆಳ ಮತ್ತು ಮೇಲ್ ಸ್ತರ ಇವೆರಡು ಕೂಡ ರಿಫಾರ್ಮ್‌ನ್ನ ಪಡಕೋಬೇಕು ಎನ್ನುವ ಆಶಯ ವಚನಕಾರರದಾಗಿತ್ತು. ಆದ್ದರಿಂದ ವಚನಕಾರರ ಒಟ್ಟು ಭಾಷಾಭಿವ್ಯಕ್ತಿ, ದೇಶಿಯೂ ಅಲ್ಲದ ಮಾರ್ಗವೂ ಅಲ್ಲದ ಭಿನ್ನ ಉಪಕ್ರಮವನ್ನು ಹೊಂದಿರುವುದಕ್ಕೆ ಸಾಧ್ಯವಿದೆ. ಏಕೆಂದರೆ ಅವರು ದೇಶಿ ಅಂತ ಮಾತನಾಡೋಲ್ಲ ಅಥವಾ ವಸ್ತುಕ, ವರ್ಣಕ ಇವುಗಳ ಬಗೆಗೆ ಬೇರೆ ರೀತಿ ಪ್ರಶ್ನೆ ಮಾಡ್ತಾರೆ. 'ಕವಿತ್ವ ಸಾಧಕರೆಲ್ಲಾ ಕಳವಳಿಸಿ ಹೋದರು..' ಅಂತಾನೆ ಅಲ್ಲಮಪ್ರಭು. ಹಿಂದಣ ಕವಿಗಳು, ಮುಂದಣ ಕವಿಗಳ ಬಗ್ಗೆಯೆಲ್ಲಾ ವಚನಕಾರರಲ್ಲಿ ಬಹಳ ತೀಕ್ಷ್ಣವಾದಂತಹ ಒಂದು ವ್ಯಂಗ್ಯ ಇದೆ ಎಂದು ಭಾವಿಸಲಿಕ್ಕೆ ಸಾಧ್ಯವಿದೆ. ಅವರಿಗೆ ಸಾಮಾಜಿಕವಾದ ಆಶಯವೇ ಪ್ರಧಾನವಾದ್ದರಿಂದ, ಹೊಸ ಸಂಸ್ಕೃತಿಯ ನಿರ್ಮಾಣವೇ ಅವರ ಉದ್ದೇಶವಾದ್ದರಿಂದ, ಅವರು ಈತನಕ ಬೆಳೆದು ಬಂದಂತಹ ಅನೇಕ ಸಾಂಸ್ಕೃತಿಕ ಪರಿಕಲ್ಪನೆಗಳನ್ನು ತಮ್ಮ ಗಮನಕ್ಕೆ ತಂದುಕೊಂಡರು.

ಅದನ್ನು ಬಹಳ ತೀಕ್ಷ್ಣವಾಗಿ ವಿಮರ್ಶಿಸಿ ಒಂದು ಹೊಸ ದಾರಿಯನ್ನು ಅವರು ತುಳಿದರು. ಹೀಗಾಗಿ ಮಾರ್ಗ ದೇಶಿಗಳ ಪ್ರಶ್ನೆ ೧೨ನೇ ಶತಮಾನದ ವಚನಕಾರರಿಗೆ ಅಷ್ಟು ಮುಖ್ಯವಾಗಲೇ ಇಲ್ಲ. ಅವರು ಕೂಡ ಅಲ್ಲಿಯತನಕ ಬಂದ ಎಲ್ಲ ಸಂಸ್ಕೃತ ಶಾಸ್ತ್ರಚಾರಗಳ ಬಗ್ಗೆ ತುಂಬಾ ಪ್ರಭುತ್ವ ಪಡಕೊಂಡಿದ್ದರು; ಮೇಲ್ ವರ್ಗ ರೂಪಿಸಿದಂತಹ ವಿಚಾರಗಳಿಗೆ ಪ್ರತಿಕ್ರಿಯೆಯನ್ನು ತೋರುವುದಕ್ಕೆ ತಕ್ಕುದಾದ ತಮ್ಮದೇ ಆಗಿರುವಂತಹ ಒಂದು ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದರು. ಆದ್ದರಿಂದ ಮಾರ್ಗದೊಂದಿಗೆ ಹೋರಾಡಬೇಕು ಅನಿಸಲಿಲ್ಲ ಅವರಿಗೆ. ಎರಡು ಸ್ತರಗಳ ಬಗೆಗೆ ಒಂದು ಹೊಸಕಲ್ಪನೆ ಇದ್ದದ್ದರಿಂದ, ಮಾರ್ಗ ಮತ್ತು ದೇಶಿಯ ಕಲ್ಪನೆಯಲ್ಲಿ ಅದನ್ನ ಫಿಟ್ ಮಾಡೋಕೆ ಬರೋಲ್ಲ ಅನ್ನೋದನ್ನ ಸೂಚಿಸುತ್ತಾ ಇದ್ದೀನಿ. ಏಕೆಂದರೆ ಮಾರ್ಗ ಮತ್ತು ದೇಶಿ ಕಲ್ಪನೆ ಅಂತ ಯಾವುದು ಮಾರ್ಗಕಾರನಲ್ಲಿ ರೂಪುಗೊಂಡಿತೋ, ಅದು ೧೨ನೇ ಶತಮಾನದಲ್ಲಿ ಮುಂದುವರಿಯಲಿಲ್ಲ.

ಮಾರ್ಗ ಮತ್ತು ದೇಶಿ ಅನ್ನೋವು ಖಚಿತವಾಗಿರುವ ಸ್ಥಾವರ ಕಲ್ಪನೆಗಳಲ್ಲ. ಇವು ಆಯಾ ಹೊತ್ತಿನ ಅರ್ಥವನ್ನು ಪಡೆಯುತ್ತವೇ ಹೊರತು, ಒಂದು ವೆಲ್ ಡಿಫೈನಡ್ ಆಗಿರೋ ಕಲ್ಪನೆಗಳಲ್ಲ. ಮಾರ್ಗಕಾರನಲ್ಲಿ ಕೂಡ ಇದು ಕಾಣಿಸುತ್ತೆ. ಕಾಲದಿಂದ ಕಾಲಕ್ಕೆ ಮಾರ್ಗ ಮತ್ತು ದೇಶಿಯ ಕಲ್ಪನೆಗಳು ಕೂಡ ಬೇರೆ ಬೇರೆ ರೀತಿಯಾಗಿ ಇದ್ದವು. ಬೇರೆ ಬೇರೆ ರೂಪಗಳನ್ನು ಪಡೆಯುತ್ತ, ಬೇರೆಬೇರೆ ಟೀಕೆಗಳಿಗೆ ಗುರಿಯಾಗ್ತಾ ಇದ್ದವು. ನಾವು ಅದನ್ನು ಕನ್ನಡದ ಸಂದರ್ಭದಲ್ಲಿ ಯಾಕ್ ಬಳಸಿಕೊಂಡು ಬರ್ತಾ ಇದ್ದೀವಿ? ಮಾರ್ಗ ಮತ್ತು ದೇಶಿ ಅನ್ನೋದು ಬಹಳ ಹಿಂದಕ್ಕೆ ಭಾಷಿಕವಾಗಿ ಮಾತ್ರ ಇತ್ತು. ಈ ಮಾರ್ಗ-ದೇಶಿ ಕಲ್ಪನೆಯೊಳಗಡೆ ಯಾವುದನ್ನು ಕವಿರಾಜಮಾರ್ಗಕಾರ ಯೋಚ್ನೆ ಮಾಡ್ತಾ ಇದ್ದಾನೆ, ಅಲ್ಲಿ ಕೂಡ ದೇಶಿ ಅಂತನ್ನುವುದು, ಮಾರ್ಗವನ್ನ ದೇಶಿಯನ್ನಾಗಿಸಿಕೊಳ್ಳುವ ಕ್ರಮವಾಗಿ ಕಾಣುತ್ತೆ. ಇದು ಮಾರ್ಗಕಾರನಲ್ಲಿ ಮುಖ್ಯವಾದಂತಹ ಅಂಶ. ಬೆಳಿಗ್ಗೆ ನಾರಾಯಣ್ ಸೂಚಿಸಿದ ಈ ಸ್ಟ್ಯಾಂಡರ್ಡೈಜೇಷನ್ ಜೊತೆಗೆ, ಒಂದ್ ರೀತಿಯ ಭಾಷಾಮಿಶ್ರಣದ ಪ್ರಕ್ರಿಯೆಯೂ ಮಾರ್ಗಕಾರನಲ್ಲಿ ಕಾಣಿಸುತ್ತೆ. ಮಾರ್ಗಕಾರ ತಾನೇ ಉದಾಹರಣೆಗಳನ್ನ ಕಟ್ತುತಾನೆ. ಹಾಗೆ ಕಟ್ಟಿದಾಗ ಅವು ಬಹಳ ಅಸ್ತವ್ಯಸ್ತವಾಗಿವೆ. ಕಿವಿಗೆ ಚೆನ್ನಾಗಿ ಕೇಳೋಲ್ಲಾ. ಶೃತಿಕಷ್ಟವಾಗುತ್ತೆ. ಹೀಗಾಗಿ ತನ್ನ ಉದಾಹರಣೆಗಳನ್ನೇ ಉದ್ದೇಶಪೂರ್ವಕವಾಗಿ ತಿರುಚುವ ಕ್ರಮವನ್ನು ಹಾಗೂ ಅದನ್ನ ತಾನೇ ಸರಿಪಡಿಸುವ ಕ್ರಮವನ್ನು ಅವನು ಮಾಡ್ತಾನೆ. ಆದರೆ ಹಾಗೆ ಅವು ಕನ್ನಡ ಕಾವ್ಯದಲ್ಲಿ ಬಳಕೆಯಾಗ್ತಾಯಿದ್ದವೇ ಅಂತ ಅನ್ನುವುದಕ್ಕೆ ಹೆಚ್ಚಿನ ಮಾಹಿತಿ ಇಲ್ಲ. ಅವನೇ ಕೆಲವು ಪದಗಳನ್ನು ಕೊಡ್ತಾನೆ. ಆ ಪದಗಳು ಕನ್ನಡ ಕಾವ್ಯದಲ್ಲಿ ಹೇಗೆ ಮುಖ್ಯವಾಗ್ತವೆ ಅಂತ ಇಲ್ಲ. ವೈಯಾಕರಣಿಗಳು ಆ ರೀತಿಯಾದ ಪ್ರಯೋಗಗಳನ್ನು ಮಾಡ್ತಾರೆ.

ಸಾಹಿತ್ಯತತ್ವಕ್ಕೆ ಅಥವಾ ಬೇರೆ ಯಾವುದೇ ಶಾಸ್ತ್ರವನ್ನು ಹೇಳುವುದಕ್ಕೆ ಭಾಷಿಕವಾದಂತಹ ನೆಲೆ ಪ್ರಧಾನ ಅಂತ ಹೇಳಿದ್ದು ಮಾರ್ಗಕಾರನ ವಿಶೇಷವಾದ ಅಂಶ. ಸಾಹಿತ್ಯಿಕ ಭಾಷಾಭಿವ್ಯಕ್ತಿಯಾಗಲಿ, ಸಾಹಿತ್ಯೇತರ ಭಾಷಾಭಿವ್ಯಕ್ತಿಯಾಗಲಿ, ಇವೆರಡನ್ನು ಕೂಡ ಒಂದು ಲಿಂಗ್ವಿಸ್ಟಿಕ್ ಟರ್ಮಿನಲ್ಲಿ ವಿವರಿಸಬೇಕು ಅನ್ನೋದು ಅವನ ನಿಲುವಾಗಿದೆ. ಹೀಗಾಗಿ ಪೊಯಟಿಕ್ಸ್ ಅನ್ನೋದು ಕೂಡ ಅದು ಇಂಟಿಗ್ರಿಟಿ ಆಫ್ ಲಿಂಗ್ವಿಸ್ಟಿಕ್ಸ್ , ಭಾಷಾಶಾಸ್ತ್ರದ ಒಂದು ಮುಖ್ಯವಾದಂತಹ ಭಾಗವೆಂದು ಅವನು ಮೊತ್ತ ಮೊದಲ ಬಾರಿಗೆ ಮಂಡಿಸಿದನು. ಅಂದರೆ ಇಡೀ 'ಕವಿರಾಜಮಾರ್ಗ'ದಲ್ಲಿ ಕನ್ನಡ ಭಾಷೆಯನ್ನು ಅಧಿಕೃತಗೊಳಿಸುವುದಕ್ಕೆ ಬೇಕಾದ ಪರಿಕರಗಳೆಲ್ಲವನ್ನು ಅವನು ನಿರೂಪಿಸುತ್ತಾ ಇದ್ದಾನೆ. ಹೀಗಾಗಿ ಅದು ಕೇವಲ ಕಾವ್ಯಮೀಮಾಂಸೆ ಗ್ರಂಥವಲ್ಲ. ಜೊತೆಗೆ ಅಲಂಕಾರದ ಬಗೆಗೆ ಅವನಿಗಿರುವ ಕಲ್ಪನೆ ಕೂಡ ಬಹಳ ವಿಶಿಷ್ಟವಾದುದು. ಅಲಂಕಾರಗಳಿಂದ ಕೂಡಿದ್ದು ಮಾತ್ರ ಕಾವ್ಯವಲ್ಲ ಅಂತ. ಅವನು ಬಹಳ ವ್ಯಾಪಕವಾದಂತಹ ಅರ್ಥದ ಹಿನ್ನೆಲೆಯಲ್ಲಿ ಅಲಂಕಾರ ಅಂತ ಬಳಸ್ತಾನೆ. ಅಲಂಕಾರ ಅಂದ್ರೆ ಡಿಸೈನ್ ಅನ್ನೋ ಅರ್ಥದಲ್ಲಿ ಬಳಸ್ತಾ ಇಲ್ಲ. ಒಂದು ಭಾಷೆಯಲ್ಲಿ ವಿಭಿನ್ನ ಸಾಧ್ಯತೆಗಳನ್ನು ಹೇಳುವುದಕ್ಕೆ ಸಾಧ್ಯವಾಗುವುದೇ ಅಲಂಕಾರದ ಕೆಲಸ. ಅವನು ಕೊಡುವ ೩೪ ಅಲಂಕಾರಗಳನ್ನು ನೋಡಿದ್ರೆ, ಭಾಷೆಯ ಬೇರೆ ಸಾಧ್ಯತೆಗಳನ್ನು ಪ್ರಕಟಿಸುವುದಕ್ಕೆ ಅಲಂಕಾರಗಳು ಹೀಗೆ ಒದಗಿ ಬರುತ್ತವೆ. ಅಂತಂದ್ರೆ ಭಾಷೆಯನ್ನು ವಿಭಿನ್ನ ಉಪಕ್ರಮಗಳಲ್ಲಿ ಬಳಸುವುದಕ್ಕೆ ಅಲಂಕಾರ ಅಂತ ಕರೀತಾ ಇದ್ದಾನೆ. ಭಾಷೆಯ ಸಾಧ್ಯತೆಗಳನ್ನು ವಿಸ್ತರಿಸುವುದು ಅಲಂಕಾರದ ಕಾರ್ಯವಾದ್ದರಿಂದ, ಅಲಂಕಾರ ಅನ್ನೋದು ದಂಡಿ ಹೇಳುವಂತೆ, ಕಾವ್ಯದಲ್ಲಿ ಮಾತ್ರ ಪ್ರಯುಕ್ತವಾಗತಕ್ಕಂತಹವು ಅನ್ನೋ ಅರ್ಥದಲ್ಲಿ ಅವನು ಹೇಳ್ತಾ ಇಲ್ಲ. ಇದು ಅವನು ದಂಡಿಯನ್ನು ವಿಮರ್ಶಿಸುವ ಬಗೆ. ಒಂದ್ ರೀತಿ 'ಕವಿರಾಜಮಾರ್ಗ'ವು ದಂಡಿಯ 'ಕಾವ್ಯಾದರ್ಶ'ಕ್ಕೆ ಕನ್ನಡದ ಮೂಲಕ ಹೊರಬಂದಂತಹ ವಿಮರ್ಶೆ. ದಂಡಿಯ ಕೃತಿಗೆ ಕವಿರಾಜಮಾರ್ಗಕಾರ ಒಂದು ವಿಮರ್ಶೆಯನ್ನು ಬರೀತಾ ಇದ್ದಾನೆ. ಒಂದು ದೊಡ್ಡ ರಿಯಾಕ್ಷನ್ ತೋರಿಸ್ತಾ ಇರುವಂತೆ ಕಾಣುತ್ತೆ. ಲೋಕ ಭಾಷೆಗೆ ಹೊಸ ಸಾಧ್ಯತೆಗಳನ್ನ ಕಲ್ಪಿಸುವುದು ಅಥವಾ ಲೋಕಭಾಷೆಯಲ್ಲೇ ನೆಲೆಗೊಂಡಿರುವ ಲೋಕ ಸಾಧ್ಯತೆಗಳನ್ನು ಹೊರಪಡಿಸುವುದು, ಈ ಎರಡು ಕೂಡ ಅಲಂಕಾರದ ಕಾರ್ಯ ಆಗಬೇಕು ಅನ್ನೋದನ್ನ ಅವನು ತಿಳಿಸ್ತಾನೆ. ರೂಪಕ ಅನ್ನೋದು ಕಾವ್ಯದಲ್ಲಿದೆ ಅಂತ ಅಲ್ಲ, ಜನರ ಭಾಷೆಯಲ್ಲೇ ಇದೆ. ಉಪಮಾನ ಎಲ್ಲಿದೆ ಅಂತಂದ್ರೆ, ಅದು ಕೇವಲ ಕಾವ್ಯದಲ್ಲಿದೆ ಅಂತ ಅಲ್ಲ, ಜನರ ಭಾಷೆಯಲ್ಲೆ ಇದೆ. ಉತ್ಪ್ರೇಕ್ಷೆಯನ್ನ ಸಾಹಿತ್ಯ ಕೃತಿಗಳಲ್ಲಿ ಅಲ್ಲ ಹುಡುಕೋದು. ಪ್ರತಿಮೆ ಎಲ್ಲಿದೆ ಅಂದ್ರೆ ಮನುಷ್ಯರ ಭಾಷೆಯೊಳಗಡೇನೇ ಇದೆ. ಜನರ ಭಾಷೆ ಪ್ರತಿಮೆಯಿಂದ ಕೂಡಿದೆ. ಉಪಮಾನದಿಂದ ಕೂಡಿದೆ. ಉತ್ಪ್ರೇಕ್ಷೆಯಿಂದ ಕೂಡಿದೆ. ಸಮಾಸೋಕ್ತಿಯಿಂದ ಕೂಡಿದೆ. ಹೀಗೆ ಜನರ ಭಾಷೆಯಲ್ಲಿಯೇ ಅಡಕಗೊಂಡಿರುವ ಈ ಶಕ್ತಿಯನ್ನು

ಕವಿಯಾದವನು ಸ್ಫೋಟಗೊಳಿಸ್ತಾನೆ ಅಷ್ಟೆ. ಅವನ್ನು ಕಾವ್ಯಕ್ಕೆ ಹಾಯಿಸಿಕೊಂಡು ಅಲಂಕಾರ ಅನ್ನಿಸಿಕೊಳ್ಳುವಂತೆ ಮಾಡ್ತಾನೆ. ಒಟ್ಟು 'ಕವಿರಾಜಮಾರ್ಗ'ವನ್ನು ನೋಡಿದ್ರೆ ತಿಳಿದುಬರುವಂತಹ ಅರ್ಥವಿದು.

ಹೀಗೆ ಅಲಂಕಾರಗಳು ಕೇವಲ ಕವಿಯಿಂದ ಉಪಲಬ್ಧವಾದವು ಮಾತ್ರವಲ್ಲ, ಅವು ಇಡೀ ಭಾಷೆಯಲ್ಲಿಯೇ ಇರುವಂತಹವು. ಭಾಷೆಯಲ್ಲಿರುವವು ಕಾವ್ಯಕ್ಕೆ ಹರಿದು ಬರ್ತಾವೆ. ಆದ್ದರಿಂದ ಕಾವ್ಯಭಾಷೆ ಅನ್ನುವುದು ಈ ಜನರ ಅಥವಾ ಲೋಕದ ಭಾಷೆಯಲ್ಲಿ ಇರುವ ಅಂಶಗಳನ್ನು ಸ್ಫುಟವಾಗಿ ಹೆಚ್ಚು ಕ್ರಮಬದ್ಧವಾಗಿ ಹೂರಣಗೊಂಡ ಸ್ಥಿತಿಯಲ್ಲಿ ಬಳಕೆಗೊಳ್ಳುತ್ತೆ; ಹಾಗೆ ಹೂರಣಗೊಳ್ಳುವಂತಹ ಸ್ಥಿತಿ, ಅದರ ಛಂದಸ್ಸಿನ ಕ್ರಮದಲ್ಲಿ, ಪ್ರಾಸಾನುಕ್ರಮಗಳಲ್ಲಿ, ಶಬ್ದಾನುಕ್ರಮಗಳೇ ರೂಪಗೊಳ್ಳುತ್ತೆ. ಇದೇ ಅಲಂಕಾರ ಎನ್ನುವುದು ಅವನ ಮುಖ್ಯವಾದಂತಹ ಕಲ್ಪನೆ. ಆದ್ದರಿಂದ ಅಲಂಕಾರ ಕಾವ್ಯದಲ್ಲಿ ಹೇಗೆ ಪ್ರಯೋಗ ಗೊಳ್ಳಬೇಕು ಅನ್ನೋದನ್ನ ಅವನು ಪಟ್ಟಿ ತರಹ ಹೇಳೋಲ್ಲ. ಅಲಂಕಾರ ಎಂದರೆ ನಿಜವಾದ ಭಾಷೆ ನಿರ್ಮಾಣಗೊಳ್ಳುವ ಕ್ರಮ. ಲೋಕಭಾಷೆಯಿಂದ ಒಂದು ಪ್ರಮಾಣ ಬದ್ಧವಾದಂತಹ ಭಾಷೆ ನಿರ್ಮಾಣಗೊಳ್ಳುವ ಒಂದು ಸಂದರ್ಭ. ಆದ್ದರಿಂದ ಅಲಂಕಾರ ಅಂತನ್ನುವುದು ಲೋಕಭಾಷೆಯಲ್ಲಿ ನೆಲೆಗೊಂಡಿರುವ ಅನೇಕ ಸಾಧ್ಯತೆಗಳನ್ನು ಇನ್ನಿತರ ಜ್ಞಾನಶಾಖೆಗಳಿಗೆ ಹಾಯಿಸಿಕೊಳ್ಳುವುದೇ ಆಗಿದೆ. 'ಕಾವ್ಯಭಾಷೆ ಒಂದಿದೆ. ಶಾಸ್ತ್ರದ ಭಾಷೆಯೊಂದಿದೆ' ಅಂತ ಪ್ರತ್ಯೇಕವಾಗಿ ಯೋಚನೆ ಮಾಡಬೇಕಾಗಿಲ್ಲ. ಕಾವ್ಯಭಾಷೆ ಮತ್ತು ಶಾಸ್ತ್ರಭಾಷೆ ಅಂತನ್ನುವುದು ಬೇರೆಯಲ್ಲ. ಅದು ಲೋಕಭಾಷೆಯಲ್ಲಿಯೇ ಶಾಸ್ತ್ರ ಮತ್ತು ಕಾವ್ಯವೆರಡಕ್ಕೂ ಒಗ್ಗಿ ಬರುವಂತಹ ಒಂದು ಪೊಟೆನ್‌ಶಿಯಾಲಿಟಿ. ಅದು ಲಾಂಗ್ವೇಜ್‌ನಲ್ಲಿ ಇರುತ್ತೆ. ಈ ಪೊಟೆನ್‌ಷಿಯಾಲಿಟಿಯನ್ನ ಪುನರ್ ರೂಪಿಸಿಕೊಳ್ಳಬೇಕಾಗುತ್ತೆ. ಆದ್ದರಿಂದ ಭಾಷೆಗಿರುವಂತಹ ಬೇರೆ ಬೇರೆ ವರ್ಗೀಕರಣ ಅಷ್ಟು ಸಮಂಜಸವಲ್ಲ ಎನ್ನುವ ಕಲ್ಪನೆ ಮಾರ್ಗಕಾರನದು. ಒಟ್ಟು ಕೃತಿಯಿಂದ ಇದನ್ನು ಗ್ರಹಿಸಬಹುದು. ಈ ಹಿನ್ನೆಲೆಯಲ್ಲಿ ಮಾರ್ಗಕಾರನ ವಿಚಾರಗಳನ್ನು ಚರ್ಚಿಸುವುದಕ್ಕೆ ಸಾಧ್ಯವಾಗಬಹುದು ಅಂತ ಸೂಚಿಸುತ್ತೇನೆ. ನಮಸ್ಕಾರ.

೬

ಕವಿರಾಜಮಾರ್ಗ : ಸಂಸ್ಕೃತ ಪರಂಪರೆ ಹಿನ್ನೆಲೆಯಲ್ಲಿ

ಪಾದೇಕಲ್ಲು ನರಸಿಂಹಭಟ್ಟ

ಕನ್ನಡದ ಮೊತ್ತಮೊದಲನೆಯ ಕೃತಿಯಾದ 'ಕವಿರಾಜಮಾರ್ಗ'ದ ಅಧ್ಯಯನವು ಬೇರೆ ಬೇರೆ ನೆಲೆಗಳಲ್ಲಿ ನಡೆದಿದೆ. ಆದರೂ 'ಸಂಸ್ಕೃತ ಕಾವ್ಯಮೀಮಾಂಸಾ ಗ್ರಂಥಗಳ, ಮುಖ್ಯವಾಗಿ ದಂಡಿಯ 'ಕಾವ್ಯಾದರ್ಶ'ದ ವಿಷಯಗಳನ್ನೇ ಒಳಗೊಂಡಿರುವಂತಹದು ಹೊರತು, ಅದರಲ್ಲಿ ಹೇಳಬಹುದಾದಷ್ಟು ಸ್ವಂತಿಕೆ ಇಲ್ಲ' ಎಂಬುದು ಈ ತನಕದ ಅಧ್ಯಯನಗಳಲ್ಲಿಯ ಕೇಂದ್ರೀಯಾಂಶ ಎಂದು ಸ್ಥೂಲವಾಗಿ ನಿರೂಪಿಸಬಹುದು. ಇಂತಹ ಅಭಿಪ್ರಾಯಗಳು ಅಖಿಲ ಭಾರತಕ್ಕೆ ಸಂಸ್ಕೃತವೇ ಪ್ರಾತಿನಿಧಿಕವಾದ ವೈಚಾರಿಕಭಾಷೆ ಎಂಬ ನಿಲುವಿನ ಮೇಲೆ ಆಧಾರಿತವಾದುವು. ಈ ಗ್ರಹಿಕೆ ಇಂದಿಗೆ ಬಹುಮಟ್ಟಿಗೆ ಕಾಲಬಾಧಿತವಾಗಿದ್ದು, ಕನ್ನಡ ಗ್ರಂಥಗಳ ಅಧ್ಯಯನ ನೂತನವೂ ಮುಕ್ತ ಮನಸ್ಕವೂ ಆದ ದೃಷ್ಟಿಯಿಂದ ನಡೆಯಬೇಕಾಗಿದೆ. ಪ್ರಸ್ತುತ ಸಂವಾದ ಕಾರ್ಯಕ್ರಮವು ಆ ದಿಶೆಯಲ್ಲಿ ಒಂದು ಪ್ರಥಮ ಪ್ರಯತ್ನ ಎಂಬಂತೆ ರೂಪುಗೊಂಡಿದೆ; ಸಂಬಂಧಿತ ಕ್ಷೇತ್ರದಲ್ಲಿ ಪರಿಶ್ರಮಿಗಳಾದ ವಿದ್ವಾಂಸರನ್ನೆ ಆಮಂತ್ರಸಲಾಗಿದೆ. ಸಾಮಾನ್ಯವಾಗಿ ರೂಢಿಯಲ್ಲಿರುವ 'ಪ್ರಬಂಧಮಂಡನೆ : ಪ್ರಶ್ನೋತ್ತರ' ಎಂಬ ವಿಧಾನವನ್ನು ಕೈಬಿಟ್ಟು, 'ಟಿಪ್ಪಣಿ ಮತ್ತು ಪ್ರತಿಕ್ರಿಯೆ' ಎಂಬ ಹೊಸ ವಿಧಾನವನ್ನು ಯೋಜಿಸಲಾಗಿದೆ.

ಪೂರ್ವಾಹ್ನ ಕೆ.ವಿ.ಸುಬ್ಬಣ್ಣ ಅವರ ಆಶಯ ಭಾಷಣದಲ್ಲಿ ವ್ಯಕ್ತವಾದಂತೆ, 'ಕವಿರಾಜ ಮಾರ್ಗ'ವು ಕಾವ್ಯಮೀಮಾಂಸಾ ಸಂಬಂಧಿಯಾದ ಒಂದು ಶಾಸ್ತ್ರಗ್ರಂಥವೆಂಬ ಪ್ರತೀತಿಯೇ ಪ್ರಬಲವಾಗಿದ್ದರೂ, ಅದರ ಸಾಂಸ್ಕೃತಿಕ ಮಹತ್ವ ಅನನ್ಯವಾದುದು. ಮುಖ್ಯವಾಗಿ, "ಕಾವೇರಿಯಿಂದಮಾ ಗೋದಾವರಿ..." ಎಂಬ ಪದ್ಯದಲ್ಲಿ, ಅದು ಕನ್ನಡ ನಾಡಿನ ಗಡಿಗಳನ್ನು ನಿರ್ಣಯಿಸಿದುದು ಕೇವಲ ಸಾಂದರ್ಭಿಕವೋ ಔಪಚಾರಿಕವೋ ಅಲ್ಲ. ಅದು ಉದ್ದೇಶಪೂರ್ವಕ. ಅಂದರೆ, ಇಂತಹ ಪ್ರಾದೇಶಿಕ ಸಂಸ್ಕೃತಿಗೆ ಒಳಪಟ್ಟ ಕೃತಿಗಳಲ್ಲಿ ಪ್ರಾದೇಶಿಕತೆ ಹೇಗೆ ಪ್ರತಿಬಿಂಬಿತವಾಗುತ್ತದೆ ಎಂಬ ವಿಚಾರ ಇಲ್ಲಿಯ ಅನನ್ಯತೆಯಾಗಿದೆ.

ಇಂತಹದು ಸಂಸ್ಕೃತ ಕಾವ್ಯಮೀಮಾಂಸಾ ಗ್ರಂಥಗಳಲ್ಲಿ ಇರಲು ಸಾಧ್ಯವಿಲ್ಲ. ಯಾಕೆಂದರೆ, ಪ್ರಾದೇಶಿಕತೆಯಂತಹುದು ಸಂಸ್ಕೃತಕ್ಕೆ ಪ್ರಸಕ್ತವಲ್ಲ. ಪಾಶ್ಚಾತ್ಯದೇಶಗಳಲ್ಲಿ ಇಂತಹ ಆಸಕ್ತಿ ಬೆಳೆಯಲು ಎಷ್ಟೋ ಅನಂತರದ ಕಾಲ ಬರಬೇಕಾಯಿತು. 'ಕವಿರಾಜಮಾರ್ಗ'ವು ಶೀರ್ಷಿಕೆಯೇ ಸೂಚಿಸುವಂತೆ, ಕವಿಗಳಿಗೂ ರಾಜರಿಗೂ ಸಂಬಂಧಿಸಿದ ಮಾರ್ಗ; ಕಾವ್ಯದ ಮೀಮಾಂಸೆ ಮಾತ್ರವಲ್ಲ - ಪ್ರಾದೇಶಿಕ ಸಾಂಸ್ಕೃತಿಕ ಮೀಮಾಂಸೆ ಕೂಡ.

ಇದಕ್ಕೆ ಪ್ರತಿಕ್ರಿಯೆಯಾಗಿ ತಮಿಳಿನ 'ತೋಲ್ಕಾಪ್ಪಿಯಂ'ನಲ್ಲಿ ಇಂತಹ ಅಂಶಗಳಿವೆ ಯೆಂದೂ ಆದ್ದರಿಂದ ಇದು ಕನ್ನಡಕ್ಕೆ ಮಾತ್ರ ಸೀಮಿತವಲ್ಲದೆ ದ್ರಾವಿಡ ವೈಶಿಷ್ಟ್ಯ ಎಂದು ಇದನ್ನು ಗುರುತಿಸಬಹುದೇ ಎಂಬಂತಹ ಅಭಿಪ್ರಾಯಗಳು ಮೂಡಿಬಂದವು. ಕಾವ್ಯ ಮೀಮಾಂಸೆಯನ್ನು ಒಂದು ಶಾಸ್ತ್ರವಾಗಿ ಸ್ವೀಕರಿಸಿದಾಗ, ವಚನದಂತಹ ಸಾಹಿತ್ಯ ಇದರ ವ್ಯಾಪ್ತಿಯೊಳಗೆ ಬರುತ್ತದೆಯೇ - ಎಂಬಂತಹ ಆತಂಕ ಬಂದವು. ದ್ರಾವಿಡ ವೈಶಿಷ್ಟ್ಯದ ಬಗೆಗೆ ವಿಚಾರಿಸಬೇಕಾದ ಅಂಶವಿದೆ; ಕಾವ್ಯಮೀಮಾಂಸೆಯನ್ನು ಉಪನಿಷತ್ತಿನಂತಹದಕ್ಕೂ ಅನ್ವಯಿಸುವಂತೆ ಅದರ ವಿಶಾಲ ಸಂವೇದನೆ ಇದ್ದರೂ, ವೈದಿಕ ಸಾಹಿತ್ಯದ ಹೊರತಾಗಿಯೂ 'ಕಾಂತಾಸಮ್ಮಿತ'ದಂತಹ ವಿಶೇಷಣಗಳಿಗೆ ಸೀಮಿತಗೊಳಿಸುವುದು ಇಂದಿನ ಅಧ್ಯಾಪನದಲ್ಲಿ ಪ್ರಚಲಿತವಾಗಿದೆ. ಇದೇ ವಚನದಂತಹ ಸಾಹಿತ್ಯವನ್ನು ಹೊರಗಿಡಲು ಕಾರಣವಾಗುತ್ತದೆ - ಎಂಬಂತಹ ಉತ್ತರಗಳೂ ಮೂಡಿದುವು.

ಬಸವರಾಜ ಕಲ್ಗುಡಿಯವರ ಟಿಪ್ಪಣಿಯಲ್ಲಿ ಪ್ರಸ್ತುತ ಕೃತಿಕಾವ್ಯಕ್ಕಿಂತ ಹೆಚ್ಚು ಇಡೀ ಭಾಷೆಯನ್ನೇ ತನ್ನ ವಿಷಯವನ್ನಾಗಿ ಮಾಡಿಕೊಂಡಿದೆ ಎಂಬ ಒಂದು ಕೇಂದ್ರೀಯಾಂಶವು ಮೂಡಿಬಂದಿತು. ಕಲಬುರ್ಗಿಯವರ ಸಮಾರೋಪ ಭಾಷಣದ ಪ್ರಾರಂಭದ ಭಾಗವೂ ಅದನ್ನೇ ವಿಶೇಷ ಒತ್ತಿನೊಂದಿಗೆ ಸ್ಪಷ್ಟಪಡಿಸಿತು. ಇದು ಅತ್ಯವಶ್ಯವಾಗಿ ಪ್ರತಿಕ್ರಿಯಿಸಬೇಕಾದ ಅಂಶವೆಂದು ಅನಿಸಿದರೂ, ಸಾಂದರ್ಭಿಕ ಒತ್ತಡದಿಂದ ಪ್ರತಿಕ್ರಿಯೆ ಮನಸ್ಸಿನಲ್ಲಿಯೇ ಉಳಿಯಿತು. ಆದ್ದರಿಂದ ಈ ಮುಂದಿನದು ಇದಕ್ಕೆ ಸಂಬಂಧಪಟ್ಟ ಆದರೆ ಅಂದು ಬೆಳಕು ಕಾಣದೆ ಉಳಿದ ಪ್ರತಿಕ್ರಿಯಾಂಶ.

'ಕವಿರಾಜಮಾರ್ಗ'ದಂತಹ ಕನ್ನಡ ಕಾವ್ಯಮೀಮಾಂಸಾ ಗ್ರಂಥಗಳನ್ನು ಸಂಸ್ಕೃತ ಗ್ರಂಥಗಳ ಯಥಾವೃತಿ ಅಂಶಗಳ ಸಂಗ್ರಹವೆಂದು ವ್ಯಾಖ್ಯಾನಿಸುವ ದಾರಿಯನ್ನು ಬಿಟ್ಟು, ಅವುಗಳಲ್ಲಿಯ ಸ್ವತಂತ್ರತೆ, ಸ್ವಂತಿಕೆ ಹಾಗೂ ಸಾಂಸ್ಕೃತಿಕ ಮಹತ್ತ್ವಗಳಿಗೆ ಬೆಳಕು ಕಾಣಿಸು ವುದು ಅವಶ್ಯವೆಂಬ ಕಾರಣದಿಂದ ಪುನರ್ ವ್ಯಾಖ್ಯಾನಿಸುವುದು ಹೇಗೆ ಅವಶ್ಯವೋ, ಹಾಗೆಯೇ ಸಂಸ್ಕೃತ ಕಾವ್ಯ ಮೀಮಾಂಸಾ ಗ್ರಂಥಗಳನ್ನು ಪುನರ್ ವ್ಯಾಖ್ಯಾನಿಸಿ ಅವುಗಳ ಲ್ಲಿಯೇ ವಿಶಾಲ ಸಂವೇದನೆಯನ್ನು ಗ್ರಹಿಸುವುದು ಅವಶ್ಯ. ಈ ಅಂಶವನ್ನು ಇಂತಹ ಸಂವಾದಗಳು ಗಮನಿಸುವುದಿಲ್ಲ. ಸಂಸ್ಕೃತ ಕಾವ್ಯಮೀಮಾಂಸೆ ಗ್ರಂಥಗಳನ್ನು ನಾವು ಸರಿಯಾಗಿ ಅರ್ಥೈಸಿಕೊಂಡಿದ್ದೇವೆ ಮತ್ತು ಅವನ್ನು ಪುನರ್ ವ್ಯಾಖ್ಯಾನಿಸುವ ಅವಶ್ಯಕತೆ ಇಲ್ಲ ಎಂಬಂತೆ ಅಭಿಪ್ರಾಯಗಳು ರೂಪುಗೊಂಡಿವೆ. ಅಥವಾ ತೌಲನಿಕವಾಗಿ ನೋಡುವ

ಸಂದರ್ಭಗಳಲ್ಲೆಲ್ಲಾ ನಮಗೆ ಹತ್ತಿರವಾದುದನ್ನು ಅತಿವಿಶಾಲ ಅರ್ಥದಲ್ಲಿಯೂ, ದೂರವಾದುದನ್ನು ಅತಿಸಂಕುಚಿತ ಅರ್ಥದಲ್ಲಿಯೂ ಗ್ರಹಿಸುವುದು, ಸಾಮಾನ್ಯವಾಗಿ ಸಂವಾದ-ಚರ್ಚೆಗಳಲ್ಲಿ ಮುಕ್ತಲೇಖನಗಳಲ್ಲಿ ಕಂಡುಬರುವ ವಿಚಾರ. ಉದಾಹರಣೆಗೆ, ಸಾಹಿತ್ಯ ವಿದ್ಯಾರ್ಥಿಗಳು 'ಸಾಹಿತ್ಯ ಮತ್ತು ದರ್ಶನ' ಎಂಬ ತೌಲನಿಕ ನಿರೂಪಣೆಯನ್ನು ಮಾಡುವಲ್ಲಿ, ಸಾಹಿತ್ಯದಲ್ಲಿ ಇರುವಷ್ಟು ತಳಸ್ಪರ್ಶಿತ್ವ ದರ್ಶನಗಳಲ್ಲಿ ಅವರಿಗೆ ಇರುವುದಿಲ್ಲ. ಆದ್ದರಿಂದ ಸಾಹಿತ್ಯದ ಗ್ರಹಿಕೆಯು ವಿಶಾಲವಾಗಿಯೂ ದರ್ಶನದ ಗ್ರಹಿಕೆಯು ಅತಿಸರಳೀಕೃತವಾಗಿಯೂ ನಿರೂಪಿತವಾಗುವ ಸಂದರ್ಭಗಳೇ ಹೆಚ್ಚು. ಇತ್ತೀಚಿನ ಪ್ರೌಢಕೃತಿಯಾದ ಡಿ.ಆರ್.ನಾಗರಾಜರವರ 'ಅಲ್ಲಮಪ್ರಭು ಮತ್ತು ಶೈವಪ್ರತಿಭೆ'ಯನ್ನು ಓದುವಾಗಲೂ, ಅದರಲ್ಲಿಯ ತೌಲನಿಕ ಅಂಶಗಳಲ್ಲಿ ಈ ದೋಷ ಇರಬಹುದೇ ಎಂಬ ಸಂದೇಹ ನನ್ನನ್ನು ಕಾಡಿದೆ.

ಸಂಸ್ಕೃತ ಕಾವ್ಯಮೀಮಾಂಸೆಯ ವಿಶಾಲನೆಲೆಗಳನ್ನು ಅರ್ಥೈಸುವಲ್ಲಿ ಇಂದಿಗೆ ಪ್ರಚಲಿತವಿರುವ ಕೆಲವು ಗ್ರಹೀತಗಳನ್ನು ಬಿಟ್ಟು ಯೋಚಿಸುವ ಅಗತ್ಯ ಇದೆ. ಅವೆಂದರೆ : ೧. ಭಾಷೆ ಎಂಬುದು ವ್ಯವಹಾರಕ್ಕೋಸ್ಕರ ಮನುಷ್ಯರು ರೂಪಿಸಿಕೊಂಡ ಒಂದು ಮಾಧ್ಯಮ. ಆದ್ದರಿಂದ ಅದು ಒಂದು 'ಸಾಧನ'ವೇ ಹೊರತು 'ಗುರಿ' ಅಲ್ಲ; ಸಾಹಿತ್ಯವೆಂಬುದು ಇವರ ಗುರಿಗಳಲ್ಲೊಂದು. ಆದ್ದರಿಂದ ಭಾಷೆ ಸಾಹಿತ್ಯಗಳಲ್ಲಿ ಸರ್ವಾತ್ಮನಾ ಭಿನ್ನ ಅಂಶಗಳಾಗಿದ್ದು, ಒಂದರ ವಿಮರ್ಶೆ ಇನ್ನೊಂದಕ್ಕೆ ಅನ್ವಯಿಸುವುದಿಲ್ಲ. ೨. ಭಾಷೆ ಮತ್ತು ವ್ಯಾಕರಣ, ಇವುಗಳಲ್ಲಿ ಭಾಷೆ ಯಾವಾಗಲೂ ಮೊದಲಿನದಾಗಿದ್ದು ವ್ಯಾಕರಣವು ಅನಂತರದ್ದಾಗಿರುತ್ತದೆ. ಹೀಗೆಯೇ ಕಾವ್ಯವು ಮೊದಲಿನದಾಗಿದ್ದು ಕಾವ್ಯಮೀಮಾಂಸೆ ಅನಂತರದ್ದಾಗಿರುತ್ತದೆ. ೩. ವ್ಯಾಕರಣ ಮತ್ತು ಕಾವ್ಯಮೀಮಾಂಸೆಗಳಲ್ಲಿ ಮೊದಲಿನದು ಭಾಷೆಗೂ ಅನಂತರದ್ದು ಕಾವ್ಯಕ್ಕೂ ಅನ್ವಯಿಸುವಂತಿದ್ದು, ಇವು ಒಂದರಿಂದ ಇನ್ನೊಂದು ಸಂಪೂರ್ಣ ಭಿನ್ನವಾದವು ಮತ್ತು ಕೆಲವು ಮಟ್ಟಿಗೆ ವಿರೋಧಿ ಗುಣಧರ್ಮಗಳನ್ನು ಹೊಂದಿದುವು. ೪. ಭಾಷೆಯನ್ನು ಕಾವ್ಯ ಶಾಸ್ತ್ರಗಳೆಂದು ಸ್ಥೂಲವಾಗಿ ವಿಂಗಡಿಸಬಹುದು -ಇವುಗಳಲ್ಲಿ ಕಾವ್ಯ ರಸವತ್ತಾದುದು: ಶಾಸ್ತ್ರವು ಕ್ಲಿಷ್ಟ, ಮತ್ತು ನೀರಸವಾದುದು.

ಮೇಲಿನ ಈ ಗ್ರಹೀತಗಳು ಜೀವಂತವಾಗಿರುವ ತನಕ, ಕಾವ್ಯಮೀಮಾಂಸೆಯ ಆತ್ಮಕತೆಯಾದ 'ಕವಿರಾಜಮಾರ್ಗ' ಭಾಷಾಮೀಮಾಂಸಕವಾಗಿ ರೂಪುಗೊಂಡುದು ಹೇಗೆ ಎಂಬ ಪ್ರಶ್ನೆ, ಸಮಸ್ಯೆಯಾಗಿಯೇ ಉಳಿಯುವುದು ಸಹಜ. ಸಂಸ್ಕೃತ ಕಾವ್ಯಮೀಮಾಂಸಾ ಗ್ರಂಥಗಳ ಬಗೆಗೂ ಈ ಪ್ರಶ್ನೆ ಆಗಾಗ ಏಳುತ್ತಿರುವುದೂ ಇದೇ ಕಾರಣಕ್ಕಾಗಿ. ಸಂಸ್ಕೃತ ಕಾವ್ಯಮೀಮಾಂಸೆಯ ಸಂದರ್ಭದಲ್ಲಿ ಮೇಲಿನ ಗ್ರಹೀತಗಳನ್ನು ಬಿಡುವುದು ಮಾತ್ರವಲ್ಲ - ಇವುಗಳಿಗೆ ವಿರುದ್ಧವಾಗಿ ನಿಗಮನಗಳನ್ನು ತಲುಪಬೇಕಾಗುತ್ತದೆ. ಅಂತಹ ನಾಲ್ಕು ಮುಖ್ಯ ನಿಗಮನಗಳೆಂದರೆ :

೧. ಭಾಷೆ ಎಂಬುದು ಭಾರತೀಯ ಋಷಿಪರಂಪರೆಯಲ್ಲಿ ಪುರುಷಾರ್ಥಗಳೊಂದಿಗೆ ಸಮೀಕರಿಸಬಹುದಾದ ಒಂದು ಮೌಲ್ಯ. ಉಪನಿಷತ್ತಿನಲ್ಲಿ ಪ್ರಪಂಚದ ಸೃಷ್ಟಿಯೇ 'ನಾಮರೂಪಾತ್ಮಕ' ಎಂದು ಹೇಳಿದ್ದನ್ನು ಇಲ್ಲಿ ನೆನೆಯಬೇಕು. 'ನಾಮಪ್ರಪಂಚ' ಎಂದರೆ ಭಾಷೆ; 'ರೂಪಪ್ರಪಂಚ'ವೆಂದರೆ ಭಾಷೆ ನಿರ್ದೇಶಿಸುವಂತಹ ವಸ್ತುಗಳು; ಆದ್ದರಿಂದ ಭಾಷೆ ಮನುಷ್ಯ ಸೃಷ್ಟಿ ಅಲ್ಲ. ಪತಂಜಲಿಯ ಮಹಾಭಾಷ್ಯದ ಪ್ರಸ್ತಾವನೆಯಲ್ಲಿ ಭಾಷೆ 'ಧರ್ಮಸಾಧಕ' ಎಂದು ಹೇಳಿದ್ದರ ತಾತ್ಪರ್ಯವೂ ಇದೇ. ವೇದ ಮಂತ್ರಗಳಲ್ಲಿ 'ಚತ್ವಾರಿ ವಾಕ್ ಪರಿಮಿತಾ ವದಾನಿ..' ಇತ್ಯಾದಿಯಾಗಿ ನಾಲ್ಕು ವಿಧದ ಮಾತುಗಳಿವೆ ಎಂದೂ, ಅವುಗಳಲ್ಲಿ ನಾಲ್ಕನೆಯದು ಮಾತ್ರ ಮನುಷ್ಯರಿಗೆ ಗಮ್ಯವೆಂದೂ ಹೇಳಿರುವುದು, ಭಾಷೆಯ ವ್ಯವಹಾರಾತೀತತೆಯನ್ನೇ ಸಮರ್ಥಿಸುತ್ತದೆ. 'ಅಮಂತ್ರಮಕ್ಷರಂನಾಸ್ತಿ' ಎಂಬಂತಹ ಹೇಳಿಕೆಗಳೂ ಈ ಸಂದರ್ಭದಲ್ಲಿ ಅತಿಶಯೋಕ್ತಿಗಳಾಗುವುದಿಲ್ಲ. ಅಲ್ಲದೆ, ಭಾಷೆಯು ಕೇವಲ ವ್ಯಾವಹಾರಿಕವೆಂಬ ಕಲ್ಪನೆ ಈ ಸಂಬಂಧ ಕುರಿತು ಅಷ್ಟೊಂದು ಗಂಭೀರವಾಗಿ ಚಿಂತಿಸಬೇಕಾಗಿದ್ದಿಲ್ಲ. ಕಾಳಿದಾಸನಂತಹವರೂ ಕೂಡ 'ವಾಗರ್ಥ ಪ್ರತಿಪತ್ತಿ'ಯನ್ನೇ ಗುರಿಯನ್ನಾಗಿಟ್ಟು ಕೊಂಡಿದ್ದು, ಈ ಹೇಳಿಕೆಗಳನ್ನೇ ಸಮರ್ಥಿಸುವಂತಿದೆ; ಆದುದರಿಂದ ಕಾವ್ಯದಂತಹವು ಭಾಷೆ ಎಂಬ ವಿಶಾಲತತ್ವದಲ್ಲಿಯೇ ಅಂತರ್ಗತ ಮತ್ತು ಈ ಕಾರಣದಿಂದಲೇ ಸಂಸ್ಕೃತ ಕಾವ್ಯಮೀಮಾಂಸಕರೆಲ್ಲರೂ ಭಾಷೆಯ ಬಗೆಗಿನ ವಿಶ್ಲೇಷಣೆಯನ್ನೇ ವಿಸ್ತರಿಸಿದರು; ಭಾಷೆಯ ಎಲ್ಲಾ ಅಂಶಗಳೂ ಒಂದಲ್ಲ ಒಂದು ರೀತಿಯಲ್ಲಿ ಕಾವ್ಯಕ್ಕೂ ಅನ್ವಯ ಎಂಬಂತೆ ನಿರೂಪಿಸಿದರು. ಇದನ್ನೇ ಕವಿರಾಜಮಾರ್ಗಕಾರನೂ ಅನುಸರಿಸಿದನು; ಆದ್ದರಿಂದ ಅವನೂ ಈ ವಿಷಯದಲ್ಲಿ ಸಂಸ್ಕೃತ ಕಾವ್ಯಮೀಮಾಂಸಕರ ಅನುಯಾಯಿಯೇ ಆಗಿದ್ದು, ತನ್ನ 'ದೇಶಿ'ಯ ಬಗೆಗೆ ಅವೇ ತತ್ತ್ವಗಳನ್ನು ವಿಸ್ತರಿಸಿ ಅನ್ವಿಕವಾಗುವಂತೆ ಮಾಡಿದನು. ಸಮಸಂಸ್ಕೃತ ಹಾಗೂ ಸಂಸ್ಕೃತ-ಕನ್ನಡಗಳನ್ನು ಬೆರೆಸುವ ಕುರಿತು ಅವನು ಹೇಳುವ ಮಾತುಗಳು ಈ ಸಂವೇದನೆಯಿಂದಲೇ ಬಂದುವು. ದಂಡಿಯಂತಹವರು 'ತತ್ಸಮ ತದ್ಭವ ದೇಶಿ' ಎಂದು ಈ ಅಂಶವನ್ನು ಕಟಾಕ್ಷಿಸಿರಬಹುದೇ ಅನಿಸುತ್ತದೆ.

೨. ವ್ಯಾಕರಣ ಭಾಷೆಗಿಂತ ಅನಂತರದ್ದು ಎಂಬ ಅಭಿಪ್ರಾಯ ಕೂಡ ಭಾಷಾಸಂಬಂಧಿ ದಾರ್ಶನಿಕ ಪ್ರಕ್ರಿಯೆಯ ಮುಂದೆ ನಿಲ್ಲಲಾರದು. ಈಗ ಉಪಲಬ್ಧವಿರುವ ವ್ಯಾಕರಣಾಂತಿಕ ಗ್ರಂಥಗಳಷ್ಟೇ ವ್ಯಾಕರಣವಲ್ಲ. ಅವು ಭಾಷೆಗಿಂತ ಎಷ್ಟೋ ಅನಂತರದವು ಎಂಬುದು, ವ್ಯಾಕರಣ ಸಂಬಂಧಿ ಪ್ರಕ್ರಿಯೆಗಳನ್ನು ಭಾಷೆಗಿಂತ ಅನಂತರದವುಗಳೆಂದು ಭಾವಿಸಲು ಕಾರಣವಾಗುವುದಿಲ್ಲ. ವ್ಯಾಕರಣವೆಂಬುದನ್ನು ಅತಿವಿಶಾಲಾರ್ಥದಲ್ಲಿ ಗ್ರಹಿಸಿದಾಗ, ಅದು ಭಾಷಾಸಂಬಂಧಿ ಚಿಂತನ ಪ್ರಕ್ರಿಯೆಗಳನ್ನೆಲ್ಲಾ ಒಳಗೊಳ್ಳುತ್ತದೆ. ಭಾಷಾ ಪ್ರಯೋಗದಲ್ಲಿ ಈ ಪ್ರಕ್ರಿಯೆಗಳೆಲ್ಲ ಪ್ರಜ್ಞಾಪೂರ್ವಕವಾಗಿಯಾಗಲೀ ಪ್ರಜ್ಞಾತೀತವಾಗಿಯಾಗಲೀ ಅಂತರ್ಗತವಾಗತಕ್ಕವು. ಉಪನಿಷತ್ತಿನಲ್ಲಿ ಸೃಷ್ಟಿಯ ಬಗೆಗೆ ಹೇಳುವಾಗ

'ನಾಮರೂಪವೇ ವ್ಯಾಕರವಾಣಿ' ಎಂದು ಹೇಳಿದ್ದನ್ನು ನೆನೆಯಬಹುದು. ಅಲ್ಲದೆ ವ್ಯಾಕರಣವನ್ನೇ ವೇದಾಂಗವೆಂದು ಸ್ವೀಕರಿಸಿದಾಗ ವೇದದೊಂದಿಗಿನ ಅದರ ಅವಿಭಾಜ್ಯತೆ ಮತ್ತು ಇತರ ವೇದಾಂಗಗಳೊಂದಿಗಿನ ಪೂರಕತನ ಇಂತಹವು ಸ್ಪಷ್ಟವಾಗುತ್ತವೆ.

ಇನ್ನೊಂದು ತಪ್ಪುಕಲ್ಪನೆ ಎಂದರೆ, ವ್ಯಾಕರಣವನ್ನೆ ಅದರ ದಾರ್ಶನಿಕತೆಯಿಂದ ಕಳಚಿ ಕೇವಲ ಕೆಲವು ನಿಯಮಗಳ ಪಟ್ಟಿ ಎಂದು ಭ್ರಾಂತಿ ತರುವುದು. ಭಾಷೆ ನಿಯಮಾತೀತವೆಂಬ ಅಂಶ ಪತಂಜಲಿಯಂತಹವರಿಗೆ ತಿಳಿದದ್ದೇ. ಎಂತಲೇ ಪತಂಜಲಿ ಕೆಲವು ಸಂದರ್ಭಗಳಲ್ಲಿ 'ಇಂತಹದು ಲೋಕಾಶ್ರಯ; ಆದ್ದರಿಂದ ಇದನ್ನೆ ಕಲಿಸಲು ಸಾಧ್ಯವಿಲ್ಲ' ಎಂದು ಹೇಳಿದ್ದಿದೆ; ಆಧುನಿಕರಲ್ಲೂ ವ್ಯಾಕರಣದ ವಿಶಾಲತೆಯನ್ನು ಗಮನಿಸಿದವರಿದ್ದಾರೆ. ಎ.ಕೆ.ರಾಮಾನುಜನ್ ಅವರು 'ಭಾರತೀಯವೆನ್ನುವ ಒಂದು ಚಿಂತನಾಕ್ರಮ ಇದೆಯೆ?' ಎಂಬ ಲೇಖನದಲ್ಲಿ "ಬಹುತೇಕ ಹಿಂದು ಗ್ರಂಥಗಳು 'ವ್ಯಾಕರಣ'ವನ್ನೇ ತಮ್ಮ ಕೇಂದ್ರಮಾದರಿಯಾಗಿ ಸ್ವೀಕರಿಸುತ್ತವೆಯೆಂಬುದನ್ನು ಗಮನಿಸಬೇಕು. ಐರೋಪ್ಯ ಚಿಂತನೆಗೆ ಯುಕ್ಲಿಡ್ ಹೇಗೆ ಬಹುಮುಖ್ಯವಾಗುತ್ತಾನೋ ಹಾಗೆ, ಹಿಂದು ಚಿಂತನೆಗಳಿಗೆ ಪಾಣಿನಿ ಮುಖ್ಯವಾಗುತ್ತಾನೆ- ಅಂತ ಫಿಟ್ಸ್ ಸ್ಟಾಲ್ ಹೇಳುತ್ತಾನೆ. ಇಲ್ಲಿನ ಕಾಮಮಾತ್ರವು ಕೂಡಾ ಅಕ್ಷರಶಃ ವ್ಯಾಕರಣವೇ - ಕಾಮದ ವ್ಯಾಕರಣ.." ಎಂದು ಉದ್ಧರಿಸುತ್ತಾರೆ.(ಅನು : ಕೆ.ವಿ.ಸುಬ್ಬಣ್ಣ, ಮಾತುಕತೆ - ೩೮, ಪು.೨೮). ಹೀಗೆ ಸಮಗ್ರತೆಯಲ್ಲಿ ನೋಡಲಾದ ವ್ಯಾಕರಣ ಭಾಷೆಗಿಂತ ಅನಂತರದ್ದಾಗಿರದೆ ಭಾಷೆಯೊಂದಿಗೆ cowal ಆಗುತ್ತದೆ.

೩. ವ್ಯಾಕರಣ - ಕಾವ್ಯ ಮೀಮಾಂಸೆಗಳೊಳಗಿನ ಪರಸ್ಪರ ಪೂರಕತನ ಸಂಸ್ಕೃತ ಕಾವ್ಯಮೀಮಾಂಸಕರು ವಿಶೇಷವಾಗಿ ಅವಧರಿಸಿದ ಅಂಶ. ಭರತನ 'ನಾಟ್ಯಶಾಸ್ತ್ರ'ದ ಸಿದ್ಧ ಅಧ್ಯಾಯದಲ್ಲಿ ನಾಟಕ ವಿಮರ್ಶಕರು ವೇದ ವೇದಾಂತಾದಿಗಳನ್ನು ತಿಳಿದವನಿರಬೇಕು ಎಂಬ ಅಂಶವಿದೆ. ಅಲ್ಲದೆ, ಆ ಗ್ರಂಥದಲ್ಲಿ ವ್ಯಾಕರಣ ಸಂಬಂಧಿ ಅಂಶಗಳೂ ಇವೆ. ಭಾಮಹನೂ ವ್ಯಾಕರಣದ ಅನಿವಾರ್ಯತೆಯನ್ನು ಒತ್ತಿ ಹೇಳುತ್ತಾನೆ. ಆನಂದವರ್ಧನನೂ ' ವೈಯಾಕರಣರೇ ವಿದ್ವಾಂಸರಲ್ಲಿ ಮೊದಲಿಗರು' ಎಂದು ಘೋಷಿಸುತ್ತಾನೆ. (ಈ ಗ್ರಂಥ ಅನಂತರದ್ದಾದರೂ ವಿಷಯ ಅನಂತರದ್ದಲ್ಲ.) ಇದರಿಂದ ವ್ಯಾಕರಣವೆಂಬುದು ನಿರ್ದಿಷ್ಟ ನಿಯಮಗಳಷ್ಟೇ ಅಲ್ಲವೆಂದೂ, ಸಹೃದಯತೆಯ ಮೂಲಕವೇ ವ್ಯಾಕರಣಾಂಶಗಳನ್ನೂ ಗ್ರಹಿಸಬೇಕೆಂದೂ ಅಭಿಪ್ರಾಯ ಪಟ್ಟಂತಾಗುತ್ತದೆ. ಇಂಗ್ಲಿಷಿನಲ್ಲಿ 'anacoluthon' ಎಂಬ ಕಲ್ಪನೆ ಇದೆ. ಇದು ಮೇಲ್ನೋಟಕ್ಕೆ ವ್ಯಾಕರಣದೋಷವಾಗುತ್ತದೆ. ಆದರೆ ಪರಿಣಾಮಕಾರಿತ್ವದ ದೃಷ್ಟಿಯಿಂದ ಇಂತಹ ದೋಷಗಳು ಗುಣವಾಗುವುದು ವ್ಯಾಕರಣ-ಕಾವ್ಯಮೀಮಾಂಸೆಗಳ ಪರಸ್ಪರ ಪೂರಕತನದ ದ್ಯೋತಕ. ಇಂತಹವು ಎಲ್ಲಾ ಕಾವ್ಯಮೀಮಾಂಸೆಗಳಿಗೂ ಸಮ್ಮತವೇ. ಸಂಸ್ಕೃತ ಕಾವ್ಯಮೀಮಾಂಸೆಯೂ ಇಂತಹ ಅಂಶಗಳನ್ನು ಉಲ್ಲೇಖಿಸುತ್ತದೆ.

ಕವಿರಾಜಮಾರ್ಗಕಾರನು ಕಾವ್ಯಮೀಮಾಂಸೆ - ಭಾಷಾ ಮೀಮಾಂಸೆಗಳನ್ನು ನವೀಕರಿಸಿ ಗ್ರಂಥರಚನೆ ಮಾಡಿರುವುದು, ಅವನು ಸಂಸ್ಕೃತ ಕಾವ್ಯಮೀಮಾಂಸೆಯ ಸರಿಯಾದ ಅನುಯಾಯಿಯಾಗಿದ್ದೇ ತನ್ನ ಪ್ರಾದೇಶಿಕತೆಯನ್ನು ಉಳಿಸಿಕೊಂಡುದನ್ನು ಸ್ಪಷ್ಟ ಪಡಿಸುತ್ತದೆ.

೪. ಶಾಸ್ತ್ರ ಮತ್ತು ಕಾವ್ಯಗಳೆಂದು ಅಂಕಿತವಾದುವು ಒಂದಕ್ಕೊಂದು ತತ್ತ್ವತಃ ಭಿನ್ನವಾಗಿರದೆ, ಭಿನ್ನ ಅವಧಾರಣೆಯವಷ್ಟೇ ಎಂಬುದು ಸಂಸ್ಕೃತ ಕಾವ್ಯಮೀಮಾಂಸಕರ ಅಭಿಮತ. ದಂಡಿಯು ಇಡೀ ವಾಙ್ಮಯವನ್ನೇ ಸ್ವಭಾವೋಕ್ತಿ-ವಕ್ರೋಕ್ತಿಗಳಾಗಿ ವಿಂಗಡಿಸಿ, ಶಾಸ್ತ್ರವೆಲ್ಲವೂ ಸ್ವಭಾವೋಕ್ತಿ ಎಂದು ಹೇಳುತ್ತಾನೆ. ಇದರಿಂದ ಶಾಸ್ತ್ರವು ಅಲಂಕಾರತತ್ತ್ವಕ್ಕೆ ಹೊರತಾದುದಲ್ಲವೆಂದೂ ಸೌಂದರ್ಯವು ಕಾವ್ಯವೆಂದು ಅಂಕಿತವಾದುದಕ್ಕೆ ಮಾತ್ರ ಸೀಮಿತವಲ್ಲವೆಂದೂ ಅಭಿಪ್ರಾಯಪಟ್ಟಂತಾಗುತ್ತದೆ. ದಿನಬಳಕೆಯ ಮಾತು ಕಾವ್ಯವಲ್ಲವೆಂದು ಭಾಮಹ ಅಭಿಪ್ರಾಯಪಟ್ಟಿದ್ದನ್ನು ವಿರೋಧಿಸಿ, ಅದೇ ಮಾತೇ ಕಾವ್ಯವಾಗುತ್ತದೆ ಎಂದು ದಂಡಿ ಸಮರ್ಥಿಸುತ್ತಾನೆ. ಹೀಗೆ ಅಖಂಡ ಭಾಷಾತತ್ತ್ವವೇ ಕಾವ್ಯವೆಂಬ ಅಭಿಪ್ರಾಯ ಕವಿರಾಜಮಾರ್ಗಕಾರನಿಗೂ ಸಮ್ಮತವೇ. ಇದು ಅವನು ವಾಕ್ಯ ದೋಷಗಳನ್ನು ಸಮರ್ಥಿಸಿ ಗುಣಗಳ ಪಾಲಿಗೆ ಸೇರಿಸುವಲ್ಲಿ ಸ್ಪಷ್ಟವಾಗುತ್ತದೆ.

ಅಪರಾಹ್ನದ ಸಂವಾದದಲ್ಲಿ ಬಂದ 'ಕವಿರಾಜಮಾರ್ಗಕಾರನು ಮುಖ್ಯವಾಗಿ ಭಾಷಾ ಮೀಮಾಂಸಕನು' ಎಂಬುದರ ಹಿನ್ನೆಲೆಯ (ಅವನು ಸಂಸ್ಕೃತ ಕಾವ್ಯಮೀಮಾಂಸೆಯ ಮೂಲಕ ಆರ್ಷ ಪರಂಪರೆಯನ್ನು ತಲುಪುತ್ತಾನೆ) ಅರ್ಥೈಸುವಿಕೆಗೆ ಇಷ್ಟು ವಿವರಣೆ ಅಗತ್ಯವಾಗುತ್ತದೆ. ಸಂಸ್ಕೃತ ಕಾವ್ಯಮೀಮಾಂಸೆಯ ತಾತ್ತ್ವಿಕ ಅಂಶಗಳನ್ನು ಅವನು ಹೇಗೆ ತನ್ನ ಪರಿಸರಕ್ಕೆ ಹೊಂದಿಸಿದನು ಎಂಬುದನ್ನು ಅರ್ಥೈಸುವಾಗ, ಸಂಸ್ಕೃತ-ಕನ್ನಡಗಳನ್ನು ಬೆರೆಸುವಲ್ಲಿ ಅವನು ಹಾಕಿದ ನಿಯಮಗಳು, ಗುಣಗಳನ್ನಾಧರಿಸಿ ಕನ್ನಡ ನಾಡಿನೊಳಗೇ ಅವನು ಮಾಡಿದ, ದಕ್ಷಿಣ ಉತ್ತರ (ಮತ್ತು ಉತ್ತರೋತ್ತರ)ಗಳೆಂಬ ಮಾರ್ಗಭೇದಗಳ ಸ್ಪಷ್ಟೀಕರಣ ಮತ್ತು ರಸವ್ಯಂಜನೆಗೆ ಅನುಕೂಲವಾಗುವ ಮಾರ್ಗಭೇದ - ಇವಿಷ್ಟು ಅಗತ್ಯವಾಗುತ್ತವೆ.

೭

ಕವಿರಾಜಮಾರ್ಗ : ಭಾಷಿಕ-ರಾಜಕೀಯ ಅಂಶಗಳು

ಬಂಜಗೆರೆ ಜಯಪ್ರಕಾಶ

ಪ್ರಾಚೀನ ಕಾಲದ ಕನ್ನಡ ಸಾಹಿತ್ಯ ಬೆಳವಣಿಗೆಯ ಅಧ್ಯಯನ ಕ್ರಮದಲ್ಲಿ 'ಕವಿರಾಜಮಾರ್ಗ'ಕ್ಕೆ ಹಲವಾರು ಕಾರಣಗಳಿಂದ ಮಹತ್ವದ ಸ್ಥಾನ ಇದೆ. ಅಂತೆಯೇ ಕನ್ನಡ ಭಾಷಾ ಸಮುದಾಯದ ವಿಕಾಸಕ್ರಮದ ಅಧ್ಯಯನ ದೃಷ್ಟಿಯಿಂದಲೂ ಈ ಕೃತಿಗೆ ಒಂದು ಪ್ರಾಮುಖ್ಯತೆ ಇದೆ. ಆ ಕೆಲವು ಅಂಶಗಳನ್ನು ಚರ್ಚಿಗಿಡಲು ಇಲ್ಲಿ ನಾನು ಪ್ರಯತ್ನಿಸುತ್ತೇನೆ.

ಈ ಪ್ರಯತ್ನವನ್ನು ಸ್ಥೂಲವಾಗಿ ಎರಡು ಅಂಶಗಳಾಗಿ ಗಮನಿಸಬಹುದು ಎಂದು ಕಾಣುತ್ತದೆ. ಮೊದಲನೆಯದು, ಈ ಕೃತಿಯಲ್ಲಿ ಉಲ್ಲೇಖಿತವಾಗಿರುವ ಕನ್ನಡ ಭಾಷಾ ಸಮುದಾಯ ಭೌಗೋಳಿಕ ಮೇರೆಗಳನ್ನು ಪ್ರಸ್ತಾಪಕ್ಕೆ ತಂದಿರುವ ಹಾಗೂ ಅದರೊಳಗೆ ವಾಸಿಸುತ್ತಿರುವ ಜನರ ಭಾಷಾ ಪ್ರೌಢಿಮೆಯ ಉಲ್ಲೇಖವಿರುವ ಭಾಗಗಳು; ಎರಡನೆಯದು, ಕನ್ನಡ ಕಾವ್ಯರಚನೆಯಲ್ಲಿ ಇರುವ ದೋಷಗಳು. ಅದಕ್ಕೆಂದೇ ಒಂದು ಮಾರ್ಗವನ್ನು ಪ್ರತಿಪಾದಿಸುವ ಉಲ್ಲೇಖಗಳು. ಒಂದು ಭಾಷೆ ಸಮುದಾಯದ ವಿಕಾಸಕ್ರಮ ಹಾಗೂ ಅದರ ಸಾಮಾಜಿಕ ಸಂಯೋಜನೆಯ ಅಂಶಗಳನ್ನು ಪರಿಶೀಲಿಸುವುದಕ್ಕೆ, ಮೇಲೆ ನಾನು ವಿಭಾಗೀಕರಿಸಿದ ಎರಡೂ ಬಗೆಯ ಉಲ್ಲೇಖಗಳು ಪರಸ್ಪರ ಪೂರಕ ಸಂಬಂಧವನ್ನು ಹೊಂದಿವೆ. ಆದರೂ, ನಾಡಿನ ಮೇರೆ ಸೀಮೆಗಳ ಉಲ್ಲೇಖಗಳು ವಿಕಾಸಕ್ರಮದ ಒಂದು ಹಂತವನ್ನೂ, ಕಾವ್ಯ ಲಾಕ್ಷಣಿಕ ಮಾರ್ಗದ ಉಲ್ಲೇಖಗಳು ಮತ್ತೊಂದು ಹಂತವನ್ನೂ ಪ್ರತಿನಿಧಿಸುವುದರಿಂದ, ಅವೆರಡರನ್ನು ವಿಭಾಗೀಕರಿಸಿ ಗಮನಿಸುವುದು ಸೂಕ್ತವಾಗುತ್ತದೆ. ಅದನ್ನು ಹೀಗೆ ವಿವರಿಸಬಹುದು. ನಾಡಿನ ಮೇರೆ ಸೀಮೆಗಳ ಉಲ್ಲೇಖವಾಗಿರುವ

ಕಾವೇರಿಯಿಂದಮಾ ಗೋ
ದಾವರಿವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯವಿಲೀನ ವಿಶದ ವಿಷಯ ವಿಶೇಷಂ(೧-೩೬)

ಎಂಬ ಈ ಪದ್ಯವು, ನಾಡಿನ ಜನಜೀವನದೊಳಗೆ ಈಗಾಗಲೇ ಬಂದಿರುವ ಒಂದು ನಿಶ್ಚಿತ ಬೆಳವಣಿಗೆಯನ್ನು ಗುರುತಿಸುತ್ತದೆ; ಈ ಗುರುತಿಸುವಿಕೆ ಸ್ವಲ್ಪ ಹೆಚ್ಚು ಕಮ್ಮಿ ಆಧುನಿಕ ಕಾಲಘಟ್ಟದ ಮೇರೆ ಸೀಮೆಗಳೊಂದಿಗೂ ಸಂವಾದಿಯಾಗಿ ನಿಂತಿರುವುದರಿಂದ, ಆಗ ಅದು ಗುರುತಿಸಿದ ನಿಶ್ಚಿತ ಬೆಳವಣಿಗೆಯೆಂಬುದು ಒಂದು ಪ್ರೌಢಾವಸ್ಥೆಯನ್ನು ತಲುಪಿತ್ತು ಎಂಬುದನ್ನು ಕೂಡ ನಾವು ಗಮನಿಸಬಹುದು.

ಒಂದು ಭಾಷಾ ಸಮುದಾಯದ ಮೇರೆ ಸೀಮೆಗಳನ್ನು ಹೀಗೆ ಗುರುತಿಸುವುದು ಎಂಬುದು, ಅದರ ಸಾಮಾಜಿಕ ಸಂಯೋಜನೆಯ ವಿಕಾಸದಲ್ಲಿ ಒಂದು ಹೊಸ ಕಾಲಘಟ್ಟದ ಆರಂಭವನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಈ ಬಗೆಯ ಗುರುತಿಸಿ ಕೊಳ್ಳುವಿಕೆ, ಈಗಾಗಲೇ ಅಲ್ಲಿ ನಿವಾಸಿಸುವ ಜನಸಮುದಾಯದ ಪ್ರಜ್ಞೆಯೊಳಗೆ ಅಸ್ತಿತ್ವಕ್ಕೆ ಬರತೊಡಗಿತ್ತು. ಅದನ್ನು 'ಕವಿರಾಜಮಾರ್ಗ'ದಂತಹ ಶಾಸ್ತ್ರಗ್ರಂಥಗಳು ಅಧಿಕೃತಗೊಳಿಸು ತ್ತಿವೆ. ಈ ಅಂಶವು ಕುಲ ಬಣ ಜಾತಿಗಳಾಗಿ ಮಾತ್ರ ತನ್ನನ್ನು ಗ್ರಹಿಸಿಕೊಳ್ಳುತ್ತಿದ್ದ ಪ್ರಾಚೀನ ಜನಸಮುದಾಯವೊಂದು, ತನ್ನ ಸಾಮಾಜಿಕ ಜೀವನದ ಒಳಗೆ ಬಂದ ಬೆಳವಣಿಗೆಗಳ ಕಾರಣಕ್ಕೆ, ಒಂದು ನಿರ್ದಿಷ್ಟ ಮೇರೆ-ಸೀಮೆಗಳ ಭಾಷಾ ಸಮುದಾಯವಾಗಿ ತನ್ನನ್ನು ಪುನರ್ ಗ್ರಹಿಸಿಕೊಳ್ಳಲು ಆರಂಭಿಸಿರುವುದನ್ನು ಖಚಿತವಾಗಿ ಸೂಚಿಸುತ್ತದೆ. ಚಾರಿತ್ರಿಕವಾಗಿ ಕೂಡ ಈ ಪದ್ಯದ ಉಲ್ಲೇಖದ ವಾಸ್ತವತೆ, ದೇಶದ ಇತರೆ ಭಾಗಗಳ ಬೆಳವಣಿಗೆಯೊಂದಿಗೆ ಸಂವಾದಿಯಾಗಿದೆ. ಇದನ್ನು ನಿದರ್ಶಿಸಲು ಈ ಉಲ್ಲೇಖವನ್ನು ಗಮನಿಸಬಹುದು.

"ಕ್ರಿ.ಪೂ.೬ನೇ ಶತಮಾನದ ನಂತರ ಪೂರ್ವ ಉತ್ತರ ಪ್ರದೇಶ ಮತ್ತು ಪಶ್ಚಿಮ ಬಿಹಾರಗಳಲ್ಲಿ ಕಬ್ಬಿಣದ ಬಳಕೆಯ ಬಹಳ ವ್ಯಾಪಕವಾಗಿ ಹರಡುತ್ತಾ ಬಂದು, ವಿಶಾಲವಾದ ಪ್ರಾದೇಶಿಕ ರಾಜ್ಯಗಳು ತಲೆ ಎತ್ತಲೂ ಸೂಕ್ತ ಸನ್ನಿವೇಶಗಳನ್ನು ಹುಟ್ಟಿಸಿತು. ಕಬ್ಬಿಣದ ಆಯುಧಗಳಿಂದಾಗಿ ಯೋಧವರ್ಗವು ಪ್ರಮುಖ ಪಾತ್ರವಹಿಸಲಾರಂಭಿಸಿತು. ನವೀನ ಕೃಷಿವಿಧಾನಗಳಿಂದಾಗಿ ರೈತರು ತಮ್ಮ ಬಳಕೆಗೆ ಅಗತ್ಯವಾದುದಕ್ಕಿಂತ ಬಹಳ ಹೆಚ್ಚಿನ ಪ್ರಮಾಣದಲ್ಲಿ ಧಾನ್ಯಗಳನ್ನು ಬೆಳೆಸುವುದು ಸಾಧ್ಯವಾಯಿತು. ಈ ಹೆಚ್ಚುವರಿಯನ್ನು ರಾಜರು ತಮ್ಮ ಸೈನಿಕ ಹಾಗೂ ಆಡಳಿತದ ಅಗತ್ಯಗಳ ನಿರ್ವಹಣೆಗಾಗಿ ವಸೂಲು ಮಾಡುವುದು ಸಾಧ್ಯವಿತ್ತು. ಈ ಹೆಚ್ಚುವರಿಯು ಆ ಶತಮಾನದಲ್ಲಿ ತಲೆ ಎತ್ತಿದ ನಗರಗಳಿಗೆ ಒದಗಿಬರುವುದು ಸಾಧ್ಯವಾಯಿತು. ಈ ಐಹಿಕ ಸವಲತ್ತುಗಳು ಜನರು ತಮ್ಮ ಪ್ರದೇಶಗಳಿಗೆ ಅಂಟಿಕೊಳ್ಳಲು ಹಾಗೂ ಇತರರನ್ನು ಅಡಗಿಸಿ ತಮ್ಮ ಪ್ರದೇಶಗಳನ್ನು ವಿಸ್ತರಿಸಿಕೊಳ್ಳಲು ಪ್ರಚೋದಿಸತೊಡಗಿದವು. ನಗರಗಳನ್ನು ತಮ್ಮ ಕಾರ್ಯಾಚರಣೆಯ ನೆಲೆಗಳನ್ನಾಗಿ ಮಾಡಿಕೊಂಡು ತಲೆ ಎತ್ತಿದ ರಾಜ್ಯಗಳು, ಪ್ರಾದೇಶಿಕ ಭಾವನೆಯನ್ನು ಬಲಪಡಿಸಿದವು. ಜನರ ನಿಷ್ಠೆ ತಮ್ಮ ಜನ ಹಾಗೂ ಬಣಕ್ಕೆ ಸಲ್ಲುತ್ತಿದ್ದುದು, ಈಗ ತಮ್ಮ ಜನಪದಕ್ಕೆ ಅಥವಾ ವಾಸಿಸುವ ಪ್ರದೇಶಕ್ಕೆ ಸಲ್ಲತೊಡಗಿತು."(ಆರ್.ಎಸ್.ಶರ್ಮಾ: 'ಪ್ರಾಚೀನಭಾರತ')

ಗಂಗಾನದಿಯ ಬಯಲಿನಲ್ಲಿ ಕ್ರಿ.ಪೂ.೬ನೇ ಶತಮಾನದ ನಂತರ ಆರಂಭವಾದ ಈ ಬಗೆಯ ಪ್ರದೇಶನಿಷ್ಠ ಪ್ರಕ್ರಿಯೆಯು, ದಕ್ಷಿಣ ಭಾರತದ ಪರ್ಯಾಯ ದ್ವೀಪದಲ್ಲಿ ನಾಲ್ಕೈದು ಶತಮಾನಗಳಷ್ಟು ತಡವಾಗಿ ಆರಂಭವಾಯಿತು. ಶಾತವಾಹನರ ಆಳ್ವಿಕೆಯ ಆರಂಭದಿಂದ (ಕ್ರಿ.ಪೂ.೧೩೧ - ಕ್ರಿ.ಶ.೧೭೪) ಈ ಬಗೆಯ ಪ್ರಕ್ರಿಯೆ ಪರ್ಯಾಯ ದ್ವೀಪದ ಪ್ರದೇಶದಲ್ಲಿ ಆರಂಭಗೊಂಡಿತೆಂದು ಗ್ರಹಿಸಲಾಗುತ್ತಿದ್ದು, ಆ ಪ್ರಕ್ರಿಯೆಯು ಅಂದರೆ ಬಣದ ಬದಲು ನಿವಸಿತ ಭೌಗೋಳಿಕ ಪ್ರದೇಶಕ್ಕೆ ತಮ್ಮ ನಿಷ್ಠೆಯನ್ನು ಪ್ರಕಟಪಡಿಸುವ ಪ್ರಕ್ರಿಯೆಯು, ಒಂದು ಪ್ರೌಢವಸ್ಥೆಯನ್ನು 'ಕವಿರಾಜಮಾರ್ಗ' ಕೃತಿಯ ಕಾಲಾವಧಿಯ (೯ನೇ ಶತಮಾನದ ಮಧ್ಯಭಾಗದ) ಹೊತ್ತಿಗೆ ಗುರುತಿಸಬಹುದಾಗಿದೆ ಎಂಬ ಸೂಚನೆಯನ್ನು "ಕಾವೇರಿಯಿಂದಮ್ .." ಪದ್ಯದ ಉಲ್ಲೇಖದಿಂದ ನಾವು ಸ್ವೀಕರಿಸಬಹುದಾಗಿದೆ. ಈ ಪದ್ಯದಂತೆಯೇ-

ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್ (೧-೩೮)

ಎಂಬ ಪದ್ಯವು, ಈ ಭಾಷಾ ಸಮುದಾಯದೊಳಗಿನ ನಿಶ್ಚಿತ ಸಂವಹನ ಸಾಧ್ಯತೆ ಹಾಗೂ ಪ್ರೌಢಿಮೆಗಳನ್ನು ನಿದರ್ಶಿಸುತ್ತಿದೆ. ಇದನ್ನು ಕನ್ನಡ ಭಾಷಾ ಸಮುದಾಯದ ಅಂದಿನ ಸ್ಥಿತಿಗತಿಯ ಸೂಚಕವಾಗಿದೆ ಎಂದು ಪರಿಗಣಿಸಬಹುದಾಗಿದೆ. ಇದನ್ನು ಹೀಗೆ ವಿವರಿಸಬಹುದು.

ಒಂದು ಬಣ ಅಥವಾ ಕುಲವಾಗಿದ್ದ ಹಲವು ಜನಸಮುದಾಯಗಳು, ಒಂದು ಜನಪದ ಅಥವಾ ಪ್ರಾದೇಶಿಕ ರಾಜ್ಯವಾಗಿ ನೆಲೆಗೊಳ್ಳತೊಡಗುವುದು ಎಂದರೆ, ಆ ಸಮುದಾಯದೊಳಗೆ ಪರಸ್ಪರ ಶ್ರಮವಿಭಜನೆ ಹಾಗೂ ಶ್ರಮಶಕ್ತಿಗಳ ಬೆಳವಣಿಗೆಯಲ್ಲಿ ಒದಗಿಬಂದ ಸಾಪೇಕ್ಷ ಉನ್ನತಿ ಎನ್ನುವುದನ್ನು ನಾವು ಈಗ ಗಮನಿಸಿದ್ದೇವೆ. ಈ ಪದ್ಯ ಆ ಬಗೆಯ ಶ್ರಮಶಕ್ತಿ ಉನ್ನತಿಯ ಕಾರಣದಿಂದ ಜನಸಮುದಾಯದೊಳಗಡೆ ಪ್ರವಹಿಸುವ ಜ್ಞಾನವಂತಿಕೆಯನ್ನು ನಿದರ್ಶಿಸುವಂತಿದೆ. ಅವರು ಸಾಕ್ಷರರಲ್ಲ, ಹಾಗೆಯೇ 'ಕುರಿತೋದಿ'ದವರೂ ಅಲ್ಲ. ಆವರೆ ನುಡಿಯಲು ಮತ್ತು ಅರಿಯಲು ಜಾಣರು. ಸ್ವತಃ ಕಾವ್ಯಪ್ರಯೋಗ ಪರಿಣತರು. ಅರಿಯಲು ಮತ್ತು ನುಡಿಯಲು ಜಾಣರು. ಸ್ವತಃ ಕಾವ್ಯಪ್ರಯೋಗ ಪರಿಣತರು. ಅರಿಯಲು ಮತ್ತು ನುಡಿಯಲು ಜಾಣರು ಎಂಬುದು ಅವರ ಮೌಖಿಕ ಸಂವಹನದ ಹೆಚ್ಚಳವನ್ನೂ ಆ ಹೆಚ್ಚಳವು ಹಲವು ಬಣಗಳಾಗಿದ್ದ ಹಲವಾರು ಗುಂಪುಗಳ ನಡುವೆ ಭಾಷಾ ಬಳಕೆಯಲ್ಲಿ ಏರ್ಪಟ್ಟಿರುವ ಒಂದು ಸಾಮಾನ್ಯ ಪರಿಸ್ಥಿತಿಯನ್ನೂ ನಿರ್ದೇಶಿಸುತ್ತಿದೆ. ಈ ಪರಿಸ್ಥಿತಿಯು 'ಕವಿರಾಜಮಾರ್ಗ' ಕೃತಿಯ ಕಾಲಕ್ಕೆ ಕೆಲವು ಶತಮಾನಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ಇದ್ದ ಪರಿಸ್ಥಿತಿಗಿಂತ, ಭಿನ್ನವಾದ ಪರಿಸ್ಥಿತಿಯೊಂದನ್ನು

ಸೂಚಿಸುವುದಕ್ಕೆ ಈ ಉಲ್ಲೇಖ ಬಂದಿರಬಹುದೆಂಬುದನ್ನು ಊಹಿಸಬಹುದಾಗಿದೆ. ಅಂದರೆ ಭಾಷೆ ಬಳಕೆಯ ನಿಶ್ಚಿತ ಸಾಮಾನ್ಯತೆ, ಆ ಜನಪದ ಹಲವು ಗುಂಪುಗಳ ನಡುವಿನ ಹೆಚ್ಚುವರಿ ಮಿಳಿತತೆಯನ್ನು ಸೂಚಿಸುವುದಾಗಿದ್ದು, ಅದು ಭಾಷಾಸಮುದಾಯದ ಮೇಲೆ ಸೀಮೆಗಳ ಪ್ರಸ್ತಾಪದ ಜೊತೆ ಜೊತೆಗೆ ಪ್ರಸ್ತಾಪಿತವಾಗಿರುವುದಕ್ಕೆ ಒಂದು ಸಮರ್ಥನೆಯನ್ನು ಒದಗಿಸುತ್ತದೆ.

ಅಂದರೆ ಭಾಷಾ ಸೀಮೆಯ ಭೌಗೋಳಿಕ ಎಲ್ಲೆಗಳ ಪ್ರಸ್ತಾಪವೆಂಬುದು 'ಕವಿರಾಜ ಮಾರ್ಗ' ದಲ್ಲಿ ಕವಿಕಲ್ಪನೆಯಾಗಿರದೆ, ಒಂದು ವಸ್ತುಸ್ಥಿತಿಯ ಲಾಕ್ಷಣೀಕರಣವೆಂಬುದನ್ನು ನಾವು ಗಮನಿಸಬಹುದಾಗಿದೆ. "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂಬ ಪ್ರಸ್ತಾವವನ್ನು ನಾವು ಕೇವಲ ಮಹೋತ್ಪ್ರೇಕ್ಷೆಯ ಅಲಂಕಾರವೆಂಬುವಾಗಿ ಪರಿಗಣಿಸಬೇಕೆ ಅಥವಾ ವಸ್ತುಸ್ಥಿತಿಯ ನಿರ್ದೇಶನವೆಂಬುದಾಗಿ ಪರಿಗಣಿಸಬೇಕೆ? 'ಕವಿರಾಜಮಾರ್ಗ'ದ ಕೃತಿಕಾರ ತನ್ನ ಭಾಷಾ ಸಮುದಾಯದ ಬಗ್ಗೆ ಅಸೀಮ ಅಭಿಮಾನ ಪ್ರಕಟಿಸಿದ್ದಾನೆಂಬುದು ಈ ಕೃತಿಯ ಮಟ್ಟಿಗೆ ನಿಜವಾದುದಾದರೂ, ಆತ ವಿಮರ್ಶಾರಹಿತನಲ್ಲ. ಯಾಕೆಂದರೆ ಈ ಪದ್ಯಕ್ಕೆ ನಂತರದ ಕೆಲವು ಪದ್ಯಗಳಲ್ಲಿ ಕನ್ನಡ ಕಾವ್ಯ ಭಾಷಾ ಪ್ರಯೋಗದ ಬಗ್ಗೆ ಆತ ವಿಮರ್ಶಾತ್ಮಕವಾಗಿ ಮಾತನಾಡಿದ್ದಾನೆ. ಕನ್ನಡ ಭಾಷೆಯೊಳಗೇ ಇರುವ ಹಲವು ಉಪದೇಶ್ಯಗಳು, ಸಮಾಸ ಮುಂತಾದ ಪ್ರಯೋಗಗಳಲ್ಲಿ ಕವಿಗಳು ಮಾಡುವ ದೋಷಗಳು- ಮುಂತಾದವುಗಳ ಬಗ್ಗೆ ಆತ ಟೀಕಿಸಿದ್ದಾನೆ. ಹಾಗಿದ್ದರೆ ಈ ಪದ್ಯದೊಳಗೆ ಬರುವ "ಪ್ರಯೋಗ ಪರಿಣತಮತಿಗಳ್" ಎಂಬುದನ್ನು ಕೇವಲ ಹೊಗಳಿಕೆ ಎಂದು ತೆಗೆದುಕೊಳ್ಳಬೇಕೆ ಅಥವಾ ಅದೂ ಕೂಡ ಒಂದು ಭಾಷಾ ಜನ ಸಮುದಾಯದ ಸಾಂಸ್ಕೃತಿಕ ಕ್ರಿಯಾಶೀಲತೆಯ ನಿಶ್ಚಿತ ಪರಿಸ್ಥಿತಿಯೊಂದನ್ನು ಸೂಚಿಸಲು ಪ್ರಯತ್ನಿಸಿದ್ದಾನೆ ಎಂದು ಕವಿಸತ್ಯವನ್ನಾಗಿ ತೆಗೆದುಕೊಳ್ಳಬೇಕೆ?

ರಾಜನನ್ನು, ದೈವಾಂಶ ಸಂಭೂತರನ್ನು ಮಹೋತ್ಪ್ರೇಕ್ಷೆಯ ಅಲಂಕಾರಗಳಿಂದ ಹೊಗಳುವುದು ಆ ಕಾಲದ ಕಾವ್ಯಲಕ್ಷಣವಾಗಿದ್ದಾಗಲೂ, ಅದೀಗ ಜನಸಮುದಾಯವೊಂದರ ಪ್ರಯೋಗಶೀಲತೆಯ, ಕಾವ್ಯಶಕ್ತಿಯ ಹೊಗಳಿಕೆಯಾಗಿ ಇಲ್ಲಿ ಬದಲಾಗುತ್ತಿರುವ ಸನ್ನಿವೇಶವನ್ನು ಗಮನಿಸಬೇಕೆಂದು ನನಗೆ ಅನ್ನಿಸುತ್ತದೆ. ಹಾಗೆಯೇ ರಾಷ್ಟ್ರಕೂಟರ ಆಡಳಿತಕ್ಕೆ ಮೊದಲು ಆಳ್ವಿಕೆ ಮಾಡಿದ ಚಾಲುಕ್ಯರ ಕಾಲದ ಹೊತ್ತಿಗೇ, ಕರ್ನಾಟಕದ ಜನಜೀವನದಲ್ಲಿ ಬಹಳ ತೀವ್ರವಾಗಿ ಹೆಚ್ಚಳಗೊಂಡ ಸಾಂಸ್ಕೃತಿಕ (ಶಿಲ್ಪಕಲೆ, ಕುಶಲಕರ್ಮಿಗಳ ಮನ್ನಣೆ, ಕಸುಬುದಾರರ ಪ್ರಾಮುಖ್ಯತೆ ಮುಂತಾದ) ಚಟುವಟಿಕೆಗಳ ಹಿನ್ನೆಲೆಯಲ್ಲಿ ತೆಗೆದುಕೊಂಡರೆ, ಮೊದಲಿನ ಅವಧಿಗೆ ಹೋಲಿಸಿದರೆ, ಕನ್ನಡದ ಜನಸಮುದಾಯ ತನ್ನ ಬದುಕಿನಲ್ಲಿ ಹೆಚ್ಚಳಗೊಂಡ ಕೃಷಿ ವಾಣಿಜ್ಯೀಕರಣ ಹಂತದಲ್ಲಿ ಸಾಹಿತ್ಯಿಕವಾಗಿಯೂ ಹಲವು ವಿಧದಲ್ಲಿ ಪ್ರಯೋಗ ಪರಿಣತಮತಿಗಳಾಗಿದ್ದರೆಂಬುದನ್ನು ನಂಬಲು ನಮಗೆ ಆಧಾರಗಳಿವೆ. ಯಾಕೆಂದರೆ ಜನ ಸಮುದಾಯದ ಭೌತಿಕ ಜೀವನದಲ್ಲಿ ಕಂಡುಬರುವ

ಉಪಸ್ಥಿತಿಯು, ಅದರ ಸಾಹಿತ್ಯ, ಕಲಾತ್ಮಕ ಅಭಿವ್ಯಕ್ತಿಮಾರ್ಗಗಳ ಪ್ರಯೋಗದಲ್ಲಿಯೂ ಹೊಸ ಸಾಧ್ಯತೆಗಳನ್ನು ತೆರೆಯುತ್ತದೆಂಬುದನ್ನು ನಾವು ಗಮನಿಸಬಹುದು.

ಈ ಪದ್ಯದ ವಾಸ್ತವ ಪರಿಸ್ಥಿತಿ ನಿರ್ದೇಶನತತ್ವವನ್ನು ನಿದರ್ಶಿಸಲು ೧೦ನೇ ಶತಮಾನದಲ್ಲಿ ಆರಂಭಗೊಂಡ ದಾಸಿಮಯ್ಯ, ಏಕಾಂತದ ರಾಮಯ್ಯ, ಮುಂತಾದ ವಚನಕಾರರ ಸಾಹಿತ್ಯ ಪ್ರಯೋಗಗಳನ್ನು ಇದಕ್ಕೆ ಮುಂದಿನ ಆಧಾರಗಳನ್ನಾಗಿ ಸೂಚಿಸಬಹುದು. ಹಾಗೆಯೇ ೧೦ನೇ ಶತಮಾನದಲ್ಲಿ ಬಂದ 'ಪಂಪಭಾರತ' ಕೂಡ. ೯ನೇ ಶತಮಾನದ ಮಧ್ಯಭಾಗದಲ್ಲಿ ರಚಿತವಾದ 'ಕವಿರಾಜಮಾರ್ಗ' ಜನಜೀವನದೊಳಗೆ ಅದೂ ನಿರ್ದಿಷ್ಟವಾಗಿ ಕನ್ನಡ ಭಾಷಾಸಮುದಾಯದೊಳಗೆ ಪಕ್ವಗೊಂಡಿದ್ದ ಸಾಮಾಜಿಕ, ಸಾಂಸ್ಕೃತಿಕ ಸನ್ನಿವೇಶವೊಂದನ್ನು ಹೀಗೆ ನಿದರ್ಶಿಸುತ್ತಿದೆ. ಆ ಕಾರಣಕ್ಕಾಗಿ ಇದು ಆ ಭಾಷಾ ಸಮುದಾಯದ ಚಾರಿತ್ರಿಕ ಅಧ್ಯಯನಕ್ಕೆ ಒಂದು ಸಾಹಿತ್ಯ ಮೂಲದ ಆಕರವಾಗಿ ನಿಂತಿದೆ ಎಂದು ನಾನು ಭಾವಿಸುತ್ತೇನೆ. ಕನ್ನಡ ದೇಶಭಾಷೆಯ ಕುರಿತಾಗಿ 'ಕವಿರಾಜಮಾರ್ಗ'ದಲ್ಲಿ ಇರುವ ಉಲ್ಲೇಖಗಳು ಹೀಗೆ ನೇರವಾಗಿ ಆವರೆಗಿನ ಸಾಮಾಜಿಕ ಪರಿಸ್ಥಿತಿಯ ಗ್ರಹಿಕೆಯನ್ನು ನಿರ್ದೇಶಿಸುವುದು ಒಂದು ಅಂಶ.

ಅಂದರೆ ಇದು ಈಗಾಗಲೇ ಮತ್ತೊಂದು ಅಂಶ ಒಡಮೂಡಿರುವ ಪರಿಸ್ಥಿತಿಯೊಂದನ್ನು ನಿದರ್ಶಿಸುತ್ತಿದೆ. 'ಕವಿರಾಜಮಾರ್ಗ' ಕೃತಿಯ ರಚನೆ ಹಾಗೂ ಉದ್ದೇಶಗಳು, ಕನ್ನಡ ಭಾಷೆ ಸಮುದಾಯದ ಭವಿಷ್ಯತ್ ಕಾಲವನ್ನು ಕುರಿತಾದ ಒಂದು ರಾಜಕೀಯ ಹಿನ್ನೆಲೆಯನ್ನು ತನ್ನ ಸತ್ವದೊಳಗೆ ಒಳಗೊಂಡಿವೆ. ಮುಖ್ಯವಾಗಿ ಇದು ತನ್ನ ರಚನೆಯ ಉದ್ದೇಶವನ್ನು ಹೀಗೆ ಹೇಳಿಕೊಂಡಿದೆ: 'ಈವರೆಗೆ ಕನ್ನಡದಲ್ಲಿ ಪ್ರೌಢಿಮೆಯ ಕಾವ್ಯಗಳು ಬಂದಿವೆ. ಪ್ರೌಢ ಕೃತಿಕಾರರು ಆಗಿ ಹೋಗಿದ್ದಾರೆ. ಆದರೂ ಸರಿ ತಪ್ಪುಗಳನ್ನು ಸೂತ್ರೀಕರಿಸಿ ವಿವರಿಸುವ ಗ್ರಂಥವೊಂದರ ಕೊರತೆ ಇದೆ. ಆದ್ದರಿಂದ ಅಂತಹುದರ ಸ್ಥಾನದಲ್ಲಿ ಒಂದು ಗ್ರಂಥ ರಚನೆಯನ್ನು ಅಧಿಕೃತವಾಗಿ ರಚಿಸುವುದು ಕವಿರಾಜಮಾರ್ಗದ ಉದ್ದೇಶ.' ಇದನ್ನು ಎಂ.ವಿ.ಸೀತಾರಾಮಯ್ಯ ಹೀಗೆ ವಿವರಿಸುತ್ತಾರೆ : "ವಿಸ್ತಾರವಾದ ಕನ್ನಡ ನಾಡಿನಲ್ಲಿ ಹೆಸರಿಗೆ ಒಂದು ಕನ್ನಡವಿದ್ದರೂ ಪ್ರಾದೇಶಿಕ ಭಿನ್ನತೆಗಳಿಂದಾಗಿ ದೇಸೀ ಬೇರೆ ಬೇರೆಯಾಗಿದ್ದವು: ಈ 'ಕನ್ನಡಂಗಳ'ಲ್ಲಿ ಆದಿಶೇಷ ಕೂಡ ಎಣಿಸಲಾರದಷ್ಟು ದೋಷಗಳು ತುಂಬಿಕೊಂಡಿದ್ದವು. ಆಗಿನ ಕಾಲದಲ್ಲಿಯೇ ಹಳಗನ್ನಡವೊಂದಿತ್ತು; ಸಾಮಾನ್ಯ ಕವಿಗಳಿಗೆ ಈ ದೇಸೀ ಕನ್ನಡದ ನಿಶ್ಚಿತ ಜ್ಞಾನವಿರಲಿಲ್ಲ; ಅವರು ಶಬ್ದ ಶಾಸ್ತ್ರವನ್ನು ಅರಿತವರಾಗಿರಲಿಲ್ಲ: ಆದ್ದರಿಂದ ಬಳಕೆಯಲ್ಲಿಲ್ಲದ ಹಳಗನ್ನಡದ ಪ್ರಯೋಗಗಳಿಂದ ಕೂಡಿದ್ದ ಕಾವ್ಯಗಳನ್ನೇ ಲಕ್ಷಣವೆಂದು ಸ್ವೀಕರಿಸಿ, ಹಳಗನ್ನಡವನ್ನು ಹೊಲಗೆಡಿಸುತ್ತಿದ್ದರು. ಸಂಸ್ಕೃತ ಶಬ್ದಗಳನ್ನು ಕನ್ನಡ ಶಬ್ದಗಳೊಂದಿಗೆ ಹೇಗೆ ಬೆರೆಸಬೇಕು ಎಂಬ ಬಗೆಗೆ ವಿಧಿ-ನಿಷೇಧಗಳ ಅರಿವು ಸಾಕಷ್ಟಿರಲಿಲ್ಲ. ಸಂಸ್ಕೃತವನ್ನೂ ಸಂಸ್ಕೃತ ಕಾವ್ಯ ಪದ್ಧತಿಯನ್ನೂ ಬಿಟ್ಟು ಕನ್ನಡದಲ್ಲಿ ಶ್ರೇಷ್ಠ ಕಾವ್ಯ ರಚನೆ ಸಾಧ್ಯವಿರಲಿಲ್ಲ.' (ಕವಿರಾಜಮಾರ್ಗ : ೧೯೭೫ : xxviii)

'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂಬುದು ಕವಿರಾಜ ಮಾರ್ಗಕಾರನ ವಸ್ತುಸ್ಥಿತಿಯ ಗ್ರಹಿಕೆ ಎಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಅದನ್ನು ಕನ್ನಡ ಭಾಷೆ ಸಮುದಾಯದ ಒಂದು ಹಂತದ ಸಮಾಜೋ ಆರ್ಥಿಕ ಬೆಳವಣಿಗೆಗೆ ಎಂಬುದಾಗಿಯೂ ಗ್ರಹಿಸಿದ್ದೇವೆ. ಅಂತಹ ಒಂದು ಸಂದರ್ಭದಲ್ಲಿ ರಚಿತವಾದ ಕಾವ್ಯ ಶಾಸ್ತ್ರ ಗ್ರಂಥವೊಂದರ ರಾಜಕೀಯ ಲಕ್ಷ್ಯವೇನು?

ಈವರೆಗೆ ಕನ್ನಡ ಭಾಷಾ ಸಮುದಾಯದೊಳಗೆ ನೆಲೆಗೊಂಡಿರುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಿಯಾಶೀಲತೆಯನ್ನು ವಿಧಾನಬದ್ಧಗೊಳಿಸುವುದು, ಅದಕ್ಕಾಗಿ ಶಾಸ್ತ್ರೀಯ ಮಾರ್ಗಗಳನ್ನು ನಿರ್ಮಿಸುವುದು, 'ಕವಿರಾಜಮಾರ್ಗ'ದ ಸಾಹಿತ್ಯಿಕ ಉದ್ದೇಶ. ಅಂದರೆ, ಅದರ ಸ್ವಾಭಾವಿಕ ಗತಿಯಲ್ಲಿ ಒಂದು ಪ್ರದೇಶವಾರು ಜನ ಸಮುದಾಯದೊಳಗೆ ಉಂಟಾಗಿರುವ ಹಲವು ಬಗೆಯ ಉತ್ಕ್ರಮಣಗಳನ್ನು ಸದೃಢೀಕರಿಸುವುದು; ಅಂದರೆ, ಪ್ರಭುತ್ವವೊಂದರ ಮುಂದೊಡಗುವಿಕೆಯ ಮೂಲಕ ಆ ಸಮಾಜದ ಕ್ರಿಯಾಶೀಲತೆಯನ್ನು ಮತ್ತಷ್ಟು ಉನ್ನತೀಕರಿಸುವುದಕ್ಕೆ ಉಂಟಾಗಿದ್ದ ರಾಜಕೀಯ ಆಕಾಂಕ್ಷೆಯನ್ನು ಈ ಕೃತಿ ರಚನೆಯು ಒಳಗೊಂಡಿದೆ.

ಈ ರಾಜಕೀಯ ಆಕಾಂಕ್ಷೆಯು ಆರ್.ಎನ್.ನಂದಿ ಗುರುತಿಸುವ 'ಸಬ್-ಇನ್-ಪ್ಯುಡೇಶನ್' ಎಂಬ ಹೆಸರಿನ ಸಾಮಾಜಿಕ ಪ್ರಕ್ರಿಯೆಯ ಅಂಗವಾಗಿ ಒಡಮೂಡಿದೆ. ಆವರೆಗೆ ಕರ್ನಾಟಕವನ್ನು ಆಳಿದ ಬೇರೆ ರಾಜವಂಶಗಳಿಗೆ ಹೋಲಿಸಿದರೆ, ಅತ್ಯಂತ ವಿಸ್ತಾರದ ಭೂ ಪ್ರದೇಶವನ್ನು ರಾಷ್ಟ್ರಕೂಟರು ಆಳಿದವರಾಗಿದ್ದರು ಎಂಬ ಅಂಶವನ್ನು, 'ಕವಿರಾಜಮಾರ್ಗ'ದಲ್ಲಿ ಉಲ್ಲೇಖಿಸಲ್ಪಟ್ಟಿರುವ ಕನ್ನಡ ಭಾಷೆಯ ಮೇಲೆ ಸೀಮೆಗಳೆಲ್ಲಾ ಅದೇ ಮೊದಲು ಬಾರಿಗೆ, ಈ ಇತಿಹಾಸದಲ್ಲಿ ಹಿಂದಿಲ್ಲದಿದ್ದ ನೆಲೆಯಲ್ಲಿ, ರಾಷ್ಟ್ರಕೂಟರ ಆಧಿಪತ್ಯಕ್ಕೆ ಒಳಪಟ್ಟಿದ್ದವು ಎಂಬ ಅಂಶವನ್ನೂ ನಾವು ಈಗ ಹಿನ್ನೆಲೆಯಾಗಿ ನೆನಪಿಟ್ಟುಕೊಳ್ಳಬೇಕು.

ತನ್ನ ಸಾಮಾಜಿಕ ದ್ರವ್ಯದೊಳಗೆ ಒಂದು ಸಮ್ಮಿಳಿತ ಭಾಷಾ ಸಮುದಾಯವಾಗಿ, ನಿಶ್ಚಿತ ಮೇರೆಗಳೊಂದಿಗೆ ಬದುಕುತ್ತಿರುವ ಸಮುದಾಯವನ್ನು, ವಾಣಿಜ್ಯ ಉತ್ಪಾದನೆಗಳ ಉತ್ಕರ್ಷಕ್ಕೆ ಕೊಂಡೊಯ್ಯಲು, ಸಬ್-ಇನ್-ಪ್ಯುಡೇಶನ್ ಅವಧಿಯ ಪ್ರಭುತ್ವ ಸಕ್ರಿಯ ಗೊಂಡಿದೆ. ಅದಕ್ಕೆ ಬೇಕಾದ ಬೇರೆ ಸೀಮೆಗಳ ರಂಗಸ್ಥಳ ಸಿದ್ಧವಿದೆ. ಹಾಗಾಗಿ ಈಗ ಶಾಸ್ತ್ರಾಚಾರಗಳ ರಂಗಸಜ್ಜಿಕೆಯನ್ನು ಆ ರಂಗಸ್ಥಳಕ್ಕೆ ನಿರ್ಮಿಸಲು ಪ್ರಭುತ್ವ ನಾಂದಿ ಹಾಡುತ್ತಿದೆ. ಅದಕ್ಕೆಂದೇ ರಾಷ್ಟ್ರಕೂಟರ ಆಡಳಿತಾವಧಿಯು ಕನ್ನಡವನ್ನು ಶಾಸನ ಭಾಷೆ ಯಾಗಿ ಬಳಸಿತು ಹಾಗೂ ಕನ್ನಡ ಕಾವ್ಯಕ್ಕೆ ಮಾರ್ಗಸೂತ್ರ ನಿರೂಪಿಸಲು 'ಕವಿರಾಜಮಾರ್ಗ'ದ ರಚನೆಗೆ ಆಶ್ರಯವಿತ್ತಿತು. ಇದನ್ನು ಮೇಲ್ಮುಖ ಚಲನೆಯ ಆಶಯವುಳ್ಳ, ಅಧೋರಚನೆ ಯಿಂದ ಮೂಡಿಬಂದ ಊಳಿಗಮಾನ್ಯ ಪ್ರಭುತ್ವಗಳ ಇತರೆ ಪ್ರಯತ್ನಗಳಲ್ಲೂ ಗುರ್ತಿಸ ಬಹುದು. ಕಳಚೂರಿ ಬಿಜ್ಜಳನು ಆನಂತರದಲ್ಲಿ ಕುಶಲ ಕರ್ಮವರ್ಗಗಳಿಗೆ ನೀಡಿದ

ಆಶ್ರಯವನ್ನು, ಹೊಯ್ಸಳ ರಾಜವಂಶವು ಪುರಗಳ ನಿರ್ಮಾಣಕ್ಕೆ ಕೊಟ್ಟ ಪ್ರಾಮುಖ್ಯತೆಯನ್ನು, ವಿಜಯನಗರ ಹಾಗೂ ಬಹಮನಿ ಸಾಮ್ರಾಜ್ಯಗಳು ವಾಣಿಜ್ಯ ವಹಿವಾಟಿನ ವ್ಯವಸ್ಥೆಗೆ ನೀಡಿದ ಗಮನವನ್ನು, ಇದೇ ಬಗೆಯ ಪ್ರಭುತ್ವ ಮುಂತೊಡಗುವಿಕೆಯ ಮುಂದಿನ ಹಂತದ ಬೇರೆ ಬೇರೆ ಬಗೆಯ ಪ್ರಯತ್ನಗಳಾಗಿ ನಿದರ್ಶಿಸಬಹುದು.

'ಕವಿರಾಜಮಾರ್ಗ'ದಂತಹ ಲಾಕ್ಷಣಿಕ ಗ್ರಂಥರಚನೆಯು, ನಂತರದ ಕಾಲಘಟ್ಟದ ಹಲವು ಬಗೆಯ ಸಾಮಾಜಿಕ ಆರ್ಥಿಕ ಕ್ರಿಯಾಶೀಲತೆಗಳಿಗೆ ಬುನಾದಿಯಂತೆ, ಆರಂಭದಲ್ಲಿ ಭಾಷೆಯೊಂದನ್ನು ಸೂತ್ರೀಕರಣಕ್ಕೊಳಪಡಿಸುವ ಪ್ರಯತ್ನದ ಒಂದು ಅಂಗವಾಗಿದೆ ಎಂದು ಪರಿಗಣಿಸಬೇಕು. ಈ ಕೆಲಸವನ್ನು ಉತ್ತರದಲ್ಲಿ ಪ್ರಾಕೃತದಿಂದ ಸಂಸ್ಕೃತ ಭಾಷೆಯನ್ನು ಸೂತ್ರೀಕರಿಸಿ ನಿರ್ಮಿಸುವುದಕ್ಕೆ ಬೇರೆ ರಾಜಪ್ರಭುತ್ವಗಳು ಕೃತಿನಿರ್ಮಾಣ ಮಾಡಿಸಿದ್ದರೊಂದಿಗೆ ಸಮೀಕರಿಸಬಹುದು. ಈವರೆಗೆ ಒಂದು ಜನಸಮುದಾಯವು ತನ್ನ ಅಂತಸತ್ವಗಳ ಪ್ರಕಟಣೆಗೆ ದೇಸೀ ವಿಭಿನ್ನತೆಗಳೊಂದಿಗೆ ಬಳಸುತ್ತಿದ್ದ ಭಾಷೆಯೊಂದನ್ನು ಅದರ ಮುಂದಿನ ಹಂತದ ಸಾಮಾಜಿಕ ಸುಸಂಯೋಜನೆಗಾಗಿ ಸೂತ್ರಬದ್ಧಗೊಳಿಸಲು ಹಾಗೂ ಸೂಕ್ತ ಸಂಸ್ಕೃತ ಮಿಶ್ರಣದೊಂದಿಗೆ ಕನ್ನಡವನ್ನು ನ್ಯಾಯ, ಧರ್ಮ, ತರ್ಕ, ಕಾವ್ಯ, ಆಡಳಿತ ಮುಂತಾದ ಕ್ಷೇತ್ರಗಳ ಅಧಿಕೃತ ಮಾಧ್ಯಮವಾಗಿ ಬಳಸುವುದಕ್ಕೆ ಸಂಸಿದ್ಧಗೊಳಿಸಲು 'ಕವಿರಾಜಮಾರ್ಗ'ವು ಉದ್ದೇಶಿಸಲ್ಪಟ್ಟಿದೆ. ಅದರ ನಿಜಾರ್ಥದಲ್ಲಿ ಸ್ವತಂತ್ರ ಕಾವ್ಯಮಾರ್ಗಗಳನ್ನು ಕನ್ನಡಕ್ಕೆ ಸೂತ್ರೀಕರಿಸುವುದರ ಹಿಂದಿನ ರಾಜಕೀಯ ಆಕಾಂಕ್ಷೆ ಏನೆಂದರೆ, ಅದನ್ನು ವ್ಯಾಪಕವಾಗಿ ಬಳಸುತ್ತಿರುವ ಭಾಷಾ ಸಮುದಾಯ ಹಾಗೂ ಅದರೊಳಗಿನಿಂದ ಒಡಮೂಡಿ ಅದರ ಮೇರೆ ಸೀಮೆಗಳೊಳಗೆ ತನ್ನ ಆಶೋತ್ತರಗಳನ್ನು ಪ್ರಬಲಗೊಳಿಸಿಕೊಳ್ಳ ಬಯಸುತ್ತಿರುವ ಭಾಷೆಗೆ ಶಾಸ್ತ್ರೀಕೃತ ಲಕ್ಷಣಗಳನ್ನು ಕಲ್ಪಿಸುವುದು, ಅದರ ಪ್ರಭುತ್ವ ವಿಸ್ತರಣೆಯ ಹಾಗೂ ಸದೃಢೀಕರಣದ ಕ್ರಮಗಳಲ್ಲೊಂದಾಗಿದೆ. ಯಾಕೆಂದರೆ ಶಾಸ್ತ್ರಕೃತಿ ಭಾಷಾ ನಿರ್ಮಾಣ ಮುಂದಿನ ಹಲಬಗೆಯ ಅಭಿವ್ಯಕ್ತಿಗಳಿಗೆ ಹಾದಿ ಸುಗಮಗೊಳಿಸುತ್ತದೆ.

'ಕವಿರಾಜಮಾರ್ಗ' ಎಂಬ ಈ ಹೆಸರು, ಕವಿಮಾರ್ಗವಾಗಿದ್ದ ಕೃತಿಗೆ ನಂತರದಲ್ಲಿ ಒದಗಿಬಂದ ಒಂದು ಹೆಸರು ಎಂಬುದೊಂದು ಸಂಕಲ್ಪನೆ. ಕೃತಿಯ ಒಡಲೊಳಗಿಂದ ಈ ಸಂಕಲ್ಪನೆಗೆ ಹಲವಾರು ಸಮರ್ಥನೆಗಳಿರುವುದು ನಾವು ಪರಿಗಣಿಸಬೇಕಾಗಿರುವ ವಿಚಾರ. ಏಕೆಂದರೆ, ಪಂಡಿತನೊಬ್ಬನ ಸೃಷ್ಟಿಯಾಗಿದ್ದ ಲಾಕ್ಷಣಿಕ ಗ್ರಂಥವು, ರಾಜಪ್ರಭುತ್ವದ ಕ್ರಿಯಾಶೀಲತೆಯ ಅಂಗವಾಗಿ ತನ್ನ ಪ್ರಭುತ್ವದ ಎಲ್ಲೆಯೊಳಗೆ ಅಧಿಕೃತ ಶಾಸ್ತ್ರಗ್ರಂಥವಾಗಿ ಮನ್ನಿತವಾಗಬೇಕೆಂಬ ಉದ್ದೇಶವು, ಅದನ್ನು 'ಕವಿರಾಜಮಾರ್ಗ'ವಾಗಿ ಮಾರ್ಪಡಿಸಿದೆ. ತನ್ನ ಭೌಗೋಳಿಕ ಸೀಮೆಯ ಎಲ್ಲೆಯೊಳಗೆ ಅಂತರ್ದೇಶೀಯ ವ್ಯಾಪಾರ ಹಾಗೂ ಸಾಮಾಜಿಕ ವಹಿವಾಟುಗಳ ತಳಹದಿ ನಿರ್ಮಿಸಿದ್ದ ಕನ್ನಡ ಭಾಷಾ ಸಮುದಾಯಕ್ಕೆ, ಚಕ್ರವರ್ತಿ ನೃಪತುಂಗನು ಭಾಷಾ ಕಟ್ಟಡದ ಸದೃಢ ನಿರ್ಮಿತಿಗೆ ಮಾರ್ಗದರ್ಶಿ ಸೂತ್ರಗಳನ್ನು ಒದಗಿಸಿಕೊಡುತ್ತಿದ್ದಾನೆ. ಅದು ಭಾಷಾ ಕಟ್ಟಡವನ್ನು ಸದೃಢಗೊಳಿಸಬೇಕು. ಆ

ಮುಖಾಂತರ ಆ ಭಾಷಾ ಸಮುದಾಯ ಆರ್ಥಿಕವಾಗಿ ರಾಜಕೀಯವಾಗಿ ಮುಖ್ಯ ಧಾರೆಯಾಗಬೇಕು. ಆ ಮುಖಾಂತರ ತನ್ನ ಚಕ್ರಾಧಿಪತ್ಯ ಸೀಮೋತ್ತರವಾಗಿ ವಿಸ್ತರಿಸಬೇಕು ಎಂಬುದು ಅವರ ಅಂತರ್ಗತ ಲಕ್ಷ್ಯ.

ಅದಕ್ಕಾಗಿಯೇ 'ಕವಿರಾಜಮಾರ್ಗ'ದಲ್ಲಿ ಸ್ವತಂತ್ರ ಲಕ್ಷಣಗಳ ಮಂಡನೆ ಬಂದಾಗಲೆಲ್ಲ "ಪರಮಶ್ರೀ ನೃಪತುಂಗ ದೇವಾನುಮತಮಪ್ಪ" ಎಂಬ ಪ್ರಸ್ತಾಪ ಬಂದಿದೆ. ಅಂದರೆ, ಭಾಷೆ ಹಾಗೂ ಕಾವ್ಯಮಾರ್ಗ ಲಕ್ಷಣಗಳ ಪ್ರತಿಪಾದನೆಗೆ ಚಕ್ರವರ್ತಿಯ ಅಂಗೀಕಾರವಿದೆ ಎಂಬುದು ಇದರ ಸೂಚ್ಯಾರ್ಥ. ಹೀಗೆ 'ಕವಿರಾಜ ಮಾರ್ಗ'ವು ಭಾಷೆ ಹಾಗೂ ಕಾವ್ಯಮಾರ್ಗ'ಗಳ ಬಗ್ಗೆ ಪ್ರಭುತ್ವ ತನ್ನ ಅಂಕಿತದೊಂದಿಗೆ ಕನ್ನಡದಲ್ಲಿ ಪ್ರಚುರಗೊಳಿಸಿದ ಪ್ರಥಮ ಗ್ರಂಥರೂಪೀ ಅಭಿಪ್ರಾಯವಾಗಿದೆ. ಅದು ಕನ್ನಡ ಭಾಷೆಯ ಭವಿಷ್ಯತ್ ನಿರ್ಮಿತಿಯನ್ನು ಉದ್ದೇಶಿಸಿಕೊಂಡಿತ್ತು.

ಸಾಮಾನ್ಯವಾಗಿ ಸಮಾಜ, ಅರ್ಥಶಾಸ್ತ್ರ ಸಂಬಂಧಿಗ್ರಂಥಗಳು - ಉದಾ : ಗೆ ಮನುವಿನ 'ಧರ್ಮಶಾಸ್ತ್ರ' ಕೌಟಿಲ್ಯನ 'ಅರ್ಥಶಾಸ್ತ್ರ' ಚರಕನ 'ಸುಶ್ರುತ ವೈದ್ಯಸೂತ್ರ' ಪರಿಣಿತಿಯ 'ಗೃಹ್ಯಸೂತ್ರ' ಪತಂಜಲಿಯ 'ಯೋಗಸೂತ್ರ' ಮುಂತಾದವುಗಳು- 'ವೇದ ಅಥವಾ ಪ್ರಚಲಿತ ಧರ್ಮಶಾಸ್ತ್ರಗಳ ಅಂಗೀಕಾರದೊಂದಿಗೆ ಇವುಗಳನ್ನು ಬರೆಯಲಾಗಿದೆ' ಎಂದು ಹೇಳಿಕೊಳ್ಳುತ್ತವೆ. ಇದು ಒಂದು ಬಗೆಯ ಶಾಶ್ವತ ಪ್ರಭುತ್ವಾಂಗೀಕಾರ ಮುದ್ರೆ. ಇದೇ ಬಗೆಯಲ್ಲಿ 'ಕವಿರಾಜಮಾರ್ಗ'ವು ಭಾಷಾಕ್ಷೇತ್ರದಲ್ಲಿ ಕಾವ್ಯಮಾರ್ಗ ಹಾಗೂ ಲಕ್ಷಣಗಳ ಕುರಿತು, ಪ್ರಭುತ್ವದ ಅಂಗೀಕಾರದೊಂದಿಗೆ ರಚಿಸಲ್ಪಟ್ಟ ಒಂದು ಶಾಸ್ತ್ರ ಗ್ರಂಥವಾಗಿದೆ. ಬಹುಶಃ ಪ್ರಭುತ್ವಾಂಗೀಕಾರದೊಂದಿಗೆ ಹೊರಬಿದ್ದ ಕನ್ನಡದ ಈ ಪ್ರಕಾರದ ಏಕಮಾತ್ರ ಗ್ರಂಥ ಇದಾಗಿರಬೇಕು ಎಂದು ನನ್ನ ಊಹೆ.

೮

ಕವಿರಾಜಮಾರ್ಗ ಮತ್ತು ದೇಸೀಯತೆ

ಎಂ.ಎಂ.ಕಲಬುರ್ಗಿ

'ಪ್ರಾಚೀನ ಕಾವ್ಯಗಳ ಮರು ಓದು' ಸಂದರ್ಭದಲ್ಲಿ ಕನ್ನಡದ ಪ್ರಥಮ ಕೃತಿಯಾದ 'ಕವಿರಾಜಮಾರ್ಗ'ವನ್ನ ಸಾಂಸ್ಕೃತಿಕ ಮುಖಾಮುಖಿಯಾಗಿ ನೋಡುವುದು ತುಂಬ ಅರ್ಥಪೂರ್ಣ ಅಭ್ಯಾಸ ಅನಸ್ತದ. ಕಾವ್ಯಗಳ ಮರು ಓದು ಆಗಾಗ ನಡೀತಿರಬೇಕು. ಯಾಕಂದರ ಕಾವ್ಯವನ್ನು ಕುರಿತು ಪಂಪನೆ ಹೇಳತಾನ -"ಇದು ನಿಚ್ಚಂ ಪೊಸತು" ಅಂತ. ಯಾವುದು ಮತ್ತೆ ಮತ್ತೆ ಓದಲಿಕ್ಕೆ ಅವಕಾಶ ಮಾಡಿ ಕೊಡತದ, ಅದು ಒಳ್ಳೇ ಕಾವ್ಯ. ಈ ಅರ್ಥದಲ್ಲಿ ಕನ್ನಡದ ಕೆಲವೇ ಮಹತ್ವದ ಕೃತಿಗಳಲ್ಲಿ 'ಕವಿರಾಜಮಾರ್ಗ'ವೂ ಒಂದು. ಅದಕ್ಕಾಗಿ ಈ ವಿಷಯವನ್ನು ವಿಚಾರ ಸಂಕಿರಣಕ್ಕೆ ಎತ್ತಿಕೊಂಡುದು ತುಂಬ ಔಚಿತ್ಯಪೂರ್ಣ ಅನಸ್ತದ.

ನಾನು 'ಕವಿರಾಜಮಾರ್ಗ ಮತ್ತು ದೇಸೀಯತೆ' ಈ ವಿಷಯವನ್ನು ಇಲ್ಲಿ ಪ್ರತಿಪಾದನೆ ಮಾಡಬೇಕಾಗ್ಯಾದ. ಮುಂಜಾನೆ ಚರ್ಚಿಸಿದ ಹಾಗೆ ಕೇವಲ ಭಾಷೆಗೆ ಸೀಮಿತವಾಗಿರದೆ, ಇದು ಸಂಸ್ಕೃತಿಯ ವ್ಯಾಪ್ತಿಯನ್ನೂ ಪಡೆದುಕೊಂಡಿದೆ. ಪ್ರಧಾನವಾಗಿ ದೇಸಿ ಅನ್ನೋದು ದೇಶನಿಷ್ಠವಾದದ್ದು. ಅದು ಆ ದೇಶದ ಪ್ರಾಕೃತಿಕ ವಿಷಯವಾಗಿರಬಹುದು, ಇಲ್ಲವೆ ಸಾಮಾಜಿಕ ವಿಷಯವಾಗಿರಬಹುದು. ಇವುಗಳೊಳಗೇ "ಆಶಯ"ವಾಗಿರಬಹುದು ಅಥವಾ "ಆಚರಣೆ"ಯಾಗಿರಬಹುದು. ಇವೆಲ್ಲಾ ಸೇರಿ ಒಂದು ದೇಶದ ದೇಶಿ ಅನಿಸಿಕೊಳ್ಳತದ. ಈ ದೇಸಿ ಬಗ್ಗ ಮಾತನಾಡುವಾಗ "ಜಾನಪದ" ಪದವೂ ನಮಗ ನೆನಪಾಗತದ. ನನಗ ಅನಸ್ತದ, ಜಾನಪದಕ್ಕಿಂತ 'ದೇಸಿ'ಯು ತುಂಬಾ ವಿಸ್ತಾರವಾದ ಅರ್ಥವನ್ನೊಳಗೊಂಡ ಪದ. ಉದಾ : ಸಾಹಿತ್ಯಕ್ಕೆ ಸೀಮಿತಗೊಳಿಸಿ ಹೇಳುವುದಾದರೆ ಗರತಿಯ ತ್ರಿಪದಿ ಜಾನಪದ, ಸರ್ವಜ್ಞನ ತ್ರಿಪದಿ ದೇಸಿ. ಈ ಗರತಿಯ ತ್ರಿಪದಿ ಮತ್ತು ಸರ್ವಜ್ಞನ ತ್ರಿಪದಿಗಳಲ್ಲಿ ಒಂದನ್ನ ನಾವು "ಪ್ರಾಕೃತಿಕ ದೇಸಿ", ಇನ್ನೊಂದನ್ನು "ಪರಿಷ್ಕೃತ ದೇಸಿ" ಅಂತ ಕರೀಬಹುದು. ಇದೇ ರೀತಿ ಲಾವಣಿ ರಚನೆ ಜಾನಪದ. ಬೇಂದ್ರೆ ರಚನೆ ದೇಸಿ. ಒಂದೇ ಮಾತಿನಲ್ಲಿ ಹೇಳುವುದಾದರೆ, ದೇಸಿ ಮತ್ತು ದೇಸಿಯ ಉತ್ಪಾದನೆಗಳು ಅಥವಾ ಮುಂದುವರಿಕೆಗಳು

ದೇಸಿಯೆನಿಸಿಕೊಳ್ತಾವ. ಈ ದಾರಿಯನ್ನು ಬಿಟ್ಟು ತುಂಬಾ ಸಂಸ್ಕೃತ ಭೂಯಿಷ್ಠವಾಗಿ ಬರೆದರ ಅಥವಾ ಬಾಯಿ ಮಾತನ್ನು ಗ್ರಂಥಸ್ಥ ಭಾಷೆಯ ಪ್ರಜ್ಞೆಯಿಂದ ಮುರಿದು ಶಿಷ್ಟಗೊಳಿಸಿದರ, ಅದನ್ನ ದೇಸಿ ಅನ್ನಲು ಬರುವುದಿಲ್ಲ. ಯಾಕಂದ್ರ, ಅದು ದೇಸಿ ಉತ್ಪಾದನೆಗಿಂತ ಮಾರ್ಗದ ಉತ್ಪಾದನೆಯಾಗಿ ಮಾರ್ಪಡತದ. ಇಷ್ಟು ಹಿನ್ನೆಲೆಯಲ್ಲಿ ನಾನು 'ಕವಿರಾಜಮಾರ್ಗ'ದಲ್ಲಿ ಮೂಡಿರುವ ಅಥವಾ ಪ್ರತಿಪಾದಿಸಲಾಗಿರುವ ದೇಸಿಯ ಸ್ವರೂಪವನ್ನು ನಿಮ್ಮುಂದೆ ಮಂಡಿಸ್ತಾ ಇದೀನಿ.

ಒಂದು ಸಾವಿರ ವರ್ಷದ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಎರಡು ಪ್ರಯತ್ನಗಳು ಕಂಡುಬರ್ತವೆ. ಒಂದು ಮಾರ್ಗದಲ್ಲಿ ದೇಸಿಯನ್ನು ಬೆಸೆಯುವ ಪ್ರಯತ್ನ; ಇನ್ನೊಂದು; ಮಾರ್ಗದಿಂದ ದೇಸಿಯನ್ನು ಬಿಚ್ಚುವ ಪ್ರಯತ್ನ. ಬಸವಣ್ಣನಿಗಿಂತ ಹಿಂದೆ ಮಾರ್ಗದಲ್ಲಿ ದೇಸಿಯನ್ನು ಬೆಸೆಯುವ ಪ್ರಯತ್ನ ಕಂಡುಬರ್ತದ. ಬಸವಣ್ಣನ ತರುವಾಯ ಮಾರ್ಗದಿಂದ ದೇಸಿಯನ್ನ ಬಿಚ್ಚುವ ಪ್ರಯತ್ನ ಕಂಡುಬರ್ತದ. 'ಕವಿರಾಜಮಾರ್ಗ' ಬಸವಪೂರ್ವ ಯುಗದ ಕೃತಿಯಾದ ಕಾರಣವಾಗಿ, ಅದು ಮಾರ್ಗದೊಂದಿಗೆ ದೇಸಿಯನ್ನ ಬೆಸೆಯುವ, ಪ್ರತಿಪಾದಿಸುವ ಕೃತಿಯಾಗಿ ನನಗೆ ಕಾಣಿಸತದ. ಹೀಗಾಗಿ 'ಕವಿರಾಜಮಾರ್ಗ'ದಲ್ಲಿ ದೇಸಿಯ ಪ್ರವೇಶ, ಪ್ರತಿಪಾದನೆ, ಅನಿವಾರ್ಯವಾಗಿ ಸೇರಿಕೊಂಡದ. ಈ ಪ್ರವೇಶ ದಿಂದಾಗಿಯೇ ಅದು ಕೇವಲ ಶುಷ್ಕ ಶಾಸ್ತ್ರವಾಗಿ ಉಳಿಯದೆ, ಒಂದು ಜೀವಂತ ಶಾಸ್ತ್ರವಾಗಿ ಪರಿಣಮಿಸ್ಯದ. ಜೀವಂತಿಕೆಯನ್ನ ಅದರೊಳಗ ಉಳಿಸಿಕೊಟ್ಟದ್ದು ಯಾವುದೆಂದರೆ ದೇಸೀನೇ; ಅಂದರೆ ಅಲ್ಲಿ ನಡೆದ ದೇಸಿ ಚರ್ಚೆನೇ. ಆ ದೇಸಿ ಚರ್ಚೆ ಹೊರಗೆ ತಗದರ, ಕವಿರಾಜಮಾರ್ಗ ಶುಷ್ಕಶಾಸ್ತ್ರ ಆಗಿಬಿಡತದ.

ಕವಿರಾಜಮಾರ್ಗಕಾರ ಕೇವಲ 'ರಾಜಕೀಯ ರಾಜ್ಯ'ವನ್ನ ಕಟ್ಟಲಿಕ್ಕ ಹೊರಟ ಅರಸನಲ್ಲ. 'ಸಾಂಸ್ಕೃತಿಕ ರಾಜ್ಯ'ವನ್ನ ಕಟ್ಟಲಿಕ್ಕೆ ಹೊರಟ ಸಾಮ್ರಾಟ. ಆ ಕಾಲದ ಶಾಸನಗಳನ್ನ ನೋಡಿದರ ಇದು ಸ್ಪಷ್ಟ ಆಗತದ. ಅಂದರ ಪಂಪಪೂರ್ವದ ಒಂದು ಸಾವಿರ ಶಾಸನಗಳನ್ನ ಸಾಲಾಗಿ ನಿಲ್ಲಿಸಿದರ, 'ಕವಿರಾಜಮಾರ್ಗ'ದವರೆಗೆ ಇರುವ ಶಾಸನಗಳ ಸ್ವರೂಪವೇ ಬೇರೆ, ಆ ತರುವಾಯದ ಶಾಸನಗಳ ಸ್ವರೂಪವೇ ಬೇರೆ ಅದ. ಈ ಕೃತಿಗೆ ಮೊದಲು ಹುಟ್ಟಿದ ಶಾಸನಗಳ ಆಕಾರವಾಗಲಿ, ಭಾಷೆಯಾಗಲಿ, ಆಶಯವಾಗಲಿ, ತರುವಾಯ ಹುಟ್ಟಿದ ಶಾಸನಗಳಿಂದ ತುಂಬಾ ಭಿನ್ನವಾಗಿ ಕಂಡುಬರುವುದರಿಂದ, 'ಕವಿರಾಜಮಾರ್ಗ' ಒಂದು ಸಂಕ್ರಮಣ ಸಂದರ್ಭದೊಳಗೆ ಸೃಷ್ಟಿಯಾದ ಶಾಸ್ತ್ರಕೃತಿ ಅಂತ ನನಗ ಅನಸ್ತದ.

ರಾಜಾ ಆದವನ ಕೆಲಸ ಕೇವಲ ಸೈನ್ಯ ಕಟ್ಟೋದಷ್ಟೇ ಅಲ್ಲ, ಸಮಾಜವನ್ನು ಕಟ್ಟೋದು, ಸಂಸ್ಕೃತಿಯನ್ನು ಕಟ್ಟೋದು. ಭೌತಿಕವಾಗಿ ಕಟ್ಟೋದು ರಾಜ್ಯ, ಸಾಂಸ್ಕೃತಿಕವಾಗಿ ಕಟ್ಟೋದು ಸಾಮ್ರಾಜ್ಯ. ಕವಿರಾಜಮಾರ್ಗಕಾರ ಸಾಂಸ್ಕೃತಿಕ ಸಾಮ್ರಾಜ್ಯ ಕಟ್ಟೋ ಕೆಲಸ ಮಾಡಿದ. ಸಾಂಸ್ಕೃತಿಕ ಸಾಮ್ರಾಜ್ಯ ನಿರ್ಮಾಣದ ಒಂದು ಭಾಗವೆಂಬಂತೆ ಸಾಹಿತ್ಯಕ್ಕೆ ಸರಿಯಾದ ಮಾರ್ಗ ತೋರಿಸುವ ವಿಚಾರ ಕೈಗೆತ್ತಿಕೊಂಡ. ಇದರ ಫಲ 'ಕವಿರಾಜಮಾರ್ಗ'.

ರಾಜನು ಸಪ್ತಸಂತಾನಗಳನ್ನ ಅಸ್ತಿತ್ವಕ್ಕೆ ತರಬೇಕೆನ್ನುವ ವಿಚಾರ ನಮ್ಮಲ್ಲಿ ತುಂಬ ಪ್ರಾಚೀನವಾದುದು. ಸೈನ್ಯ, ಭಂಡಾರ ಮೊದಲಾದವುಗಳೊಂದಿಗೆ ಸಾಹಿತ್ಯವೂ ಈ ಸಪ್ತ ಸಂತಾನಗಳ ಭಾಗವಾಗಿರುವುದು ಗಮನಿಸಬೇಕಾದ ಸಂಗತಿ. ಅಂದರೆ ಸಾಹಿತ್ಯವನ್ನ ಬರೆಯುವ, ಬರೆಯಿಸುವ, ಸಂರಕ್ಷಿಸುವ, ಪ್ರಚಾರಮಾಡುವ ಕೆಲಸವನ್ನು ರಾಜನ ಕರ್ತವ್ಯದಲ್ಲಿ ನಮ್ಮವರು ಸೇರಿಸಿದ್ದಾರೆ. ಅದಕ್ಕಾಗಿ ಕವಿರಾಜಮಾರ್ಗಕಾರ ಏನ ಮಾಡಿದ ಅಂದ್ರ, ಈಗ ಸಾಹಿತ್ಯಕ್ಕೆ ಒಂದು ಹೊಸ ದಾರಿಯನ್ನ ತೋರಿಸಬೇಕಾಗ್ಯಾದ, ಎಲ್ಲರೂ ಕೂಡಿ ಚರ್ಚೆ ಮಾಡೋಣ - ಎಂದು ತನ್ನ ಆಸ್ಥಾನದ ಕವಿಗಳನ್ನು, ವಿದ್ವಾಂಸರನ್ನು ಕುಳ್ಳಿರಿಸಿಕೊಂಡು, ಬಹುಶಃ ಶ್ರೀವಿಜಯನ 'ಕವಿಮಾರ್ಗ' ಕೃತಿಯನ್ನು ಚರ್ಚೆಯ ಕೇಂದ್ರ ವಾಗಿಟ್ಟುಕೊಂಡು, ಅದರಲ್ಲಿ ಇನ್ನೂ ಸೇರಬೇಕಾದ ಹೊಸ ಅಂಶಗಳೇನು, ಹೊಸದಾರಿಯನ್ನು ತೋರಿಸುವ ಅಂಶಗಳು ಯಾವುವು, ಈ ದಿಸೆಯೊಳಗ ಎಲ್ಲರನ್ನೂ ಸೇರಿಸಿ ಚರ್ಚೆ ಮಾಡಿಸಿದ. ಅದಕ್ಕೆ ನೇತೃತ್ವ ತಾನು ವಹಿಸಿದ. 'ಪರಮ ಸರಸ್ವತಿ ತೀರ್ಥಾವತಾರ' ಅಂತ ಅವನಿಗೆ ಬಿರುದು. ಆ ಕಾಲದೊಳಗ ರಾಜರು ಇಂಥ ವಿಚಾರಗಳನ್ನು ತುಂಬಾ ಗಂಭೀರವಾಗಿ ವಿಚಾರ ಮಾಡತಿದ್ದರು. ಪ್ರಜೆಗಳ ಮೇಲಾಗುವ ವೈರಿಗಳ ದಾಳಿಯಂತೆ, ಸಾಹಿತ್ಯದ ಮೇಲಾಗುವ ಅನ್ಯಭಾಷೆ ಅನ್ಯ ಸಂಸ್ಕೃತಿಯ ದಾಳಿಯನ್ನೂ ತಡೆಗಟ್ಟಬೇಕು, ನಮ್ಮ ಸಾಹಿತ್ಯಕ್ಕೆ ಮಾರ್ಗ ತೋರಿಸಬೇಕು. ಇದೂ ರಾಜನ ಕರ್ತವ್ಯ ಅಂತ ತಿಳಕೊಂಡಿದ್ದರು ಅವರು.

ತೆಲುಗು ಕವಿ ನನ್ನಿಚೂಡನ 'ಕುಮಾರಸಂಭವ'ದೊಳಗ ಒಂದು ಮಾತು ಬರತದ. 'ಆಂಧ್ರ ಪ್ರದೇಶದೊಳಗ ಮಾರ್ಗಕವಿತ್ವದ ದಾಳಿ ಅಧಿಕವಾಗಿರುವ ಸಂದರ್ಭದೊಳಗ, ದೇಸಿಯನ್ನ ಸ್ಥಾಪನೆ ಮಾಡಿದವರು ಚಾಲುಕ್ಯ ರಾಜರು' ಅಂತ ಅಲ್ಲಿ ಹೇಳಲಾಗಿದೆ. ಹೀಗೆ ಅಂದು ಆಂಧ್ರ ಪ್ರದೇಶದೊಳಗ ಚಾಲುಕ್ಯ ರಾಜರು ಸಾಹಿತ್ಯಕ್ಕ ಹೊಸ ದಾರಿ ತೋರಿಸೋ ಕೆಲಸ ಮಾಡಿದರ, ಕರ್ನಾಟಕದೊಳಗ- ಉತ್ತರ ಕರ್ನಾಟಕದೊಳಗ- ಅಂಥ ದಾರಿ ತೋರಿಸುವ ಕೆಲಸವನ್ನ ಕವಿರಾಜಮಾರ್ಗಕಾರ ಮಾಡಿದ ಅಂತ ಕಾಣಿಸತದ. ಅದೇ ರೀತಿ ದಕ್ಷಿಣ ಕರ್ನಾಟಕದೊಳಗ ಶಿವಮಾರ, ವೆಂಗಿ ನಾಡಿನೊಳಗ ವೆಂಗಿಚಾಲುಕ್ಯರ ಗುಣಕ ವಿಜಯಾದಿತ್ಯ ದೇಸಿಯನ್ನ ಎತ್ತಿ ನಿಲ್ಲಿಸುವ ಕೆಲಸ ಮಾಡಿದರು ಅಂತ ಕಾಣಿಸತದ. ಹೀಗೆ ಸಾಹಿತ್ಯವನ್ನ ಪೋಷಿಸುವುದು ಮತ್ತು ಅದಕ್ಕೆ ಸರಿಯಾದ ದಾರಿ ತೋರಿಸುವುದು ರಾಜನ ಕರ್ತವ್ಯಗಳಲ್ಲಿ ಒಂದು. ಆದುದರಿಂದ ತನ್ನ ಕರ್ತವ್ಯದ ಒಂದು ಭಾಗ ಅಂತ ತಿಳಿದುಕೊಂಡು ಕವಿರಾಜಮಾರ್ಗಕಾರ ತನ್ನ ಆಸ್ಥಾನದೊಳಗ ವಿದ್ವಾಂಸರನೆಲ್ಲ ಸೇರಿಸಿ, ಇಂಥ ಕೆಲಸ ಮಾಡಿದ ಕಾಣಿಸತದ. ಕವಿಗಳೂ ರಾಜನೂ ಸೇರಿ ನಿರ್ಮಿಸಿದ ಕೃತಿ ಎಂಬ ಅರ್ಥದಲ್ಲಿ "ಕವಿರಾಜಮಾರ್ಗ" ಎಂದು ಹೆಸರಿಟ್ಟರೆಂದು ಮುಂಜಾನೆ ಶ್ರೀ ಸುಬ್ಬಣ್ಣ ಹೇಳಿದುದು, ಈ ಅರ್ಥದಲ್ಲಿ. ಇದಕ್ಕೆ ಇನ್ನೊಂದು ಹೊಸ ಹೆಸರು ಇರುವಂತೆ ಕಾಣಿಸ್ತದ. ಅದು "ನೃಪತುಂಗದೇವ ಮತ". ಯಾಕಂದ್ರ ನಮ್ಮಲ್ಲಿ 'ಮತ' ಅಂತ ಕೊನೆಯಾಗುವ

ಕೆಲವು ಕೃತಿಗಳು ಅದಾವ. ಉದಾ : 'ರಟ್ಟಮತ'. ಇದು ರಟ್ಟ ಬರೆದಿದ್ದಲ್ಲ, ಅವನ ವಿಚಾರಗಳು ರಾಶಿಗೊಂಡ ಕೃತಿ; ಅಥವಾ ರಟ್ಟನ ಅಧಿಕೃತ ಮುದ್ರೆ ಬಿದ್ದ ಕೃತಿ. ಇದೇ ರೀತಿ 'ಶಿವಮಾರಮತ' ಹೆಸರಿನ ಒಂದು ಗಜಾಷ್ಟಕ ನಮ್ಮಲ್ಲಿತ್ತು. "ಏವೇಳ್ವುದೊ ಶಿವಮಾರ ಮಹೀವಳಯಾಧಿಪನ ಸುಭಗ ಕವಿತಾಗುಣಮಂ ಭೂವಳಯದೊಳ್ ಗಜಾಷ್ಟಕಂ ಓವನಿಗೆಯುಮೊನಕೆವಾಡುಮಾದುದೆ ಪೇಳ್ಗುಂ" ಎಂದು ಹುಮ್ಮಚ ಶಾಸನದೊಳಗ ಅದ. ಇಲ್ಲಿ "ಶಿವಮಾರ ಮತಂ" ಹೆಸರಿನ ಗಜಶಾಸ್ತ್ರದ ಉಲ್ಲೇಖವಿದೆ. ಹೀಗ 'ರಟ್ಟಮತ' 'ಶಿವಮಾರಮತ' ಇರುವಂತೆ ಇದೂ ಒಂದು 'ನೃಪತುಂಗಮತ' ಇದ್ದಂತೆ ಕಾಣಿಸತದ. 'ಕವಿರಾಜಮಾರ್ಗ'ದೊಳಗೆ "ನೃಪತುಂಗಾನುಮತಮಪ್ಪ" ಎಂಬ ಉಲ್ಲೇಖ ಪದೇ ಪದೇ ಬರುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ನನಗ ಹೇಳಬೇಕಾದದ್ದು ಮೂಲತಃ ಸಾಹಿತ್ಯವಾಗಲೀ ಶಾಸ್ತ್ರವಾಗಲೀ ವ್ಯಕ್ತಿರಚನೆಯಾಗಿರಲಿಲ್ಲ, ಸಮೂಹ ರಚನೆಯಾಗಿದ್ದಿತು. ಆ ಪ್ರಜ್ಞೆ ಇನ್ನೂ ಹಸಿಯಿರುವಾಗಲೇ 'ಕವಿರಾಜಮಾರ್ಗ' ಹುಟ್ಟಿತೆಂದು ಕಾಣಸ್ತದ.

ಇದರ ದೇಶೀ ಬಗ್ಗೆ ಹೇಳುವುದಾದರೆ, ಕವಿರಾಜಮಾರ್ಗದ ಸೃಷ್ಟಿಯಲ್ಲಿ ದೇಸಿ ತತ್ವವಿದೆ, ಶಿಲ್ಪದಲ್ಲಿ ದೇಸಿ ವಿನ್ಯಾಸವಿದೆ, ಆಶಯದಲ್ಲಿ ದೇಸಿ ಸಂವೇದನೆ ಇದೆ. ಅಂದರೆ ಸೃಷ್ಟಿಯಲ್ಲಿ, ವಿನ್ಯಾಸದಲ್ಲಿ, ಆಶಯದಲ್ಲಿ ಹೀಗೆ ಈ ಮೂರೂ ನೆಲೆಗಳಲ್ಲಿ ದೇಸಿಯತೆ ನಮಗ ಕಂಡುಬರ್ತದೆ. ಮೊದಲನೆಯದಾಗಿ 'ಕವಿರಾಜಮಾರ್ಗ'ದ ಸೃಷ್ಟಿಯಲ್ಲಿ ದೇಶಿಸಾಹಿತ್ಯದ 'ಸಮೂಹ ಸೃಷ್ಟಿ' ತತ್ವವಿದೆಯೆಂದು ಹೇಳಿದೆ. ಅದು ಹೀಗೆ:

ನನಗೇನೊ ಇತ್ತೀಚೆಗೆ ಒಂದು ವಿಷಯ ಹೊಳೆದಿದೆ. ಅದು ಮೂಲತಃ ಸಾಹಿತ್ಯವೆನ್ನುವುದು ಸಾರ್ವಜನಿಕ ಆಸ್ತಿ, ಅಂದರೆ ಸಾರ್ವಜನಿಕ ಸೃಷ್ಟಿ. ಎಲ್ಲರೂ ಕೂಡಿ ಕಟ್ಟಿತಾ ಹೋಗೋದು ವಚನಗಳು. ತ್ರಿಪದಿಗಳು ಅದಾವಲ್ಲ ಅವೆಲ್ಲ ಸಾರ್ವಜನಿಕ ಸೃಷ್ಟಿ ತಾನೆ? 'ಸರ್ವಜ್ಞ'ನ ಹೆಸರಿನಲ್ಲಿ ಬೇಕಾದಷ್ಟು ತ್ರಿಪದಿ ಕಟ್ಟಿರಿ, ಆದರೆ ಅವುಗಳಿಗೆ 'ಸರ್ವಜ್ಞ' ಮುದ್ರಿಕೆ ಇಡಿರಿ ಅಂತಾನ ಆತ. ಇವತ್ತ ಈ ಅರೆಖಾಸಗಿ ಆಸ್ತಿತತ್ವವು ಮರೆಯಾಗಿ ಸಾಹಿತ್ಯವೆನ್ನುವುದು ಖಾಸಗಿ ಆಸ್ತಿ ಆಗಿಬಿಟ್ಟಿತು.

ಹೀಗೆ ಸಾಹಿತ್ಯ ಸೃಷ್ಟಿತತ್ವದಲ್ಲಿ ಮೂರು ನೆಲೆಗಳು ಅದಾವ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ದೇಶಿ ಸಾಹಿತ್ಯವೆನ್ನುವುದು ಸಾಮೂಹಿಕ ಸೃಷ್ಟಿ. ಇದೇ ರೀತಿ ಆಸ್ಥಾನದೊಳಗ ಎಲ್ಲರೂ ಸೇರಿ ಮಾಡಿದ ಸೃಷ್ಟಿಯಾಗಿದೆ, 'ಕವಿರಾಜಮಾರ್ಗ'. ಅಂದಿನ ತಿರುವುಬಿಂದು ಸಂದರ್ಭದಲ್ಲಿ ಇಂಥ ಸಾಮೂಹಿಕ ಸಮ್ಮತಿಯ ದಾರಿ ಅಗತ್ಯವಾಗಿದ್ದು, ರಾಜನ ಅಧ್ಯಕ್ಷತೆಯಲ್ಲಿ ಎಲ್ಲರೂ ಚರ್ಚಿಸಿ, ಒಮ್ಮತದ ಒಂದು ಕಾವ್ಯತತ್ವವನ್ನು ರೂಪಿಸಿದರು. ಆದುದರಿಂದ ಬಗೆಹರಿಯದ 'ಕವಿರಾಜಮಾರ್ಗ'ದ ಕರ್ತೃ ಯಾರು? ಎಂಬ ಚರ್ಚೆಯನ್ನು ಇಂದು ಈ ಹಿನ್ನೆಲೆಯಲ್ಲಿ ನೋಡಬೇಕಾಗಿದೆ. ಶ್ರೀವಿಜಯನ "ಕವಿಮಾರ್ಗ"ವು ಬಹುಶಃ ಕ್ಲಾಸಿಕಲ್ ಲಿಟರೇಚರದ ಲಕ್ಷಣವನ್ನೊಳಗೊಂಡಿರಲಿಲ್ಲ ಅನಿಸ್ತದ. ನೃಪತುಂಗನ

ಆಸ್ಥಾನದಲ್ಲಿ ಅದಕ್ಕೆ ಕ್ಲಾಸಿಕಲ್ ಟಚ್ ಕೊಟ್ಟಿರಬಹುದು. ಡಿ.ಕೆ.ಭೀಮಸೇನರಾಯರು ಪ್ರಕಟಪಡಿಸಿರುವ 'ಶಬ್ದಮಣಿದರ್ಪಣ'ದಲ್ಲಿ ಕೆಲವು ಕಡಿ "ಶ್ರೀವಿಜಯನ ಪ್ರಯೋಗಂ" ಅಂತ ಇದೆ. ಕೆಲವು ಕಡೆ "ನೃಪತುಂಗನ ಪ್ರಯೋಗಂ" ಅಂತ ಇದೆ. ಅಂದ್ರ ಶ್ರೀವಿಜಯನ ಪ್ರಯೋಗ ಬ್ಯಾರೆ ಇತ್ತು. ನೃಪತುಂಗನ ಪ್ರಯೋಗ ಆಮೇಲೆ ಸೇರಿಕೊಳ್ತು. ಇದು ಅಂದಿನ ಜನರಿಗೆ ಗೊತ್ತಿತ್ತು ಕಾಣಿಸತದ. ಈ ರೀತಿ ಸಮೂಹ ಸೃಷ್ಟಿಯಾಗಿ 'ಕವಿರಾಜಮಾರ್ಗ' ಆಕಾರ ಪಡೆದಿರುವುದರಿಂದ ಇದರ ಸೃಷ್ಟಿಯಲ್ಲಿಯೇ ದೇಶಿಯ 'ಸಮೂಹಸೃಷ್ಟಿ' ತತ್ವ ಅಡಗಿದೆಯೆಂದು ಹೇಳಬಹುದು.

ಇನ್ನು ಇದರ ರಚನೆಯಲ್ಲಿ ದೇಸಿ ಶಿಲ್ಪವಿರುವ ಬಗ್ಗೆ ಮುಂಜಾನೆ ನಡೆದ ಚರ್ಚೆಯಲ್ಲಿ ಹೇಳಿದ್ದೇನೆ. ಅಂದರೆ ಭಾರತೀಯ ಕಾವ್ಯಶಾಸ್ತ್ರಗಳಿಗಿಂತ ಭಿನ್ನವಾದ ಶಿಲ್ಪ ಇಲ್ಲಿದೆ. ಇದರ ಶಿಲ್ಪಕ್ಕ ಹೋಲಿಕೆ ಬಹುಶಃ ತಮಿಳು 'ತೊಲ್ಕಾಪ್ಪಿಯಂ' ಎಂದು ಕಾಣ್ತದ. 'ತೊಲ್ಕಾಪ್ಪಿಯಂ' 'ಕವಿರಾಜಮಾರ್ಗ' ಮತ್ತು ದಂಡಿಯ 'ಕಾವ್ಯಾದರ್ಶ' ಇದನ್ನು ಹೋಲಿಸಿ ನೋಡೋದು ಅಗತ್ಯವಿದೆ. ಅರ್ಥಾ ಲಂಕಾರದ ಮಟ್ಟಿಗೆ ಕವಿರಾಜಮಾರ್ಗಕಾರ ದಂಡಿಯನ್ನು ಹೆಚ್ಚು ಅವಲಂಬಿಸ್ತಾನ. ಶಬ್ದಾಲಂಕಾರ ಬಂದಾಗ ದೂರ ಆಗ್ತಾನ. ದೋಷಾನುದೋಷಗಳ ವರ್ಣನೆ ಬಂದಾಗ ಸಂಪೂರ್ಣ ದೂರ ಆಗಿ ಬಿಡ್ತಾನ. ನಿಜವಾಗಿ 'ಕವಿರಾಜಮಾರ್ಗ'ದ ಶಕ್ತಿ ಇರುವುದು ಆ ದೋಷಾನುದೋಷಗಳ ವರ್ಣನೆಯೊಳಗ. 'ಕವಿರಾಜಮಾರ್ಗ'ದಂಥ ಅಲಂಕಾರ ಗ್ರಂಥದೊಳಗ, ನಾಡು ನಾಡವರ ಇತ್ಯಾದಿ ಪ್ರಸ್ತಾಪವೇಕೆ? ಅಲಂಕಾರ ಹೇಳ ಹೊರಟು ಛಂದಸ್ಸು, ವ್ಯಾಕರಣ ಇತ್ಯಾದಿಗಳಿಗೆ ಆವಶ್ಯಕತೆಗಿಂತ ಹೆಚ್ಚು ಅವಕಾಶವೇಕೆ ಕೊಟ್ಟನು? ಇತ್ಯಾದಿ ಪ್ರಶ್ನೆಗಳು ಕಾಡುತ್ತವೆ. ನಾ ಮುಂಜಾನೆ ಹೇಳಿದೆನಲ್ಲ "ಕಾವೇರಿಯಿಂದಮಾ ಗೋದಾವರಿ..." ಇತ್ಯಾದಿಗಳಿಗೆ ಸಮಾನವಾದ ವಿಚಾರಗಳು 'ತೊಲ್ಕಾಪ್ಪಿಯಂ'ದೊಳಗ ಅದಾವ. ಭೌಗೋಲಿಕವಾಗಿ ತನ್ನ ನಾಡನ್ನು ಹೇಳುವಾಗ 'ತೊಲ್ಕಾಪ್ಪಿಯಂ'ಕಾರ ಉತ್ತರದ ವೆಂಕಟ ಪರ್ವತದಿಂದ ದಕ್ಷಿಣದ ಕುಮಾರಿ ಪರ್ವತದವರೆಗೆ ಅದು ಹಬ್ಬಿದೆ ಎನ್ನುತ್ತಾನೆ. ನಾಡವರ ಬಗ್ಗೆ ನುಡಿಯ ಬಗ್ಗೆನೂ ಹೇಳ್ತಾನೆ. 'ತೊಲ್ಕಾಪ್ಪಿಯಂ' ವ್ಯಾಕರಣವೂ ಹೌದು, ಛಂದಸ್ಸೂ ಹೌದು. ಅಲಂಕಾರವೂ ಹೌದು. ಹೀಗಾಗಿ ಆರ್ಯ ರೀತಿಗಿಂತ ಭಿನ್ನವಾದ ದ್ರಾವಿಡ ರೀತಿಯ ದೇಶೀಶಿಲ್ಪ ಅದರಲ್ಲಿ ಇದ್ದಂತೆ ಕಾಣಿಸ್ತದ. ಈ ದೃಷ್ಟಿಯಿಂದಲೂ ನಾವು ಅದನ್ನ ಒಂದು ಮಿಶ್ರರೂಪದ 'ದೇಶೀಶಿಲ್ಪ' ಅಂತ ಹೇಳಬಹುದು.

ಇನ್ನು ಆಶಯದಲ್ಲಿಯೂ ದೇಶೀ ಸಂವೇದನೆ ಇದೆ. ಇದನ್ನು ಸಮರ್ಥಿಸುವ ಅನೇಕ ವಿಚಾರಗಳು ಇದರಲ್ಲಿವೆ. ಉದಯಾದಿತ್ಯನಂತೆ ದಂಡಿಯ 'ಕಾವ್ಯಾದರ್ಶ'ವನ್ನ ಅನುವಾದ ಮಾಡೋದು 'ಕವಿರಾಜಮಾರ್ಗ'ದ ಉದ್ದೇಶವಲ್ಲ. ಅರ್ಥಾಲಂಕಾರ ಸಂದರ್ಭದಲ್ಲಿ ಮಾತ್ರ ಹೆಚ್ಚು ಆಶ್ರಯಿಸಿದ್ದರೂ ಅರ್ಥಾಲಂಕಾರಗಳ ಅನುಕ್ರಮದಲ್ಲಿ, ಒಂದೆರಡು ಕಡೆ ನಾಮ ನಿರ್ದೇಶನದಲ್ಲಿ, ಧ್ವನ್ಯಲಂಕಾರವನ್ನು ಹೊಸದಾಗಿ ಪ್ರಸ್ತಾಪ ಮಾಡುವಲ್ಲಿ

ಮಾರ್ಗಕಾರ ಸ್ವಂತಿಕೆ ಮೆರೆದಿದ್ದಾನೆ. ಮಿಕ್ಕಲ್ಲೆಲ್ಲ ಕನ್ನಡಕ್ಕೆ ಬೇಕಾಗಿರುವ ಕಾವ್ಯಶಾಸ್ತ್ರ ವಿಚಾರ ಮಾಡಿದ್ದಾನೆ. ಕಾವ್ಯ ಭಾಷಾಮಾಧ್ಯಮದಲ್ಲಿ ಆಕಾರ ಪಡೆಯುವ ಕಲಾವಿಶೇಷ, ಹೀಗಾಗಿ ಕಾವ್ಯಶಾಸ್ತ್ರದಲ್ಲಿ ಭಾಷಾ ಬಳಕೆಯ ಚರ್ಚೆ ಮುಖ್ಯವಾಗ್ತದ. ಈತ ಹೇಳುವ ಭಾಷೆಯ ವಿಚಾರವಂತೂ ಸಂಪೂರ್ಣ ದೇಶಿನಿಷ್ಠವೇ. ಮುಂದೆ ಬಂದ ಶಬ್ದಸ್ಮೃತಿಕಾರನಾಗಲೀ ಕೇಶಿರಾಜನಾಗಲೀ ಈತನ ವಿಚಾರಗಳನ್ನೇ ತಳಹದಿಯನ್ನಾಗಿಟ್ಟುಕೊಂಡಿದ್ದಾರೆ. ಒಂದು ವೇಳೆ ಈತ ಬರೀದೆ ಹೋಗಿದ್ದರೆ, ಹೇಳದೆ ಹೋಗಿದ್ದರೆ, ಇಂಥ ವಿಚಾರಗಳು ಕೇಶಿರಾಜನಿಗೆ ಗೊತ್ತಾಗುತ್ತಿದ್ದವೋ ಇಲ್ಲವೋ ಅನಸತದ. 'ಶಬ್ದಮಣಿದರ್ಪಣ'ದಲ್ಲಿ ಜಾತ್ಯೇಕವಚನ ಬಹಳ ಪ್ರಸಿದ್ಧವಾದ ವಿಚಾರ. ಇದನ್ನು ಮಾರ್ಗಕಾರ ಹೇಳತಾನ. ಹೀಗ ಅನೇಕ ವಿಷಯಗಳನ್ನು ಭಾಷೆಯ ವಿಷಯವಾಗಿ ಈತ ಹೇಳೋದು ನೋಡಿಕೊಂಡರೆ, ಇದು ದೇಸಿವಿಚಾರಗಳನ್ನ ಒಳಗೊಂಡ ಕನ್ನಡದ ಮೊಟ್ಟ ಮೊದಲನೆಯ ವ್ಯಾಕರಣ ಅನಸ್ತದ. ಸಾಂಗತ್ಯವಲ್ಲದ ಶಬ್ದಾರ್ಥ ಮುತ್ತು ಮೆಣಸು ಪವಣಿಸಿದಂತೆ; ಅನುಗುಣವಲ್ಲದ ಪದಜೋಡಣೆ ನೆಲ್ಲು ಮೊಸರು ಕುಡಿದಂತೆ; ಸಂಸ್ಕೃತ ಸಮಾಸ ಕನ್ನಡ ಪದಗಳ ಜೋಡಣೆ ಕನಕರಚನೆಯೊಳ್ ಮಣಿನಿಕರ ಹೊಂದಿದ ಹಾಗೆ; ಅರಿಸಮಾಸವು ಸುಡುವ ಹಾಲಿಗೆ ಮಜ್ಜಿಗೆ ಬೆರಸಿದಂತೆ; ಸಮಾಸದ ಮುಂದಿನ ಅರಿಸಮಾಸ ಕಬ್ಬಿನ ತುದಿಯಂತೆ ರಸಹೀನ. ಇವೆಲ್ಲ ನೋಡಿದರೆ ಅಂದು ಸಂಸ್ಕೃತದ ಅನಿವಾರ್ಯ ಪ್ರವೇಶದಿಂದಾಗಿ ಪದಶಯ್ಯೆ ಸಮಸ್ಯೆ ಆಗಿತ್ತು. ಕವಿರಾಜಮಾರ್ಗಕಾರನಿಗೆ ಇದು ಬಿಡಿಸಲೇಬೇಕಾದ ಪ್ರಶ್ನೆಯಾಗಿದ್ದಿತು.

ಕನ್ನಡ ಯಾವ ಕಾಲಕ್ಕೂ ದ್ವಿಭಾಷಾ ಸಂದರ್ಭದೊಳಗ ಬದುಕು ಮಾಡಿದ ಭಾಷೆ. ಹಿಂದಕ್ಕೆ ಸಂಸ್ಕೃತ-ಕನ್ನಡ ದ್ವಿಭಾಷಾ ಸಂದರ್ಭ ಇತ್ತು. ಇವತ್ತ ಇಂಗ್ಲಿಷ್ ಮತ್ತು ಕನ್ನಡ ದ್ವಿಭಾಷಾ ಸಂದರ್ಭ ಆದ. ಇವತ್ತ ನಮಗ ಸಂಸ್ಕೃತ-ಕನ್ನಡ ಮಿಶ್ರಣ ಅಷ್ಟು ಸಮಸ್ಯೆ ಅನಸೂದಿಲ್ಲ. 'ಕವಿರಾಜಮಾರ್ಗ' ಸಂದರ್ಭದಲ್ಲಿ ಒತ್ತಿ ಬರತಿರುವಂಥ ಸಂಸ್ಕೃತವನ್ನು ಹೊರಹಾಕಲಿಕ್ಕೂ ಶಕ್ಯವಿರಲಿಲ್ಲ. ನುಂಗಲಿಕ್ಕೂ ಸಾಧ್ಯವಿರಲಿಲ್ಲ. ಇಂತ ಸಂದರ್ಭದೊಳಗ ಸಂಸ್ಕೃತವನ್ನು ಯಾವ ರೀತಿ ಕನ್ನಡಕ್ಕೆ ಒಗ್ಗಿಸಿಕೊಳ್ಳಬೇಕು ಎಂಬ ಮೂಲಭೂತ ವಿಚಾರವನ್ನು, ಅವನಷ್ಟು ಸೂಕ್ಷ್ಮವಾಗಿ ಯಾರೂ ಹೇಳಿಲ್ಲ ಅನಸ್ತದ. ಅಂದ್ರ ಸಂಸ್ಕೃತ ಪದಗಳನ್ನು ಬಳಸಿರಿ ಅಂತ ಹೇಳತಾನ. ಅದರ ಪ್ರತ್ಯಯ ಹಚ್ಚುವಾಗ ಸಮಸಂಸ್ಕೃತ ಮಾಡರಿ ಅಂತಾ ಹೇಳತಾನ. 'ಅರಸುಕುಮಾರ' ಅರಿಸಮಾಸ ಮಾಡಬಾರದು ಎನ್ನುತ್ತಲೇ 'ನರಪತಿತನಯ' ಬಳಸುವುದನ್ನು ಬೆಂಬಲಿಸತಾನ. ಹೀಗೆ ಎರಡು ಭಾಷೆಗಳನ್ನು ಹದಗೊಳಿಸುವ ವಿಚಾರವನ್ನು ಬಹಳ ಅದ್ಭುತವಾಗಿ ಆತ ಮಂಡಿಸಿದ್ದಾನೆ. ಹೀಗೆ ಅವ್ಯಯ, ಪ್ರತ್ಯಯ, ವಿಶೇಷಣಗಳ ಬಗ್ಗೆ ಅವನು ಹೇಳುವುದಿಲ್ಲ ದೇಶೀ ವಿಚಾರಗಳೇ ಆಗಿವೆ.

ಮುಂದುವರಿದು ಹೇಳುವುದಾದರೆ, ಶಬ್ದಾಲಂಕಾರ ವಿವೇಚನೆ ಸಂದರ್ಭದಲ್ಲಿ ಸಂಸ್ಕೃತ ಶಬ್ದಾಲಂಕಾರಗಳಾದ ಅನುಪ್ರಾಸ, ಯಮಕ ಇತ್ಯಾದಿಗಳ ಬಗ್ಗೆ ಹೇಳಿ

ಕೈತೊಳೆದುಕೊಳ್ಳಬಹುದಾಗಿತ್ತು. ಇದೇ ನೆವದಲ್ಲಿ ದೇಶೀಯವಾದ ಕನ್ನಡ ಪ್ರಾಸ ವಿಚಾರ ಕೈಗೆತ್ತಿಕೊಳ್ತಾನ. ಇವುಗಳ ಬಗ್ಗೆ ಆ ತರುವಾಯವೂ ಯಾರೂ ಇಷ್ಟು ವಿವರವಾಗಿ ಹೇಳಿಲ್ಲ. ಆತ ಆರು ಬಗೆಯ ಆದಿ ಪ್ರಾಸಗಳನ್ನು ವಿಚಾರ ಮಾಡತಾನ. ಸಾಲದುದಕ್ಕೆ ಅಂತ್ಯಪ್ರಾಸ, ವರ್ಗಪ್ರಾಸ ಇತ್ಯಾದಿಗಳನ್ನು ಚರ್ಚಿಸ್ತಾನ. "ದೋಸಮನೆ ಗುಣದ ವೊಲುದ್ಭಾಸಿಸಿ ಕನ್ನಡದೊಳೊಲ್ಬು ಪೂರ್ವಾಚಾರ್ಯರ್ ದೇಸಿಯೆನೆ ನಿರಿಸಿ ಖಂಡಪ್ರಾಸಮಂ ಅತಿಶಯಮಿದೆಂದು ಯತಿಯಂ ಮಿಕ್ಕರ್ " ಎಂದು ಅಪೂರ್ವ ವಿಚಾರ ಹೇಳ್ತಾನ. ಯತಿ ಮೀರುವುದು ದೋಷ, ಆದ್ರ ಅದು ನಮ್ಮ ಗುಣ ಅಂತ ಸಾಧಿಸ್ತಾನ. ಯತಿ ನಿರಾಕರಿಸಿ ಖಂಡಪ್ರಾಸ ಎತ್ತಿ ಹಿಡಿತಾನ.

ಇದೂ ಅಲ್ದೆ ಛಂದಸ್ಸಿಗೆ ಬಂದ್ರೆ, ಸುಮಾರು ೨೫-೩೦ ಕನ್ನಡ ಗೀತಿಕೆ ಬಳಸ್ತಾನ. ೨೫-೩೦ ಶ್ಲೋಕ ಬಳಸ್ತಾನ. ಮುಂದಿನ ಕವಿಗಳಾರೂ ಹೀಂಗ ಬಳಸಿಲ್ಲ. ಶ್ಲೋಕಕ್ಕ ಆದಿಪ್ರಾಸ ಕೊಡಸ್ತಾನ. ಇದೆಲ್ಲ ಸಂಸ್ಕೃತ ಛಂದಸ್ಸು, ಜನರ ಮಧ್ಯೆ ಇರುವ ದೇಶೀ ಛಂದಸ್ಸುಗಳ ಬಗ್ಗೆ ನಡೆಸಿದ ಒಂದು ಪ್ರಯೋಗ. ಮುಂದೆ ಶಾಸ್ತ್ರಜ್ಞರು ಇವೆರಡನ್ನು ಬಿಟ್ಟು ಕಂದಗಳನ್ನು ಬಳಸಿದರು ಶಾಸ್ತ್ರಗಳಲ್ಲಿ. ಆ ಮಾತು ಬೇರೆ. ಇನ್ನ ಅರ್ಥಾಲಂಕಾರಕ್ಕ ಬಂದ್ರೆ 'ನೆಲಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ' -ಈ ವಿಚಾರ ಮುಂಜಾನೆ ಬಹಳ ಚರ್ಚೆ ಆಗ್ಯಾದ. 'ಮಾತರಿವಂ, ಜಾಣಂ, ಕವಿವೃಷಭಂ' ಇವೆಲ್ಲಾ ದಂಡಿಯಲ್ಲಿಲ್ಲದ ಇವನ ವಿಚಾರಗಳೇ. ಕವಿಪ್ರಕಾರಗಳನ್ನು ದೇಸಿ ರೀತಿಯೊಳಗ ಹ್ಯಾಗ ವಿಚಾರ ಮಾಡ್ತಾನೆ ಅನ್ನೋದು ಇಲ್ಲಿ ಗೊತ್ತಾಗ್ತಾ ಇದೆ. ಒಂದು ಪದ್ಯವನ್ನು ಕುರಿತು ಹೇಳಲೇಬೇಕು. ಬಹಳ ವರ್ಷಗಳಿಂದ ನಾನು ಆಗಾಗ ಇದರ ಬಗ್ಗೆ ಮಾತಾಡೀನಿ:

ಪದನರಿದು ನುಡಿಯಲುಂ, ನುಡಿ
ದುದನರಿದು ಆರಯಲುಂ ಆರ್ಪರ್ ಆ ನಾಡವರ್ಗಳ್||
ಚದುರರ್, ನಿಜದಿಂ ಕುರಿತೋ
ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್||

ಇಲ್ಲಿ 'ಕಾವ್ಯಪ್ರಯೋಗ' ಅಂದ್ರೆ ಏನು? ಸಾಮಾನ್ಯವಾಗಿ ನಾವು ಕಾವ್ಯಪ್ರಯೋಗ ಅಂದ್ರೆ ಕಾವ್ಯ ಬರೆಯೂದು ಅಂತೀವಿ. ಕಾವ್ಯ ಬರೆಯೂದು ಅಲ್ಲ ಅದು; ಕಾವ್ಯ ರಿಸೈಟ್ ಮಾಡೂದು. "ಓದದೆಯುಂ" ಎಂದು ಇಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಓದಿಲ್ಲಂದ್ರ ಹ್ಯಾಂಗ ಬರೀಲಿಕ್ಕ ಬರತದ ಅವರಿಗೆ? ಆದುದರಿಂದ ಶಿಷ್ಟ ಕವಿಗಳ ಕುರಿತು ಹೇಳಿಲ್ಲ. ಆತ ನಿರಕ್ಷರ ಹಾಡುಗಾರರನ್ನು ಕುರಿತು ಹೇಳ್ಯಾನ. ದೇಸಿ ಜನರ ಕುರಿತು ಹೇಳ್ಯಾನ. ಅಕ್ಷರವೇ ಗೊತ್ತಿಲ್ಲ ಅವರಿಗೆ. ಆದರೆ ಚೆನ್ನಾಗಿ ಕಾವ್ಯಪ್ರಯೋಗ ಅಂದರೆ ಚೆನ್ನಾಗಿ ರಿಸೈಟ್ ಮಾಡತಾರೆ. ಹಳ್ಳಿಗ ಲಾವಣಿ ಎಷ್ಟು ಶುದ್ಧ ಹಾಡತಾರ! ಎಷ್ಟು ಪ್ರಭಾವಶಾಲಿಯಾಗಿ, ಎಷ್ಟು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸತಾರ!! "ಕುರಿತು ಓದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್" ಅನ್ನುವುದು, ಆತ ಈ ಜನಪದ ಹಾಡುಗಾರರನ್ನು, ಓರಲ್

ಟ್ರೆಡಿಶನ್ ಅಂತೀವಲ್ಲ ಅವರನ್ನು ಕುರಿತು ಹೇಳತಾನ. ಇವರು ಪ್ರಯೋಗ ಅಂತಂದ್ರೆ, ಎಗ್ಜಿಬಿಟ್ ಮಾಡತಾರ. ಪ್ರತಿಸಲ ಚೇಂಜ್ ಆಗೋದು ಪ್ರಯೋಗದ ಲಕ್ಷಣ. ಚೇಂಜ್ ಆಗದೆ ಇರೋದು ಪ್ರದರ್ಶನದ ಲಕ್ಷಣ. ಪ್ರತಿಸಲ ಚೇಂಜ್ ಆಗುವ ನಾಟಕ "ಪ್ರಯೋಗ" ಚೇಂಜ್ ಆಗದೇ ಇರುವ ಸಿನೆಮಾ "ಪ್ರದರ್ಶನ". ಆದುದರಿಂದ ಕಾವ್ಯಪ್ರಯೋಗ ಅನ್ನೋದು ಪದೇ ಪದೇ ಚೇಂಜ್ ಆಗುವ ಆ ಜಾನಪದ ಹಾಡುಗಾರಿಕೆಯೇ ಆಗಿದೆ. ಇದನ್ನೇ ಗಮನದಲ್ಲಿಟ್ಟುಕೊಂಡು ಮಾರ್ಗಕಾರ, ತನ್ನ ದೇಶೀ ಜನರು ಸಾಕ್ಷರಿಗಳಲ್ಲ, ಆದರೂ ಅವರು ಚೆನ್ನಾಗಿ ಹಾಡಬಲ್ಲರು ಎಂದು ಅಭಿಮಾನದಿಂದ ಹೇಳಿದ್ದಾನೆ. ಇದೂ ಅಲ್ದೆ, ಚತ್ತಾಣ, ಬೆದಂಡೆಗಬ್ಬಗಳ ಬಗ್ಗೆ ಹೇಳಿದ್ದು, ಇವೆಲ್ಲ ದೇಸಿಯ ಅಂಶಗಳು ಅನ್ನೋದು ನಿಮಗೆ ಗೊತ್ತದ.

ಮುಂಜಾನೆ ಒಂದು ಪದ್ಯದ ಬಗ್ಗೆ ಪ್ರಸ್ತಾಪ ಬಂತು. 'ನುಡಿಗಳೊಡಂಬಡಲ್ ಬಗೆದವೊಳ್ ಬಗೆಯಂ ಮಿಗಲೀಯದೊಂದೆ ನಾಣ್ನುಡಿಯ ಬೆಡಂಗೆ ಕನ್ನಡದ ಮಾತಿನೊಳ್ ಆ ವಿಕಟಾಕ್ಷರಂಗಳೊಳ್.." ಇದು ಸಾವಿರ ವರ್ಷದ ಇತಿಹಾಸದಲ್ಲಿಯೇ ಮಹತ್ವದ ಪದ್ಯ. ಪಂಪನ "ಬಗೆ ಪೊಸತಪ್ಪುದಾಗಿ...." ಪದ್ಯಕ್ಕೆ ಸಮಾನವಾದ ಪದ್ಯ. ಯಾರೂ ಈ ಪದ್ಯವನ್ನು ಅಷ್ಟಾಗಿ ಗಮನಿಸ್ತಾ ಇಲ್ಲ. ಹೀಗೆ ಪದ್ಯ ಹೇಳುವುದು 'ನೀತಿನಿರಂತರ ಕ್ರಮಂ' ಎನ್ನುತ್ತಾನೆ. 'ನೀತಿ ನಿರಂತರ' ನೃಪತುಂಗನ ಬಿರುದು. 'ಕವಿರಾಜಮಾರ್ಗ'ದೊಳಗ ದೇಶಿ ಇರುವುದು, ಜೀವಂತಿಕೆ ಇರುವುದು ಇಂಥ ಅಭಿವ್ಯಕ್ತಿ ಸಂದರ್ಭಗಳಲ್ಲಿ. ಇವುಗಳಿಂದಾಗಿ ಈ ಕೃತಿಗೆ ಒಂದು ಮಹತ್ವ ಪ್ರಾಪ್ತ ಆಗಿದೆ. ಕನ್ನಡದ ಯಾವ ಶಾಸ್ತ್ರಕೃತಿಗೂ ಇಂಥ ಮಹತ್ವ ಸಾಧ್ಯವಾಗಿಲ್ಲ. ನಾನು 'ಶಬ್ದಮಣಿದರ್ಪಣ' ಸಾಕಷ್ಟು ಸಾರಿ ಓದೀನಿ. 'ಕವಿರಾಜಮಾರ್ಗ' ಮಾಡಿದಷ್ಟು ಪ್ರಭಾವ ಅದು ಮಾಡಿಲ್ಲ. ಉಳಿದವುಗಳಂತೂ ಕೇವಲ ಶುಷ್ಕ ಶಾಸ್ತ್ರಗಳು.

ಕವಿರಾಜಮಾರ್ಗಕಾರ ದೇಸಿ ಪರ ನಿಲ್ತಾನೊ, ಮಾರ್ಗಪರ ನಿಲ್ತಾನೊ-ಅನ್ನುವ ವಿಚಾರ ಇಲ್ಲಿ ಚರ್ಚೆಗೆ ಬಂತು. ದೇಸಿಯ ಪರವಾಗಿ ನಿಲ್ಲುವುದು ಅಂದ್ರೆ, ಮಾರ್ಗದ ವಿರುದ್ಧವಾಗಿ ನಿಲ್ಲುವುದಲ್ಲ. ಅವನ ದೃಷ್ಟಿಯೊಳಗ ಜನರ ಬಾಯಿಯೊಳಗ ಬದುಕುತ್ತಿದ್ದ ಭಾಷೆಯನ್ನು ಒಂದಿಷ್ಟು ಉದಾತ್ತೀಕರಣಗೊಳಿಸೋದು; ಸಂಸ್ಕೃತದ ಕೂಡ ಅದರ ಸಂಬಂಧವನ್ನು ಏರ್ಪಡಿಸೋದು. ಈ ರೀತಿಯಲ್ಲಿ ಆತ ವಿಚಾರ ಮಾಡಿದ್ದಾನ. ಹೀಗಿದ್ದೂ "ಲಿಟರೇಚರ್ ಆಫ್ ಮಾಸಸ್"ಕ್ಕಿಂತ "ಲಿಟರೇಚರ್ ಆಫ್ ಕ್ಲಾಸ್" ಬಗ್ಗೆ ಅವನ ಒಲವು ಜಾಸ್ತಿ. ಯಾಕೆಂದರೆ ಅವನ ಸುತ್ತ "ಆಸ್ಥಾನ ವಿದ್ವಾಂಸ"ರ ಪರಿವಾರ ಅದ.

೬

ಕವಿರಾಜಮಾರ್ಗ : ಕೆಲವು ಪ್ರತಿಕ್ರಿಯೆಗಳು

ಜಿ.ಎಸ್. ಶಿವರುದ್ರಪ್ಪ

೧

ಪ್ರಾಚೀನ ಕೃತಿಗಳ ಅಧ್ಯಯನವು ಹಳೆಯ ತಲೆಮಾರಿನವರಲ್ಲಿ ವಿರಳವಾಗುತ್ತಿರುವ ಹಾಗೂ ಹೊಸ ತಲೆಮಾರಿನವರಲ್ಲಿ ಬಹುಮಟ್ಟಿಗೆ ಅವಜ್ಞೆಗೆ ಗುರಿಯಾಗುತ್ತಿರುವ ಈ ಹೊತ್ತಿನ ಸಂದರ್ಭದಲ್ಲಿ, 'ಕವಿರಾಜಮಾರ್ಗ'ದ ಮರು ಓದಿನ ಮೂಲಕ ಪ್ರಾಚೀನ ಕಾವ್ಯಾಧ್ಯಯನವನ್ನು ನವೀಕರಿಸುವ ಈ ಪ್ರಯತ್ನ ಅತ್ಯಂತ ಉಚಿತವೂ ಉಪಯುಕ್ತವೂ ಆದ ಕ್ರಮವಾಗಿದೆ.

ವಾಸ್ತವವಾಗಿ "ಕವಿರಾಜಮಾರ್ಗ' ಕನ್ನಡದ ವಿದ್ವತ್ ವಲಯದ ಅಧ್ಯಯನಕ್ಕೆ ಲಭ್ಯವಾಗಿ ಈ ಹೊತ್ತಿಗೆ ಸರಿಯಾಗಿ ಒಂದು ಶತಮಾನ ಪೂರ್ಣಗೊಂಡಿದೆ. ೧೮೩೮ರಷ್ಟು ಹಿಂದೆಯೇ ಎಚ್.ಎಚ್.ವಿಲ್ಸನ್ ಸಿದ್ಧಪಡಿಸಿದ ಕರ್ನಲ್ ಮೆಕಂಜಿ ಸಂಗ್ರಹಿಸಿದ ಹಸ್ತಪ್ರತಿ ಸೂಚಿಯ ಮೂಲಕ, 'ಕವಿರಾಜಮಾರ್ಗ'ದ ಹೆಸರು ಕನ್ನಡಿಗರಿಗೆ ಪರಿಚಿತವಾಯಿತು; ಇದು ೧೮೯೮ರಂದು ಮೊದಲ ಬಾರಿಗೆ ಕೆ.ಬಿ.ಪಾಠಕ್ ಅವರಿಂದ ಸಂಪಾದಿತವಾಗಿ ಪ್ರಕಟವಾಯಿತು. ಅಂದಿನಿಂದ ಈವರೆಗೆ ಈ ಕೃತಿಯನ್ನು ಕುರಿತು ಅನೇಕ ವಿದ್ವಾಂಸರು ತುಂಬ ಉತ್ಸಾಹದಿಂದ ಚರ್ಚೆ ಮಾಡಿದ್ದಾರೆ; ಎಷ್ಟೋ ಗಂಟುಗಳನ್ನು ಬಿಡಿಸಿದ್ದಾರೆ; ಹಾಗೆಯೇ ಬಿಚ್ಚಬೇಕಾದ ಗಂಟುಗಳು ಸಾಕಷ್ಟಿವೆ.

ಸಮಗ್ರ ಸ್ವರೂಪದಲ್ಲಿ ಉಪಲಭ್ಯವಾದ ಕನ್ನಡದ ಮೊಟ್ಟ ಮೊದಲ ಕೃತಿಯಾಗಿ, ಕನ್ನಡ ನಾಡು-ನುಡಿ ಹಾಗೂ ಜನರ ಬಗ್ಗೆ ಅತ್ಯಂತ ಅಭಿಮಾನ ಪೂರ್ವಕವಾದ ಮಾತುಗಳಿಂದ, ಕನ್ನಡದ ಬಗ್ಗೆ ಪ್ರೀತಿ ವಿಶ್ವಾಸಗಳನ್ನು ಬಿತ್ತುವ 'ಕವಿರಾಜಮಾರ್ಗ', ಒಂದು ಅಲಂಕಾರ ಗ್ರಂಥವಾಗಿದ್ದೂ ಹಿಂದಿನ ಸಾಹಿತ್ಯದ ಮತ್ತು ಅಂದಿನ ಕನ್ನಡದ 'ಕೈಗನ್ನಡಿ'ಯೂ ಮುಂದಿನ ಕಾವ್ಯಮಾರ್ಗದ 'ಕೈದೀವಿಗೆ'ಯೂ ಆಗಿದೆ.

ಈ ಹೊತ್ತು ಕಾವ್ಯಮೀಮಾಂಸೆಯ ಬಗ್ಗೆ ಯೋಚನೆ ಮಾಡುವ ಭಿನ್ನವಾದ ಕ್ರಮದ ಹಿನ್ನೆಲೆಯಿಂದಲೂ ನಾವು 'ಕವಿರಾಜಮಾರ್ಗ'ದಂಥ ಅಲಂಕಾರ ಶಾಸ್ತ್ರಗ್ರಂಥವನ್ನು

ಪರಿಶೀಲಿಸಬೇಕಾಗಿದೆ. ಕಾವ್ಯ ಸ್ವರೂಪವನ್ನು ಕುರಿತ ಚರ್ಚೆ ಈ ದೇಶದಲ್ಲಿ ನಡೆದದ್ದು ಸಂಸ್ಕೃತದಲ್ಲಿ ಮತ್ತು ಸಂಸ್ಕೃತ ಸಾಹಿತ್ಯದ ಹಿನ್ನೆಲೆಯಲ್ಲಿ; ಭಾರತೀಯ ಸಂದರ್ಭದ ಕಾವ್ಯ ಚರ್ಚೆಗೆ ಮೊದಲ ಗ್ರಂಥವೆಂದು ಹೇಳಲಾಗಿರುವ ಭರತನ 'ನಾಟ್ಯಶಾಸ್ತ್ರ' (ಸು.ಕ್ರಿ.ಶ.೩ನೇ ಶತಮಾನ) ದಿಂದ ಹಿಡಿದು, ಈ ಕ್ಷೇತ್ರದ ಮೊದಲ ಅಲಂಕಾರಶಾಸ್ತ್ರ ಕೃತಿಗಳನ್ನು ರಚಿಸಿದ ದಂಡಿ-ಭಾಮಹರನ್ನು (ಕ್ರಿ.ಶ.೭ನೇ ಶತಮಾನ) ಒಳಗೊಂಡು ೧೭ನೇ ಶತಮಾನದ ಜಗನ್ನಾಥ ಪಂಡಿತನವರೆಗೂ, ಸುಮಾರು ಒಂದೂವರೆ ಸಾವಿರ ವರ್ಷಗಳ ಕಾಲ, ವಿವಿಧ ಪ್ರಸ್ಥಾನಗಳ ಮೂಲಕ ಪ್ರಾಚೀನ ಭಾರತದ ಕೆಲವು ವಿದ್ವತ್ ಕೇಂದ್ರಗಳಲ್ಲಿ, ಕಾವ್ಯವನ್ನು ಕುರಿತ ಚರ್ಚೆಯ ಶಾಸ್ತ್ರಪರಂಪರೆಯೊಂದು ರೂಪುಗೊಂಡಿದೆ. ಇದನ್ನೆ 'ಅಲಂಕಾರಶಾಸ್ತ್ರ' ಎಂದು ಕರೆಯಲಾಗಿದೆ. ಈ ಶಾಸ್ತ್ರವನ್ನು ಆಧುನಿಕ ಸಾಹಿತ್ಯ ಸಂದರ್ಭದಲ್ಲಿ, ಎಂದರೆ ಈಗ ಯಾವುದನ್ನು ವಸಾಹತುಶಾಹೀ ಸಂದರ್ಭವೆಂದು ಕರೆಯುತ್ತೇವೆಯೋ ಆ ಕಾಲದಲ್ಲಿ, ಪಶ್ಚಿಮದ ಸಾಹಿತ್ಯದೊಂದಿಗೆ ಮುಖಾಮುಖಿಯಾಗುತ್ತ, ತೌಲನಿಕ ಅಧ್ಯಯನ ಹಾಗೂ ಬರಹಗಳಲ್ಲಿ ತೊಡಗಿದ ಭಾರತೀಯ ಸಾಹಿತ್ಯ ವಿಮರ್ಶಕರು ಮತ್ತು ವಿದ್ವಾಂಸರು 'ಭಾರತೀಯ ಕಾವ್ಯ ಮೀಮಾಂಸೆ' (Indian Poetics) ಎಂದು ಕರೆಯಲು ಪ್ರಾರಂಭಿಸಿದಂತೆ ತೋರುತ್ತದೆ. ಅದು ಮೂಲತಃ ಸಂಸ್ಕೃತ ಕಾವ್ಯ ಚಿಂತನೆ ಎಂಬ ಅರಿವಿನಿಂದಾಗಿ, 'ಸಂಸ್ಕೃತ ಕಾವ್ಯ ಮೀಮಾಂಸೆ' (Sanskrit Poetics) ಎಂದೂ ಕರೆಯಲಾಗುತ್ತಿತ್ತು. ಅಷ್ಟೇ ಅಲ್ಲ Sanskrit Poetics ಮತ್ತು Indian Poetics ಈ ಎರಡೂ ಸಮಾನಾರ್ಥಕಗಳು ಎಂಬ ಗ್ರಹಿಕೆ, ಅಂದಿನ ಪರಿಸರದಲ್ಲಿ ಹೆಚ್ಚು ಸಾರ್ವತ್ರಿಕವಾಗಲು ಅಷ್ಟೇನೂ ತಡವಾದಂತೆ ತೋರುವುದಿಲ್ಲ.[೨] ಸ್ವಾರಸ್ಯದ ಸಂಗತಿ ಎಂದರೆ, ಕನ್ನಡದ ನವೋದಯದ ಸಾಹಿತ್ಯ ಸಂದರ್ಭದಲ್ಲಿ ಸಂಸ್ಕೃತ ಅಲಂಕಾರಶಾಸ್ತ್ರದ ಚರಿತ್ರೆಯನ್ನು ಕನ್ನಡದಲ್ಲಿ ಅತ್ಯಂತ ಸಮರ್ಥವಾಗಿ ನಿರೂಪಿಸುವ ಪ್ರೊ.ತೀ.ನಂ.ಶ್ರೀಕಂಠಯ್ಯನವರ 'ಆಚಾರ್ಯಕೃತಿ' ಪ್ರಕಟವಾಯಿತಲ್ಲ, ಅದರ ಹೆಸರು 'ಭಾರತೀಯ ಕಾವ್ಯಮೀಮಾಂಸೆ'. ಸಂಸ್ಕೃತ ಸಾಹಿತ್ಯವನ್ನೆ 'ಭಾರತೀಯ ಸಾಹಿತ್ಯ' ಎಂದೂ, ವೈದಿಕ ಸಂಸ್ಕೃತಿಯನ್ನೆ 'ಭಾರತೀಯ ಸಂಸ್ಕೃತಿ' ಎಂದೂ ಪ್ರಚಾರ ಮಾಡಿದ ಮಾಕ್ಸ್ ಮುಲ್ಲರ್ ಅವರಂಥ ಪಾಶ್ಚಾತ್ಯ ವಿದ್ವಾಂಸರ ಗ್ರಹಿಕೆಗಳನ್ನು, ನಮ್ಮವರೂ ಪ್ರಶ್ನೆ ಮಾಡದೆ ಒಪ್ಪಿಕೊಂಡಿದ್ದರ ಪರಿಣಾಮ ಇದು. ಬಹುಭಾಷಿಕ - ಬಹು ಸಾಂಸ್ಕೃತಿಕ ಪರಂಪರೆಗಳನ್ನುಳ್ಳ ಈ ದೇಶದ 'ಬಹುಮುಖತ್ವ'ವನ್ನೇ ಅದರ ವಿಶಿಷ್ಟ ಲಕ್ಷಣವೆಂಬಂತೆ ಗುರುತಿಸುವ ಈ ಹೊತ್ತಿನ ಚಿಂತನಾಕ್ರಮದ ಹಿನ್ನೆಲೆಯಲ್ಲಿ, 'ಭಾರತೀಯತೆ' 'ಭಾರತೀಯ ಸಂಸ್ಕೃತಿ' ಇತ್ಯಾದಿ ಪರಿಕಲ್ಪನೆಗಳನ್ನು ಕುರಿತು ನಾವು ಪುನರಾಲೋಚಿಸಬೇಕಾಗಿದೆ. ಯಾಕೆಂದರೆ, ಸಂಸ್ಕೃತವು ಈ ದೇಶದ ಪ್ರಾಚೀನವೂ ಪ್ರಮುಖವೂ ಆದ ಭಾಷೆ ಎಂಬುದು ನಿಜವಾದರೂ, ಕ್ರಿ.ಶ.೩ನೇ ಶತಮಾನದಿಂದ ೧೧ನೇ ಶತಮಾನದ ಅವಧಿಯಲ್ಲಿ, ಈ ದೇಶದಲ್ಲಿ ಸಂಭವಿಸಿದ ಮಹತ್ವದ ಸಾಂಸ್ಕೃತಿಕ ಪಲ್ಲಟಗಳ ಪರಿಣಾಮದಿಂದಾಗಿ ವಿವಿಧ ಪ್ರಾದೇಶಿಕ ಭಾಷೆಗಳು ಪ್ರಾದುರ್ಭಾವಗೊಂಡು, ಸಂಸ್ಕೃತದ ಯಜಮಾನಿಕೆಯನ್ನು

ಪ್ರಶ್ನಿಸುತ್ತ ತಮ್ಮದೇ ಆದ ಅಸ್ತಿತ್ವವನ್ನೂ ವಿಶಿಷ್ಟತೆಯನ್ನೂ ಪರಂಪರೆಯನ್ನೂ ಸಮಾನಾಂತರವಾಗಿ ಸ್ಥಾಪಿಸಿಕೊಂಡವು. ಈ ಚಾರಿತ್ರಿಕ ಸತ್ಯವನ್ನು ನಾವು ಇಂದು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿದೆ. ಈಗ ಕೇಳಿಕೊಳ್ಳಬೇಕಾದ ಪ್ರಶ್ನೆ ಎಂದರೆ, ತಕ್ಕಷ್ಟು ಪ್ರಾಚೀನವೂ ವಿಶಿಷ್ಟವೂ ಉಜ್ವಲವೂ ಆದ ಈ ಪ್ರಾದೇಶಿಕ ಭಾಷಾ ಸಾಹಿತ್ಯ ಪರಂಪರೆಗಳು, ಸಂಸ್ಕೃತ ಕಾವ್ಯ ಚಿಂತನೆಗೆ ಸಮಾನಾಂತರವಾಗಿ, ಸಂಸ್ಕೃತಕ್ಕೆ ಪ್ರತಿಕ್ರಿಯೆಯಾಗಿ ಹಾಗೂ ಪೂರಕವಾಗಿ ತಮ್ಮದೇ ಆದ ಒಂದು ಕಾವ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳಲಿಲ್ಲವೆ? ಅಥವಾ ಹಲವರು ಭಾವಿಸುವಂತೆ ಈ ವಿವಿಧ ಪ್ರಾದೇಶಿಕ ಭಾಷೆಗಳೂ ತಮ್ಮದೇ ಆದ ಕಾವ್ಯ ಚಿಂತನಾಕ್ರಮವನ್ನು ಅಷ್ಟಾಗಿ ಬೆಳೆಯಿಸದ, ಸಂಸ್ಕೃತದ ಕಾವ್ಯ ಚಿಂತನಗಳನ್ನು ಅನುರಣಿಸಿವೆಯೇ? ಸಂಸ್ಕೃತ ಕಾವ್ಯ ಮೀಮಾಂಸೆಯನ್ನು, ಆ ಭಾಷೆಯಿಂದ ಬೇರೆಯೆ ಆದ ಜಾಯಮಾನಗಳನ್ನುಳ್ಳ ಸಂಸ್ಕೃತೇತರ ಭಾಷೆಗಳ ಸಾಹಿತ್ಯ ಚರ್ಚೆಗೆ ಅನ್ವಯಿಸಿ ನೋಡುವುದು ಎಷ್ಟು ಸಮರ್ಪಕ? ಈ ಕೆಲವು ಪ್ರಶ್ನೆಗಳನ್ನೂ 'ಕವಿರಾಜಮಾರ್ಗ'ದ ಮರು ಓದಿನ ಸಂದರ್ಭದಲ್ಲಿ ನಾವು ಕೇಳಿಕೊಳ್ಳಬೇಕಾಗಿದೆ.

ಬಹುಹಿಂದೆಯೆ ತಮಿಳು ಸಾಹಿತ್ಯವು, ಸಂಸ್ಕೃತದಿಂದ ಭಿನ್ನವಾದ 'ಕಾವ್ಯಮೀಮಾಂಸೆ'ಯನ್ನು ('ತೊಲಕಾಪ್ಪಿಯಂ' ಎಂಬ ಕೃತಿಯಲ್ಲಿ) ಕಟ್ಟಿಕೊಂಡಿದೆ. ಕನ್ನಡ ಸಾಹಿತ್ಯವೂ, ಸಂಸ್ಕೃತ ಕಾವ್ಯ ಮೀಮಾಂಸೆಗೆ ತೋರಿರುವ ವೈಚಾರಿಕ ಪ್ರತಿಕ್ರಿಯೆ ಗುರುತಿಸಿದರೆ, ಕಾಣುವಷ್ಟು ಇದೆ. ಕನ್ನಡದಲ್ಲಿ ಕಾವ್ಯಮೀಮಾಂಸೆ ಸಂಸ್ಕೃತಕ್ಕಿಂತ ಭಿನ್ನವಾದ ಲಕ್ಷಣವನ್ನು ಪಡೆದುಕೊಂಡಿದೆ. ಅದೆಂದರೆ, ಕನ್ನಡ ಅಲಂಕಾರ ಗ್ರಂಥಗಳು ಕಟ್ಟಿಕೊಡುವ ಕಾವ್ಯ ಮೀಮಾಂಸೆ ಮತ್ತು ಕನ್ನಡ ಕವಿಗಳು ತಮ್ಮ ಕೃತಿ ನಿರ್ಮಿತಿಯ ಚೌಕಟ್ಟಿನೊಳಗೇ ನಡೆಯಿಸಿದ ಕಾವ್ಯ ಚಿಂತನೆ. 'ಕವಿರಾಜಮಾರ್ಗ'ದಿಂದ ಮೊದಲುಗೊಂಡು, ಸಂಸ್ಕೃತ ಕಾವ್ಯಮೀಮಾಂಸೆಯ ಕೃತಿಗಳನ್ನು ಅನುಸರಿಸಿ ರಚಿತವಾದ ಅಲಂಕಾರ ಗ್ರಂಥಗಳು ಕನ್ನಡದಲ್ಲಿ ಬೆರಳೆಣಿಕೆಯಷ್ಟಿವೆ. ನಾಗವರ್ಮನ 'ಕಾವ್ಯಾವಲೋಕನ'; ಉದಯಾದಿತ್ಯನ 'ಉದಯಾದಿತ್ಯಾಲಂಕಾರ'; ಕವಿಕಾಮನ 'ಶೃಂಗಾರ ರತ್ನಾಕರ'; ಸಾಳ್ವನ 'ರಸ ರತ್ನಾಕರ' 'ಶಾರದಾವಿಲಾಸ'; ತಿರುಮಲಾರ್ಯನ 'ಅಪ್ರತಿಮವೀರ ಚರಿತೆ' -ಈ ಕೆಲವನ್ನು ಹೆಸರಿಸಬಹುದು. ಇವುಗಳಲ್ಲಿ ಬಹುತೇಕ, ಸಂಸ್ಕೃತದಿಂದ ಕಡತಂದ ಬಂಡವಾಳವನ್ನು ಪುನರಾವರ್ತನೆಗೊಳಿಸುವ ಸ್ವರೂಪದವುಗಳಾಗಿವೆಯೇ ಹೊರತು, ಹೇಳಿಕೊಳ್ಳಬಹುದಾದ ಹೊಸ ವಿಚಾರಗಳನ್ನೇನೂ ಕನ್ನಡ ಕಾವ್ಯಚಿಂತನೆಗೆ ಸೇರಿಸಿದಂತೆ ತೋರುವುದಿಲ್ಲ. ಆದರೆ ಕನ್ನಡ ಕವಿಗಳು ತಮ್ಮ ಕೃತಿಗಳ ಪ್ರಸ್ತಾವನೆಯ ಸಂದರ್ಭದಲ್ಲಿ, ತಮ್ಮದೇ ಆದ ಕಾವ್ಯ ಕಲ್ಪನೆಗಳನ್ನು ಅಭಿವ್ಯಕ್ತಿಸುವ, ಪೂರ್ವ ಕವಿ-ಕಾವ್ಯ ಪರಂಪರೆಗೆ ಸ್ಪಂದಿಸುವ, ಸತ್ಕವಿ ಪ್ರಶಂಸೆ-ಕುಕವಿನಿಂದೆಯ ಮೂಲಕ ಸಮಕಾಲೀನ ಕಾವ್ಯಕಲ್ಪನೆಗೆ ಪ್ರತಿಕ್ರಿಯಿಸುವ ಮೂಲಕ-ಮೂಡುವ ಕೆಲವು ಹೊಸ ಚಿಂತನೆ ಒಳನೋಟ ಹೊಳಹುಗಳು, ಶಾಸ್ತ್ರೀಯವಾದ ಅಲಂಕಾರಗ್ರಂಥಗಳ ನಿರೂಪಣೆಗಿಂತ ಹೆಚ್ಚು ಜೀವಂತಿಕೆಯನ್ನೂ ಲವಲವಿಕೆಯನ್ನೂ

ಪ್ರಕಟಿಸುತ್ತವೆ. ಸಂಸ್ಕೃತ ಸಾಹಿತ್ಯದಲ್ಲಿ ಈ ಬಗೆಯ 'ಕಾವ್ಯಾಂತರ್ಗತ ಕಾವ್ಯಚರ್ಚೆ'ಯೊಂದು, ಕನ್ನಡದಲ್ಲಿರುವಂತೆ ಒಂದು ಪರಂಪರೆಯಾಗಿ ಬೆಳೆದಿಲ್ಲ. ಇದು ಬಹುಶಃ ಕನ್ನಡಕ್ಕೇ ವಿಶಿಷ್ಟವಾದದ್ದು. ಯಾಕೆಂದರೆ ಸಂಸ್ಕೃತದಲ್ಲಿ ಕಾವ್ಯನಿರ್ಮಿತಿಯೇ ಬೇರೆ, ಅಲಂಕಾರ ಶಾಸ್ತ್ರವೇ ಬೇರೆ. ಇನ್ನೂ ಆಳವಾದ ಅಧ್ಯಯನದಿಂದ ಕನ್ನಡಕ್ಕೆ ತನ್ನದೇ ಆದ ಸ್ವತಂತ್ರ ವಾದ ಕಾವ್ಯ ಚಿಂತನೆಗಳೇನಾದರೂ ಇವೆಯೆ ಎಂಬ ಶೋಧನೆ ನಡೆಯಬೇಕಾಗಿದೆ. ಹಾಗೆಯೇ ವಿವಿಧ ಪ್ರಾದೇಶಿಕ ಸಾಹಿತ್ಯಗಳು, ಸಂಸ್ಕೃತಕ್ಕೆ ಭಿನ್ನವಾದ ಹಾಗೂ ಸಮಾನಾಂತರವಾದ ಕಾವ್ಯ ಚಿಂತನೆಗಳನ್ನೇನಾದರೂ ಕಟ್ಟಿಕೊಂಡಿವೆಯೆ ಎಂಬ ಕೆಲಸ ನಡೆಯಬೇಕಾಗಿದೆ. ಆಗ ನಾವು ನಿಜವಾದ ಅರ್ಥದ 'ಭಾರತೀಯ ಕಾವ್ಯ ಮೀಮಾಂಸೆ'ಯನ್ನು ಗುರುತಿಸಲು ಸಾಧ್ಯವಾಗಬಹುದು. ಅಲ್ಲಿಯವರೆಗೂ 'ಸಂಸ್ಕೃತ ಕಾವ್ಯಮೀಮಾಂಸೆ'ಯೆ 'ಭಾರತೀಯ ಕಾವ್ಯಮೀಮಾಂಸೆ' ಎಂಬ ಭ್ರಮೆಯಿಂದ ಪಾರಾಗಲು ಸಾಧ್ಯವಿಲ್ಲ.

ಈ ಹಿನ್ನೆಲೆಯಿಂದ ನೋಡಿದರೆ 'ಕವಿರಾಜಮಾರ್ಗ' ಮುಖ್ಯವಾಗಿ ಒಂದು ಅಲಂಕಾರ ಗ್ರಂಥವಾದರೂ, ಅದು ಸಂಸ್ಕೃತ ಅಲಂಕಾರ ಶಾಸ್ತ್ರ ಪರಂಪರೆಯಿಂದ ಭಿನ್ನವಾಗುತ್ತ, ಕನ್ನಡ ಭಾಷೆ, ವ್ಯಾಕರಣ, ಸಾಹಿತ್ಯ ಚರಿತ್ರೆ ಹಾಗೂ ಕನ್ನಡ ಸಂಸ್ಕೃತಿಯೊಳಕ್ಕೆ ತನ್ನನ್ನು ವಿಸ್ತರಿಸಿಕೊಂಡ ಕೃತಿಯಾಗಿದೆ. ಅದನ್ನು ಕಾವ್ಯಮೀಮಾಂಸೆಯ ದೃಷ್ಟಿಯಿಂದ ನೋಡುವಾಗ ಕೇಳಿಕೊಳ್ಳಬೇಕಾದ ಪ್ರಶ್ನೆಗಳೆಂದರೆ, ಮಾರ್ಗಕಾರನಿಗೆ ಈ ಕೃತಿಯನ್ನು ರಚಿಸುವಾಗ ಸಂಸ್ಕೃತ ಕಾವ್ಯ ಮೀಮಾಂಸೆಯನ್ನು ಕನ್ನಡಿಗರಿಗಾಗಿ ಪರಿಚಯ ಮಾಡಿಕೊಡುವ ಉದ್ದೇಶ ವಿತ್ತೆ? ಅಥವಾ ಸಂಸ್ಕೃತ ಕಾವ್ಯ ಮೀಮಾಂಸೆಯ ತತ್ವಗಳನ್ನು ಕನ್ನಡ ಭಾಷೆಗೆ ಅನ್ವಯಿಸಿ ಅವು ಎಷ್ಟರಮಟ್ಟಿಗೆ ಇಲ್ಲಿ ಸಲ್ಲುತ್ತವೆ ಎಂಬುದನ್ನು ಪರೀಕ್ಷಿಸುವ ಉದ್ದೇಶವಿತ್ತೆ? ಅಥವಾ ಕನ್ನಡದ್ದೇ ಆದ ಒಂದು ಕಾವ್ಯ ಮೀಮಾಂಸೆಯನ್ನು ಕಟ್ಟುವ ಉದ್ದೇಶವಿತ್ತೆ?

೨

'ಕವಿರಾಮಾರ್ಗ' ಕನ್ನಡದ ಮೊದಲ ಅಲಂಕಾರ ಗ್ರಂಥ. ಕನ್ನಡದಲ್ಲಿ ಸಂಸ್ಕೃತ ಕಾವ್ಯಮೀಮಾಂಸೆಯ ಹಿನ್ನೆಲೆ ಹಾಗೂ ತಿಳಿವಳಿಕೆಯಿಂದ, ಕಾವ್ಯಮೀಮಾಂಸೆಯ 'ಮಾರ್ಗ' ಅಥವಾ ಪರಂಪರೆಯೊಂದನ್ನು ಪ್ರಾರಂಭಿಸುವ ಪ್ರಥಮ ಪ್ರಯತ್ನ ಇಲ್ಲಿದೆ. ವಿಶೇಷವಾಗಿ ದಂಡಿಯ 'ಕಾವ್ಯಾದರ್ಶ', ತಕ್ಕ ಮಟ್ಟಿಗೆ ಭಾಮಹನ 'ಕಾವ್ಯಾಲಂಕಾರ' ಇವುಗಳನ್ನು ಅವಲಂಬಿಸಿದ್ದರೂ, ಮೂಲ ಅವಲಂಬನೆಯ ಯಥಾನುಕರಣವಾಗದೆ, ಕೃತಿಗೆ ಹೆಸರಿಡು ವುದರಿಂದ ಹಿಡಿದು ಅದರ ವಸ್ತುವಿನ್ಯಾಸ ಸ್ವತಂತ್ರ ದೃಷ್ಟಿಕೋನ -ಇತ್ಯಾದಿಗಳಿಂದ ಅದೊಂದು ಸ್ವತಂತ್ರ ಕೃತಿಯೆಂಬ ವಿಶಿಷ್ಟತೆಯನ್ನು ಪ್ರಕಟಿಸುತ್ತದೆ. 'ಕವಿರಾಜಮಾರ್ಗ'ದ ಒಟ್ಟು ಪದ್ಯಗಳ ಸಂಖ್ಯೆ ೫೩೬. ಇವುಗಳಲ್ಲಿ ಸುಮಾರು ೪೫ ಪದ್ಯಗಳಿಗೆ ಭಾಮಹನ 'ಕಾವ್ಯಾಲಂಕಾರ'ವೂ, ೨೩೦ ಪದ್ಯಗಳಿಗೆ ದಂಡಿಯ 'ಕಾವ್ಯಾದರ್ಶ'ವೂ ಆಕರಗಳು. ಹೀಗಾಗಿ ಅರ್ಧದಷ್ಟು ಭಾಗ ಸ್ವಂತ ಗ್ರಂಥರಚನೆ, (ಎಂ.ಎಂ.ಕಲಬುರ್ಗಿ : ೧೯೭೩ : ಎಂ.ವಿ.ಸೀ : ೧೯೭೪). ಅವನು ದಂಡಿಭಾಮಹರನ್ನು ಅನುಸರಿಸಿದಷ್ಟು ಭಾಗದಲ್ಲಿ ಕೂಪ,

ಮೂಲ ಶ್ಲೋಕಗಳನ್ನು ಪದಶಃ ಅನುವಾದ ಮಾಡದೆ, ಅವುಗಳ ಭಾವವನ್ನು ಗ್ರಹಿಸಿ ತನ್ನದೇ ಆದ ರೀತಿಯಲ್ಲಿ ನಿರೂಪಿಸಿದ್ದಾನೆ. ಲಕ್ಷ್ಯಪದ್ಯಗಳ ವಿಚಾರದಲ್ಲೂ ಅವನ ಸ್ವಯಂ ಪ್ರತಿಭೆಯ ಪ್ರಕಾಶ ಸ್ಪಷ್ಟವಾಗಿದೆ.

ಕನ್ನಡದ ಅಲಂಕಾರಶಾಸ್ತ್ರ ಕೃತಿಯೊಂದಕ್ಕೆ ಹೆಸರು ಕೊಡುವಾಗ, ಸಂಸ್ಕೃತ ಲಾಕ್ಷಣಿಕರ ಕೃತಿಗಳನ್ನು ಅನುಕರಿಸದೆ, ಬೇರೆಯೆ ಆದ ಶೀರ್ಷಿಕೆಯೊಂದನ್ನು ಕೊಟ್ಟಿದ್ದು ಮಾರ್ಗಕಾರನ ವಿಶೇಷತೆಯಾಗಿದೆ. 'ಕವಿರಾಜಮಾರ್ಗ'ಕ್ಕೆ ಹಿಂದಿನ ಹಾಗೂ ಸಮೀಪಕಾಲೀನವಾದ ಸಂಸ್ಕೃತ ಅಲಂಕಾರಗಳ ಕೆಲವು ಹೆಸರುಗಳು ಹೀಗಿವೆ : ಭಾಮಹನ 'ಕಾವ್ಯಾಲಂಕಾರ'; ರುದ್ರಟನ 'ಕಾವ್ಯಾಲಂಕಾರ', ಉದ್ಭಟನ 'ಕಾವ್ಯಾಲಂಕಾರ ಸಾರಸಂಗ್ರಹ', ವಾಮನನ 'ಕಾವ್ಯಾಲಂಕಾರ ಸೂತ್ರವೃತ್ತಿ'; ಹಾಗೆಯೆ ಮುಂದಿನ ಕನ್ನಡ ಅಲಂಕಾರ ಗ್ರಂಥಗಳು 'ಉದಯಾದಿತ್ಯಾಲಂಕಾರ', 'ರಸರತ್ನಾಕರ' - ಹೀಗೆ. ಆದರೆ ಕನ್ನಡದ ಈ ಮೊದಲ ಅಲಂಕಾರಶಾಸ್ತ್ರದ ಹೆಸರು 'ಕವಿರಾಜಮಾರ್ಗ'.[2] ಇಲ್ಲಿ ಬರುವ 'ಮಾರ್ಗ' ಎಂಬುದು ಸಂಸ್ಕೃತ ಅಲಂಕಾರ ಶಾಸ್ತ್ರದ ಚರಿತ್ರೆಯ 'ರೀತಿ' ಸಿದ್ಧಾಂತದಲ್ಲಿ 'ಬರವಣಿಗೆಯ ಕ್ರಮ' ಎಂಬುದನ್ನು ನೆನಪಿಗೆ ತರುತ್ತದೆ. ಆದರೆ 'ಕವಿರಾಜಮಾರ್ಗ' ಎಂಬ ಶೀರ್ಷಿಕೆಯಲ್ಲಿರುವ 'ಮಾರ್ಗ' ಎನ್ನುವುದು ಸಂಸ್ಕೃತದ ಕಾವ್ಯಮೀಮಾಂಸೆಗೆ ಸಂಬಂಧಿಸಿದ ಆ ಅರ್ಥದಿಂದ ಭಿನ್ನವಾಗಿ, ಕ್ರಮ, ನಿರ್ದೇಶನ, ನಡೆಯಬೇಕಾದ ನಾಳಿನ ದಾರಿ ಎಂಬ ಅರ್ಥಗಳನ್ನು ಸೂಚಿಸುತ್ತದೆ. ಎಂದರೆ, ಕನ್ನಡ ಸಾಹಿತ್ಯದ ಮೊದಲ ದಿನಗಳಲ್ಲಿ, ಕನ್ನಡ ಕಾವ್ಯವು ಇನ್ನು ಮುಂದೆ ಕ್ರಮಿಸಬೇಕಾದ ಮಾರ್ಗವೊಂದನ್ನು ಸೂಚಿಸುವುದು; ಕವಿಗಳಿಗೆ ಒಂದು ರಾಜಮಾರ್ಗವನ್ನು ಹಾಕಿಕೊಡುವುದು ಅದರ ಉದ್ದೇಶವಾಗಿದೆ. ಆದುದರಿಂದಲೆ ಅದು 'ಕವಿರಾಜಮಾರ್ಗ'. ಹಾಗೆ ಮಾರ್ಗದರ್ಶನ ಮಾಡುವಂಥ ಒಂದು ಪರಿಸ್ಥಿತಿ ಅಂದು ಪ್ರಾಪ್ತವಾಗಿತ್ತು. ಆ ಪರಿಸ್ಥಿತಿಯ ಹಿನ್ನೆಲೆಯನ್ನೂ ಹಾಗೂ ಆಗಿನ ಭಾಷೆ ಹಾಗೂ ಸಾಹಿತ್ಯಕ್ಕೆ ಒದಗಿದ ಒಂದು ಗೊಂದಲದ ಚಿತ್ರವನ್ನೂ 'ಕವಿರಾಜಮಾರ್ಗ' ಸ್ಪಷ್ಟವಾಗಿ ಉಲ್ಲೇಖಿಸುತ್ತದೆ. ಆ ಗೊಂದಲ ಯಾವುದೆಂದರೆ 'ಕವಿರಾಜಮಾರ್ಗದ ಕಾಲಕ್ಕೆ, ನೆಲೆಸಿದ್ದ ಹಳಗನ್ನಡ ಭಾಷಾ ಪರಿಸರದಲ್ಲಿ, 'ಆಗಮಬಲಹೀನ'ರಾದ ಕವಿಗಳು ಕಾವ್ಯ ರಚನೆಗೆ ತೊಡಗಿ ಕಾವ್ಯದ ದಾರಿ ದಿಕ್ಕುತಪ್ಪಿತ್ತು. ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿದ್ದ ಕನ್ನಡ ನಾಡಿನಲ್ಲಿ - ಅಥವಾ ಅಂದಿನ ರಾಷ್ಟ್ರಕೂಟರ ಸಾಮ್ರಾಜ್ಯದಲ್ಲಿ - ಹಲವು ಬಗೆಯ ಕನ್ನಡಗಳು ಬಳಕೆಯಲ್ಲಿದ್ದವು. ಈ ಕನ್ನಡದ ಭಾಷಾ ಪ್ರಭೇದಗಳು (ದೇಸಿಗಳು) ಬೇಸರ ತರಿಸುವಷ್ಟು ದೋಷಪೂರ್ಣವಾಗಿದ್ದವು. ಹೀಗಾಗಿ 'ನುಡಿಗೆ ಸಲ್ಲದ' ಈ ಪ್ರಾದೇಶಿಕ ಭಾಷಾಭೇದಗಳನ್ನು ಸರಿಪಡಿಸಿ ನುಡಿಗೆಲ್ಲ ಸಲ್ಲುವಂಥ ಸಮಾನ ಅಧಿಕೃತ ಭಾಷೆ (Standard Language)ಯೊಂದನ್ನು ರೂಪಿಸುವ ಮೊದಲ ಕಾಳಜಿ ಹಾಗೂ ಒಂದು ಪ್ರೌಢವಾದ ಕಾವ್ಯಮಾರ್ಗವನ್ನು ನಿರ್ಮಾಣ ಮಾಡಬೇಕೆಂಬ ಸಂಕಲ್ಪ 'ಕವಿರಾಜಮಾರ್ಗ'ದ ಪೂರ್ವಪೀಠಿಕೆಯಾಗಿದೆ.

ಕವಿರಾಜಮಾರ್ಗಕಾರ ಇಂಥ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಭಾಷೆಯ ನಿರ್ಮಿತಿಯ ಬಗ್ಗೆ ಮೊದಲು ನೀಡಿದ ಮಾರ್ಗದರ್ಶನದಲ್ಲಿ ಕಾವ್ಯ ಲಕ್ಷಣಗಳೇನೋ ಸಂಸ್ಕೃತದಲ್ಲಿ ಆಗಲೇ ಪರಿಚಿತವಾದವು. ಆದರೂ ಸಂಸ್ಕೃತದಿಂದ ಭಿನ್ನವಾದ ಜಾಯಮಾನವನ್ನುಳ್ಳ ಕನ್ನಡದ ಭಾಷಾಸಂದರ್ಭದಲ್ಲೂ, ದೋಷ ಅದೋಷಗಳ ನಿರ್ಣಯ ಮಾಡುವ ಸಂಗತಿ ಮುಖ್ಯವಾಗಿದೆ. ಈ ಕಾರ್ಯದಲ್ಲಿ ಸಂಸ್ಕೃತದ ನಿದರ್ಶನಗಳ ಅನುವಾದದಿಂದ ಹೆಚ್ಚು ಪ್ರಯೋಜನವಿಲ್ಲ. ಆದ ಕಾರಣ ಕಾವ್ಯದೋಷಗಳನ್ನು ಕನ್ನಡಕ್ಕೆ ಅನ್ವಯಿಸಿ ಹೇಳುವಲ್ಲಿ ಮಾರ್ಗಕಾರನ ಶಾಸ್ತ್ರಪ್ರತಿಭೆಯ ವೈಶಿಷ್ಟ್ಯ, ಸ್ಪಷ್ಟವಾಗಿದೆ. ಈ ಗ್ರಂಥದಲ್ಲೆಲ್ಲ 'ಅತಿಮಹತ್ವದ ಭಾಗವೇ ಕನ್ನಡಕ್ಕೆ ಮಾತ್ರ ಕೇಂದ್ರಿತವಾದ ದೋಷವಿವೇಚನೆಯ' (ಕೆ.ಕೃಷ್ಣಮೂರ್ತಿ : ೧೯೬೪) ಪ್ರಕರಣ. ದೋಷಾದೋಷ ನಿರ್ಣಯಕ್ಕೆ ಮೊದಲ ಮಾನ್ಯತೆ ನೀಡಿ, ತನ್ನ ವಿಸ್ತಾರವಾದ ಪ್ರತಿಪಾದನೆಯ ಮೂಲಕ ಕನ್ನಡ ವ್ಯಾಕರಣ ನಿರ್ಮಾಣಕ್ಕೂ ನಿರ್ದುಷ್ಟವಾದ ಕಾವ್ಯರಚನಾ ಪದ್ಧತಿಗೂ ಭದ್ರವಾದ ಬುನಾದಿಯನ್ನು ಮಾರ್ಗಕಾರ ಹಾಕಿಕೊಟ್ಟಿದ್ದಾನೆ.

ಈ ಹಿನ್ನೆಲೆಯಿಂದ ಮುಂದಿನ ಕನ್ನಡ ಕಾವ್ಯ ಭಾಷೆ ಹೇಗಿರಬೇಕು ಎಂಬುದರ ಚರ್ಚೆ 'ಕವಿರಾಜಮಾರ್ಗ'ದಲ್ಲಿ ಮೌಲಿಕವಾದುದಾಗಿದೆ. ಇಲ್ಲಿ ಮಾರ್ಗಕಾರನು ಪ್ರಸ್ತಾಪಿಸುವ 'ಉತ್ತರಮಾರ್ಗ' ದಕ್ಷಿಣಮಾರ್ಗ'ಗಳ ವಿಷಯ ಮೇಲುನೋಟಕ್ಕೆ, ಕನ್ನಡ ಸಾಹಿತ್ಯದ ಮೂಲಮಾನದಲ್ಲಿ ಮುಖ್ಯವಾದ 'ರೀತಿಭೇದ'ಗಳನ್ನು ಗುರುತಿಸುವ ಹೊಸ ಪರಿಕಲ್ಪನೆಗಳಾಗಿವೆಯೋ ಏನೋ ಎಂಬ ಭ್ರಮೆಯನ್ನೂ ಸಂಭ್ರಮವನ್ನೂ ಉಂಟುಮಾಡುತ್ತದೆ; ಅವನು ಅದಕ್ಕಾಗಿ ಕೊಡುವ ಕನ್ನಡ ಲಕ್ಷ್ಯಪದ್ಯಗಳು ಕುತೂಹಲವನ್ನು ಕೆರಳಿಸುತ್ತವೆ. ಆದರೂ, ಈ ಮಾರ್ಗ ಭೇದಗಳು ದಂಡಿಯು ತನ್ನ 'ಕಾವ್ಯಾದರ್ಶ'ದಲ್ಲಿ ಪ್ರಸ್ತಾಪಿಸುವ ಗೌಡೀ (ಪೌರ್ವಾತ್ಯವೈದರ್ಭೀ (ದಾಕ್ಷಿಣಾತ್ಯ) - ರೀತಿಗಳ ಅನುಕರಣ ಪದಗಳಾಗಿವೆ. ಮಾರ್ಗಕಾರನ ಕಾಲದ ಭಾಷಾಪ್ರಯೋಗದ ಪ್ರಾದೇಶಿಕ ಭೇದಗಳು, ದಂಡಿ ಹೇಳುವ ವೈದರ್ಭೀ ಗೌಡೀಮಾರ್ಗಗಳಿಗೆ ಸಂವಾದಿಯಾದವುಗಳೆಂದು ಭಾವಿಸುವುದೇ ಕಷ್ಟವಾಗಿರುವಾಗ, ಮಾರ್ಗಕಾರನ ಮಾರ್ಗ ಭೇದಗಳು ನಿರುಪಯುಕ್ತವಾಗುತ್ತವೆ. ಅಷ್ಟೇ ಅಲ್ಲ, ಸಂಸ್ಕೃತ ಅಲಂಕಾರ ಶಾಸ್ತ್ರದ ರೀತಿ ಸಿದ್ಧಾಂತದ ತತ್ವಗಳು, ವಾಸ್ತವವಾಗಿ ಸಂಸ್ಕೃತಕ್ಕಿಂತ ಭಿನ್ನವಾದ ರಚನಾಕ್ರಮಗಳನ್ನೂ ಜಾಯಮಾನವನ್ನೂ ಉಳ್ಳ ಕನ್ನಡ ಭಾಷೆಯ ಕಾವ್ಯಾಭಿವ್ಯಕ್ತಿಗೆ ಅಷ್ಟಾಗಿ ಅನ್ವಯಿಸಲು ಬಾರವು ಎಂಬುದನ್ನು ಗುರುತಿಸಿ ಕೊಳ್ಳಬೇಕಾಗಿದೆ. ಸಂಸ್ಕೃತದಲ್ಲಿ, ಗೌಡೀ, ವೈದರ್ಭೀ, ಪಾಂಚಾಲೀ, ಲಾಟೀಯ -ಹೀಗೆ ಐದಾರೂ ರೀತಿ ಭೇದಗಳಿವೆ. ಆದರೆ ಕನ್ನಡಕ್ಕೆ ಮುಖ್ಯವಾದ ರೀತಿ ಭೇದಗಳೆಂದರೆ ಮೂರೇ; ಅವು, ಮಾರ್ಗ, ದೇಸಿ ಮತ್ತು ಅವೆರಡರ ಒಡಂಬಡಿಕೆಯ ರೂಪ. ಕನ್ನಡದ ಈ ರೀತಿ ಸಿದ್ಧಾಂತದ ಉಗಮವೇ 'ಕವಿರಾಜಮಾರ್ಗ'ದಿಂದ, ಎನ್ನುವುದು ಬಹುಮುಖ್ಯ ಸಂಗತಿ.

ಸಂಸ್ಕೃತ ಅಲಂಕಾರ ಶಾಸ್ತ್ರದಲ್ಲಿ ಪ್ರಸ್ತಾಪವಾದ ಮತ್ತು ಸಂಸ್ಕೃತದಲ್ಲಿ ಕೃತಿರಚನೆ ಮಾಡಿದ ಕವಿಗಳಿಗೆ ಇಲ್ಲದ ಶೈಲಿಯ ಸಮಸ್ಯೆಯೊಂದು (ಅಲಂಕಾರಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ 'ರೀತಿಯ ಸಮಸ್ಯೆ'ಯೊಂದು) ಕನ್ನಡ ಕವಿಗಳನ್ನು ಕಾಡಿದೆ. ಈ ಸಮಸ್ಯೆಗೆ ಕಾರಣ ಅವರು ಉದ್ದಕ್ಕೂ ದ್ವಿಭಾಷಿಕ ಸಾಹಿತ್ಯ ಸಂದರ್ಭದಲ್ಲಿ ಕೃತಿರಚನೆ ಮಾಡಬೇಕಾದಂಥ ಪರಿಸ್ಥಿತಿಯೇ. ತಾವು ಕೃತಿ ರಚನೆಗೆ ತೊಡಗಿಸಿಕೊಂಡ ಹಾಗೂ ತಮ್ಮ ಉಸಿರಿಗೆ ಹತ್ತಿರವಾದ ಕನ್ನಡ ಒಂದು, ತಮ್ಮ ಕೃತಿರಚನೆಗೆ ಹಿನ್ನೆಲೆಯಾಗಿಯೂ, ತಮ್ಮ ವಸ್ತು ರೀತಿ ಹಾಗೂ ದೃಷ್ಟಿಕೋನಗಳನ್ನು ನಿಯಂತ್ರಿಸಬಲ್ಲ ಸಾಮರ್ಥ್ಯವನ್ನುಳ್ಳ ಪರಂಪರೆಯೂ ಪ್ರಭಾವವೂ ಆಗಿ ನಿಂತ ಸಂಸ್ಕೃತ ಮತ್ತೊಂದು.

ಕನ್ನಡದಲ್ಲಿ ಕಾವ್ಯರಚನೆ ಯಾವಾಗ ಪ್ರಾರಂಭವಾಯಿತೆಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದರೂ 'ಕವಿರಾಜಮಾರ್ಗ' ಪೂರ್ವದ ಕನ್ನಡ ಶಾಸನಗಳನ್ನು ನೋಡಿದರೆ (ಕ್ರಿ.ಶ.೪೫೦ರ ಹಲ್ಮಿಡಿಶಾಸನ; ಕ್ರಿ.ಶ.೬೩೪ರ ಐಹೊಳೆ ಶಾಸನ ; ಕ್ರಿ.ಶ.೭೦೦ರ ಕಾಲದ ಶ್ರವಣ ಬೆಳಗೊಳದ ಶಾಸನ) ಮತ್ತು 'ಕವಿರಾಜಮಾರ್ಗ'ವೆಂಬ ಲಕ್ಷಣ ಗ್ರಂಥವು ಸಂಸ್ಕೃತ ಸಾಹಿತ್ಯ ಹಾಗೂ ಕಾವ್ಯಮೀಮಾಂಸೆಯ ತಿಳುವಳಿಕೆಯಿಂದ ರಚಿತವಾದ ಕೃತಿ ಎಂಬುದನ್ನು ನೆನೆದರೆ, ಕನ್ನಡ ಸಾಹಿತ್ಯದ ಮೊದಲ ಕಾಲವೆ ದಟ್ಟವಾದ ಸಂಸ್ಕೃತದ ಪ್ರಭಾವಕ್ಕೆ ಒಳಗಾದ ಕಾಲವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಮುಂದಿನ ಕವಿಗಳಿಗೊದಗಿದ ಮುಖ್ಯ ಸಮಸ್ಯೆ ಎಂದರೆ, ಎಷ್ಟರ ಮಟ್ಟಿಗೆ ತಮ್ಮ ಕನ್ನಡದ ಅಭಿವ್ಯಕ್ತಿಯಲ್ಲಿ ಸಂಸ್ಕೃತವನ್ನು ಹೊಂದಿಸಿಕೊಳ್ಳಬೇಕು ಅನ್ನುವುದೇ ಆಗಿದೆ.

ಹೀಗಾಗಿ ಕನ್ನಡ ಕವಿಗಳು ತಮ್ಮ ಕೃತಿರಚನೆಯ ಸಂದರ್ಭದಲ್ಲಿ ಸಂಸ್ಕೃತದ ಬಗ್ಗೆ ತೋರಿದ ಕ್ರಿಯೆ ಪ್ರತಿಕ್ರಿಯೆಗಳೆ ಕನ್ನಡ ಕಾವ್ಯದ ರೂಪಾಂಶವನ್ನು ನಿರ್ಧರಿಸಿವೆ ಎಂದರೆ ಅದೇನೂ ಉತ್ಪ್ರೇಕ್ಷೆಯಲ್ಲ. ಈ ಪ್ರತಿಕ್ರಿಯೆ -ಸ್ಥೂಲವಾಗಿ ಹೇಳುವುದಾದರೆ -ಮೂರು ಬಗೆಯಾಗಿದೆ; ೧. ಸಂಸ್ಕೃತವನ್ನು ಕನ್ನಡ ಕಾವ್ಯರಚನೆಗೆ ಒಂದು ಆತಂಕವೆಂದು ಭಾವಿಸದೆ, ಅದೊಂದು ಅನುಕೂಲವೆಂದೇ ತಿಳಿದ ಧೋರಣೆ. ಇದರಿಂದ ನಿಷ್ಪನ್ನವಾದ ರೀತಿಯನ್ನು 'ಮಾರ್ಗ' ಎಂದು ಕರೆಯಬಹುದು. ೨. ಕನ್ನಡ ಭಾಷೆಗೆ ತನ್ನದೇ ಆದೊಂದು ಸತ್ವವಿರುವಾಗ, ಸಂಸ್ಕೃತದ ಸಂಪರ್ಕ ಪ್ರಭಾವಗಳನ್ನು ದೂರವಿರಿಸಿ ಅಚ್ಚಗನ್ನಡದಲ್ಲಿ ಆಡುನುಡಿಗೆ ಸಮೀಪವಾದೊಂದು ರೀತಿಯನ್ನು ರೂಪಿಸಿಕೊಳ್ಳಬಹುದು ಎಂಬ ಧೋರಣೆ. ಇದರಿಂದ ನಿಷ್ಪನ್ನವಾದದ್ದು ದೇಸಿ. ೩. ಕನ್ನಡದಂತೆಯೇ ಸಂಸ್ಕೃತವೂ ನಮ್ಮದೇ; ಆದರೆ ಅದು ಕನ್ನಡದ ಸೊಗಸನ್ನು ಕಬಳಿಸದಂತೆ ನೋಡಿಕೊಂಡು ಸಂಸ್ಕೃತದ ಪ್ರೌಢತೆಯನ್ನು (ಮಾರ್ಗವನ್ನು) ಕನ್ನಡದ ಆಡುನುಡಿಯ ಸೊಗಸಿನೊಂದಿಗೆ (ದೇಸೀಯತೆಯೊಂದಿಗೆ) ಹೊಂದಿಸಿ, ಒಂದು ಬಗೆಯ ಒಡಂಬಡಿಕೆಯನ್ನು ಸಾಧಿಸುವುದು ಹೇಗೆ ಎನ್ನುವ ಧೋರಣೆ. ಇದನ್ನು ಮಾರ್ಗ - ದೇಸಿಗಳ ಸಮನ್ವಯ ಎಂದು ಬೇಕಾದರೂ ಕರೆಯಬಹುದು. ಈ

ಮೂರು ನಿಲುವುಗಳು ಇಡೀ ಕನ್ನಡ ಸಾಹಿತ್ಯದ ಉದ್ದಕ್ಕೂ (ಆಧುನಿಕ ಸಾಹಿತ್ಯವನ್ನೂ ಒಳಗೊಂಡು) ಇಂದಿಗೂ ಕ್ರಿಯಾಶೀಲವಾಗಿವೆ ಎಂಬುದನ್ನು ಯಾರಾದರೂ ಗುರುತಿಸಬಹುದು.[೩] ಈ ವಿಷಯವನ್ನು ವಿಲಂಬಿಸದೆ ಇಲ್ಲಿ ಹೇಳಲಪೇಕ್ಷಿಸುವ ಮುಖ್ಯವಾದ ಮಾತೆಂದರೆ, ಕನ್ನಡದ ನಾಡು ನುಡಿಯ ಬಗ್ಗೆ ಅತೀವ ಅಭಿಮಾನವುಳ್ಳ ಮಾರ್ಗಕಾರನು, ಮೊಟ್ಟ ಮೊದಲಿಗೆ ಎತ್ತಿ ಹಿಡಿದದ್ದು ಈ ಮೂರನೆಯ 'ಒಡಂಬಡಿಕೆಯ' ಕ್ರಮವನ್ನು.

'ಕವಿರಾಜಮಾರ್ಗ'ದ ಕಾಲಕ್ಕೆ ಆಗಲೇ ಕನ್ನಡ ಕವಿಗಳು ಸಂಸ್ಕೃತದ ಅಕ್ಷರ ವೃತ್ತಗಳನ್ನು ಒಪ್ಪಿಕೊಂಡು, ಅವುಗಳಲ್ಲಿ ಎರಡು ಮುಖ್ಯವಾದ ಮಾರ್ಪಾಟುಗಳನ್ನು ಮಾಡಿದ್ದರು. ಒಂದು ಅಕ್ಷರ ವೃತ್ತಗಳ ಯತಿ ಸ್ಥಾನಗಳನ್ನು ನಿಯತವಾಗಿ ಅನುಸರಿಸದೆ, 'ಯತಿವಿಲಂಘನೆ' ಮಾಡಿದ್ದು; ಎರಡನೆಯದು ಹೊಸದಾಗಿ ದ್ವಿತೀಯಾಕ್ಷರ ಪ್ರಾಸದ ನಿರ್ಬಂಧವನ್ನು ಅಳವಡಿಸಿದ್ದು. ಈ ಬದಲಾವಣೆಗಳಿಂದ ಕನ್ನಡ ಕಾವ್ಯದ ಪದಬಂಧ, ಸಂಸ್ಕೃತದ ಪದ್ಯರಚನಾ ಕ್ರಮದಿಂದ ಬೇರೆಯೆ ಆದ ಲಕ್ಷಣವನ್ನು ಪಡೆದುಕೊಂಡಿತು. ಮಾರ್ಗಕಾರ ಈ ಬರವಣಿಗೆಯ ಕ್ರಮವನ್ನು ಅನುಮೋದಿಸಿದ್ದಲ್ಲದೆ, ಇಡೀ ತನ್ನ ಕೃತಿಯನ್ನು ಈ ವಿಧಾನವಲ್ಲಿಯೆ ರಚಿಸಿ (ಇದಕ್ಕೆ ಹಿಂದಿನ ಕೃತಿಗಳೆಲ್ಲ ಪೂರ್ಣ ಪ್ರಮಾಣದಲ್ಲಿ ಈ ಮಾದರಿಯಲ್ಲಿದ್ದುವೆ ಇಲ್ಲವೆ ಎಂಬುದನ್ನು ಗುರುತಿಸಲು ಅವು ಯಾವುವೂ ದೊರಕಿಲ್ಲ.) ಮುಂದಿನ ಕನ್ನಡ ಕಾವ್ಯ ರೂಪದ ಮಾರ್ಗದರ್ಶನ ಮಾಡುವುದರ ಜತೆಗೆ, ಕೃತಿಯ 'ರೀತಿ'ಯ ಸ್ವರೂಪದ ಬಗೆಗೆಯೂ ಮೌಲಿಕವಾದ ಸೂಚನೆಗಳನ್ನು ನೀಡಿದ್ದಾನೆ.

ಸಂಸ್ಕೃತದ ಬಗ್ಗೆ ಪ್ರೀತಿ-ಅಭಿಮಾನ-ಗೌರವ; ಕನ್ನಡದ ಬಗ್ಗೆ ಅದಮ್ಯವಾದ ಆತ್ಮೀಯತೆ. ಇಂಥ ನಿಲುವಿನ ಮಾರ್ಗಕಾರನಿಗೆ, ತನ್ನ ಕಾಲದಲ್ಲಿ ಹದಗೆಡುತ್ತಿದ್ದ ವಿವಿಧ ದೇಸಿಗಳನ್ನು ಪರಿಷ್ಕರಿಸಿ ಒಂದು ಸಮಾನ ಭಾಷೆಯನ್ನು ರೂಪಿಸುವ ಉದ್ದೇಶದ ಜತೆಗೆ, ಕಾವ್ಯ ಭಾಷೆಗೂ ಸಿದ್ಧವಾಗುತ್ತಿದ್ದ ಈ ಕನ್ನಡವನ್ನು ಸಂಸ್ಕೃತದ ಸಾಹಚರ್ಯದಿಂದ ಒಂದು ಗಟ್ಟಿಮುಟ್ಟಾದ ಕಾವ್ಯಸಂಪ್ರದಾಯ ನಿರ್ಮಾಣಕ್ಕೆ ನಿಯೋಜಿಸುವುದು ಹೇಗೆಂಬ ಕಾಳಜಿಗಳೂ ಪ್ರಧಾನವಾಗಿದ್ದವು. ಮಾರ್ಗಕಾರನಿಗೆ ಗೊತ್ತಿತ್ತು. ಸಂಸ್ಕೃತವನ್ನು ನಿರಾಕರಿಸಿ ಕನ್ನಡ ಬೆಳೆಯಲಾರದು ಎಂದು; ಆದ ಕಾರಣ ಅದರಿಂದ ಪಡೆಯಬೇಕಾದ ಸತ್ವವನ್ನು ಕನ್ನಡ ತನ್ನೊಳಗೆ ಅರಗಿಸಿಕೊಳ್ಳಬೇಕು ಎಂದು; ಜತೆಗೆ ಯಾವ ಕಾರಣಕ್ಕೂ ಸಂಸ್ಕೃತವು ಕನ್ನಡದ ಜಾಯಮಾನಕ್ಕೆ ಮಾರಕವಾಗಬಾರದು ಎಂದು. ಆದ್ದರಿಂದ ಸಂಸ್ಕೃತವನ್ನೂ ಕನ್ನಡವನ್ನೂ ಒಂದು ಸಮತೂಕದಲ್ಲಿ ಹೊಂದಿಸಿ ಒಂದು ಕಾವ್ಯಭಾಷೆ ಅಥವಾ ಬರವಣಿಗೆಯ ಕ್ರಮವನ್ನು ರೂಪಿಸುವ ಧೋರಣೆಯೊಂದನ್ನು 'ಕವಿರಾಜಮಾರ್ಗ' ಮಂಡಿಸುತ್ತದೆ. ಮುಖ್ಯವಾಗಿ 'ಕವಿರಾಜಮಾರ್ಗ'ದ ಮೊದಲ ಪರಿಚ್ಛೇದವೇ 'ದೋಷ-ಅದೋಷ'ಗಳ ವಿಚಾರಕ್ಕೆ ಮೀಸಲಾಗಿದ್ದು, ಅದರಲ್ಲಿ ಮಾರ್ಗಕಾರ ಕನ್ನಡ ಸಂಸ್ಕೃತಗಳ ಸಂಬಂಧವನ್ನು 'ಕಾವ್ಯಭಾಷೆ'ಯ ಮೂಲಕ ಚರ್ಚೆಗೆ ಗುರಿಪಡಿಸುತ್ತಾನೆ; 'ಸರಿಸಮವಾದ

ಸಂಸ್ಕೃತೋಕ್ತಿಗಳೊಂದಿಗೆ ಹೊಂದಿಕೊಳ್ಳುವಂತೆ ಕನ್ನಡ ನುಡಿಗಳು ಬೆರೆಸಿಬಂದರೆ, ಸೊಗಸಾದ ಸಂಗೀತದಲ್ಲಿ ಸಮರಸಗೊಳ್ಳುವ ಮೃದಂಗ ಮಧುರ ಧ್ವನಿಯಂತೆ ಅವು ಸಂತೋಷವನ್ನುಂಟು ಮಾಡುತ್ತವೆ.'(೧-೫೫) 'ಸಂಸ್ಕೃತದ ಗುಣಾತಿಶಯದಿಂದ ಪರಿಪೂರ್ಣವಾದ ಉಕ್ತಿಮಾರ್ಗವನ್ನು ಪರಾಮರ್ಶಿಸಿ, ಕನ್ನಡದಲ್ಲಿ ಹೇಳಿದರೆ ಕಾವ್ಯಬಂಧಕ್ಕೊಂದು ಸೊಗಸು ಬರುವುದಲ್ಲದೆ ನಿಂದನೆಗೂ ಒಳಗಾಗುವುದಿಲ್ಲ,(೧-೫೭) 'ಸಂಸ್ಕೃತ ಪದಗಳೂ ಕನ್ನಡ ಪದಗಳೂ ಸಮಾಸ ರಚನೆಯಲ್ಲಿ ಹಿತವಾಗಿ ಬಂದಾಗ ಮಾತ್ರ ಕವಿಯ ಪದ ಪ್ರಯೋಗಗಳು ಕನಕ ರಚನೆಯಲ್ಲಿ ಮಣಿನಿಕರದಂತೆ ಸುಂದರವಾಗುತ್ತವೆ' (೧-೬೧) 'ಸಂಸ್ಕೃತವನ್ನೂ ಕನ್ನಡವನ್ನೂ ಸರಿಯಾಗಿ ಅರಿಯದೆ ಒಂದೇ ಸಮಾಸದಲ್ಲಿ ಕೂಡಿಸಿಬಿಟ್ಟರೆ ಕುದಿಯುತ್ತಿರುವ ಹಾಲಿನಲ್ಲಿ ಮಜ್ಜಿಗೆಯ ಹನಿಗಳು ಬೆರೆಸಿದಂತೆ ವಿರಸವಾಗುತ್ತದೆ'(೧-೫೮)- ಈ ಕೆಲವು ಉಕ್ತಿಗಳನ್ನು ನೋಡಿದರೆ, ಕವಿರಾಜಮಾರ್ಗಕಾರನು, ಸಂಸ್ಕೃತವು ಕನ್ನಡ ಕಾವ್ಯಭಾಷೆಯೊಂದಿಗೆ ಪಡೆದುಕೊಳ್ಳಬೇಕಾದ ಹೆಣಿಗೆಯ ಸ್ವರೂಪವೆಂಥದು ಎಂಬುದನ್ನು ಅತ್ಯಂತ ಪ್ರಾಯೋಗಿಕವಾಗಿ ನಿರೂಪಿಸಿರುವುದನ್ನು ಕಾಣಬಹುದು. ಈ ಎಲ್ಲ ಸೂಚನೆಗಳ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಇನ್ನು ಮುಂದೆ ರೂಪುಗೊಳ್ಳಬೇಕಾದ ಕಾವ್ಯದ ಭಾಷೆ ಹೇಗಿರಬೇಕು ಎನ್ನುವುದನ್ನು ಕುರಿತು ಮಾರ್ಗಕಾರನ ನಿರ್ದೇಶನ ಹೀಗಿದೆ: 'ಕವಿ ಕೃತಿರಚನೆಯಲ್ಲಿ ಬಳಸುವ ಪದಗಳು ಒಂದಕ್ಕೊಂದು ಹೊಂದಿಕೊಂಡು ಕವಿಯು ಅಭಿವ್ಯಕ್ತಪಡಿಸಲು ಅಪೇಕ್ಷಿಸುವ ಭಾವವನ್ನು ಉಚಿತವಾದ ರೀತಿಯಲ್ಲಿ ನಿರೂಪಿಸುವಂತಿರಬೇಕು. ಆ ಕನ್ನಡದ ಮಾತುಗಳಲ್ಲಿ 'ನಾಳ್ನುಡಿಯ ಬೆಡಂಗು' -ಆಡುಮಾತಿನ ಸೊಗಸು - ಇರಬೇಕು. ಈ ಕನ್ನಡದ ಮಾತುಗಳೊಂದಿಗೆ ಕವಿ ಬಳಸುವ ಸಂಸ್ಕೃತದ ಪದಗಳು ಕರ್ಕಶವಾಗಿ ಪರುಷಾಕ್ಷರಗಳಿಂದ ಕೂಡಿರಬಾರದು ಮತ್ತು ಒಟ್ಟಿನಲ್ಲಿ ರಚನೆ 'ಮೆಲ್ಲುವೆತ್ತು' ಎಂದರೆ ಮೃದುಪದಬಂಧದಿಂದ ಕೂಡಿರಬೇಕು. ಪದ್ಯದ ರಚನೆ ಬಳ್ಳಿಯೊಂದು ಕೋಮಲವಾಗಿ ಕುಡಿಚಾಚಿಕೊಂಡು ಹಬ್ಬಿದಂತೆ ಇರಬೇಕೆಂಬುದೆ ನೀತಿನಿರಂತರ' ಎಂಬ ಬಿರುದನ್ನು ಪಡೆದ ನೃಪತುಂಗನಿಗೆ ಸಮ್ಮತವಾದ ಮತ(೧-೧೪೯).

ಕವಿರಾಜಮಾರ್ಗಕಾರನ ಈ ಹೇಳಿಕೆ ಸ್ಪಷ್ಟವಾಗಿ ಕಾವ್ಯಭಾಷೆಯೊಂದನ್ನು ಕುರಿತು ಸಮತೂಕದ ಧೋರಣೆಯೊಂದನ್ನು ಮೊಟ್ಟಮೊದಲಿಗೆ ಪ್ರತಿಪಾದಿಸುತ್ತದೆ. ಕನ್ನಡ ಕಾವ್ಯ ತನ್ನೊಳಗೆ ಸಂಸ್ಕೃತದ ಪ್ರವೇಶ ಹಾಗೂ ಹೊಂದಾಣಿಕೆಯನ್ನು ಎಷ್ಟರಮಟ್ಟಿಗೆ ಮಾಡಿಕೊಳ್ಳಬೇಕೆಂಬ ಈ ನಿರ್ದೇಶನದಲ್ಲಿ, ಹಾಗೆ ಬಳಕೆಯಾಗುವ ಸಂಸ್ಕೃತವು ಕನ್ನಡ ನಾಡ ನುಡಿಯ ಬೆಡಗಿಗೆ ಧಕ್ಕೆ ತರುವಂತಿರಬಾರದು ಎನ್ನುವ ಎಚ್ಚರಿಕೆ ಬಹುಮುಖ್ಯವಾದದ್ದು. ಮುಂದೆ ಈ ನಿಲುವು ನಯಸೇನ, ಆಂಡಯ್ಯ, ಮಹಲಿಂಗರಂಗ ಅಂಥವರ ಪ್ರತಿಕ್ರಿಯೆ ಹಾಗೂ ಪ್ರಶ್ನೆಗೆ ಒಳಗಾಯಿತೆಂಬುದು ನಿಜವಾದರೂ, ಮತ್ತು ಎಷ್ಟೋ 'ಮಾರ್ಗ' ಕವಿಗಳು ಈ ಎಚ್ಚರದ ಮಾತನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ತಮ್ಮ ಬರವಣಿಗೆಯನ್ನು

'ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು' ಎಂಬ ಟೀಕೆಗೆ ಆಸ್ಪದವಾಗುವಂತೆ ಮಾಡಿದರೂ, ಮಾರ್ಗಕಾರನ ಈ ನಿಲುವನ್ನು ಮೊದಲು ಅನುಮೋದಿಸಿ 'ದೇಸಿ-ಮಾರ್ಗ'ಗಳ ಒಡಂಬಡಿಕೆಯನ್ನು ತಂದವನು ಪಂಪನೇ. ಈ ಕುರಿತು ಪಂಪನ ನಿಲುವು 'ದೇಸಿಯೊಳ್ ಪುಗುವುದು, ಪೊಕ್ಕ ಮಾರ್ಗದೊಳ್ ತಳ್ವುದು'[೪] - ಎಂದರೆ, ದೇಶಿಯಲ್ಲಿ ಪ್ರವೇಶಿಸಿ, ಮಾರ್ಗದಲ್ಲಿ ನಿಲ್ಲುವುದು. ಕವಿರಾಜಮಾರ್ಗಕಾರನ 'ಸಂಸ್ಕೃತ ಹಾಗೂ 'ನಾಳ್ನುಡಿಯ ಬೆಡಂಗು' ಎಂಬ ಮೂಲಭಾವಕ್ಕೆ ಸಂವಾದಿಯಾಗಿ ಪಂಪ 'ಮಾರ್ಗ' 'ದೇಸಿ'ಗಳನ್ನು ಬಳಸುತ್ತಾನೆಂದು ತೋರುತ್ತದೆ. ಮಾರ್ಗಕಾರನಂತೆ ಪಂಪನೂ 'ತಿರುಳ್ಗನ್ನಡ'ದ ಸೊಗಸಿಗೆ ಮಾರುವೋದವನು. ಅದೇ ಪಂಪನಿಗೆ ಪ್ರಿಯವಾದ ದೇಸಿ. ಈ ತಿರುಳ್ಗನ್ನಡದ ದೇಸಿಯೊಂದಿಗೆ ಮಾರ್ಗದ (ಸಂಸ್ಕೃತದ ಪ್ರೌಢಭಾಷಾರಚನೆಯ) ಸತ್ವವನ್ನು ಬೆಸೆಯುವುದು ಪಂಪನ ಉದ್ದೇಶ. ಪಂಪನ ದೇಸಿಯ ಸೊಗಸೂ ಅವನು ರೂಢಿಸಿ ಮಾರ್ಗ - ದೇಸಿಗಳ ಒಡಂಬಡಿಕೆಯೂ ಮುಂದಿನ ಕನ್ನಡ ಕವಿಗಳಿಂದ ಪ್ರಶಂಸಿತವಾಗಿದೆ.

'ಕವಿರಾಜಮಾರ್ಗ'ವು ಸಂಸ್ಕೃತ ಕಾವ್ಯ ಮೀಮಾಂಸೆಯ ತಿಳಿವಳಿಕೆಯ ಹಿನ್ನೆಲೆಯಲ್ಲಿ ಕನ್ನಡದ ಕಾವ್ಯ ಚಿಂತನೆಯೊಂದನ್ನು ಕಟ್ಟಿಕೊಡುವ ಹಾಗೂ ಮುಂದುವರೆಸುವ ಉದ್ದೇಶದ ಕೃತಿಯಾಗಿದೆ. ಅದುವರೆಗಿನ ಅಲಂಕಾರ ಶಾಸ್ತ್ರದ ಪ್ರಮುಖ ಪ್ರಸ್ಥಾನ ಹಾಗೂ ಪರಿಕಲ್ಪನೆಗಳ ನೆನಪುಗಳನ್ನು ಅನುರಣಿಸುವ ಈ ಕೃತಿ ಪ್ರಧಾನವಾಗಿ ಅಲಂಕಾರ ಮತ್ತು ರೀತಿ ಪ್ರಸ್ಥಾನಗಳಿಗೆ ಸೇರುವಂತೆ ತೋರಿದರೂ, ಕನ್ನಡದ ಸಂದರ್ಭದಲ್ಲಿ ರಸಗಳ ಸಂಖ್ಯೆ ಒಂಬತ್ತೆಂದೂ, ಅವುಗಳಲ್ಲಿ ಶಾಂತರಸವು ಒಂಬತ್ತನೆಯದೆಂದೂ ಹೇಳುವ ಸಂಗತಿ ಚಾರಿತ್ರಿಕವಾಗಿ ಮಹತ್ವದ್ದಾಗಿರುವಂತೆ, ತನ್ನ ಸಮಕಾಲೀನತೆಯಲ್ಲಿಯ ದೂರದ ಉತ್ತರದ ಕಾಶ್ಮೀರದಲ್ಲಿ ಆನಂದವರ್ಧನನಿಂದ ಪ್ರತಿಪಾದಿತವಾದ ಧ್ವನಿತತ್ವವನ್ನು ತಾನು ತಿಳಿದುಕೊಂಡಂತೆ ಪ್ರಸ್ತಾಪಿಸಿರುವ ರೀತಿಯು ವಿಶೇಷದ್ದಾಗಿದೆ. ನಮ್ಮ ಆಲಂಕಾರಿಕರು ಕಾವ್ಯವನ್ನು ಯಾವತ್ತೂ ಒಂದು ಜಡ 'ವಸ್ತು' ಎಂಬಂತೆ ಭಾವಿಸದೆ, ಅದೊಂದು 'ಸಜೀವ ಶಿಲ್ಪ'ವೆಂಬಂತೆ ತಿಳಿದುಕೊಂಡದ್ದರಿಂದಲೇ 'ಕಾವ್ಯಶರೀರ'; ಆ ಶರೀರಕ್ಕೆ ಶೋಭಾಕರವಾದ 'ಅಲಂಕಾರ'ಗಳು; ಅದಕ್ಕೊಂದು 'ಆತ್ಮ' -ಈ ಪರಿಭಾಷೆಯಲ್ಲಿ ಮಾತನಾಡಿದರು. ಉದ್ದಕ್ಕೂ ಕಾವ್ಯಶರೀರದ ಲಕ್ಷಣಗಳು ಯಾವುವು, ಕಾವ್ಯ ಆತ್ಮ ಯಾವುದು ಎಂಬುದನ್ನು ಕುರಿತು ಅಲಂಕಾರ ಶಾಸ್ತ್ರ ಚರ್ಚಿಸುತ್ತ ಬಂದಿದೆ. ಈ ಹಿನ್ನೆಲೆಯಲ್ಲಿ ಕವಿರಾಜಮಾರ್ಗಕಾರ ಕಾವ್ಯಕ್ಕೆ ಇರುವ ವ್ಯಕ್ತಿ ವಿಶಿಷ್ಟತೆಯನ್ನು ಕುರಿತು 'ಕೈ, ಕಾಲು, ಮೈ, ತಲೆ, ಹೊಟ್ಟೆ, ಮುಖ -ಇವೆಲ್ಲಾ ತಮ್ಮ ತಮ್ಮ ಸ್ಥಾನದಲ್ಲಿದ್ದೂ, ಎಲ್ಲರೂ ಮನುಷ್ಯರಾಗಿದ್ದರೂ ಕೂಡ, ಒಬ್ಬರು ಇನ್ನೊಬ್ಬರನ್ನು ಹೇಗೆ ಹೋಲುವುದಿಲ್ಲವೋ ಹಾಗೆ'' ಮೇಲೆ ನೋಡಲು ಅದೇ ಪರಿಚಿತವಾದ ಶಬ್ದಾರ್ಥಗಳ ಮೂಲಕ ಬೇರೆ ಬೇರೆಯ ಕವಿಗಳ ಮೂಲಕ ವಿರಚನೆಗೊಂಡು, ಒಂದೇ ಎಂಬಂತೆ ಭಾಸವಾದರೂ ತತ್ವಶಃ ಪ್ರತಿಯೊಂದು ಅಭಿವ್ಯಕ್ತಿಯೂ ತನಗೆ ತಾನೇ ವಿಶಿಷ್ಟವಾದುದು(೨-೪೭) ಎಂಬರ್ಥದ - ಮಾತುಗಳನ್ನು ಹೇಳುವ ರೀತಿ ಚಿಂತನ

ಯೋಗ್ಯವಾಗಿದೆ. ಹಾಗೆಯೆ ಕವಿಗಳ ಶ್ರೇಣೀಕರಣವನ್ನು ಕುರಿತು 'ಕವಿರಾಜಮಾರ್ಗ' ಮಂಡಿಸುವ ವಿಚಾರಗಳು ಪರಿಶೀಲನೆಗೆ ಅರ್ಹವಾಗಿವೆ : ಯಾಕೆಂದರೆ ಮಾರ್ಗಕಾರನಿಗೆ ಆಕರವಾದ ದಂಡಿ ಭಾಮಹರ ಕೃತಿಗಳಲ್ಲಿ ಈ ವರ್ಗೀಕರಣದ ಪ್ರಸ್ತಾಪವಿಲ್ಲ. ಮಾರ್ಗಕಾರ ಕವಿಗಳನ್ನು ನಾಲ್ಕು ವಿಧ ಎಂದು ವರ್ಗೀಕರಿಸುತ್ತಾನೆ. ಆ ಕವಿಗಳು ಯಾರೆಂದರೆ : ಮಾತಜೀವ, ನಿಪುಣ, ಜಾಣ ಮತ್ತು 'ಬಲ್ಲಂ'. ಅವುಗಳ ವಿವರಣೆ ಹೀಗೆ: ೧. ಮನಸ್ಸಿನಲ್ಲಿರುವ ಅರ್ಥವನ್ನು ಇನ್ನೊಬ್ಬರಿಗೆ ತೆರೆದಿಟ್ಟಂತೆ ತಿಳಿಸಬಲ್ಲವನು 'ಮಾತಜೀವ' ೨. ಕಿರಿದರಲ್ಲಿ ಪಿರಿದರ್ಥವನ್ನು ಅಡಗಿಸಿ ಅಭಿವ್ಯಕ್ತಪಡಿಸಬಲ್ಲವನು (ಮೊದಲನೆಯವನಿಗಿಂತ) ನಿಪುಣ. ೩. ನುಡಿಯನ್ನು ಛಂದೋ ಬಂಧವೊಂದರಲ್ಲಿ ಅಳವಡಿಸಬಲ್ಲವನು (ಈಗ ಪ್ರಸ್ತಾಪವಾದವನಿಗಿಂತ) ಜಾಣ ೪. ಮಹಾಧ್ವ ಕೃತಿಗಳನ್ನು (ಒಂದು ಮಾರ್ಗ ಅಥವಾ ಪರಂಪರೆಯನ್ನು ನಿರ್ಮಾಣ ಮಾಡಬಲ್ಲಂಥ ಕೃತಿಗಳನ್ನು) ವಿರಚಿಸಬಲ್ಲಾತ ಈ ಎಲ್ಲರಿಗಿಂತಲೂ ಬಲ್ಲವನು (ಬಲ್ಲಂ) (೧-೧೫, ೧೬). ವಾಸ್ತವವಾಗಿ ಸಂಸ್ಕೃತ ಅಲಂಕಾರ ಶಾಸ್ತ್ರದ ಚರಿತ್ರೆಯಲ್ಲಿ ಕವಿಗಳ ಹಲವು ಪ್ರಭೇದಗಳನ್ನು ಗುರುತಿಸಿದವನು, ಕವಿರಾಜಮಾರ್ಗಕಾರನ ಅನಂತರ ಬಂದ ೧೦ನೆಯ ಶತಮಾನಕ್ಕೆ ಸೇರಿದ ರಾಜಶೇಖರ ಎಂಬ ಆಲಂಕಾರಿಕ. ಆದರೆ ಅವನಿಗೂ ಮುನ್ನ 'ಕವಿರಾಜಮಾರ್ಗ' ದಲ್ಲಿರುವ ಈ ಕವಿ ಪ್ರಭೇದಗಳನ್ನು ಕೊಂಚ ಗಮನವಿರಿಸಿ ನೋಡಿದರೆ, ಇವು ನಾಲ್ಕು ಬಗೆಯ ಕವಿಗಳನ್ನು ಕುರಿತ ಮಾತು ಎನ್ನುವುದಕ್ಕಿಂತ, ಒಟ್ಟು ಕೃತಿ ರಚನೆಯ ಮುಖ್ಯ ಲಕ್ಷಣಗಳನ್ನು ಕುರಿತಂತೆ ತೋರುತ್ತದೆ. ಮೊದಲನೆಯದು ನಿಜವಾದ ಕವಿಯ ಅಭಿವ್ಯಕ್ತಿಯ ಸ್ವರೂಪವಾದ 'ಅರ್ಥವ್ಯಕ್ತಿ' (clarity)ಯನ್ನೂ, ಎರಡನೆಯದು ಅಭಿವ್ಯಕ್ತಿಗೆ ಇರಬೇಕಾದ ಸಂಗ್ರಾಹಕ (Brevity) ಗುಣವನ್ನೂ, ಮೂರನೆಯದು ಕವಿಯ ಅಭಿವ್ಯಕ್ತಿಗೆ ದೊರೆಕೊಳ್ಳುವ ಛಂದೋಬಂಧ ಕೌಶಲ (Technical excellence)ವನ್ನೂ, ನಾಲ್ಕನೆಯದು ಮಹತ್ತಾದ ವಸ್ತು ನಿರ್ವಹಣೆಯಿಂದ ಮಾರ್ಗದರ್ಶಕವಾಗಬಲ್ಲ ಅಥವಾ ಪರಂಪರೆಯೊಂದನ್ನು ಕಟ್ಟಬಲ್ಲ ಮಹಾಕವಿಯ ಸಾಮರ್ಥ್ಯ(The epic genius)ವನ್ನು ಸೂಚಿಸುತ್ತದೆ ಎಂದು ತಿಳಿಯುವುದು ಸೂಕ್ತವಾದದ್ದು.

ಸಾಮಾನ್ಯವಾಗಿ ಸಂಸ್ಕೃತ ಕಾವ್ಯಲಕ್ಷಣಕಾರರು ಕಾವ್ಯಕ್ಕೂ ಇತರ ಲಲಿತ ಕಲೆಗಳಾದ ವಾಸ್ತು, ಶಿಲ್ಪ ಇತ್ಯಾದಿಗಳಿಗೂ ಇರುವ ಸಂಬಂಧವನ್ನು ಕುರಿತು ಚರ್ಚಿಸುವುದೇ ಇಲ್ಲ. ಚಿತ್ರಕಲೆಯನ್ನು ಕುರಿತು ಪ್ರಾಸಂಗಿಕವಾಗಿ ಎರಡು ಮಾತನ್ನು ಆಡಿದರೂ, ಚಿತ್ರಕಲೆ ವಸ್ತುವಿನ ಪ್ರತಿಕೃತಿ ಅಥವಾ ಅನುಕರಣವೇ ಹೊರತು ಅದರಲ್ಲಿ ಜೀವಭೂತವಾದ ರಸವುಂಟೆಂಬುದನ್ನು ಒಪ್ಪುವುದಿಲ್ಲ. ಆಗ ಕಾರಣವೇ ರಸಭಾವಶೂನ್ಯವಾದ ಕಾವ್ಯಕ್ಕೆ ಆನಂದವರ್ಧನನು 'ಚಿತ್ರಕಾವ್ಯ' (ಕನಿಷ್ಠತಮ ಗುಣವುಳ್ಳ ಕಾವ್ಯ) ಎಂದು ಕರೆದಿದ್ದಾನೆ. ೮ನೆಯ ಶತಮಾನದ ವಾಮನನು ಮಾತ್ರ, ಚಿತ್ರಪಟದಂತೆ ನಾಟಕವು ಸಕಲ ವಿಶೇಷಗಳನ್ನೂ ಒಳಗೊಳ್ಳುವುದೆಂದು ಹೇಳುತ್ತಾನೆ. ಈ ಹಿನ್ನೆಲೆಯಲ್ಲಿ ಮಾರ್ಗಕಾರನು ಕಾವ್ಯಕ್ಕೂ

ಚಿತ್ರಕ್ಕೂ ಇರುವ ಸಾಮ್ಯವನ್ನೂ ಸಂಬಂಧವನ್ನು ಕುರಿತು ಪ್ರಸ್ತಾಪಿಸಿರುವುದು ಒಂದು ವಿಶೇಷ ಸಂಗತಿಯಾಗಿದೆ. ೧-೧೫೦ನೇ ಪದ್ಯವು ಮುಖ್ಯವಾಗಿ 'ಕವಿರಾಜಮಾರ್ಗ'ವನ್ನು ಶ್ರೀವಿಜಯನಿಂದ ರಚಿತವಾದ ಅಪೂರ್ವ ಲಕ್ಷಣಗಳಿಂದ ಕೂಡಿರುವ ಒಂದು 'ಚಿತ್ರ' ಕೃತಿ ಎಂದು ಬಣ್ಣಿಸುತ್ತ, ಕಾವ್ಯಶಾಸ್ತ್ರ ಪ್ರಣೀತವಾದ ಎಲ್ಲ ಭೇದ-ವಿಭೇದಗಳ ವಿವರಣೆಯನ್ನೂ (=ವ್ಯಾವೃತ್ತಿ)ಯನ್ನು ಒಳಗೊಳ್ಳುತ್ತ, ಚಿತ್ರಕಾರನು ಯಾವ ರೀತಿಯಲ್ಲಿ ಚಿತ್ರದ ಶ್ರೇಷ್ಠವಾದ 'ಭಾಗ'ಗಳನ್ನು ವರ್ಣಕ್ರಮಾ ವೃತ್ತಿ'ಯಿಂದ ಸುವ್ಯಕ್ತ (ಪ್ರಕಟ)ವಾಗುವಂತೆ ಮಾಡುತ್ತಾನೆಯೊ ಹಾಗೆ ನಿರೂಪಿಸಿದ ಕೃತಿ ಇದು -ಎಂದು ಕವಿಗಣವು ಸ್ವೀಕರಿಸಬೇಕು ಎಂಬ ಕೋರಿಕೆಯನ್ನು ಮಂಡಿಸುತ್ತದೆ. ಈ ಪದ್ಯದಲ್ಲಿ ಮಾರ್ಗಕಾರನು ತನ್ನನ್ನು ಚಿತ್ರಕಾರನಿಗೂ ತನ್ನ ಕೃತಿಯನ್ನು ಚಿತ್ರವೆಂದೂ ಸಮೀಕರಿಸುತ್ತ, ಚಿತ್ರಕ್ಕೂ ಕಾವ್ಯಕ್ಕೂ ಸಮಾನವಾದ 'ವರ್ಣಕ್ರಮಾವೃತ್ತಿ'ಯ ಮೂಲಕ ತನ್ನ ಕೃತಿಯನ್ನು ಸುವ್ಯಕ್ತಗೊಳಿಸಿರುವುದಾಗಿ ಹೇಳಿಕೊಂಡಿದ್ದಾನೆ. ಚಿತ್ರದ ಸಂದರ್ಭದಲ್ಲಿ 'ವರ್ಣಕ್ರಮಾವೃತ್ತಿ' ಎಂದರೆ ಬಣ್ಣಗಳ ಬಳಕೆಯ ವಿಧಾನ ಎಂದೂ, ಕಾವ್ಯದ ಸಂದರ್ಭದಲ್ಲಿ 'ವರ್ಣಕ್ರಮಾವೃತ್ತಿ' ಎಂದರೆ, ಅಕ್ಷರ ಸಮೂಹವನ್ನುಳ್ಳ ಭಾಷೆಯ ಬಳಕೆ ಎಂದೂ ಇಲ್ಲಿ ತಿಳಿಯಬೇಕು. ಕಾವ್ಯಕ್ಕೂ ಚಿತ್ರಕ್ಕೂ ಇರುವ ಸಾಮ್ಯವನ್ನು ಕುರಿತಂತೆ ಕನ್ನಡದಲ್ಲಿ ಇದು ಮೊದಲ ಪ್ರಸ್ತಾಪವಾಗಿದೆ.

'ಕವಿರಾಜಮಾರ್ಗ' ಒಂದು ಶಾಸ್ತ್ರಕೃತಿಯಾಗಿ ವಿದ್ವಜ್ಜನರ ಪ್ರಶಂಸೆಗೆ ಪಾತ್ರವಾಗಿರುವುದರ ಜತೆಗೆ, ಅದು ಒಳಗೊಳ್ಳುವ ನಾಡು ನುಡಿ ಹಾಗೂ ಕನ್ನಡ ಜನವನ್ನು ಕುರಿತು ಅತ್ಯಂತ ಅಭಿಮಾನ ಪೂರ್ವಕವಾದ ಉಕ್ತಿಗಳಿಂದ ಪಂಡಿತರಲ್ಲದ ಸಾಮಾನ್ಯ ಜನದ ನೆನಪಿನಲ್ಲಿ ಉಳಿದುಕೊಂಡಿದೆ. ಕನ್ನಡಪರ ಕಾಳಜಿಯ ಭಾವುಕ ಹೃದಯಗಳಿಗಂತೂ ಮಾರ್ಗಕಾರನು ವರ್ಣಿಸುವ ಈ ಸಂಗತಿಗಳು, ವಿಷಾದ, ಅಭಿಮಾನ ಹಾಗೂ ಸಂಭ್ರಮಗಳನ್ನು ಏಕಕಾಲಕ್ಕೆ ಪ್ರೇರಿಸಬಲ್ಲವು. ಮೊದಲ ಪರಿಚ್ಛೇದದ 'ಕಾವೇರಿಯಿಂದಮಾ ಗೋದಾವರಿವರಮಿರ್ದ' (೧-೩೬) ಎಂಬ ಕನ್ನಡ ನಾಡಿನ ಭೌಗೋಳಿಕ ಮೇರೆಗಳನ್ನು ಕುರಿತ ಉಲ್ಲೇಖದಿಂದ ಮೊದಲುಗೊಂಡು, ಆ ನಾಡಿನ ಜನದ 'ಕಾವ್ಯಪ್ರಯೋಗ ಪರಿಣತಮತಿ'ಯನ್ನೂ, 'ಅವರ ವಿವೇಕ ಹಾಗೂ ವಿಮರ್ಶನ ಪ್ರಜ್ಞೆಯನ್ನೂ ಪ್ರಶಂಸಿಸುವ, ಈ ಐದು ಪದ್ಯಗಳ (೧-೩೬-೪೦) ಜತೆಗೆ, ಎರಡನೆಯ ಪರಿಚ್ಛೇದ ಲಕ್ಷ್ಯ ಪದ್ಯದೊಳಗೆ (೨-೨೮) ಬರುವ ಕನ್ನಡ ಜನದ ಶೌರ್ಯ ಸಾಹಸಗಳನ್ನು ಬಾಯ್ತುಂಬ ಹೊಗಳುವ 'ಸುಭಟರ್ಕಳ್, ಸುಪ್ರಭುಗಳ್, ಚೆಲ್ವರ್ಕಳ್...' ಎಂಬ ಪದ್ಯವನ್ನೂ ಸೇರಿಸಿಕೊಂಡು ನೋಡಿದರೆ, ಒಟ್ಟಾರೆಯಾಗಿ ಈ ನಾಡು-ನುಡಿ ಹಾಗೂ ಜನದ ಚಿತ್ರ ಒಂದು ಚೌಕಟ್ಟನ್ನು ಪಡೆದುಕೊಳ್ಳುತ್ತದೆ. ಜತೆಗೆ ಕನ್ನಡ ಸಂಸ್ಕೃತಿಯ ಮುಖ್ಯ ಲಕ್ಷಣಗಳನ್ನು ಎತ್ತಿ ಹಿಡಿಯುವ ಇನ್ನೂ ಅನೇಕ ಸಂಗತಿಗಳೂ ನಡುನಡುವೆ ಹರಡಿಕೊಂಡಿವೆ. ನಿದರ್ಶನಕ್ಕೆ 'ಉದಾತ್ತ'ವೆಂಬ ಅಲಂಕಾರಕ್ಕೆ ಮಾರ್ಗಕಾರನಿಂದಲೇ ರಚಿತವಾದ ಎಂಟು ಪದ್ಯಗಳನ್ನು (೩-೧೭೪ ರಿಂದ ೧೮೧) ನೋಡಬಹುದು. ಇದಲ್ಲದೆ ಮೂರನೆಯ ಪರಿಚ್ಛೇದವಲ್ಲಿ ೨೧೯ನೆಯ ಪದ್ಯದಿಂದ

೨೩೧ನೆಯ ಪದ್ಯದವರೆಗೆ ನೃಪತುಂಗನ ಸಭಾಸದನಾದ ಕವಿಯನ್ನು (ಅಂದರೆ ಕವಿರಾಜಮಾರ್ಗದ ಕರ್ತೃವನ್ನು) ಅತ್ಯಂತ ಉಜ್ವಲವಾಗಿ ವರ್ಣಿಸುವ ಭಾಗ ಒಂದಿದೆ. ವಾಸ್ತವವಾಗಿ ಈ ಎಲ್ಲ ಸಂಗತಿಗಳಿಗೂ ಅಲಂಕಾರ ಶಾಸ್ತ್ರಕ್ಕೂ ಏನು ಸಂಬಂಧ ಎನ್ನಿಸದೆ ಇರದು. ಆದರೆ 'ಕವಿರಾಜಮಾರ್ಗ'ವು ಈ ಕಾರಣದಿಂದಲೇ ಸಂಸ್ಕೃತದ ಅಲಂಕಾರ ಶಾಸ್ತ್ರದ ಚೌಕಟ್ಟನ್ನು ಉಲ್ಲಂಘಿಸುವುದರ ಮೂಲಕ, ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡಿದೆ ಎಂದು ವ್ಯಾಖ್ಯಾನಿಸಬಹುದು. ನಿಜಾಂಶವೇನೆಂದರೆ, 'ಕವಿರಾಜಮಾರ್ಗ' ಕೇವಲ ಅಲಂಕಾರ ಶಾಸ್ತ್ರವಲ್ಲ.

ಈಗ ಪ್ರಸ್ತಾಪಿಸಿದ ಸಂಗತಿಗಳು ಸಾಂಸ್ಕೃತಿಕವಾಗಿ ಮಹತ್ವದವು ಎಂಬುದೇನೋ ನಿಜವೆ. ಆದರೆ ಕನ್ನಡ ನಾಡು-ನುಡಿ-ಜನರನ್ನು ಕುರಿತು ವರ್ಣಿಸುವ ಈ ಸಂದರ್ಭ ಮತ್ತು ನೃಪತುಂಗನ ಸಭಾಸದನಾದ ಕವಿಯನ್ನು ಅವನ ಆಸ್ಥಾನದವರು ಮುಕ್ತಕಂಠದಿಂದ ಪ್ರಶಂಸಿಸುವ ಭಾಗ ಈ ಎರಡೂ, ಈ ಕೃತಿಯೊಂದಿಗೆ ಅಂಥ ಸಾವಯವತೆಯನ್ನು ಪಡೆದುಕೊಂಡಂತೆ ತೋರುವುದಿಲ್ಲ. ಯಾಕೆಂದರೆ ಮೊದಲ ಪರಿಚ್ಛೇದದ ೧ ರಿಂದ ೩೫ನೆಯ ಪದ್ಯದವರೆಗೆ ನಿರೂಪಿತವಾಗುತ್ತಿರುವ ಕವಿ-ಕಾವ್ಯ ಚಿಂತನೆ, ಬೆದಂಡೆ-ಚತ್ತಾಣಗಳೆಂಬ ಕಾವ್ಯಪ್ರಕಾರಗಳನ್ನು ವಿವರಿಸುವ ಸಂದರ್ಭದಲ್ಲಿ, ಅಲ್ಲಿಗೆ ಯಾವ ರೀತಿಯಲ್ಲಿಯೂ ಸಂಬಂಧಿಸದ ಕನ್ನಡ ನಾಡು ನುಡಿ-ಜನವನ್ನು ಕುರಿತು ಐದು ಪದ್ಯಗಳು ಒಂದು ಬಗೆಯ ಅತಿಕ್ರಮ ಪ್ರವೇಶ ಮಾಡಿದಂತಾಗಿದೆ. ಮತ್ತೆ ಈ ಕುರಿತ ಮೂರನೆಯ ಪರಿಚ್ಛೇದದಲ್ಲಿ ಮಹಾಕಾವ್ಯ ಲಕ್ಷಣವನ್ನು ಕುರಿತ ನಿರೂಪಣೆ (೩-೨೧೦-೨೧೮)ಯ ಜತೆಜತೆಗೇ ೧೩ ವೃತ್ತಗಳ ಪ್ರಮಾಣದಲ್ಲಿ ನೃಪತುಂಗನ ಸಭಾಸದನಾದ ಕವಿಯ ವರ್ಣನೆ ಬಂದು, ಥಟ್ಟನೆ 'ಹೆಚ್ಚಿನ ಪ್ರಾಸವಿಚಾರ' ಪ್ರಾರಂಭವಾಗುತ್ತದೆ. ಈ ಎರಡೂ ತಮಗೆ ತಾವೇ ಪ್ರತ್ಯೇಕವಾಗಿ ಮೌಲಿಕಾಂಶವುಳ್ಳ ಭಾಗವೇ ಆಗಿದ್ದರೂ, ಈ ಕೃತಿಯೊಂದಿಗೆ ಅವಿನಾಸಂಬಂಧವನ್ನು ಪಡೆದುಕೊಂಡಿಲ್ಲವೆಂದೇ ಹೇಳಬೇಕಾಗುತ್ತದೆ.

ಈ ಎರಡರಲ್ಲಿ ಮೊದಲನೆಯದು, ಅಂದರೆ ಕನ್ನಡ ಜನದ ಗುಣ-ಸ್ವಭಾವ-ಚತುರತೆ-ವಿದ್ವತ್ತು ಇತ್ಯಾದಿಗಳನ್ನು ವರ್ಣಿಸಿರುವ ಕ್ರಮ, ಕವಿರಾಜಮಾರ್ಗಕಾರನು ತನ್ನ ಸಮಕಾಲೀನತೆಯಲ್ಲಿ ಕನ್ನಡ ಭಾಷೆಗೆ ಒದಗಿದ 'ಅವಸ್ಥೆ'ಯನ್ನು ಕುರಿತ ಪ್ರಸ್ತಾಪಗಳ ಹಿನ್ನೆಲೆಯಲ್ಲಿ ವಿರೋಧಾಭಾಸದಂತೆಯೂ ತೋರುತ್ತದೆ. ಯಾಕೆಂದರೆ ಕನ್ನಡ ಜನ ಕುರಿತೋದದೆಯೂ ಕಾವ್ಯ ಪ್ರಯೋಗ ಪರಿಣತಮತಿಗಳಾಗಿದ್ದರು; ಅವರು ಸಹಜವಾಗಿಯೇ ಚದುರರು; ಕೃತಿಯಲ್ಲಿ ಅವಗುಣದ ತಾಣವನ್ನು ಗುರುತಿಸಿ, ಕವಿಯನ್ನೆ ತರಾಟೆಗೆ ತೆಗೆದುಕೊಳ್ಳಬಲ್ಲವರಾಗಿದ್ದರು. ಅಷ್ಟೇನೂ ಪರಿಣತರಲ್ಲದವರೂ ತಮ್ಮ ನುಡಿಗಳಲ್ಲಿ ಜಾಣರೂ, ಕಿರುಮಕ್ಕಳೂ ಮಹಾಮೂಕರೂ ವಿವೇಕವನ್ನು ಬುದ್ಧಿಯ ಮಾತುಗಳನ್ನು ಹೇಳಬಲ್ಲವಾಗಿದ್ದರು: ಇಷ್ಟೆಲ್ಲ ಗುಣಲಕ್ಷಣಗಳುಳ್ಳ ಜನವಿದ್ದ ಪರಿಸರದಲ್ಲಿ 'ಆಗಮಬಲ ಹೀನ'ರಾದ ಕವಿಗಳಿಂದ ಪ್ರಸ್ತುತ ಕಾವ್ಯ ಪರಂಪರೆ ಯಾಕೆ ಇಂಥ ಸ್ಥಗಿತಗೊಂಡ ಸ್ಥಿತಿಗೆ

ಬಂದಿತ್ತು? ಯಾಕೆ ವಾಸುಕಿಯೂ ಬೇಸರಪಡುವಷ್ಟು ದೋಷದಿಂದ ಕೂಡಿತ್ತು ಅಂದಿನ ದೇಸಿ? ಕನ್ನಡ ಜನದ ವಿವೇಕ ಇತ್ಯಾದಿಗಳನ್ನು ಪ್ರಶಂಸೆ ಮಾಡುತ್ತಿರುವಂತೆಯೇ, ಅದರ ಬೆನ್ನ ಹಿಂದೆಯೇ 'ಅವರಿವರನ್ನು ಕೇಳಿಯಾದರೂ ಕಾವ್ಯಲಕ್ಷಣವನ್ನು ಹೇಳೋಣವೆಂದರೆ, ಸಂಸ್ಕೃತ ಪ್ರಾಕೃತಗಳಲ್ಲಿಯಂತೆ ಲಕ್ಷಣವನ್ನು ಚೆನ್ನಾಗಿ ಬಲ್ಲವರು ಕನ್ನಡದಲ್ಲಿ ಇರಲಿಲ್ಲ. ಕನ್ನಡದ ಓಜರು ಅವರಷ್ಟು ಬಲ್ಲಿದವರಾಗಿರಲಿಲ್ಲ' (೧-೪೨) ಎಂದು ಹೇಳುವುದು ವಿರೋಧಾಭಾಸವಲ್ಲವೆ?

ತನ್ನ ಕಾಲದ ಕನ್ನಡಿಗರನ್ನು ಕುರಿತು ಮಾರ್ಗಕಾರನು ಆಡುವ ಪ್ರೀತಿ-ವಿಶ್ವಾಸ-ಅಭಿಮಾನದ ಪ್ರಸಂಸೆಯ ಮಾತುಗಳು, ಅಂದಿನ ಕಾಲದ ವಾಸ್ತವತೆಯನ್ನು ಪ್ರತಿನಿಧಿಸುತ್ತವೆ ಎಂದು ಭಾವಿಸುವುದಕ್ಕಿಂತ, ಅವು ಎಲ್ಲ ಕಾಲದಲ್ಲೂ ಕನ್ನಡಿಗರು ಹೇಗೆ ಇರಬೇಕೆಂದು ಅವನು ಕಲ್ಪಿಸಿಕೊಂಡ ಆಶಯವನ್ನು ಪ್ರಕಟಿಸುತ್ತವೆ ಎಂದು ತಿಳಿದುಕೊಳ್ಳುವುದೇ ಸರಿಯಾದದ್ದು. ಇಂಥ ಒಂದು ಆಶಯವನ್ನು ಮಂಡಿಸಿದ ಮನಸ್ಸು ನಿಜವಾಗಿಯೂ ದೊಡ್ಡದು.

ಟಿಪ್ಪಣಿಗಳು

೧. ವಿದ್ವಾಂಸರಾದ ಪಿ.ವಿ.ಕಾಣೆ, ಎಸ್ .ಕೆ ಡೇ, ಕೃಷ್ಣಚೈತನ್ಯ - ಅವರು ತಮ್ಮ ಕೃತಿಗಳಲ್ಲಿ 'Sanskrit Poetics' ಎಂಬರ್ಥದ ಶೀರ್ಷಿಕೆಗಳನ್ನು ಬಳಸಿದರೆ, ಡಾ.ವಿ.ರಾಘವನ್, ಡಾ.ಕೆ.ಕೃಷ್ಣಮೂರ್ತಿಯಂಥವರು 'Indian Poetics' ಎಂಬರ್ಥದ ಶೀರ್ಷಿಕೆಯನ್ನು ಬಳಸಿದ್ದಾರೆ. ಕೆಲವು ಸಲ ಒಬ್ಬರೆ ಲೇಖಕರು ತಮ್ಮ ಬೇರೆ ಬೇರೆ ಕೃತಿಗಳಿಗೆ, ಈ ಎರಡನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಬಳಸಿದ್ದಾರೆ.

೨. 'ಕವಿರಾಜಮಾರ್ಗ' ಎಂಬ ಹೆಸರು ಇಡೀ ಗ್ರಂಥದಲ್ಲಿ ಒಮ್ಮೆಯೂ ಬಂದಿಲ್ಲ. ಹಸ್ತಪ್ರತಿಗಳ ಶೀರ್ಷಿಕೆ ಹಾಗೂ ಗ್ರಂಥಾಂತ್ಯದ ಪುಷ್ಪಿಕೆಗಳಲ್ಲಿ ಮಾತ್ರ ಇದು ಕಾಣಬರುತ್ತದೆ : ಕೆ. ಕೃಷ್ಣಮೂರ್ತಿ, 'ಕವಿರಾಜಮಾರ್ಗ' (೧೯೮೩) ಪೀಠಿಕೆ, ಪು.೧೫

೩. 'ಮಾರ್ಗ' 'ದೇಸಿ' - ಎಂಬ ಈ ಪದಗಳು ಸಾಹಿತ್ಯ ಹಾಗೂ ಇನ್ನಿತರ ಕಲೆಗಳ ಸಂದರ್ಭದಲ್ಲಿ ಬಹುಬಗೆಯ ವ್ಯಾಖ್ಯಾನವನ್ನು ಪಡೆದುಕೊಂಡಿವೆ. ಕನ್ನಡದ ಬರವಣಿಗೆಯ ಕ್ರಿಯೆ ಎಂಬ ಅರ್ಥದಲ್ಲಿ ಬಳಕೆಯಾಗಿರುವ ಈ ಪದದ ಅರ್ಥವು, ಸಂಸ್ಕೃತ ಅಲಂಕಾರಶಾಸ್ತ್ರದ 'ಮಾರ್ಗ' ಎಂಬ ಪದದಿಂದ ಹಾಗೂ 'ಕವಿರಾಜಮಾರ್ಗ' ಎಂಬ ಪದಸಮುಚ್ಚಯದೊಳಗಿನ 'ಮಾರ್ಗ' ಪದವು ಸೂಚಿಸುವ ಅರ್ಥದಿಂದ ಬೇರೆಯಾಗಿದೆ. ಸಂಸ್ಕೃತದ ಸಾಹಚರ್ಯದಿಂದ ಕನ್ನಡದಲ್ಲಿ ರೂಪುಗೊಳ್ಳುವ ತಕ್ಕಷ್ಟು ಪ್ರೌಢವೂ ಗಂಭೀರವೂ ಆದ ಬರವಣಿಗೆಯ ಕ್ರಮವನ್ನು 'ಮಾರ್ಗ' ಎಂದು ಹೇಳಬಹುದು. ದೇಸಿ ಎಂದರೆ ಸಹಜತೆ, ಚೆಲುವು ಎಂಬ ಅರ್ಥಗಳಿರುವ ಹಾಗೆಯೆ, ಪ್ರಾದೇಶಿಕ ವೈಶಿಷ್ಟ್ಯತೆಯ ಸೊಗಡನ್ನುಳ್ಳ ಬರವಣಿಗೆ ಎಂಬ ಅರ್ಥವಿದೆ. 'ಮಾರ್ಗ' 'ದೇಸಿ'ಗಳು ಕನ್ನಡದ ಸಂದರ್ಭದಲ್ಲಿ ಬರೆವಣಿಗೆಯ ಎರಡು ಕ್ರಮಗಳನ್ನು ಮಾತ್ರವಲ್ಲ, ಎರಡು ಕಾವ್ಯ ಪ್ರಭೇದಗಳನ್ನೂ ಸೂಚಿಸುತ್ತವೆ.

೪. ಬಗೆ ಪೊಸತಪ್ಪುದಾಗಿ ಮೃದುಪದಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯ ಬಂಧಮೊ
ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊರೆಯಿಂ ಬಳಲ್ವು ತುಂ
ಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆ ವೋಲ್
(ವಿಕ್ರಮಾರ್ಜುನ ವಿಜಯಂ ೧-೮)

ಕೃತಿಸೂಚಿ

೧. ಶ್ರೀ ವಿಜಯಕೃತ ಕವಿರಾಜಮಾರ್ಗ: (೧೯೬೮) ಸಂ.ಎಂ.ವಿ.ಸೀತಾರಾಮಯ್ಯ, ಕರ್ನಾಟಕ ಸಂಘ, ಸರ್ಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಬೆಂಗಳೂರು

೨. ನೃಪತುಂಗ ದೇವಾನುಮತಮಪ್ಪ ಶ್ರೀವಿಜಯ ಪ್ರಭೂತ ಕವಿರಾಜಮಾರ್ಗ : (೧೯೮೩) ಡಾ.ಕೆ.ಕೃಷ್ಣಮೂರ್ತಿ, ಐಬಿಎಚ್ ಪ್ರಕಾಶನ, ಬೆಂಗಳೂರು

೩. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ : ಡಾ.ಎಂ.ಎಂ.ಕಲಬುರ್ಗಿ (೧೯೭೩), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ : ಸಂಪುಟ-೧ (೧೯೭೪), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೫. ಕನ್ನಡದಲ್ಲಿ ಕಾವ್ಯತತ್ತ್ವ: (೧೯೬೪) ಡಾ.ಕೆ.ಕೃಷ್ಣಮೂರ್ತಿ

೬. ಕವಿರಾಜಮಾರ್ಗ(ಸಂ): (೧೯೭೩) ವಿ.ಸೀತಾರಾಮಯ್ಯ, ಐಬಿಎಚ್ ಪ್ರಕಾಶನ, ಬೆಂಗಳೂರು

೭. ಕನ್ನಡ ಕವಿಗಳ ಕಾವ್ಯಕಲ್ಪನೆ : (೧೯೮೯) ಜಿ.ಎಸ್.ಶಿವರುದ್ರಪ್ಪ

೧೦

ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರನ ಸಂವೇದನೆಯ ಸ್ವರೂಪ

ಷ. ಶೆಟ್ಟರ್

೧. 'ಕಾವೇರಿಯಿಂದಮಾ ಗೋದಾವರಿವರಮಿರ್ದನಾಡು' ಎಂಬ ಮಾತು ಕನ್ನಡ ನಕಾಶೆಯನ್ನು ರಚಿಸಿಟ್ಟಿದೆ. ಅದಕ್ಕೆ ಹಿಂದೆ, ಯಾವುದೇ ವಾಙ್ಮಯದಲ್ಲು-ಸಂಸ್ಕೃತ ವಾಙ್ಮಯದಲ್ಲು-ಇಂಥ ನಕಾಶೆ ನಿರ್ದೇಶನದ ಉಲ್ಲೇಖಗಳು ಪ್ರಾಯಶಃ ಕಾಣುವುದಿಲ್ಲ. ಹೀಗೆ ನದಿಗಳ ಗೆರೆ ಹೊಡೆದು ಒಳರಾಜ್ಯವೊಂದರ ನಕಾಶೆಯನ್ನು ಸಾಕಷ್ಟು ಖಚಿತವಾಗಿ ನಿರ್ದೇಶಿಸಿರುವುದು ಇದಕ್ಕೆ ಮೊದಲು ಪ್ರಾಯಶಃ ಇನ್ನೆಲ್ಲೂ ಕಾಣಸಿಗದು.'

೨. 'ಕವಿರಾಜಮಾರ್ಗ'ದಲ್ಲಿ 'ಕಾವೇರಿಯಿಂದ ಗೋದಾವರಿಯವರೆಗೆ' ಎಂಬ ಮಾತು ಬರುತ್ತಿದ್ದು, ಇದು ಮೊಟ್ಟಮೊದಲಿನದು ಅಂತ... ಹೇಳಿದರು. ಆದರೆ ತಮಿಳು 'ತೊಲ್ಕಾಪ್ಪಿಯಂ'ದೊಳಗೆ ತಮಿಳುನಾಡಿನ ವ್ಯಾಪ್ತಿಯನ್ನು ಹೇಳುವಾಗ ಇಂತಹ ಭೌಗೋಳಿಕ ವ್ಯಾಪ್ತಿಯ ಸೂಚನೆ ಇದೆ. ಆದ್ದರಿಂದ... ಇದರ ಬೇರುಗಳು ಸಂಸ್ಕೃತದ ಕಡೆಗೆ ಹೋಗದೆ ದ್ರಾವಿಡ ಕಡೆಗೆ ಹೋಗ್ತವೆ. ಆ ದಿಶೆಯೊಳಗೆ ನಾವು ವಿಚಾರ ಮಾಡಬೇಕು ಅಂತ ನನಗೆ ಅನಿಸ್ತಾ ಇದೆ.'

ಅ. 'ಆದ್ರೆ ಈ ದ್ರಾವಿಡ ಆರ್ಯ ಇದೆಯಲ್ಲ ಈ ಪರಿಕಲ್ಪನೆ ಬಗ್ಗೆ ಮೊದಲನೆಯದಾಗಿ ನನಗೆ ಕೆಲವು ಸಂದೇಹಗಳಿವೆ... ಆದ್ದರಿಂದ ಈ ದ್ರಾವಿಡ ಅನ್ನೋ ಕಲ್ಪನೆ ಇದೆಯಲ್ಲ, ಇದು ಬಹಳ ತಪ್ಪು ಅಂತ ಕಾಣ್ತದೆ.'

ಆ. 'ಆದರೆ ನನಗೆ ದ್ರಾವಿಡ ಪರಂಪರೆಗೇ ಒಂದು ಥಿಂಕಿಂಗ್ ಅದೆ ಅಂತ ಕಾಣಿಸ್ತದೆ.'

ಇ. ''ಕವಿರಾಜಮಾರ್ಗ''ವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ... ಹೇಳಿದರು - ಸಂಸ್ಕೃತದ ದೃಷ್ಟಿಯಿಂದ ಅದನ್ನು ಅಧ್ಯಯನ ಮಾಡಿರುವುದು ಹೆಚ್ಚಾಗಿದೆಯೇ ಹೊರತು ಇನ್ನು ದಕ್ಷಿಣದ ಇತರೆ ಪ್ರಾಂತೀಯವಾಗಿರುವಂತಹ ಭಾಷೆಗಳಲ್ಲಿ ಬೆಳೆದಿರುವಂತಹ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನ ಹೆಚ್ಚಾಗಿಲ್ಲ. ಇದು ನಿಜ.'

'ಕವಿರಾಜಮಾರ್ಗ' ವೇದಿಕೆಯ ಮೇಲೆ ನಡೆದ ಮೂವರು ಪಂಡಿತರ ಈ ಸಂವಾದವು ಆರಂಭ ಕಾಲದ ಕನ್ನಡ ಜಗತ್ತಿನೊಡನೆ ಇದ್ದ ದ್ರಾವಿಡ ಸಂಬಂಧವನ್ನು ತಿಳಿದುಕೊಳ್ಳುವ ದೃಷ್ಟಿಯಲ್ಲಿ ಅತಿ ಮಹತ್ವದ್ದಾಗಿದೆ.[೧] ದುರದೃಷ್ಟವಶಾತ್ ಈ ಚರ್ಚೆ ನೇರವಾಗಿ ಮುಂದುವರಿಯದೆ, ಬೀಜದಲ್ಲಿಯೇ ಕವಲೊಡೆದು, ದ್ರಾವಿಡ-ಆರ್ಯ, ದಕ್ಷಿಣ-ಉತ್ತರ ಮುಂತಾದ ಪರಂಪರೆಯೆಡೆಗೆ ಬಸಿದು ಬತ್ತಿಬಿಟ್ಟಿತು. ಆದರೆ ಈ ಪ್ರಶ್ನೆ ನಮ್ಮನ್ನಿಂದು ಅತಿಯಾಗಿ ಕಾಡುತ್ತಿದ್ದು ಇದಕ್ಕೆ ಉತ್ತರ ಹುಡುಕುವ ಒತ್ತಡ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲಿದೆ. ಕಳೆದ ಶತಮಾನದಲ್ಲಿ ಇದು ಎಂದೋ ಬರಬಹುದಿತ್ತು. ಹಾಗೇನಾದರೂ ಬಂದಿದ್ದರೆ ತಮಿಳನ್ನೂ ಕನ್ನಡವನ್ನೂ ಚೆನ್ನಾಗಿ ಜೀರ್ಣಿಸಿಕೊಂಡಿದ್ದ ಅಂದಿನ ಪಂಡಿತರಲ್ಲಿ ಯಾರೊಬ್ಬರಾದರು ಇದಕ್ಕೆ ತಕ್ಕ ಉತ್ತರವನ್ನು ಹುಡುಕಿಕೊಡುತ್ತಿದ್ದರು. ಆದರೆ ಇಪ್ಪತ್ತನೆಯ ಶತಮಾನದ ಸಂಶೋಧನಾ 'ಧರ್ಮ'ಕ್ಕನುಗುಣವಾಗಿ, ಅಂದು ಮುಖ್ಯವೆನಿಸಿದ್ದ ಸಮಸ್ಯೆ ಗಳನ್ನು ಬಗೆಹರಿಸಿಕೊಳ್ಳಲು ತಮ್ಮೆಲ್ಲ ಶಕ್ತಿಯನ್ನು ಅವರು ವಿನಿಯೋಗಿಸಿ ಕೊಂಡರೆಂದು ಕಾಣುವುದು. ಅವರನ್ನು ಅಂದು ಕಾಡಿದ ಪ್ರಶ್ನೆಗಳಲ್ಲಿ ಪ್ರಮುಖವಾದವುಗಳು.

೧. ಕವಿರಾಜಮಾರ್ಗದ ಕರ್ತೃ ಯಾರು?
೨. ಅವನ ಕುಲ-ಜಾತಿ-ಮತಗಳಾವುವು?
೩. ಅವನು ಸಂಸ್ಕೃತ ಲಕ್ಷಣಕಾರರಿಂದ ಎಷ್ಟೆಷ್ಟು ಎರವಲು ಪಡೆದು, ಹೇಗೆ ಅವನ್ನು ಅಳವಡಿಸಿಕೊಂಡನು? ಎಂಬುವು.

ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದರಲ್ಲಿಯೇ ಒಂದು ಶತಮಾನ ಉರುಳಿ ಹೋಯಿತೇನೋ ನಿಜ, ಆದರೆ ಅದೆಲ್ಲಾ ನಿರರ್ಥಕ ಶ್ರಮವೆನ್ನಲಾಗದು. ಅವರ ಪ್ರಯತ್ನ ದಿಂದಾಗಿ ಕೆಲವು ನಿರ್ಣಯಗಳಿಗೆ ಬರಲು ಸಾಧ್ಯವಾಗಿರುವುದಲ್ಲದೆ ಅಂತಹ ಪ್ರಶ್ನೆಗಳ ಬಗ್ಗೆ ಮುಂದಿನ ತಲೆಮಾರಿನವರು ಹೆಚ್ಚು ತಲೆಕೆಡಿಸಿಕೊಳ್ಳಬೇಕಾದ ಆವಶ್ಯಕತೆ ಇಲ್ಲದಂತೆ ಮಾಡಿದೆ. ಈ ಮೂರು ಪ್ರಶ್ನೆಗಳಲ್ಲಿ ಕೊನೆಯದು ಹೆಚ್ಚು ಮಹತ್ವದ್ದಾದುದರಿಂದ, ಈ ಬಗ್ಗೆ ಅವರು ಕೈಕೊಂಡ ಕೆಲವು ನಿರ್ಣಯಗಳನ್ನಿಲ್ಲಿ ನೆಲೆಯಬಹುದು. ಅವು ಇಂತಿವೆ:

೧. ಮಾರ್ಗಕಾರನು ಸಂಸ್ಕೃತ ಲಕ್ಷಣಕಾರರಿಂದ, ಅದರಲ್ಲೂ ಭಾಮಹ ಮತ್ತು ದಂಡಿ ಯಿಂದ ವಿಶೇಷ ಪ್ರೋತ್ಸಾಹ ಪಡೆದುಕೊಂಡಿದ್ದನು ಎನ್ನುವುದರಲ್ಲಿ ಅನುಮಾನ ವಿಲ್ಲ. ಈ ಇಬ್ಬರಲ್ಲಿ ದೂರದ ಕಾಶ್ಮೀರದ ಭಾಮಹನಿಗಿಂತ ಸಮೀಪದ ದ್ರಾವಿಡ ದೇಶದ ದಂಡಿಯತ್ತ ಅವನು ಹೆಚ್ಚು ಒಲವು ತೋರಿದನು. ದೋಷ ಪ್ರಕರಣದಲ್ಲಿ ಭಾಮಹನಿಗೆ ಸಂಖ್ಯಾ ದೃಷ್ಟಿಯಲ್ಲಿ ಸನಿಹವೆನಿಸಿದರೆ, ಲಕ್ಷಣ ದೃಷ್ಟಿಯಲ್ಲಿ ಅವನು ದಂಡಿಗೆ ಅತಿ ಸನಿಹ ನಾಗಿರುವನು.[೨]
೨. ಶಬ್ದಾಲಂಕಾರದಲ್ಲಿ ದಂಡಿ-ಭಾಮಹರು ಲಕ್ಷ್ಯ-ಲಕ್ಷಣಗಳನ್ನು ನಿರೂಪಿಸಿದರೆ ಮಾರ್ಗಕಾರನು ಲಕ್ಷ್ಯಗಳನ್ನು ನಿರ್ದೇಶಿಸುವುದರಲ್ಲಿ ತೃಪ್ತಿ ಪಡೆದು, ಒಂದು ಬಗೆಯಲ್ಲಿ ಅವರಿಗಿಂತ ಭಿನ್ನವೆನಿಸಿದನು.

೩. ಅರ್ಥಾಲಂಕಾರ ಕ್ಷೇತ್ರದಲ್ಲಿ ಭಾಮಹ(೩೨) ಮತ್ತು ದಂಡಿ(೩೫)ಯರಿಗಿಂತ ಮಾರ್ಗಕಾರ ಒಂದು ಹೆಜ್ಜೆ ಮುಂದಿಟ್ಟನು(೩೬). ಈ ಮೂವರ ಪಥಗಳು ಹೆಚ್ಚೂ ಕಡಿಮೆ ಸಮಾನ ರೇಖೆಯಲ್ಲಿ ಮುಂದುವರಿದರೂ ಅವು ಪ್ರತ್ಯೇಕವಾದ ಮೂರು ಕಾಲ್ದಾರಿಗಳಾಗಿದ್ದ ವೆಂಬುದು ಗಮನಾರ್ಹ. ಅವರ ಅಲಂಕಾರ ಶೀರ್ಷಿಕೆಗಳೂ ಅವರವರ ವೈಯಕ್ತಿಕ ಮುದ್ರೆಯನ್ನು ಪ್ರದರ್ಶಿಸುತ್ತವೆ.

೪. ಉತ್ತರ ಮತ್ತು ದಕ್ಷಿಣ ಮಾರ್ಗಭೇದಗಳನ್ನು ಗುರುತಿಸುವುದಲ್ಲದೆ ಅವುಗಳಿಗೆ ಲಕ್ಷ್ಯಗಳನ್ನು ಒದಗಿಸುವಲ್ಲಿ ಕೂಡಾ ಹೊಸದೆನ್ನುವ ಬಗೆಯಲ್ಲಿ ಮಾರ್ಗಕಾರನು ದಂಡಿಯ ಗೌಡೀ (ಪೌರ್ವಾತ್ಯ) ಮತ್ತು ವೈದರ್ಭೀ(ದಾಕ್ಷಿಣಾತ್ಯ)ಗಳನ್ನು ಅನುಕರಿಸಿರು ವನೆನ್ನುವುದನ್ನು ಅನುಮಾನಿಸುವುದಕ್ಕೆ ಆಸ್ಪದವಿಲ್ಲ. ಈ ಎಲ್ಲ ಕಾರಣಗಳಿಂದಾಗಿ- 'ಕವಿರಾಜಮಾರ್ಗ'ವೆಂಬ ಲಕ್ಷಣಗ್ರಂಥವು ಸಂಸ್ಕೃತ ಸಾಹಿತ್ಯ ಹಾಗೂ ಕಾವ್ಯ ಮೀಮಾಂಸೆಯ ತಿಳಿವಳಿಕೆಯಿಂದ ರಚಿತವಾದ ಕೃತಿ ಎಂಬುದನ್ನು ನೆನೆದರೆ, ಕನ್ನಡ ಸಾಹಿತ್ಯದ ಮೊದಲ ಕಾಲ, ದಟ್ಟವಾದ ಸಂಸ್ಕೃತದ ಪ್ರಭಾವಕ್ಕೆ ಒಳಗಾದ ಕಾಲವಾಗಿತ್ತೆಂಬುದು ಸ್ಪಷ್ಟವಾಗುತ್ತದೆ, ಎಂಬುದು ಒಟ್ಟಾರೆ ಮಾಡಿದ ನಿರ್ಣಯ.[೩]

ದ್ರಾವಿಡ ಸಂಬಂಧದ ಪ್ರಶ್ನೆಗಳು

ಇಪ್ಪತ್ತನೆಯ ಶತಮಾನದ ಹಿಂಬಡದಂಚಿನಲ್ಲೆಲ್ಲೂ ಕಾಣದ, ಆದರೆ ಈ ಶತಮಾನದ ಮುಂಗುಷ್ಟಕ್ಕಂಟಿಕೊಂಡೇ ಬಂದ ಹೊಸ ಪ್ರಶ್ನೆ: 'ಕವಿರಾಜಮಾರ್ಗ'ದ ದ್ರಾವಿಡ ಬೇರು ಗಳಾವುವು? ಎಂಬುದು.[೪]

ಈ ಪ್ರಶ್ನೆಯನ್ನೆತ್ತಿಕೊಂಡು ಅದಕ್ಕೆ ಉತ್ತರ ಹುಡುಕುವವನಿಗೆ ಬೇಕಾದ ಆವಶ್ಯಕ ಅರ್ಹತೆಗಳಲ್ಲಿ ಒಂದು, ತಮಿಳು ಮತ್ತು ಕಾವ್ಯಪರಂಪರೆಯ ಜ್ಞಾನ; ಮತ್ತೊಂದು, ಭಾರತೀಯ (ದೇಸಿ-ಮಾರ್ಗಿ) ಕಾವ್ಯಮೀಮಾಂಸೆಯ ಅರಿವು. ಇದರಷ್ಟೇ ಮುಖ್ಯವಾದದ್ದು ಅದಕ್ಕೆ ಸಂಬಂಧಪಟ್ಟ ಆಕರಗಳನ್ನು ಮೂಲ ಭಾಷೆಗಳಲ್ಲಿ ಅಭ್ಯಸಿಸಿ, ಅರ್ಥೈಸುವ ಸಾಮರ್ಥ್ಯ. ಇವಾವುವೂ ನನ್ನಲ್ಲಿಲ್ಲ. ಆದರೆ ಈ ಎಲ್ಲಾ ಅರ್ಹತೆಗಳಿದ್ದವರಲ್ಲಿ ಈ ಪ್ರಶ್ನೆಯ ಬಗ್ಗೆ ಆಸಕ್ತಿ ಮೂಡಿಸಿ, ಈ ಕಡೆ ಅವರ ಗಮನವನ್ನು ಸೆಳೆಯುವ ತವಕ ನನಗೂ ನನ್ನಂಥವರಿಗೂ ಇದ್ದು, ಈ ನಿಟ್ಟಿನೆಡೆ ಮೊದಲ ಹೆಜ್ಜೆಯನ್ನು ಇಡುವುದು ಈಗ ಅನಿವಾರ್ಯವಾಗಿದೆ. ಅಲ್ಲದೆ, ಆರಂಭ ಕಾಲದ ತಮಿಳು ಅನುವಾದ ಸಾಹಿತ್ಯದ ಒಂದು ಬೆಟ್ಟವೇ ಇತ್ತೀಚಿನ ದಿನಗಳಲ್ಲಿ ಬೆಳೆದಿದ್ದು ಅದು ನಮಗೆ ಸುಲಭ ಲಭ್ಯವೂ ಆಗಿರುವುದು. ಒಂದಕ್ಕಿಂತ ಹೆಚ್ಚು ಪಾಠಗಳು ದೊರೆಯುತ್ತಿರುವುದರಿಂದ, ಈ ಅನುವಾದಗಳ ತುಲನಾತ್ಮಕ ಅಧ್ಯಯನವನ್ನು ಕೈಕೊಂಡು, ಸತ್ಯಾಸತ್ಯತೆಯನ್ನು ಅರಿತುಕೊಳ್ಳಲು ನಮಗೆ ಈಗ ಸಾಧ್ಯವಾಗುವಂತಾಗಿದೆ. ಅನುವಾದಿತ ಕೃತಿಗಳನ್ನು ಅವಲಂಬಿಸಿ ಮಾಡುವ ನಿರ್ಣಯಗಳಲ್ಲಿ ಅಡಗಿರುವ ಅಪಾಯದ ಅರಿವು ನನಗಿದೆ. ಆದರೆ ಈ ಬಗೆಯ ಅಭ್ಯಾಸ ನಮಗಿಂದು ಅನಿವಾರ್ಯವೆಂಬುದು ನನ್ನ ಅನಿಸಿಕೆ. ಅದೃಷ್ಟವಶಾತ್, ತಮ್ಮ ಸಾಹಿತ್ಯವನ್ನು

ಪರಭಾಷೀಯರಿಗೆ ಪರಿಚಯಿಸುವ ಕಾರ್ಯವನ್ನು ತಮಿಳು ಭಾಷಾಪಂಡಿತರು ಬಹುಶಃ ಉಳಿದೆಲ್ಲ ಭಾಷಾಪಂಡಿತರಿಗಿಂತಲೂ-ಖಂಡಿತವಾಗಿಯೂ ಕನ್ನಡ ಕೃತಿಗಳನ್ನು ಪರಿಚಯಿಸಲು ಮಾಡಿದ ನಮ್ಮ ಪರಿಶ್ರಮಕ್ಕಿಂತಲೂ ಸರಿಸುಮಾರು ನೂರು ಪಟ್ಟು ಹೆಚ್ಚು ಕಾಣಿಕೆಯೂ ಸಾಕಷ್ಟು ಪ್ರಮಾಣದಲ್ಲಿದ್ದು ಅದು ಇನ್ನೂ ಮುಂದುವರಿಯುತ್ತಲಿದೆ. ಉದಾಹರಣೆಗೆ, ತೊಲ್ಕಾಪ್ಪಿಯಮ್ ಕೃತಿಯೊಂದನ್ನೇ ತೆಗೆದುಕೊಂಡರೆ ಇದನ್ನು ಭಾಷಾಂತರಿಸಿದ - ವ್ಯಾಖ್ಯಾನಿಸಿದ ಅರ್ಧ ಡಜನ್ ಉತ್ತಮ ಗ್ರಂಥಗಳೂ ಅನೇಕಾನೇಕ ಬಿಡಿ ಲೇಖನಗಳೂ ನಮಗಿಂದು ಇಂಗ್ಲಿಷ್‌ನಲ್ಲಿ ಲಭ್ಯವಿದೆ.[೫] ಇವನ್ನು ಎಚ್ಚರಿಕೆಯಿಂದ ಅಭ್ಯಸಿಸಿದರೆ, ಬಹುಮಟ್ಟಿನ ಸತ್ಯಾಂಶವನ್ನು ಕಂಡುಕೊಳ್ಳಲು ಸಾಧ್ಯವಾಗಬಹುದು. ಇದು ನಿರ್ಣಾಯಕ ಉತ್ತರಗಳನ್ನು ಒದಗಿಸಬಹುದು ಇಲ್ಲವೇ ಒದಗಿಸದಿರಬಹುದು. ಆದರೆ ಗುರುತರ ಪ್ರಚೋದನೆಯನ್ನು ಒಡ್ಡಿ ನಮ್ಮನ್ನು ಹೆಚ್ಚಿನ ಸಂಶೋಧನೆಗೆ ಕೊಂಡೊಯ್ಯಬಹುದೆಂಬುದು ನನ್ನ ಅನಿಸಿಕೆ.

ನನ್ನ ಅಭ್ಯಾಸ ಈ ನಿಟ್ಟಿನೆಡೆ ಇಟ್ಟ ಮೊದಲ ಹೆಜ್ಜೆ ದ್ರಾವಿಡ ಸಂಬಂಧದ ಎಲ್ಲಾ ಪ್ರಶ್ನೆಗಳನ್ನು ನಾನಿಲ್ಲಿ ಎತ್ತಿಕೊಂಡಿಲ್ಲ -ಅವುಗಳಲ್ಲಿ ಪ್ರಮುಖವೂ ನಮಗಿಂದು ಪ್ರಸ್ತುತವೂ ಎನಿಸುವ ಎರಡು ಪ್ರಶ್ನೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು, ಮೊದಲ ಅರ್ಧ ಸಹಸ್ರಮಾನದ (ಕ್ರಿ.ಶ.೧ ರಿಂದ ೫ನೆಯ ಶತಕ) ತಮಿಳು ಸಾಹಿತ್ಯದಲ್ಲಿ ಅವಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಪಟ್ಟಿರುವೆ. ಈ ಸಾಹಿತ್ಯವನ್ನು ಸ್ಥೂಲವಾಗಿ ಮೂರು ವರ್ಗಗಳಡಿ ತರಬಹುದು : ೧. ಆರಂಭ ಕಾಲದ ತಮಿಳು ಸಾಹಿತ್ಯ (ಪ್ರಧಾನವಾಗಿ ತೊಲ್ಕಾಪ್ಪಿಯಮ್); ೨. ಎರಡನೆಯ ಘಟಕದ ತಮಿಳು ಸಾಹಿತ್ಯ (ಪ್ರಧಾನವಾಗಿ ಶಂಗಂ ಸಂಕಲನ); ಮತ್ತು ೩. ಆನಂತರ ಕಾಲದ ಮಹಾಕಾವ್ಯಗಳು (ವಿಶೇಷವಾಗಿ ಶಿಲಪ್ಪದಿಗಾರಂ ಮತ್ತು ಮಣಿಮೇಗಲೈ).

'ಕವಿರಾಜಮಾರ್ಗ'ದ ವೇದಿಕೆಯ ಮೇಲೆ ತಂದ ಪ್ರಮುಖ ಪ್ರಶ್ನೆ ನೇರವಾಗಿದ್ದು, ಅದು 'ಭಾಷಾ-ಜನಾಂಗದ ಭೌಗೋಳಿಕ ಮೇರೆಯನ್ನು ಮೊಟ್ಟಮೊದಲು ಗುರುತಿಸಿದವನು ಕವಿರಾಜಮಾರ್ಗಕಾರನೋ ಅಥವಾ ಅದಕ್ಕಿಂತ ಏಳೆಂಟು ನೂರು ವರ್ಷ ಮುಂಚೆ ಇದ್ದ ತಮಿಳು ವೈಯಾಕರಣಿಯಾದ ತೊಲ್ಕಾಪ್ಪಿಯನಾರನೋ?' ಎನ್ನುವುದು. ಈ ಪ್ರಶ್ನೆ ಎಂಬುದು 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡು' ಎಂದು 'ಕನ್ನಡದ' ನಕ್ಷೆಯನ್ನು ನಿರ್ಮಿಸಿದ ಮಾರ್ಗಕಾರನಿಗಿಂತ ಮುಂಚೆ "ಯಾವುದೇ ವಾಙ್ಮಯದಲ್ಲು- ಸಂಸ್ಕೃತ ವಾಙ್ಮಯದಲ್ಲು - ಇಂಥ ನಕಾಶೆ ನಿರ್ದೇಶನದ ಉಲ್ಲೇಖನಗಳು ಪ್ರಾಯಃ ಕಾಣುವುದಿಲ್ಲ", ಎಂಬ ಅನಿಸಿಕೆ ನಮ್ಮಲ್ಲಿ ಉಂಟಾಗಿರುವುದರಿಂದ.

ತೊಲ್ಕಾಪ್ಪಿಯಮ್ ಮತ್ತಿನ್ನಿತರ ಶಂಗಂ ಸಾಹಿತ್ಯ

ತೊಲ್ಕಾಪ್ಪಿಯಮ್ ಶಂಗಂ ಸಾಹಿತ್ಯದ ಒಂದು (ಪ್ರಥಮ) ಅಂಗ ಮಾತ್ರ. ಈ ಶಾಸ್ತ್ರಗ್ರಂಥವನ್ನು ಹೊರತುಪಡಿಸಿ, ಸಾಕಷ್ಟು ಸೃಜನಾತ್ಮಕ ಮತ್ತು ಲಕ್ಷಣ ಗ್ರಂಥಗಳು

ಕ್ರಿ.ಶ.ಆರಂಭ ಕಾಲದಲ್ಲಿ ತಮಿಳಿನಲ್ಲಿ ನಿರ್ಮಾಣಗೊಂಡವು. ಆದರೆ ಅವೆಲ್ಲವೂ ಇಂದು ನಮಗೆ ಲಭ್ಯವಿಲ್ಲ; ಅಲ್ಲದೆ, ನಾಶಗೊಂಡ ಸಾಹಿತ್ಯದ ಪ್ರಮಾಣವೆಷ್ಟೆಂಬುದನ್ನು ನಿರ್ಧರಿಸಲೂ ಸಾಧ್ಯವಾಗುತ್ತಿಲ್ಲ.[೬] ಅಳಿದುಳಿದ ಶಂಗಂ- ಸಂಕಲನದಲ್ಲಿ ಸುಮಾರು ೩೦,೦೦೦ ಸಾಲುಗಳ, ೨.೩೮೧ ಕವನಗಳಿದ್ದು, ಇವು (ಮೂವತ್ತೊಂಬತ್ತು ಕವಯಿತ್ರಿಯರನ್ನೊಳ ಗೊಂಡ) ನಾಲ್ಕು ನೂರಾ ಎಪ್ಪತ್ತೊಮ್ಮರು ಕವಿಗಳ ಹೆಸರುಗಳೊಂದಿಗೆ ಗುರುತಿಸಿಕೊಂಡಿವೆ. ಇದರಲ್ಲಿ ಸುಮಾರು ಅರ್ಧದಷ್ಟು ಕಾವ್ಯವನ್ನು ರಚಿಸಿದ ಕೀರ್ತಿ ಆರು ಕವಿಗಳಿಗೆ ಸಲ್ಲುವುದು. ನೂರಕ್ಕೂ ಹೆಚ್ಚು ಸಂಖ್ಯೆಯ ಕಾವ್ಯಕರ್ತೃಗಳ ಬಗ್ಗೆ ನಮಗೇನೂ ತಿಳಿಯದು. ಸುಮಾರು ಎರಡುನೂರಾ ತೊಂಬತ್ತೊಮ್ಮರು ಕವಿಗಳು ಒಂದಕ್ಕಿಂತ ಹೆಚ್ಚು ಕವನಗಳಿಗೆ ಶಂಗಂನಿಂದ ಮನ್ನಣೆ ದೊರಕಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದು ತೋರುವುದು - ಏಕೆಂದರೆ, ಇವರ ಹೆಸರಿನ ಒಂದೊಂದೇ ಕವನ ಈ ಸಂಕಲನದಲ್ಲಿ ಕಂಡುಬರುವುದು. ಶಂಗಂ ಕವಿಗಳಲ್ಲಿ ಅತ್ಯಂತ ಹೆಚ್ಚು ಗೌರವಕ್ಕೆ ಪಾತ್ರನಾದವನೆಂದರೆ, ಸುಮಾರು ನೂರಾ ಎಪ್ಪತ್ತೇಳು ಕವನಗಳನ್ನು ರಚಿಸಿದ ಕಬಿಲರ್.[೭] ಇವರೆಲ್ಲರಿಗೂ ಪೂಜ್ಯನೂ ಪೂರ್ವಜನೂ ಆದವನು ತೊಲ್ಕಾಪ್ಪಿಯನಾರ್.

ತೊಲ್ಕಾಪ್ಪಿಯಮ್ ೧,೬೦೨ ಪದ್ಯಗಳನ್ನೊಳಗೊಂಡ ಬೃಹತ್ ಗ್ರಂಥ. ಲೋಕಾರೂಢಿಯಲ್ಲಿ ಇದು 'ವ್ಯಾಕರಣ' ಗ್ರಂಥವೆಂದೇ ಪ್ರಸಿದ್ಧಿ ಪಡೆದಿದೆ. ವಾಸ್ತವವಾಗಿ ಇದರ ಹರವು ತುಂಬಾ ವಿಸ್ತಾರವಾಗಿದ್ದು, ಇದನ್ನು ಭಾಷಾಶಾಸ್ತ್ರದ 'ಎನ್ ಸೈಕ್ಲೋಪೇಡಿಯಾ' ಎಂದರೂ ತಪ್ಪಾಗಲಿಕ್ಕಿಲ್ಲ. ಕವಿರಾಜಮಾರ್ಗದಂತೆ ತೊಲ್ಕಾಪ್ಪಿಯಮ್ ಕೂಡಾ ಮೂರು ವಿಭಾಗಗಳಲ್ಲಿ ('ಅದಿಗಾರಂ') ಹಂಚಿಕೊಂಡಿದೆ : ಈ ಒಂದೊಂದು 'ಅದಿಗಾರ'ವೂ ಒಂಬತ್ತು ಉಪವಿಭಾಗಗಳಲ್ಲಿ ವರ್ಗೀಕರಿಸಲ್ಪಟ್ಟಿರುವುದು ತೊಲ್‌ನ ವಿಶೇಷತೆ. ಅದರ ಮೂರು ಪ್ರಧಾನ 'ಅದಿಗಾರ'ಗಳೆಂದರೆ: ೧. 'ಎಳಉತ್ತು' (೪೮೦ ಸೂತ್ರ); ೨. 'ಸೊಲ್' (೪೬೦ ಸೂತ್ರ) ಮತ್ತು ೩. 'ಪೊರುಳ್ ' (೬೬೦ ಸೂತ್ರ).

ಈ ಕೃತಿಯು ಕಾಲ ವಿವಾದದ ತಿರುಗಣಿಯಿಂದ ಇನ್ನೂ ಹೊರಬಂದಿಲ್ಲ; ಕೆಲವರು ಇದನ್ನು ಕ್ರಿ.ಪೂ.೫೦೦ಕ್ಕೂ ಕೊಂಡೊಯ್ದರೆ, ಇನ್ನೂ ಕೆಲವರು ಕ್ರಿ.ಶ.೫೦೦ಕ್ಕೆ ತಂದು ನಿಲ್ಲಿಸುವರು.[೮] ಆರಂಭಕಾಲದ ತಮಿಳು ಭಾಷೆಯ ಸೃಜನಕಾವ್ಯ ನಿರ್ಮಾಣವಾಗುವುದಕ್ಕಿಂತ ಮುಂಚೆ ಈ ಶಾಸ್ತ್ರಗ್ರಂಥವು ಸಿದ್ಧವಾಗಿತ್ತೆಂಬುದರಲ್ಲಿ ಅನುಮಾನವಿಲ್ಲ. ಏಕೆಂದರೆ ಶಂಗಂ ಕವಿಗಳು ಕಟ್ಟಿದ ಅಗಂ ಅಥವಾ ಅಹನಾನೂಱು (ಪ್ರಣಯಗೀತೆ) ಮತ್ತು 'ಪುರಂ' ಅಥವಾ ಪುರನಾನೂಱು(ವೀರಗೀತೆ) ಎಂಬ ಎರಡು ಕಾವ್ಯ ಪ್ರಭೇದಗಳಿಗೆ ಚೌಕಟ್ಟು ನಿರ್ಮಿಸಿ ಕೊಟ್ಟವನೇ ತೊಲ್ಕಾಪ್ಪಿಯನಾರ್. ಸುಮಾರು ಒಂದು ಶತಮಾನ ಕಾಲದ ಚರ್ಚೆಯ ನಂತರ ಇದರ ಕಾಲವಿಂದು ಕ್ರಿ.ಶ.೧ನೆಯ ಶತಮಾನದಲ್ಲಿ ನೆಲೆಕಂಡುಕೊಂಡಿದೆ. ಅಂದರೆ ಕವಿರಾಜ ಮಾರ್ಗಕ್ಕಿಂತ ಸುಮಾರು ಎಂಟುನೂರು ವರ್ಷಗಳ ಹಿಂದೆ ಈ ಗ್ರಂಥ ನಿರ್ಮಾಣವಾಗಿತ್ತೆನ್ನಬಹುದು.

ತೊಲ್ಕಾಪ್ಪಿಯಮ್ ಮತ್ತು ಶಂಗಂ ಸಂಕಲನಗಳನ್ನು ಒಟ್ಟು ಸೇರಿಸಿದರೆ, ಆರಂಭ ಕಾಲದ ತಮಿಳು ಸಾಹಿತ್ಯದ (ವಾಸ್ತವವಾಗಿ ಉಳಿದುಳಿದಿರುವ) ಪ್ರಮಾಣವು ಸುಮಾರು ೪,೦೦೦ ಪದ್ಯಗಳಿಗೆ ಏರಬಹುದು. ಭಾಷೆಯೊಂದರ ಬೆಳವಣಿಗೆಯ ಆರಂಭ ಕಾಲದಲ್ಲಿ ಇಷ್ಟೊಂದು ಕವಿಗಳಿಂದ ನಿರ್ಮಾಣಗೊಂಡ ಈ ಪ್ರಮಾಣದ ಸಾಹಿತ್ಯವನ್ನು ಬೇರೆಡೆ ಕಾಣುವುದು ಅಪರೂಪ. ಬಹುಶಃ ಇದೊಂದು ವಿಶ್ವದಾಖಲೆ ಆಗಿರಬಹುದೇನೋ!

'ತೊಲ್' ಎಂದರೆ 'ಪುರಾತನ'ವೆಂಬ, 'ಕಾಪ್ಪಿಯಮ್' ಅಂದರೆ 'ಸಂಯೋಜನೆ', 'ಸಂಕಲನ', 'ಪ್ರಬಂಧರಚನೆ' ಎಂಬ ಅರ್ಥಗಳನ್ನು ಕೊಡಲಾಗಿದೆ.[೯] 'ಶೆಯ್ಯುಳ್ ಇಯಲ್' (ಛಂದಃಶಾಸ್ತ್ರ)ದಡಿ 'ತೊಲ್' ಎಂಬ ಹೆಸರಿನ ಒಂದು ಕಾವ್ಯ ಪ್ರಭೇದವನ್ನು ಹೆಸರಿಸಿ, ಅಲ್ಲಿ 'ತುಂಬಾ ಸೊಗಸಾದ ಶೈಲಿಯಲ್ಲಿ ರಚಿಸಿದ ನೀತಿ ಬೋಧಕ ಕತೆ ಮತ್ತು ಸವಿಸ್ತಾರ ವಾಗಿ ವರ್ಣಿಸಲ್ಪಟ್ಟ ಒಂದು ಕಾವ್ಯಪ್ರಭೇದ'ವೆಂದು ಅರ್ಥೈಸಲಾಗಿದೆ.[೧೦] 'ಕಾಪ್ಪಿಯರ್' ಎಂಬ ಒಂದು ಪುರಾತನ ಮನೆತನವಿತ್ತೆಂದು ೫೦೦-೬೦೦ ಕಾಲದ ಶಿಲಪ್ಪದಿಗಾರಂನಿಂದ ತಿಳಿದುಬರುವುದು. ಈ ಮನೆತನದವರನ್ನು 'ಕಾವ್ಯಗೋತ್ರ'ದವರೆಂದು ವೈಯಾಕರಣಿಯಾದ ತೊಲ್ಕಾಪ್ಪಿಯನಾರ್ ಕೂಡಾ ಈ ಮನೆತನ(ಗೋತ್ರ)ಕ್ಕೆ ಸೇರಿದವನಾಗಿದ್ದನೆಂದೂ ವಾದಿಸಲಾಗಿದೆ.[೧೧]

ತೊಲ್ಕಾಪ್ಪಿಯಮ್ ಗ್ರಂಥದಲ್ಲಿ ಅದರ ಹೆಸರಾಗಲೀ ಕರ್ತೃವಿನ ಹೆಸರಾಗಲೀ ಬರುವುದಿಲ್ಲ. ಅಲ್ಲದೆ ಕವಿಯ ಮತ್ತಾವ ವಿವರಗಳೂ ದೊರೆಯುವುದಿಲ್ಲ. ಈ ಕಾರಣದಿಂದಾಗಿ ಇದು ಒಬ್ಬನ ಕೃತಿಯೋ ಅಥವಾ ಹಲವರ ಸಾಮೂಹಿಕ ಕೃಷಿಯೋ ಎಂಬ ವಾದ-ವಿವಾದಗಳೂ ಎದ್ದಿರುವುವು.[೧೨] ಈ ಗ್ರಂಥಕ್ಕೆ ಹೆಸರು ಕೊಟ್ಟವರಲ್ಲಿ ಮೊದಲಿಗನು ಪನಂಪಾರನಾರ್. ಈ ಗ್ರಂಥಕ್ಕೆ ಒಂದು ಪ್ರಸ್ತಾವನಾ ಸ್ತುತಿಯನ್ನು ಬರೆದು, ಇದರ ಕರ್ತೃವನ್ನು ತೊಲ್ಕಾಪ್ಪಿಯನಾರ್ ಎಂದು ಅವನು ಗುರುತಿಸಿದನು.[೧೩] ಪನಂಪಾರನಾರ್ ತೊಲ್ಕಾಪ್ಪಿಯ ನಾರ್ ಸಮಕಾಲೀನನೂ ಸ್ವತಃ ವೈಯಾಕರಣಿಯೂ ಆಗಿದ್ದನೆಂಬ ಅಭಿಮತವಿದೆ. ೧೪ನೆಯ ಶತಮಾನದ ಟೀಕಾಕಾರ ಈ ಗ್ರಂಥಕರ್ತೃವು 'ತಿರುಮಾಣುತಾಗ್ನಿ' (ಸಂ. ತೃಣಧೂಮಾಗ್ನಿ), ಅವನು ಬ್ರಾಹ್ಮಣ ಚಮತಗ್ನಿ (ಸಂ. ಜಮದಗ್ನಿ)ಯ ಪುತ್ರನೂ, ಅಕತ್ತಿಯನ್ (ಸಂ. ಅಗಸ್ತ್ಯ)ನ ಹನ್ನೆರಡು ಶಿಷ್ಯರಲ್ಲಿ ಒಬ್ಬನೂ ಎಂದು ಹೇಳಿರುವನು.[೧೪] ಮೇಲ್ನೋಟಕ್ಕೆ ಕಾಣುವಂತೆ, ಇದೊಂದು ಕಾಲಾನಂತರದಲ್ಲಿ ಸಂಭವಿಸಿದ ಸಂಸ್ಕೃತೀಕರಣದ ಪ್ರಕ್ರಿಯೆಯಲ್ಲದೆ ಮತ್ತೇನೂ ಅಲ್ಲ.

ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರನ ಪೂರ್ವಾಚಾರ್ಯರು

ತೊಲ್ಕಾಪ್ಪಿಯಮ್‌ನ ಒಡಲನ್ನು ಬಗೆದು ನೋಡಿದರೆ, ತನ್ನ ಪೂರ್ವಾಚಾರ್ಯರಿಗೆ ಈ ಗ್ರಂಥಕರ್ತೃವು ಎಷ್ಟು ಋಣಿಯಾಗಿದ್ದನೆಂಬುದು ಸ್ಪಷ್ಟಗೊಳ್ಳುವುದು. ತನ್ನ ಪೂರ್ವಜರಿಂದ ಮತ್ತು ತನ್ನ ಕಾಲದ ಹಿರಿಯರಿಂದ ಪಡೆದ ಮಾರ್ಗದರ್ಶನವನ್ನು ಕನಿಷ್ಠ

೨೪೦ ಬಾರಿ ಇವನು ಈ ಕಾವ್ಯದಲ್ಲಿ ಸ್ಮರಿಸಿರುವನು. ಆದರೆ ಇವರಾರನ್ನೂ ಹೆಸರಿಸದೆ, ಬರಿ 'ಎಣ್ಬ', 'ಮೊಟುಬ' ಮುಂತಾದ ಪದಗಳಿಂದ ಅವರನ್ನು ಸೂಚಿಸಿರುವನು. ಈ ಪದಗಳ ಸ್ಥೂಲಾರ್ಥ 'ಪಂಡಿತರ ಮತ', 'ಪರಂಪರೆಯ ಮಾರ್ಗ', 'ಪೂರ್ವಜರ ಪ್ರಯೋಗ', 'ಬಲ್ಲವರ ಅಭಿಮತ', ಎಂದು.[೧೫] ಐತಿಹ್ಯಗಳನ್ನೂ ಕಾಲಾನಂತರದ ಉಲ್ಲೇಖನಗಳನ್ನೂ ಗಣನೆಗೆ ತೆಗೆದುಕೊಂಡರೆ. ಪನಂಪಾರನಾರ್ ತೊಲ್ಕಾಪ್ಪಿಯನಾರ್‌ನ ಸಮಕಾಲೀನರಲ್ಲಿ ಒಬ್ಬ ವೈಯಾಕರಣಿ. ಆತನು ರಚಿಸಿದ ವ್ಯಾಕರಣ ಗ್ರಂಥವನ್ನು ೧೩ನೆಯ ಶತಮಾನದ ಮಯಿಲೈನಾತರ್ ಎಂಬ ಟೀಕಾಕಾರ 'ನಣ್ಣೂಲ್' ಎಂಬ ತನ್ನ ಗ್ರಂಥದಲ್ಲಿ ಉಲ್ಲೇಖಿಸಿರುವನು; ಆದರೆ ಪನಂ ಪಾರನಾರ್ ರಚಿಸಿದ ಗ್ರಂಥ ಈಗ ಲಭ್ಯವಿಲ್ಲ. ೧೩-೧೪ನೆಯ ಶತಕದಲ್ಲಿದ್ದ ಟೀಕಾಕಾರ 'ನಚ್ಚಿನಾರ್‌ಕ್ಕಿನಿಯಾರ್ ' ಒಂದು ಕುತೂಹಲಕಾರೀ ಘಟನೆಯನ್ನು ನಿರೂಪಿಸಿ, ತೊಲ್ಕಾಪ್ಪಿಯನಾರ್ ಮತ್ತು ಅವನ ಸಮಕಾಲೀನ ಶಾಸ್ತ್ರಜ್ಞರ ಮೇಲೆ ಬೆಳಕು ಚೆಲ್ಲಿರುವನು. ಅದನ್ನಿಲ್ಲಿ ನೆನೆಯಬಹುದು.[೧೬] ಇದರಂತೆ ತೊಲ್ಕಾಪ್ಪಿಯ ನಾರ್ ರಚಿಸಿದ ಶಾಸ್ತ್ರಗ್ರಂಥವನ್ನು ಅವನ ಗುರು ಅಕತ್ತಿಯನ್(ಅಗಸ್ತ್ಯ)ನು ವಿರೋಧಿಸಿ ಶಂಗಂ ಸಭೆ ಅದಕ್ಕೆ ಮನ್ನಣೆ ನಿರಾಕರಿಸುವಂತಹ ಒಂದು ಸಂಚನ್ನು ಹೂಡಿನಲ್ಲದೆ, ತನ್ನ ಮತ್ತೊಬ್ಬ ಶಿಷ್ಯನಾದ ಅದಂಕೊಟ್ಟಾಸಾನ್ ನನ್ನು ಹುರಿದುಂಬಿಸಿ, ಅದನ್ನು ವಿರೋಧಿಸಲು ಸಜ್ಜುಗೊಳಿಸಿದನು. ಪಾಂಡ್ಯರಾಜನ ಸಮ್ಮುಖದಲ್ಲಿ ನಡೆದ ಈ ವಾದದಲ್ಲಿ ತನ್ನ ಗ್ರಂಥದ ವಿರುದ್ಧ ಎತ್ತಿದ ಎಲ್ಲಾ ಆಕ್ಷೇಪಗಳಿಗೆ ಸರಿಯಾದ ಉತ್ತರವಿತ್ತು, ತೊಲ್ಕಾಪ್ಪಿಯನಾರ್ ಆ ಸಭೆಯ ಅಂಗೀಕಾರವನ್ನು ತನ್ನ ಗ್ರಂಥಕ್ಕೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾದನು.

ವೈಯಾಕರಣಿಯಾದ ಅಗಸ್ತ್ಯನು ಏಕೆ ತನ್ನ ಶಿಷ್ಯನನ್ನು ವಿರೋಧಿಸಿದನು ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲವೆನಿಸುವುದು. ತಾನಾಗಲೇ ರಚಿಸಿದುದಕ್ಕಿಂತಲೂ ಶ್ರೇಷ್ಠ ವ್ಯಾಕರಣ ಗ್ರಂಥವೆಂದು ಶಂಗಂ ಪ್ರಾಜ್ಞರಿಂದ ತೀರ್ಮಾನಕ್ಕೊಳಗಾದರೆ ತೊಲ್ಕಾಪ್ಪಿಯನಾರ್‌ನ ಕೃತಿ ತನ್ನನ್ನೂ ತನ್ನ ಗ್ರಂಥವನ್ನೂ ಮೂಲೆಗುಂಪುಗೊಳಿಸುವುದೆಂಬ ಭೀತಿಯೂ ತನಗಿಂತಲೂ ಹೆಚ್ಚು ಪಾಂಡಿತ್ಯವನ್ನು ಪಡೆದುಕೊಂಡಿದ್ದ ಶಿಷ್ಯನ ಮೇಲಿನ ಮತ್ಸರವೂ ಇದಕ್ಕೆ ಕಾರಣವಾಗಿತ್ತೆಂಬುದು ಇಲ್ಲಿ ಸುಸ್ಪಷ್ಟ. ಪನಂಪಾರನಾರ್ ಈ ಗ್ರಂಥಕ್ಕೆ ಬರೆದ ಪ್ರಸ್ತಾವನಾ ಸ್ತುತಿಯಲ್ಲಿ ಅದಂಕೊಟ್ಟಾಸಾನ್‌ನ ಪ್ರಸ್ತಾಪ ಬರುವುದು, ಆದರೆ ಅಲ್ಲಿ ಈ ಐತಿಹ್ಯಕ್ಕಾಗಲೀ ಅವನ ವೈಯಕ್ತಿಕ ಪ್ರತಿರೋಧಕ್ಕಾಗಲೀ ಅಗಸ್ತ್ಯನಿಗಾಗಲೀ ಉಲ್ಲೇಖಗಳಿಲ್ಲ. ಪನಂ ಬರೆದ ಪ್ರಸ್ತಾವನೆಯ ಉಳಿದ ವಿವರಗಳನ್ನು ಮುಂದಿನ ಲೇಖನದಲ್ಲಿ ಪ್ರಸ್ತಾಪಿಸುವೆನು.[೧೭]

ಕವಿರಾಜಮಾರ್ಗದಲ್ಲಿ ಬರುವ ಪೂರ್ವಾಚಾರ್ಯರ ಪ್ರಸ್ತಾಪ ನಮಗೆ ಬಹುಮಟ್ಟಿಗೆ ತಿಳಿದದ್ದಾಗಿದೆ. ಮಾರ್ಗಕಾರನು ಅವರಲ್ಲಿ ಕೆಲವರನ್ನು ಸ್ಪಷ್ಟವಾಗಿ ಹೆಸರಿಸಿದರೆ; ಇನ್ನು ಕೆಲವರನ್ನು ಪರೋಕ್ಷವಾಗಿ ಮಾತ್ರ ಸ್ಮರಿಸುವನು. (ಕರಾಮಾ., ೧-೨೬-೨೯, ೩೦-೩೨). ಗದ್ಯಕಥೆಯ ಪೂರ್ವಾಚಾರ್ಯರನ್ನು(೧-೨೭, ೨೯, ೩೬-೩೭) ಮಹಾಕಾವ್ಯದ ಮಾರ್ಗದರ್ಶಿ

ಗಳನ್ನು (೧-೩೧-೩೨) ಅವರವರ ವ್ಯಕ್ತಿಗತ ಹೆಸರುಗಳಿಂದ ಗುರುತಿಸುವ ಉತ್ಸಾಹವನ್ನು ಲಾಕ್ಷಣಿಕ ಪಂಡಿತವೃಷಭರನ್ನು ಗುರುತಿಸುವಾಗ (ಉದಾ. ದಂಡಿ, ಭಾಮಹ ಮೊದಲಾದವರು) ಅವನು ತೋರದಿರುವುದು ಗಮನಾರ್ಹ. ಇದು ಏನೇ ಇರಲಿ, ತೊಲ್ಕಾಪ್ಪಿಯನಾರ್‌ಗಿಂತ ಹೆಚ್ಚು ಸ್ಪಷ್ಟವಾದ ಪದಗಳಿಂದ ಮಾರ್ಗಕಾರನು ತನ್ನ ಪೂರ್ವಾಚಾರ್ಯರನ್ನು ಗುರುತಿಸಿರುವನೆಂಬುದರಲ್ಲಿ ಅನುಮಾನವಿಲ್ಲ. ಅವುಗಳಲ್ಲಿ 'ಪೂರ್ವಕವಿ', 'ಪುರಾಣಕವಿ', 'ಪುರಾತನಕವಿ', 'ಪೂರ್ವಾಚಾರ್ಯ', 'ಪರಮಾಚಾರ್ಯ', 'ಪರಮಾಗಮ ಕೋವಿದ' ಎಂಬವುಗಳು ಸಾಮಾನ್ಯವಾಗಿ ಅವನಿಗಿಂತ ಹಿಂದಿನ ಕಾಲದಲ್ಲಿದ್ದ ಶಾಸ್ತ್ರಜ್ಞರನ್ನು ಉದ್ದೇಶಿಸಿ ಮಾಡಿದವುಗಳಾದರೆ,[೧೮] 'ಆಚಾರ್ಯ', 'ಕಬ್ಬಿಗ', 'ಕವಿ', 'ಕವಿಪ್ರಧಾನ', 'ಕವಿಮುಖ್ಯ', 'ಕವಿವೃಷಭ', 'ಕವೀಶ', 'ಚತುರಕವಿ', 'ಚಿಂತಿತ ಪುರಾಣಕವಿ', 'ಜಾಣ', 'ನಿಪುಣ', 'ಪಂಡಿತ', 'ಪೂಣೆಗ', 'ಭಾಷಾವಿದ', 'ಬುಧ' ಅಥವಾ 'ಬುಧೋತ್ತಮ', 'ಮಾತರಿವ', 'ವಿವೇಕಿ' ಮತ್ತು 'ವಿವೇಕಬೃಹಸ್ಪತಿ' ಎಂಬವು ಅವನ ಪೂರ್ವಜರನ್ನೂ ಸಮಕಾಲೀನ ಹಿರಿಯರನ್ನೂ ಸಹಪಾಠಿಗಳನ್ನೂ ಉದ್ದೇಶಿಸಿ ಮಾಡಿದ ಉಲ್ಲೇಖಗಳಾಗಿರಲು ಸಾಧ್ಯ.[೧೯] ಇವರನ್ನು 'ಕವಿತಾ ನೀತಿಯುತರ್ ', 'ಕಾವ್ಯಪ್ರಯೋಗ ಪರಿಣತಮತಿಗಳ್' ಎಂದು ಗುರುತಿಸಿದರೆ, ಅವರು ಹಾಕಿಕೊಟ್ಟ ಮಾರ್ಗವನ್ನು 'ಅಪರಿಮಿತಾಖ್ಯಾಕೃತಿ ಪ್ರಯೋಗಂಗಳೊಳಂ', 'ಕವೀಶ-ಪದಪದ್ಧತಿಯೊಳ್ ', 'ಚಿಂತಿತಪುರಾಣಕವಿ ವಿದಿತಂಗಳ್', 'ಪುರಾಣಕವಿ-ವಿದಿತಂಗಳ್', 'ಪುರಾಣಕವಿ ಪ್ರಭುಪ್ರಯೋಗಾವಿಳ', 'ಪುರಾಣ-ಕಾವ್ಯಪ್ರಯೋಗದೊಳ್', 'ಪುರಾಣ-ಶಾಸ್ತ್ರೋಕ್ತಂಗಳ್ ತದನುಮತಂ', 'ಪುರಾಣಕವಿ-ಸಂತತಮಾರ್ಗ', 'ಪೂರ್ವಶಾಸ್ತ್ರಪದವಿಯಂ' ಎಂಬ ಪದಗಳಿಂದ ಗುರುತಿಸಿರುವನು.[೨೦] ಇವಲ್ಲದೆ, ತನ್ನ (ಪೋಷಕನ) ಅಧಿಕಾರಮುದ್ರೆ ಯನ್ನು ಪಡೆದ ಶಾಸ್ತ್ರನಿಯಮಗಳನ್ನು ಅವನು ವೈಯಕ್ತಿಕ ಅಂಕಿತದಲ್ಲಿ ಗುರುತಿಸಿಕೊಂಡಿರು ವನು. 'ನೃಪತುಂಗದೇವವಿಧಿತಕ್ರಮ', 'ನೃಪತುಂಗ ದೇವಾನುಮತದೊಳ್', 'ನೃಪತುಂಗದೇವಮಾರ್ಗ', 'ನೃಪತುಂಗದೇವನ್ ಆದರದೊಳ್ ಪೇಳ್ದ ಮಾರ್ಗಗತಿ', 'ಮಾರ್ಗೋದಿತಕ್ರಮ', 'ಮಾರ್ಗಕ್ರಮ', 'ಮಾರ್ಗಾನುರೂಪ ಪದಪ್ರಯೋಗ', 'ಧವಳೋಪನೀತಿಮಾರ್ಗೋಚಿತಗತಿ ಭಾವಿತಮ್', 'ನಿತ್ಯವಲ್ಲಭ ಮತದಿಂ', 'ನೀತಿನಿರಂತರ ಕ್ರಮುಂ', 'ನೀತಿನಿರಂತರಾನುಗತಂ', 'ನೀತಿಮಾರ್ಗೋಚಿತಂ', ಎಂಬವು ಇದಕ್ಕೆ ಉದಾಹರಣೆ.[೨೧] ಈ ಬಗೆಯ ಸ್ವಾತಂತ್ರ್ಯವನ್ನು ಸ್ಪಷ್ಟ ನಿಲುವನ್ನು ತೊಲ್ಕಾಪ್ಪಿಯನಾರ್ ತನ್ನ ಕೃತಿಯಲ್ಲಿ ತೋರಿಲ್ಲ.

ತೊಲ್ಕಾಪ್ಪಿಯಮ್‌ನ ವಿಶೇಷತೆ

'ತೊಲ್ಕಾಪ್ಪಿಯಮ್'ನ ಮೂರು 'ಆದಿಗಾರ'ಗಳಲ್ಲಿ ಮೊದಲಿನ ಎರಡು ಭಾಷಾ ಶಾಸ್ತ್ರಕ್ಕೆ, ಮೂರನೆಯದು 'ಅಲಂಕಾರ' ಶಾಸ್ತ್ರಕ್ಕೆ ಸಂಬಂಧಿಸಿವೆ. 'ಎಟುತ್ತದಿಗಾರಮ್'ನ ಸೂತ್ರಗಳು ಧ್ವನಿಮಾ ಮತ್ತು ಶಬ್ದರೂಪಶಾಸ್ತ್ರಗಳನ್ನು ಚರ್ಚಿಸುವುವು. 'ಸೊಲ್ಲದಿ

ಗಾರಮ್'ನ ಪ್ರಧಾನವಸ್ತು, ಶಬ್ದರಚನಾಶಾಸ್ತ್ರವಲ್ಲದೆ, ಅನ್ವಯ ನಿಯಮ ಮತ್ತು ಶಬ್ದಾರ್ಥಶಾಸ್ತ್ರ. 'ಪೊರುಳದಿಕಾರಮ್'ನ ವಸ್ತು, ಅಲಂಕಾರ. ಇಲ್ಲಿ 'ಅಹಂ'(ಅಗಂ) ಕಾವ್ಯಪ್ರಭೇದವನ್ನು ನಾಲ್ಕು ಅಧ್ಯಾಯಗಳಲ್ಲಿ (೧, ೩, ೪, ೫) 'ಪುಱಂ' ಪ್ರಭೇದವನ್ನು ಒಂದು ಅಧ್ಯಾಯ(೨)ದಲ್ಲಿ ಚರ್ಚಿಸಲಾಗಿದೆ. 'ಅಹಂ' ಎಂದರೆ ಪ್ರಣಯಗೀತೆ; 'ಪುಱಂ' ಎಂದರೆ ವೀರಗಾಥೆ. ಇವಲ್ಲದೆ ರಸ, ಉಪಮಾ, ಛಂದಸ್ಸು ಮತ್ತು ಭಾಷಾಪ್ರಯೋಗಗಳನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ಮೂರನೆಯ ಅದಿಗಾರದಲ್ಲಿ 'ಅಹಂ' ಮತ್ತು 'ಪುಱಂ' ಕಾವ್ಯವನ್ನು ಹೇಗೆ, ಯಾವ ವಸ್ತುವನ್ನು ಆಯ್ಕೆ ಮಾಡಿಕೊಂಡು, ಯಾವ ರಸ ಬಳಸಿ ಮತ್ತು ಯಾವ ಛಂದಸ್ಸಿನಲ್ಲಿ ನಿರೂಪಿಸಬೇಕೆನ್ನುವುದನ್ನು ತಿಳಿಸಲಾಗಿದೆ. ಈ ಪ್ರಭೇದಗಳು ತಮಿಳು ಭಾಷೆಯ ಅರುಣೋದಯ ಕಾದ ವಿಶೇಷ ಹಾಗೂ ವಿಶಿಷ್ಟ ಕೊಡುಗೆಗಳಾಗಿವೆ. ಒಂದು ಲಕ್ಷಣ ಗ್ರಂಥದಲ್ಲಿ ವಿನೂತನ ಕಾವ್ಯಪ್ರಯೋಗದ ಬಗೆಯನ್ನು ತೊಲ್ಕಾಪ್ಪಿಯನಾರ್‌ಗಿಂತ ಮುಂಚೆ ದ್ರಾವಿಡ ಭಾಷೆಯಲ್ಲಿ ಯಾರೂ ಚರ್ಚೆಮಾಡಿರಲಿಲ್ಲ. ಆನಂತರದ ಕಾಲದಲ್ಲಿ ಕೂಡಾ ದೇಸೀಯ ಭಾಷಾತಜ್ಞರಿಂದ ಈ ಬಗೆಯ ಚರ್ಚೆಯಾಗಲಿಲ್ಲ ಎನ್ನಬಹುದು.

'ತೊಲ್ಕಾಪ್ಪಿಯಮ್' ಒಂದು ಅದ್ಭುತ ಗ್ರಂಥ. ಸೂಕ್ಷ್ಮತರದ ಶಾಸ್ತ್ರೀಯ ಶಸ್ತ್ರಕ್ರಿಯಾ ವಿಧಾನಕ್ಕೆ ಇದೊಂದು ಅಪರೂಪ ಮಾದರಿ. ಇಲ್ಲಿಯ ಶಾಸ್ತ್ರನಿಯಮಗಳು ಗಣಿತಶಾಸ್ತ್ರದ ನಿಖರತೆಯನ್ನು ಪಡೆದುಕೊಂಡಿದ್ದು, ಅವು ಈ ಕವಿಯ ವೈಜ್ಞಾನಿಕ ಚಿಂತನಾ ಪ್ರವೃತ್ತಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುವುವು. ಅವನ ಆಳವಾದ ಪಾಂಡಿತ್ಯ, ಶಿಸ್ತು, ಶ್ರಮ ಮಾತ್ರವಲ್ಲದೆ, ಅವನಲ್ಲಿದ್ದ ಸೂಕ್ಷ್ಮ ಭಾಷಾ ಕಳಕಳಿ ಮತ್ತು ಸಮರ್ಪಣಾ ಪ್ರವೃತ್ತಿಯನ್ನು ಇಲ್ಲಿ ಕಾಣುವೆವು. ತಮಿಳು ಲಿಪಿಯಿಂದ ಆರಂಭಗೊಳ್ಳುವ ಅವನ ಚರ್ಚೆ ಸೃಜನ ಕಾವ್ಯದ ಎರಡು ಅದ್ಭುತ ಮುಖಗಳನ್ನು ಪರಿಚಯಿಸಿ ಶಾಸ್ತ್ರಗ್ರಂಥಗಳನ್ನು ಹೇಗೆ ಅರ್ಥೈಸಿ, ಹೇಗೆ ಟೀಕೆಗಳನ್ನು ಬರೆಯಬೇಕೆಂಬ ವಿಧಿವಿಧಾನಗಳನ್ನು ವಿವರಿಸುವುದರೊಂದಿಗೆ ಮುಕ್ತಾಯಗೊಳ್ಳುವುದು.

ಆನುಷಂಗಿಕವಾಗಿ ಕವಿರಾಜಮಾರ್ಗದಲ್ಲಿ ಪ್ರಸ್ತಾಪಗೊಂಡಿರುವ ಅವಳಿ ದೇಸಿ ಕಾವ್ಯಪ್ರಭೇದಗಳಿಗೂ - 'ಬೆದಂಡೆ' ಮತ್ತು 'ಚತ್ತಾಣ' - ಮತ್ತು ತೊಲ್ಕಾಪ್ಪಿಯಮ್ ನಲ್ಲಿ ಬರುವ ಅವಳಿ ಕಾವ್ಯಪ್ರಭೇದಗಳಿಗೂ - 'ಅಹಂ' ಮತ್ತು 'ಪುಱಂ' - ಇರುವ ಅಂತರವು ಭೂಮ್ಯಾಕಾಶ ಪ್ರಮಾಣದ್ದು. ಬಹುಶಃ ಈ ಹೋಲಿಕೆಯೇ ಅಸಂಬದ್ಧ. ಆದರೂ ಈ ಗ್ರಂಥಗಳಿಗೆ ಸಂಬಂಧಪಟ್ಟ, ಒಂದೆರಡು ಅಂಶಗಳನ್ನು ಇಲ್ಲಿ ಗುರುತಿಸಲೇಬೇಕು. ಇದರಲ್ಲಿ ಮೊದಲಿನದು, ಕಾವ್ಯಪರಂಪರೆಯ ಹುಟ್ಟಿಗೆ ಸಂಬಂಧಪಟ್ಟದ್ದು. ತೊಲ್ಕಾಪ್ಪಿಯಮ್‌ನಲ್ಲಿ ಹಾಕಿಕೊಟ್ಟ 'ಅಹಂ'-'ಪುಱಂ' ನಿಯಮಗಳು, ತಮಿಳು ಭಾಷೆಯಲ್ಲಿ ಹೊಸಮಾರ್ಗದ ಒಂದು ಬಾಗಿಲನ್ನೇ ತೆರೆದು, ಸಮೃದ್ಧವಾದ ಕಾವ್ಯಪ್ರವಾಹಕ್ಕೆ ಕಾರಣವಾದವು; ಈ ಬಗೆಯ ಪ್ರೇರಣೆಯನ್ನು ಕವಿರಾಜಮಾರ್ಗ ಒದಗಿಸಲಿಲ್ಲ. ಅಥವಾ

ಶಂಗಂ ಕವಿಗಳು ಪಡೆದ ಪ್ರಚೋದನೆಯನ್ನು ಮಾರ್ಗಕಾರನ ಕನ್ನಡ ವಾರಸುದಾರರು ಅವನಿಂದ ಪಡೆದುಕೊಳ್ಳಲಿಲ್ಲ. ಇಷ್ಟೇ ಗಮನಾರ್ಹವಾದ ಮತ್ತೊಂದು ಅಂಶವೆಂದರೆ, ತೊಲ್ಕಾಪ್ಪಿಯಮ್ ಗ್ರಂಥವನ್ನು ಪುನಃ ಪುನಃ ಜೀವಂತಗೊಳಿಸುವ ಕಾರ್ಯವನ್ನು ಮುಂದಿನ ತಲೆಮಾರಿನ ತಮಿಳರು ನಿಷ್ಠೆಯಿಂದ ಕೈಕೊಂಡು, ಒಂದೂವರೆ ಸಹಸ್ರಮಾನ ಕಾಲಾವಧಿಯಲ್ಲಿ (ಕ್ರಿ.ಶ.೧೦೦ ರಿಂದ ೧೪೦೦) ಸುಮಾರು ಅರ್ಧ ಡಜನ್ ಪಾಂಡಿತ್ಯಪೂರ್ಣ ವ್ಯಾಖ್ಯಾನ ಗ್ರಂಥಗಳನ್ನು ಹೊರತಂದುದು. ಇದಕ್ಕೆ ಹೋಲಿಸಿ ನೋಡಿದರೆ, ಕನ್ನಡ ಕವಿಗಳೂ-ಶಾಸ್ತ್ರಜ್ಞರೂ ಕವಿರಾಜಮಾರ್ಗಕ್ಕೆ ಕೊಟ್ಟ ಗಮನ ತುಂಬಾ ನಿರಾಶಾದಾಯಕ. ಒಬ್ಬರಿಬ್ಬರು ಆನುಷಂಗಿಕ ವಾಗಿ ಮಾಡಿದ ಉಲ್ಲೇಖಗಳನ್ನು ಹಾಗೂ ವಿವಾದಾತ್ಮಕ 'ಶ್ರೀವಿಜಯನ' ಸ್ಮರಣೆಯನ್ನು ಬಿಟ್ಟರೆ, ಕವಿರಾಮಾರ್ಗದಂತಹ ಮಹಾಧ್ವಕೃತಿಯು ಮುಂದಿನ ಪೀಳಿಗೆಯಿಂದ ಪಡೆದ ಗಮನವೂ-ಗೌರವವೂ ಅತ್ಯಲ್ಪವೆಂದೇ ಹೇಳಬೇಕು.

ಸಂಸ್ಕೃತ, ತಮಿಳು ಮತ್ತು ಕನ್ನಡ ಯುಗಧರ್ಮಗಳ ಪ್ರಭಾವ

ಇದು ಏನೇ ಇರಲಿ, ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರ ಕ್ರಮವಾಗಿ ತಮಿಳು ಮತ್ತು ಕನ್ನಡ ಕಾವ್ಯ ನಿಯಮಾವಳಿಗಳನ್ನು ರೂಪಿಸುವಾಗ ಕೆಲವು ಸಮಾನಾಂತರ ಸಂವೇದನೆಗಳನ್ನು ಹಂಚಿಕೊಂಡಿರುವುದು ಗಮನಾರ್ಹ. ಆದರೆ ಇಲ್ಲಿ ಕೂಡಾ ಅವರವರ ಯುಗಧರ್ಮಗಳು ಅವರಲ್ಲಿ ಅಂತರವನ್ನು ನಿರ್ಮಿಸಿದುದು ಸುಸ್ಪಷ್ಟ. ಇಂಥವುಗಳಲ್ಲಿ ಒಂದು, ಸಂಸ್ಕೃತ ಭಾಷೆ ಮತ್ತು ಕಾವ್ಯದಿಂದ ದ್ರಾವಿಡ ಭಾಷೆ ಮತ್ತು ಕಾವ್ಯ ಪಡೆದುಕೊಂಡ ಮಾದರಿಗಳು. ಪರಭಾಷೆ, ಅದರಲ್ಲೂ ಸಂಸ್ಕೃತ-ವಡಸೊಲ್-ದಿಂದ ಪದಗಳನ್ನು ಪಡೆದುಕೊಳ್ಳಲು ತೊಲ್ಕಾಪ್ಪಿಯನಾರ್‌ನ ತಕರಾರೇನೂ ಇರಲಿಲ್ಲ. ಆದರೆ ಅವು ತಮೀಳೀಕರಣಗೊಂಡು - ಅಂದರೆ ತಮಿಳು ಧ್ವನಿ(ಉಚ್ಚಾರ)ಮಾಕ್ಕೆ ಹೊಂದಿಕೊಂಡು ಬರಬೇಕೆಂಬುದು ಅವನ ಸಂಹಿತೆ-ಎಟುತ್ತೊಡು-ಪುಣರ್‌ನ್ದ-ಸೊಲ್ -ಆಗುಮ್ಮೇ...[೨೨] ಇಂತಹ ಪರಭಾಷಾ ಪದಗಳನ್ನು ರೂಪಾಂತರಿಸಿಕೊಳ್ಳುವ ವಿಧಾನವನ್ನೂ 'ವಟಿನೂಲ್'ನ ನಾಲ್ಕು ನಿಯಮಗಳೊಂದರಡಿಯಲ್ಲಿ ಅವನು ತಿಳಿಸಿಕೊಟ್ಟನು. ಇಷ್ಟಾದರೂ ಈ ವೈಯಾಕರಣಿ ಸಂಸ್ಕೃತದಿಂದ ತಮಿಳಿಗೆ ಸ್ವತಃ ತಂದುಕೊಂಡ ಪದಪ್ರಮಾಣ ಆರಂಭಕಾಲದ ತಮಿಳು-ಬ್ರಾಹ್ಮೀ ಶಾಸನಗಳಲ್ಲಿ ಬರುವ ಪದಪ್ರಮಾಣಕ್ಕಿಂತ ತುಂಬಾ ಕಡಿಮೆ ಎಂದು ಅಂದಾಜಿಸಲಾಗಿದೆ.[೨೩] ಇದೇನಿದ್ದರೂ ಈ ಪ್ರಕ್ರಿಯೆ ಪ್ರಾರಂಭಗೊಂಡಿದ್ದು ತೊಲ್ಕಾಪ್ಪಿಯನಾರ್ ಕಾಲದಿಂದಲೇ ಎನ್ನುವುದನ್ನು ನಿರ್ಲಕ್ಷಿಸುವಂತಿಲ್ಲ.

ಯುಗಧರ್ಮವು ಬದಲಾಗಿ, ತನ್ನ ಜ್ಯೇಷ್ಠತೆಯನ್ನು ಸಂಸ್ಕೃತ ಪ್ರತಿಷ್ಠಾಪಿಸಿಕೊಂಡಿದ್ದ ಮಾರ್ಗಕಾರನ ಕಾಲದಲ್ಲಿ ಸಂಸ್ಕೃತ ಪದಗಳನ್ನು ಪದಗಳನ್ನು ದೇಸೀ ಭಾಷೆಗೆ ತಂದು ಕೊಳ್ಳುವುದು ಹೆಮ್ಮೆಯ ಹಾಗೂ ಗೌರವಾನ್ವಿತ ಗುಣವಾಗಿ ಪರಿವರ್ತನೆಗೊಂಡಿತ್ತು. ಸಂಸ್ಕೃತದ ಉಕ್ತಿಮಾರ್ಗವನ್ನು ವಿವೇಚಿಸಿ, ಅವನ್ನು ಕನ್ನಡಕ್ಕೆ ಹೊಂದಿಸಿಕೊಂಡಾಗ ಮಾತ್ರ

ಕಾವ್ಯವು ನಿರ್ದುಷ್ಟವೂ ಶೋಭಾಯಮಾನವೂ ಆಗುವುದೆಂಬುದನ್ನು ಮಾರ್ಗಕಾರನು "ನೆಗಳ್ದರ್ದ ಕನ್ನಡಂಗಳೊಳಗಣೆತ-ಗುಣ-ವಿದಿತ-ಸಂಸ್ಕೃತೋಕ್ತ - ಕ್ರಮಮಂ| ಬಗೆದೊಂದು ಮಾಡಿ ಪೇಳ್ವೊಡೆ ಸೊಗಯಿಸುಗುಂ ಕಾವ್ಯಬಂಧಂ" (೧-೫೭) ಎಂಬ ಮಾತಿನಲ್ಲಿ ಗಟ್ಟಿಗೊಳಿಸಿದನು. ಸಂಸ್ಕೃತ-ಕನ್ನಡ ಪದಗಳು ಹೇಗೆ ಹಿತವಾಗಿ ಕೂಡಬೇಕು, ಹೀಗೆ ಕೂಡಿ ಹೊಸತನವನ್ನು ಪಡೆದುಕೊಂಡ ಪದಗಳನ್ನು ಉಚ್ಚರಿಸುವಾಗ ಮೃದಂಗದ ಮಾಧುರ್ಯದಂತೆ (೧-೫೫), ಕನಕರಚನೆಯೊಳ್ ಮಣಿನಿಕರದಂತೆ, ಕೇಳಲೂ-ಕಾಣಲೂ ಶೋಭಾಯಮಾನ ಗೊಳ್ಳಬೇಕು (೧-೬೧); ಅರಿಸಮಾಸಗಳಿಂದ ಅವುಗಳ ಧ್ವನಿ-ಪ್ರಭೇದಗಳು 'ಘರಘರ'ವಾಗಿ ಗಡುಸುಗೊಳ್ಳಬಾರದು ಎಂಬವುಗಳ ಸುತ್ತ ಅವನ ಚಿಂತನೆ ಕೇಂದ್ರೀಕೃತವಾಗಿತ್ತು. ಅಂದಮಾತ್ರಕ್ಕೆ ಬೆಳೆಯುತ್ತಿದ್ದ ಕನ್ನಡದ ಕಳಕಳಿಯು ಅವನಲ್ಲಿ ಗೌಣಗೊಂಡಿತ್ತೆಂದು ಭಾವಿಸಿದರೆ ಅದು ತಪ್ಪಾಗುವುದು. ಕನ್ನಡ (ದೇಸಿ) ಮಾತುಗಳಲ್ಲಿ ನಾಣ್ನುಡಿಯ ಬೆಡಗಿರಬೇಕೆನ್ನುವುದನ್ನೂ ಪರುಷಾಕ್ಷರಗಳಿಂದ ತುಂಬಿರುವ ಸಂಸ್ಕೃತವನ್ನು ಯಾಂತ್ರಿಕವಾಗಿ ಬಳಸಿ ಕನ್ನಡವನ್ನು ತೊಡರಿಸಬಾರದೆಂಬುದನ್ನೂ ಹವಣಾದ-ಮೆಲ್ಪುವೆತ್ತಿದ ಪದರಚನೆಯನ್ನು ಸಾಧಿಸಿಕೊಳ್ಳುವ ಹಂಬಲವನ್ನೂ ಅವನು ಅಪಾರ ಪ್ರಮಾಣದಲ್ಲಿ ಪ್ರದರ್ಶಿಸಿರುವುದು ಇದಕ್ಕೆ ಸಾಕ್ಷಿ(೧-೧೪೫). ದೃಷ್ಟಾಂತಾಲಂಕಾರವನ್ನು ವಿವರಿಸುವಾಗ ಅದನ್ನು 'ಕನ್ನಡದೊಳ್' ಹದವಾಗಿ ಹೇಗೆ ಮಾರ್ಪಡಿಸಿಕೊಳ್ಳಬೇಕೆಂಬುದಕ್ಕೆ ಅವನು ಒಡ್ಡಿರುವ ವಾದ.

ತೊಲ್ಕಾಪ್ಪಿಯನಾರ್‌ನಲ್ಲಿ ಇಲ್ಲದ, ಇದ್ದರೂ ಗಟ್ಟಿಗೊಳ್ಳದ, ಸಂಸ್ಕೃತ ಪ್ರಜ್ಞೆಯನ್ನು ನಾವು ಮಾರ್ಗಕಾರನಲ್ಲಿ ಕಾಣುವಾಗ ಅವರವರ ಯುಗಧರ್ಮಗಳನ್ನು ದೂರವಿಡಬಾರದು. ಹೀಗೇನಾದರೂ ಅವನ್ನು ಮರೆತು ಮಾರ್ಗಕಾರನೆಡೆ ನೋಡಿದರೆ, ಅವನು ತೊಲ್ಕಾಪ್ಪಿಯನಾರ್‌ನು ಈಜಿದ ವಿರುದ್ಧ ದಿಕ್ಕಿನಲ್ಲಿ ಈಜಿದನೇನೋ ಎಂಬ ಭಾವನೆ ಬಂದರೂ ಬರಬಹುದು. ತೊಲ್ಕಾಪ್ಪಿಯನಾರ್‌ನ ದಿಟ್ಟ ಮತ್ತು ದಕ್ಷ ನಿಲುವು (ಅವನ ಯುಗಧರ್ಮಕ್ಕನುಗುಣವಾಗಿ) ಸಂಸ್ಕೃತ ಪರಂಪರೆಯನ್ನು ಕುರುಡುಕಣ್ಣಿನಿಂದ ಗೌರವಿಸು ವುದಾಗಲೀ ಅಬ್ಬರದಿಂದ ಆರಾಧಿಸುವುದಾಗಲೀ ಆಗಿರಲಿಲ್ಲ. ಆ ಪರಂಪರೆಯ ಪ್ರಸ್ತಾಪ ಮತ್ತು ಪ್ರಸ್ತುತತೆ ಅವನಿಗೆ ಆನುಷಂಗಿಕ ಮಾತ್ರ. ಅಂದರೆ ಸಂಸ್ಕೃತವನ್ನು ಹೊರಗಿಡಬೇಕೆಂಬ ಉನ್ಮಾದತೆ ಅವನಲ್ಲಿರಲಿಲ್ಲವೆಂದರ್ಥ. ಸಂಸ್ಕೃತ ಪದಗಳನ್ನು ಪಡೆದುಕೊಳ್ಳುವ ಪ್ರಮೇಯವೇನಾದರೂ ಉದ್ಭವಿಸಿದರೆ, ತಮಿಳಿನ ಧ್ವನಿ-ನಿಯಂತ್ರಣಕ್ಕೊಳ ಪಡಿಸಿಕೊಂಡು ಅವುಗಳನ್ನು ಪಡೆಯಬೇಕೆಂಬುದು ಅವನ ಗುರಿಯಾಗಿತ್ತು. ಹೀಗೆ ಅಳವಡಿಸಿಕೊಳ್ಳುವಾಗ, ಸಂಸ್ಕೃತ ಪದವೊಂದು ತನ್ನ ಮೂಲಾರ್ಥವನ್ನು ಕಳೆದುಕೊಂಡರೆ, ವಿರುದ್ಧಾರ್ಥಕ್ಕೆ ಎಡೆಮಾಡಿಕೊಟ್ಟರೆ, ಅದರಿಂದ 'ಕುದಿಯುವ ಹಾಲಿನಲ್ಲಿ ಹುಳಿ ಹಿಂಡಿದರೆ ಆಗಬಹುದಾದ ಅನಾಹುತದ ಭೀಕರತೆ' (ಮಾರ್ಗಕಾರನನ್ನು ಮುಂದೊಮ್ಮೆ ಕಾಡುವಂತೆ) ಅವನನ್ನು ಕಾಡಲಿಲ್ಲ. ಇದಕ್ಕೊಂದು ನಿದರ್ಶನ ನನಗೆ ನೆನಪಾಗುವುದು. 'ರಾಜನ್' ಎಂಬುದು ಸಂಸ್ಕೃತ ಪದ. ಆದರೆ 'ರ'ಕಾರದಿಂದ ತಮಿಳಿನಲ್ಲಿ ಯಾವ ಪದವೂ ಪ್ರಾರಂಭಗೊಳ್ಳ

ದಿರುವುದರಿಂದ, ಅದನ್ನು ತಮಿಳೀಕರಿಸಿದಾಗ, ಅದು ರೂಪ ಬದಲಿಸಿಕೊಂಡು (ಅರಜನ್) 'ಅರಸ' ಎಂದು ಅಂತ್ಯಗೊಳ್ಳುವುದು.[೨೫] ಸಂಸ್ಕೃತದ 'ಅರಸ' (ಅ-ರಸ: ರಸರಹಿತ, ರಸಹೀನ, ರಸಶೂನ್ಯ ಮುಂ) ಪದದ ಅರ್ಥ ಅನಾಹುತಕ್ಕೆ ಎಡೆಮಾಡಿಕೊಳ್ಳು ವಂತಹದಾದರೂ, ತಮಿಳಿಗೆ ಪರಿವರ್ತಿತಗೊಂಡ 'ಅರಸ' ಪದದಲ್ಲಿ ಈ ಅನಾಹುತಕ್ಕೆ ಅವಕಾಶವೇ ಉಂಟಾಗಲಿಲ್ಲ. ಈ ಬಗೆಯ ಅರ್ಥಾಂತರಕ್ಕೆ ಕಾರಣವಾದ ಪದಗಳ ಕೊಡುಕೊಳ್ಳುವಿಕೆಯು ಕುಲಗೆಡಿಸುವ ಕ್ರಿಯೆ ಎಂದು, ಬದಲಾದ ಯುಗಧರ್ಮಕ್ಕೆ ಒಳಗಾದ ಮಾರ್ಗಕಾರನನ್ನು ಗಾಬರಿಗೊಳಿಸು ತ್ತಿತ್ತೆಂಬುದರಲ್ಲಿ ಅನುಮಾನವಿಲ್ಲ.

ಮಾರ್ಗಕಾರನ ಆದರ್ಶ ಕವಿಗಳು 'ಹರ್ಷಚರಿತ' ಮತ್ತು 'ಕಾದಂಬರಿ'ಗಳ ಗದ್ಯಕಾವ್ಯ ಕರ್ತೃಗಳು (೧-೨೮) ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮುಂತಾದ ಗದ್ಯಾಶ್ರಮ ಪದಗುರುಗಳು (೧-೨೯); ಗುಣಸೂರಿ, ನಾರಾಯಣ, ಭಾರವಿ, ಕಾಳಿದಾಸ, ಮಾಘ ಮೊದಲಾದ ಮಹಾಕಾವ್ಯಗಳ 'ಅಮಳ ಕವಿವೃಷಭರ್ಕಳು' (೧-೩೧); ಶ್ರೀವಿಜಯ, ಕವೀಶ್ವರ ಪಂಡಿತ, ಚಂದ್ರಲೋಕಪಾಲ ಮುಂತಾದ ಅದ್ಭುತ ಲಕ್ಷ್ಯ ಮಾದರಿಗಳನ್ನು ಒದಗಿಸಿಕೊಟ್ಟ ಮಹಾನುಭಾವರು (೧-೩೨), ಇವರೆಲ್ಲರೂ ಹಾಕಿಕೊಟ್ಟ ಮಾರ್ಗದಲ್ಲಿಯೇ ನಡೆದು, ಅವರ ಸಂಪ್ರದಾಯಗಳನ್ನು ಇನ್ನೂ ಸಂಪದ್ಭರಿಸಿ, ಅವರನ್ನು ಸ್ವರ್ಗದಲ್ಲಿ ಸುಖಪಡಿಸುವುದು ಮಾರ್ಗಕಾರನ ಯುಗಧರ್ಮವಾಗಿತ್ತು. ಕಾರಣ, 'ಸಮಸಂಸ್ಕೃತಗಳೊಳ್ ಸೈತಮರ್ದಿರೆ ಕನ್ನಡಮಱಿದು ಪೇಳ್' ಎಂಬುದು (೧-೫೧), 'ವಿದಿತ ಸಮಸಂಸ್ಕೃತೋದಿತ ಪದಂಗಳೊಳ್ ಪುದಿದು ಬೆರಸಿ ಬರೆ ಕನ್ನಡದೊಳ್ ಮುದಮನವು ತರ್ಕುಂ', (೧-೫೫) ಎಂಬುದು ಮಾರ್ಗಕಾರನಲ್ಲಿ ಬಲವಾಗಿ ಬೇರುಬಿಟ್ಟಿತ್ತು. ದೇಸಿಯ ಬಗ್ಗೆ ಅವನಿಗೆ ಎಷ್ಟೇ ಕಳಕಳಿ ಇದ್ದರೂ - ಅದಕ್ಕೆ ಅಡಚಣೆ ಇರಲಿಲ್ಲವೆಂಬುದನ್ನು ಈಗಾಗಲೇ ಕಂಡಿರುವೆವು - ಅದರ ಚರ್ಚೆಯನ್ನು ಮೊಟಕುಗೊಳಿಸಿ, ಮಾರ್ಗೀ ಪರಂಪರೆಯ ಚರ್ಚೆಯನ್ನು ಅವನು ಸಾಕಷ್ಟು ವಿಸ್ತಾರಗೊಳಿಸುವುದನ್ನು ನೋಡಿದರೆ, ಸಂಸ್ಕೃತನಿಷ್ಠೆಯು ಅವನನ್ನೆಷ್ಟು ಪ್ರೇರೇಪಿಸಿತೆಂಬುದು ಸ್ಪಷ್ಟಗೊಳ್ಳುವುದು.

ರಸಪ್ರಜ್ಞೆ-ಕಾವ್ಯಧರ್ಮ

ಸಮಾಸ, ಛಂದಸ್ಸು ಮತ್ತು ಪದಬಂಧಕ್ಕೆ ಈ ಅಭ್ಯಾಸವನ್ನು ಸೀಮಿತಗೊಳಿಸದೇ, ಕಾವ್ಯದ ಜೀವಾಳವಾದ ರಸಪ್ರಜ್ಞೆಗೆ ಇದನ್ನು ವಿಸ್ತರಿಸಿದರೆ, ಕುತೂಹಲಕರವಾದ ಕೆಲವು ಅಂಶಗಳನ್ನು ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರನ ಯುಗಧರ್ಮಗಳು ಹೊರಗೆಡ ಹುವುವು. ಹಸಿರು ಕಂಡಲ್ಲೆಲ್ಲ ಮುಕ್ತವಾಗಿ ಬಾಯಾಡಿಸಲು ಬಯಸಿದ ಮಾರ್ಗಕಾರನೊಡನೆ ಹೋಲಿಸಿದರೆ, ತಾನೇ ಹಾಕಿಕೊಂಡ ಶಾಸ್ತ್ರೀಯ ಬೇಲಿಯನ್ನು ತೊಲ್ಕಾಪ್ಪಿಯನಾರ್‌ನ ಭಿನ್ನ ವ್ಯಕ್ತಿತ್ವವು ಎದ್ದು ಕಾಣುವುದು. ಭಾಷೆ, ಭಾಷಿಕರ ಸ್ವಭಾವ, ಭಾಷಾನಕ್ಷೆ, ದೇಸಿಕಾವ್ಯದಲ್ಲಿಯ ಕೊರತೆ, ಮಾರ್ಗೀಯ ಮಾಧುರ್ಯ-ಇವಾವನ್ನೂ ತೊಲ್ಕಾಪ್ಪಿಯನಾರ್‌ನಲ್ಲಿ ನಾವು ಕಾಣುವುದಿಲ್ಲ. ಅಷ್ಟೇಕೆ, 'ತಮಿಳು' (ಭಾಷೆ) ಮತ್ತು ತಮಿಳಗಂ (ತಮಿಳು ತವರುಮನೆ)

ಬಗ್ಗೆ ಭಾವಾವೇಶದ ಮಾತೂ ಅವನಿಂದ ಬರುವುದಿಲ್ಲ. ಮಾರ್ಗಕಾರನಂತೆ ಪುಳಕಿತ ಗೊಳಿಸುವ, ಕಚಕುಳಿ ಇಡುವ, ಭಾವನಾಲೋಕಕ್ಕೆಳೆದೊಯ್ವ, ಶೃಂಗಾರರಸದಲ್ಲದ್ದಿ ಸಿಹಿಗೊಳಿಸುವ, ನುಡಿಗಳಾಗಲೀ ಲಕ್ಷ್ಯಗಳಾಗಲೀ ತೊಲ್ಕಾಪ್ಪಿಯಮ್ ನಲ್ಲಿ ಅತಿವಿರಳ.

ಆರಂಭಕಾಲದ ತಮಿಳು ಕಾವ್ಯದ ಪ್ರಧಾನ ವಸ್ತುಗಳಲ್ಲೊಂದು, ಪ್ರಣಯ. 'ಅಹಂ' ಪದದ ಮೂಲಕ ಇದರ ವೇದಿಕೆಯನ್ನು ನಿರ್ಮಾಣ ಮಾಡಿಕೊಟ್ಟವರಲ್ಲಿ ಮೊದಲಿಗೆ ತೊಲ್ಕಾಪ್ಪಿಯನಾರ್. ಪ್ರಕೃತಿಯ ಅಗಾಧತೆಯನ್ನು ಕಣ್ತುಂಬ ಸವಿದುಂಡ ಈ ಪ್ರಣಯ ಪ್ರಭೇದಗಳನ್ನು ಪ್ರಾದೇಶಿಕ ಪರಿಸರದಲ್ಲಿ - ಮುಲ್ಲೈ, ಕುಱಿಂಜ್ಞಿ, ಮರುದಮ್, ನೆಯ್ದಲ್ ಮತ್ತು ಪಾಲೈ ಕ್ಷೇತ್ರಗಳಾದ ಕಾನನ, ಬೆಟ್ಟ, ಕೃಷಿಭೂಮಿ, ತೀರಪ್ರದೇಶ ಮತ್ತು ಮರಳು(ಪಾಳ್) ಭೂಮಿಯಲ್ಲಿ - ಪ್ರಣಯ ವ್ಯಾಪಾರಗಳಾದ 'ಕೂಡುವಿಕೆ', 'ಅಗಲುವಿಕೆ', 'ಸಹನೆ', 'ಕಾತರ' ಮತ್ತು 'ವಿರಹ'ಗಳನ್ನು ಗುರುತಿಸಿದನು. ಪ್ರಣಯ ಸೆಳೆತಕ್ಕೊಳಗಾದವರು ಹನ್ನೆರಡು ಬಗೆಯ ಗುಪ್ತ ಸ್ಥಳಗಳಲ್ಲಿ ಸಂಧಿಸುವುದು, ಕಣ್ಣಿನಿಂದಲೇ ಮೂಕಿಯಾಡುವುದು, ಸಖಿಯರ ಸಹಾಯದಿಂದ ಸದಾವಕಾಶ ದೊರಕಿಸಿಕೊಳ್ಳುವುದು, ಪ್ರಣಯ ಕ್ರೀಡೆಯಲ್ಲಿ ತೊಡಗುವುದು, ಮನೆಯನ್ನು (ಸಮಾಜವನ್ನು) ತೊರೆದು, ಪ್ರಿಯರೊಡನೆ ಪಲಾಯನ ಮಾಡುವುದು, ಸಮಾಜದ ಕಟ್ಟಳೆಯನ್ನು ದಿಟ್ಟವಾಗಿ ಮುರಿಯುವುದು -ಈ ಮುಂತಾದವು ಇವನಿಂದ ಸಮಗ್ರವಾಗಿ ಗುರುತಿಸಿಕೊಂಡವು.

ಆದರೆ ಸಂಸ್ಕೃತ ಕವಿಗಳಿಂದಾದ ಪ್ರಣಯಿಗಳ ಮಾದಕ ಸರ್ವೇಕ್ಷಣ, 'ತಲೈವಿ' (ನಾಯಿಕೆ)ಯ ಮೈಮಾಟ ನಿಷ್ಕರ್ಷೆ ಮತ್ತು ಮೋಹಕಾಂಗ ಮಾಪನಾಕ್ರಿಯೆಗಳನ್ನು ಇವನು ಪ್ರಣಯಗೀತಾ ಸಂಹಿತೆಯಿಂದ ಹೊರಗಿಟ್ಟಿರುವುದು ಗಮನಾರ್ಹ. ಅಂದರೆ ಜೇನುಗೂಡಿನಂತೆ ದಟ್ಟೈಸಿದ ಗುಂಗುರು ಕೂದಲನ್ನು, ಸರ್ಪದಂತೆ ಸುಳಿವ ನೀಳ ಜಡೆಯನ್ನು, ಬಿಲ್ಲಿನ ಹುಬ್ಬನ್ನು, ದಾಳಿಂಬದ ದಂತಪಂಕ್ತಿಯನ್ನು ತೊಂಡೆಯ ತುಟಿಯನ್ನು ಶಂಖದ ಕೊರಳನ್ನು ಪದ್ಮ ಮತ್ತು ಚಂದ್ರನನ್ನು ಹೀಯಾಳಿಸುವ ಮುಖವನ್ನು, ಜೋಡು ಪಾರಿವಾಳಗಳಂತೆ ವಿಶ್ರಮಿಸಿದ ಸ್ತನದ್ವಯಗಳನ್ನು ಮತ್ತು ಕಳಸದಂಚಿನ ಚೂಚುಕಗಳನ್ನು, ಸಾಗರದಂತೆ ಓಲಾಡುವ ಸಿಂಹಕಟಿಯನ್ನು, ತ್ರಿವಳಿಗಳಿಂದ ಗುರುತಿಸಿಕೊಂಡ ಕಿಬ್ಬೊಟ್ಟೆಯನ್ನು, ಅಲ್ಲಿಂದ ಕೆಳಗಿಳಿದ ಸೂಕ್ಷ್ಮ ರೋಮರೇಖೆಯನ್ನು, ಸೊಕ್ಕಿದ ಗಜಪೃಷ್ಠಗಳನ್ನು ಬಾಳೆದಿಂಡಿನ ತೊಡೆಗಳನ್ನು, ಪದ್ಮದ ಪಾದಗಳನ್ನು ಮತ್ತು ಹಂಸದ ನಡಿಗೆಯನ್ನು ತೊಲ್ಕಾಪ್ಪಿಯನಾರ್‌ನ ತಲೈವಿಯಲ್ಲಿ ನಾವು ಕಾಣುವುದಿಲ್ಲ. ಪ್ರಣಯ ಜ್ವರಕ್ಕೀಡಾದ ನಾಯಕನಾಗಲೀ ತೆರೆಯ ಮರೆಯಲ್ಲಿ ನಿಂತು ಇಣುಕು ಹಾಕುವ ಕವಿಮಿತ್ರನಾಗಲೀ ನಾಯಿಕೆಯ ಸುಂದರ ಸೌಷ್ಠವದೆಡೆಗೆ ಹೆಚ್ಚು ಕಣ್ಣಾಡಿಸದೆ, ಪ್ರಧಾನವಾಗಿ ಅವಳ ಭಾವಾಂತರಂಗಕ್ಕಿಳಿದು, ಅವಳ ತುಮುಲ- ತುಡಿತಕ್ಕೆ ಅನುಕಂಪಿತನಾಗಿ, ಅವುಗಳನ್ನು ಮುಕ್ತಮನಸ್ಸಿನಿಂದ ಅನ್ವೇಷಿಸುವನು. ಅಲ್ಲೊಮ್ಮೆ-ಇಲ್ಲೊಮ್ಮೆ ಅವನೂ ನಾಯಿಕೆಯ ದೇಹಾಂಗಗಳೆಡೆ ಕಣ್ಣು ಹಾಯಿಸುವನು, ನಿಜ; ಆದರೆ ಇಲ್ಲಿ ಅವನು ಕಾಣುವುದು ಅವಳ

ಕಾಂತಿಗುಂದಿದ ಮುಖ, ಬೆಂಡಾದ ಭುಜದ್ವಯ, ಬಸವಳಿದ ಮುಂಗೈ ಮತ್ತು ಅದರಿಂದ ಬಿಚ್ಚಿ ಬೀಳುವ ಕಂಕಣ, ಕುಂದಿದ ಕರ್ಣ ಮತ್ತು ಅದರಿಂದ ಕಳಚಿ ಬೀಳುವ ಕಾನದಾವಲಿ ಮಾತ್ರ. ಮುಖ ಮತ್ತು ಭುಜಗಳನ್ನು ಬಿಟ್ಟು ಅವನ ದೃಷ್ಟಿ ಕೆಳಗಿಳಿದರೆ, ಅದು ತುಂಬಾ ಅಪರೂಪ ಮತ್ತು ಅಷ್ಟೇ ಆಕಸ್ಮಿಕ.

ತೊಲ್ಕಾಪ್ಪಿಯನಾರ್ ಹಾಕಿಕೊಟ್ಟ ಕಾವ್ಯಧರ್ಮವನ್ನನುಸರಿಸಿ ಮುಂದುವರಿದರೂ ಶಂಗಂ ಕವಿಗಳು ಹಂತಹಂತವಾಗಿ ಹಬ್ಬುತ್ತಿದ್ದ ಸಂಸ್ಕೃತೀಕರಣದ ಪ್ರಭಾವದಿಂದ ಸಂಪೂರ್ಣವಾಗಿ ರಕ್ಷಿಸಿಕೊಳ್ಳಲು ಸಾಧ್ಯವಾಗಲಿಲ್ಲವೇನೊ.[೨೫] ಆದರೂ ಶಂಗಂ ಪ್ರಣಯ ಗೀತೆಯಲ್ಲಿ ಕಾಣುವ ಸೌಂದರ್ಯಪ್ರಜ್ಞೆಗೂ ಕ್ಲಾಸಿಕಲ್ ಸಂಸ್ಕೃತ ಕಾವ್ಯಗಳಲ್ಲಿ ಕಾಣುವ ಪ್ರಜ್ಞೆಗೂ ಇರುವ ಅಂತರವನ್ನು ಉಪೇಕ್ಷಿಸುವಂತಿಲ್ಲ. ಪ್ರಣಯ ಕ್ರೀಡೆಯಲ್ಲಿ ತೊಡಗಿದವರಲ್ಲಿ ಒಬ್ಬರು ಮತ್ತೊಬ್ಬರಲ್ಲಿ ಗುರುತಿಸುವ ದೈಹಿಕ ಮತ್ತು ಭಾವನಾತ್ಮಕ ಸಂವೇದನೆಗಳಲ್ಲಿ, ದೈಹಿಕ-ಸೌಂದರ್ಯ ಪ್ರಜ್ಞೆ ತನ್ನ ಹಂತವನ್ನು ಸ್ವಲ್ಪ ಎತ್ತರಿಸಿಕೊಂಡಿದ್ದನ್ನು ಶಂಗಂ ಪ್ರಣಯ ಕಾವ್ಯಗಳಲ್ಲಿ ನಾವು ಕಾಣುವೆವು. ತಲೈವಿಯ ಮುಂಗಾರಮೋಡ ವರ್ಣದ ದಟ್ಟ ಕೇಶ ರಾಶಿಯನ್ನು ಮತ್ತು ಅದನ್ನು ಬಳಸಿ ಬೆಳಗುತ್ತಿದ್ದ ಎಳವರೆಯಂತಹ ನೊಸಲನ್ನು ಬೊಂಬಿನಂತೆ ತೊಯ್ದಾಡುವ ಬಾಹುದ್ವಯಗಳನ್ನು, ಒದ್ದೆ ಕಣ್ಣುಗಳನ್ನು, ಸಾಲುಗಟ್ಟಿದ (ಬಿದಿರ ಮುಳ್ಳಿನಂತೆ ಮೊನಚಾದ?) ದಂತಪಂಕ್ತಿಯನ್ನು, ಕುವಳೈ ಪತ್ರ ಗಳಿಂದ ಹೆಣೆದ ಕೆಳ ಉಡುಗೆಯನ್ನು, ನಿಭಾಯಿಸಲಾಗದಂತಹ ನಡುವನ್ನು, ಮಧುವಿನಲ್ಲಿ ಅದ್ದಿ ತೆಗೆದ ಹವಳವರ್ಣದ ತುಟಿಗಳನ್ನು, ಕೆತ್ತಿದ ಪುತ್ಥಳಿಯಂತಹ ಮೈಮಾಟವನ್ನು ಚಂದ್ರನಂತಹ ಮುಖವನ್ನು, ಗಂಡು ನವಿಲಿನ ನಡೆಯನ್ನು, ಎರಡು ಸಾವಿರಕ್ಕೂ ಮಿಕ್ಕಿದ ಕವನರಾಶಿಯಲ್ಲಿ ಹುಡುಕಿ-ಹುಡುಕಿ ತೆಗೆದಾಗ ಒಂದೋ-ಎರಡೋ ನಿದರ್ಶನಗಳು ದೊರೆತರೆ ಸಾಕು. ನಿತಂಬದಿಂದಿಳಿದ ದೇಹದ ಉಲ್ಲೇಖಕ್ಕಿಲ್ಲಿ ಅಪರೂಪದ ಎಡೆ. ಆಲಿಂಗನಕ್ಕಿರುವ ಅವಕಾಶ ಇಲ್ಲಿ ಚುಂಬನಕ್ಕಿಲ್ಲ. ಸುರತ ಕ್ರೀಡೆಗಿಲ್ಲಿ ಮಡಿವಂತಿಕೆ ಇಲ್ಲವಾದರೂ ಅದರ ಶಾಬ್ದಿಕ ಮೆರವಣಿಗೆ ಇಲ್ಲ. ಸಹಜ ವರ್ಣಕ್ಕನುಗುಣವಾಗಿ 'ಶಂಗಂ' ನಾಯಿಕೆಯರು ಕ್ಷೀರ, ಚಂದ್ರಕಾಂತ, ಮುತ್ತು ಮೊದಲಾದವುಗಳ ಬಿಳಿ ಬಣ್ಣದವರಲ್ಲ; ಮಿಡಿಮಾವು, ಚಿಗುರೆಲೆ, ನವಿಲುಗರಿ ಕಣ್ಣಿನ ಕಂದುಕಪ್ಪು, ಕೃಷ್ಣವರ್ಣ ಮತ್ತು ಕಡುನೀಲಿಯವರು.[೨೬] ಅವಳ ಸಹಜ ಸೌಂದರ್ಯ ತೆರೆದುಕೊಂಡೇ ಇತ್ತೆಂದು ತೋರುವುದು, ಏಕೆಂದರೆ ಅವಳ ಎದೆಯನ್ನು ಅರೆಮರೆಮಾಡಿದ್ದ ಹಾರಗಳನ್ನು ಕಿವಿಯನ್ನೂ ಮುಂಗೈಯನ್ನೂ ಅಲಂಕರಿಸಿದ್ದ ಆಭರಣಗಳನ್ನು ಬಿಟ್ಟರೆ, ವಿಶೇಷ ಉಡುಗೆ ಗಳ ಅಲಂಕಾರವೇ ಇವಳಿಗೆ ಇರಲಿಲ್ಲ. ನಿತಂಬವನ್ನಾದರೋ ಅವಳು ಮರೆಮಾಚಿ ಕೊಳ್ಳುತ್ತಿದ್ದುದು ವಸಂತದ (ಎಳೆಯ) ಕುವಳೈ ಮೊದಲಾದ ಪತ್ರಗಳಿಂದ ಹೆಣೆದ ಉತ್ತರೀಯದಿಂದ. ಹದಿಹರೆಯದವರ ಹವ್ಯಾಸಕ್ಕನು ಗುಣವಾಗಿ ಅವಳೂ ತನ್ನ ಎದೆಯನ್ನು ಗಂಧದ ರಸದಿಂದ ಬಿಡಿಸಿದ ರೇಖಾಚಿತ್ರಗಳಿಂದ ಅಲಂಕರಿಸಿಕೊಳ್ಳುತ್ತಿದ್ದಳು.

ಇವನ್ನೆಲ್ಲ ಶಂಗಂ ಕವಿ ಆಗೊಮ್ಮೆ ಈಗೊಮ್ಮೆ ಗುರುತಿಸಿದರೂ ಉನ್ಮಾದಿತ, ಉತ್ಪ್ರೇಕ್ಷಿತ, ವೈಭವೀಕೃತ ಕ್ಲಾಸಿಕಲ್ ಕವಿ ಭಾಷೆಗಿಂತ ಎಷ್ಟು ದೂರ ನಿಂತಿರುವನೆಂಬುದನ್ನು ಅವನ ಕಾವ್ಯ ಸಮರ್ಥವಾಗಿ ಪ್ರದರ್ಶಿಸುವುದು.

ಮಾರ್ಗಕಾರನ ಕಾಲಕ್ಕೆ ಈ ನಿಯಮಾವಳಿ ಬದಲಾಗಿ, ಪ್ರಣಯ ಕಾವ್ಯದ ಶಬ್ದ ಭಂಡಾರವು ಶೃಂಗಾರ ರಸದ ಕಣಜವಾಗಿತ್ತು. ಕವಿರಾಜಮಾರ್ಗದ ಉದ್ದಗಲಕ್ಕೆ ಹರಡಿಕೊಂಡಿರುವ ಈ ಪದಸಂಪತ್ತು (ರೂಪಕ) ಅಲಂಕಾರ ಮತ್ತು ಉಪಮೆಯ ವಿವೇಚನೆ ಯಲ್ಲಿ ಮಡುಗಟ್ಟಿರುವುದನ್ನು ಕಾಣಬಹುದು. ಇಲ್ಲಿನ ಆದರ್ಶ ನಾಯಿಕೆ ಶಶಿಕಿರಣಕಾಂತಿ (೩-೭೮), ಉದಿತಮಣಿರಾಗ (೩-೮೩), ಅಮೃತಮಯಕಾಂತಿ (೩-೧೦೩), ಶ್ವೇತ, ವಿಳಸಿತ, ವಿಶದ (೨-೪೦, ೩-೮೩ ೧-೨) ವರ್ಣೆ. ಅವಳದ್ದು 'ಝಷಕೇತನ ಕೇತನಾಭ ತನು ತನು...' (೨-೪೦). ಅವಳ ಮುಖ ತಾವರೆ ಮತ್ತು ಚಂದ್ರನನ್ನು (೧-೫೯, ೧-೬೦, ೧-೮೯; ೨-೪೦, ೩-೧೨) ಪ್ರತ್ಯೇಕ-ಪ್ರತ್ಯೇಕವಾಗಿ, ಇಲ್ಲವೆ ಒಟ್ಟಾಗಿ (ಕೆಂದಾವರೆ-ಚಂದ್ರ-೩-೬೭, ೭೪, ೭೫, ೭೭) ಹೋಲುವಂತಹದು. ಮದದಿಂದ ತುಂಬಿದ ಇಲ್ಲವೇ ಮಿಂಚಿನಂತೆ ಸಂಚಲಿಸುವ ನಯನಗಳು; ದುಂಬಿಗಳನ್ನೋ ಇಲ್ಲವೇ ಕನ್ನೈದಿಲೆಗಳನ್ನೋ ಹೋಲುವಂಥವು (೧-೪೩; ೨-೫೮; ೩-೧೦, ೧೨, ೧೬, ೨೪, ೨೫, ೪೭, ೫೦, ೬೦, ೮೩ ಮುಂ.). ಅವಳ ತುಟಿ ಮತ್ತು ಅಂಗೈ ಚಿಗುರಿನ ಸೊಬಗನ್ನೂ ಕೋಮಲತೆಯನ್ನೂ ಪಡೆದಂಥವುಗಳು (೩-೧೪, ೬೦-೬೨). ಅವಳದ್ದು ಉನ್ನತ ಭ್ರೂಚಾಪ ಇಲ್ಲವೇ ಮದಾಲಸ ಭ್ರೂಲತಾ (೩-೧೭, ೨೩, ೪೭). ಅವಳು ತಳಮಿತ ಮಧ್ಯೆ; ಪೃಥುನಿತಂಬೆ; ಉನ್ನತಸ್ತನಯುಗೇ (೩-೧೦) -ಇವುಗಳಿಂದ ಕೂಡಿದ ಅವಳ ನಡಿಗೆ ಕಳಹಂಸ ತರದ್ದು (೩-೫೦-೫೧).

ಮಾರ್ಗಕಾರನ ಕೆಲವು ಕಾವ್ಯಸಾಲುಗಳನ್ನು ನಿದರ್ಶಿಸಿದರೆ ಆ ಯುಗದ ಸೌಂದರ್ಯಪ್ರಜ್ಞೆ ಇನ್ನಷ್ಟು ಸ್ಪಷ್ಟಗೊಳ್ಳಬಹುದೇನೋ. ಅವುಗಳಲ್ಲಿ ಕೆಲವು ಇಂತಿವೆ:

* ತಳಮಿತ - ಮಧ್ಯೆಯನ್ ಆಯತ - ವಿಲೋಳಲೋಚನೆಯನ್ ಉನ್ನತ - ಸ್ತನಯುಗೆಯಂ ಲಳಿತ-ವಿಳಾಸಿನಿಯಂ ಕೋಮಳಾಂಗಿಯಂ ಪೃಥುನಿತಂಬೆಯನ್ (೩-೧೦)
* ಚಂಚಲಾಧರ-ಪಲ್ಲವೆ ರುಚಿರನೇತ್ರ ಕುಸುಮೆ ವಿಲೋಲ ಭುಜಶಾಖೆ (೩-೧೫)
* ಮೃದುತರ ಕಪೋಲಪಲಕಂ ಪದನಾಂಬುಜಮ್ - ಆಯತೋನ್ನತ (೩-೧೭)
* ವದನವಲ್ತಂಬುರುಹಂ ವಾದಲೋಲ-ವಿಲೋಚನಂಗಳಲ್ಲವಿವ್ -ಅಳಿಗಳ್ (೩-೨೪)
* ವನರುಹದಂತೆ ಮುಖಂ ಲೋಚನಮೆಸೆವುತ್ಪಳದೊಳ್ ತಳಂ ತಳಿರೆಂತೆಂ (೩-೬೦)
* ಅಳಿಗಳಿವು ಕಣ್ಗಳಲ್ಲಿವು ನಳಿನಮಿದೀ ವದನಮಲ್ತು ನಿಜಕಾಮಿನಿಯಾ (೩-೭೬)

ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರನ ಕಾಲದ ಯುಗಧರ್ಮಗಳನ್ನು ಮತ್ತು ಈ ವೈಯಾಕರಣಿಗಳ ದೃಷ್ಟಿಕೋನಗಳನ್ನು ಪರಿಚಯಿಸುವುದಕ್ಕೆ ಸೀಮಿತಗೊಳ್ಳದೇ ಸ್ವಲ್ಪ

ವಿಸ್ತರಿಸಿಕೊಂಡು ಈ ಅಭ್ಯಾಸವನ್ನು ಬೆಳೆಸಿದುದರಿಂದ, ನೇರ ದಾರಿಯನ್ನು ಬಿಟ್ಟು ಕವಲು ದಾರಿ ತುಳಿದೆನೇನೋ ಎಂಬ ಅನಿಸಿಕೆ ನನ್ನನ್ನು ಕಾಡುತ್ತಿದೆ; ಆದರೆ, ಕವಿರಾಜಮಾರ್ಗವನ್ನು 'ಸಂಸ್ಕೃತ' ದೃಷ್ಟಿಯಿಂದಲ್ಲದೆ' ದಕ್ಷಿಣದ ಇತರೆ ಪ್ರಾಂತೀಯವಾಗಿರುವಂತಹ ಭಾಷೆಗಳಲ್ಲಿ ಬೆಳೆದು ಬಂದಿರುವ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನ' ಮಾಡಿದ ಸಮಾಧಾನ ನನ್ನದಾಗಿದೆ.

ಆಕರ ಟಿಪ್ಪಣಿ

೧. ತರೀಕೆರೆ ರಹಮತ್ (ಸಂ.). ಕವಿರಾಜಮಾರ್ಗ : ಸಾಂಸ್ಕೃತಿಕ ಮುಖಾಮುಖಿ (ಕನ್ನಡ ವಿ.ವಿ., ಹಂಪಿ ೨೦೦೦)- ''ಕವಿರಾಜಮಾರ್ಗ : ಹೊಸ ಓದು'', ಸುಬ್ಬಣ್ಣ ಕೆ.ವಿ., ಪು.೪-೨೦. ಇಲ್ಲಿ ಸೂಚಿಸಿದ ಸಂವಾದಕರಲ್ಲಿ : ಅ.ಕೆ.ವಿ.ಸುಬ್ಬಣ್ಣ ಆ.ಎಂ.ಎಂ.ಕಲಬುರ್ಗಿ ಮತ್ತು ಇ.ಕೆ.ಜಿ.ನಾಗರಾಜಪ್ಪ.

೨. ಕಲಬುರ್ಗಿ ಎಂ.ಎಂ., ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, (ಧಾರವಾಡ, ೧೯೭೩), ಪು.೧೧೫-೧೧೬: ಕೃಷ್ಣಮೂರ್ತಿ ಕೆ., ''ದಂಡಿ ಭಾಮಹರ ಕೃತಿಗಳು-ತುಲನಾತ್ಮಕ ಅಧ್ಯಯನ''. ಕವಿರಾಜಮಾರ್ಗ, ಸಂ.ವಿ.ಸೀತಾರಾಮಯ್ಯ (ಬೆಂಗಳೂರು, ೧೯೩೩), ಪು.೧೧೧-೧೪೧.

೩. ಶಿವರುದ್ರಪ್ಪ ಜಿ.ಎಸ್., ''ಕವಿರಾಜಮಾರ್ಗ : ಕೆಲವು ಪ್ರತಿಕ್ರಿಯೆಗಳು''. ತರೀಕೆರೆ, ಅದೇ, ಪು.೬೧.

೪. ಕಳೆದ ಶತಮಾನದ ಕವಿರಾಜಮಾರ್ಗ ಚಿಂತಕರಲ್ಲಿ ಈ ಪ್ರಶ್ನೆಯನ್ನು ಎತ್ತಿದವರನ್ನು ನಾನು ಕಾಣುತ್ತಿಲ್ಲ. ನೋಡಿ : ಚಿಟಗುಪ್ಪಿ, ಭೀಮಸೇನರಾವ್, ಕವಿರಾಜಮಾರ್ಗ ಪ್ರಶಸ್ತಿ, (ಧಾರವಾಡ, ೧೯೬೨); ಕಲಬುರ್ಗಿ, ಎಂ.ಎಂ., ಅದೇ, ಮುಳಿಯ ತಿಮ್ಮಪ್ಪಯ್ಯ, ಕವಿರಾಜಮಾರ್ಗ ವಿವೇಕ, (ಮೈಸೂರು, ೧೯೭೩). ಸೀತಾರಾಮಯ್ಯ ಎಂ.ವಿ.,(ಸಂ.) ಕವಿರಾಜಮಾರ್ಗ (ಕವಿಕಾವ್ಯ ಪರಂಪರೆ-೧: ಬೆಂಗಳೂರು, ೧೯೭೩), ಕೃಷ್ಣಮೂರ್ತಿ, ಕೆ., ನೃಪತುಂಗ ದೇವಾನುಮತಂ ಶ್ರೀವಿಜಯ ಪ್ರಭೂತಂ ಕವಿರಾಜಮಾರ್ಗ, (ಬೆಂಗಳೂರು, ೧೯೮೩), ಸೀತಾರಾಮಯ್ಯ, ಎಂ.ವಿ., ಶ್ರೀವಿಜಯ ಕೃತ ಕವಿರಾಜಮಾರ್ಗ, (ಎಂ.ವಿ.ಸೀ. ಸಮಗ್ರ ಸಾಹಿತ್ಯ, ಬೆಂಗಳೂರು ೧೯೯೪). ತಮ್ಮ ಮಹಾಪ್ರಬಂಧದಲ್ಲಿ ಚರ್ಚಿಸದಿದ್ದರೂ ಈ ಪ್ರಶ್ನೆಯನ್ನು ಮೊದಲು ಎತ್ತಿದವರು ಎಂ.ಎಂ. ಕಲಬುರ್ಗಿಯವರು.

೫. ನನ್ನ ಗಮನವನ್ನು ವಿಶೇಷವಾಗಿ ಸೆಳೆದ ಇಂಗ್ಲಿಷ್ ಭಾಷೆಯ ಅನುವಾದಗಳಲ್ಲಿ ಪ್ರಮುಖವಾದವುಗಳೆಂದರೆ - ಆಲ್ಬರ್ಟ್ ಡಿ., ತೊಲ್ಕಾಪ್ಪಿಯಮ್ - ಫೋನಾಲಜಿ ಅಂಡ್ ಮಾರ್ಫಾಲಜಿ, (ಚೆನ್ನೈ, ೧೯೮೫): ಇಲುಕ್ಕುವನರ್ ಎಸ್., ತೊಲ್ಕಾಪ್ಪಿಯಮ್ ಇನ್ ಇಂಗ್ಲಿಷ್ ವಿತ್ ಕ್ರಿಟಿಕಲ್ ಸ್ಟಡೀಸ್, (ಚೆನ್ನೈ, ೧೯೯೪); ಮುರುಗನ್, ವಿ., ತೊಲ್ಕಾಪ್ಪಿಯಮ್ ಇನ್ ಇಂಗ್ಲಿಷ್, (ಚೆನ್ನೈ, ೨೦೦೧) ಸುಬ್ರಹ್ಮಣ್ಯಶಾಸ್ತ್ರಿ, ಪಿ.ಎಸ್., ತೊಲ್ಕಾಪ್ಪಿಯಮ್ (ವಿತ್ ವೇರಿಯಸ್ ಸಬ್ ಟೈಟಲ್ಸ್), ಸಂ.೧-೫ (ಚೆನ್ನೈ ೧೯೫೦, ೧೯೫೨, ೧೯೭೯, ೧೯೭೯; ಅಣ್ಣಾಮಲೈ, ೧೯೮೭). ಇವಲ್ಲವೆ ಮೂರು-ನಾಲ್ಕು ಡಜನ್ ಬಿಡಿ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಈ ಲೇಖನದಲ್ಲಿ ಪ್ರಧಾನವಾಗಿ ಬಳಸಿರುವ ಗ್ರಂಥ ಇತ್ತೀಚೆಗೆ ಪ್ರಕಟನೆಗೊಂಡ ಮುರುಗನ್ ಸಂಪಾದಿತ ಇಂಗ್ಲಿಷ್ ಅನುವಾದ.

೬. ಒಟ್ಟಾರೆ ಇದ್ದವೆಂಬ ಹದಿನಾಲ್ಕು ಸಂಕಲನಗಳಲ್ಲಿ ಒಂಬತ್ತು ಮಾತ್ರ ಈಗ ಉಳಿದುಕೊಂಡಿವೆ. 'ಕೂತ್ತು'. 'ವರಿ'. 'ಶಿಱ್ರುಸೈ'. 'ಪರಿಸೈ' ಮತ್ತು 'ಅಂಕಂಸಿಯವ್' ಎಂಬವು ನಾಶಗೊಂಡ ಸಂಕಲನಗಳಾಗಿವೆ. ಮೂರ್, ಜಾಹ್ನ್ ರಾಲ್ ಸ್ಟನ್. ದಿ ಏಯ್ಟ್ ಆಂಥೋಲಜೀಸ್, (ಮದ್ರಾಸು, ೧೯೮೫) ಪು.೬ ನೋ. ಪು.೫೪೦-೫೫೦

೭. ಶೆಟ್ಟರ್ ಎಸ್., ''ಕಲೆಕ್ಟಿವ್ ವಿಜ್‌ಡಮ್ : ಸಮ್ ಇಂಡಿಯನ್ ಎಕ್ಸ್ ಪೆರಿಮೆಂಟಲ್ಸ್''. ಸೈನ್ಸ್

ಅಂಡ್ ಬಿಯಾಂಡ್, ಸಂ.ಎಸ್.ಮೆನನ್ ಮತ್ತಿನ್ನಿತರರು, (ಬೆಂಗಳೂರು, ೨೦೦೪), ಪು.೧೮೯-೧೩೭, ಈ ಪ್ರಬಂಧದಲ್ಲಿ 'ಶಂಗಂ' ಸಾಹಿತ್ಯ ಮತ್ತು ಕವಿರಾಜ ಮಾರ್ಗದ ಕೆಲವು ಸಮಾನ ಸಂವೇದನೆಗಳನ್ನು ಪರಿಚಯಿಸಲು ಪ್ರಯತ್ನಪಡಲಾಗಿದೆ.

'ಶಂಗಂ' ಎಂಬುದು ಬಹುಶಃ ಬೌದ್ಧ ಮತ್ತು ಜೈನ 'ಸಂಘ'ಗಳಿಂದ ಪ್ರೇರಿತಗೊಂಡ ಪದವಾಗಿದ್ದು, ಇದು ಸುಮಾರು ಕ್ರಿ.ಶ.೭ನೆಯ ಶತಮಾನದಲ್ಲಿ ಪ್ರಸಾರಕ್ಕೆ ಬಂದಿತೆನಿಸುವುದು. ತಿರುನಾವುಕ್ಕರಸರ್ ತೇವಾರಂ (ತಿರುಮರೈ VI : ತಿರುತ್ತಾಂಡಗಮ್ ತಿರುಪತ್ತೂರು, ಪು.೩)ದಲ್ಲಿ ಸಾಕ್ಷಾತ್ ಶಿವನ್ ಕವಿ ದರುಮಿಯ ಸ್ವರೂಪದಲ್ಲಿ ಪಾಂಡ್ಯರಾಜನ ಆಸ್ಥಾನದಲ್ಲಿ ನೆರೆದ 'ಶಂಗಂ' ಕವಿಗೋಷ್ಠಿಯಲ್ಲಿ ಪಾಲ್ಗೊಂಡ ಕಥೆಯೇ ಅತ್ಯಂತ ಪೂರ್ವದ ಉಲ್ಲೇಖವೆಂದು ವಾದಿಸಲಾಗಿದೆ. - ನೋ. "ತಿರುವಿಳೈಯಾಡಲ್ ಪುರಾಣಂ" ಕಥಾನಕದ ಉಲ್ಲೇಖ - ಎನ್. ಸುಬ್ರಹ್ಮಣಿಯನ್, ಒರಿಜಿನಲ್ ಸೋರ್ಸಸ್ ಆಫ್ ದಿ ಹಿಸ್ಟರಿ ಆಫ್ ತಮಿಳ್ನಾಡು, (ಉದುಮಲ್ ಪೇಟ್, ೧೯೯೪), ಪು.೨೨೪. ಇದಕ್ಕೂ ವೈದಿಕ ಸಂಹಿತೆಗೂ ಇರುವ ಸಂಬಂಧವನ್ನು ಹಲವರು ಸೂಚಿಸಿರುವರು. ಆದರೆ 'ಶಂಗಂ' ಪದವು ಪ್ರಸಾರಕ್ಕೆ ಬರುವುದಕ್ಕಿಂತ ಮುಂಚೆ ತಮಿಳರು ಇದನು 'ತೊಕೈ' ಎಂಬ ಪದದಿಂದ ಗುರುತಿಸಿದ್ದರು - ಮಾರ್್, ಅದೇ, ಪು.೧೨-೧೩.

ಪ್ರಚಲಿತ ತಮಿಳು ಐತಿಹ್ಯದಂತೆ ಅತ್ಯಂತ ಪೂರ್ವಕಾಲದಲ್ಲಿ ಒಟ್ಟು ಮೂರು 'ಶಂಗಂ'ಗಳಿದ್ದು, ಪುರಾತನ ಮದುರೈ ಮತ್ತು ಕಪಾಟಪುರಂನಲ್ಲಿದ್ದ ಮೊದಲಿನವೆರಡು ಕೇಂದ್ರಗಳು ಸಮುದ್ರ ಉಕ್ಕೇರಿ ಬಂದ ಮಹಾ 'ಸುನಾಮಿ'ಯಲ್ಲಿ ಕೊಚ್ಚಿ ಹೋದವು. ಆದರೆ ಎರಡನೆಯ ಶಂಗಂ (ಕಪಾಟಪುರದ)ನಲ್ಲಿ ರಚಿಸಿದ ತೊಲ್ಕಾಪ್ಪಿಯಮ್ ಗ್ರಂಥ ಹೇಗೋ ಉಳಿದುಕೊಂಡು ಬಂತು. ಮೂರನೆಯ 'ಶಂಗಂ'ವನ್ನು ವೈಗೈನದಿ ದಡದ ಮೇಲೆ ಹೊಸದಾಗಿ ಕಟ್ಟಿದ ಪಾಂಡ್ಯ ರಾಜಧಾನಿಯಾದ ಮಧುರೈನಲ್ಲಿ ಸ್ಥಾಪಿಸಿದ. ಇಂದು ಲಭ್ಯವಿರುವ ಸಾಹಿತ್ಯವನ್ನು ರಚಿಸಲಾಯಿತು. ಇದರ ವಿವರಗಳಿಗೆ, ಅಧ್ಯಾಯ ೩ ಮತ್ತು ೯ ನೋಡಿ.

'ಶಂಗಂ' ಸಾಹಿತ್ಯವೆಂದರೆ ಏನು? ಅದು ಯಾವ ಕೃತಿಗಳನ್ನು ಒಳಗೊಂಡಿತ್ತು ಎಂಬುದರ ಬಗ್ಗೆ ಪಂಡಿತರಲ್ಲಿ ಒಮ್ಮತವಿಲ್ಲ. ಕೆಲವರು ಇದರಲ್ಲಿ ೧. ತೊಲ್ಕಾಪ್ಪಿ ಯಮ್, ೨. ಎಟ್ಟುತ್ತೊಗೈ ಮತ್ತು ಪತ್ತುಪಾಟ್ಟು, ೩. ಐದು ಮಹಾಕಾವ್ಯಗಳನ್ನು (ಶಿಲಪ್ಪದಿಗಾರಂ, ಮಣಿಮೇಗಲೈ, ಶೀವಕಚಿಂತಾಮಣಿ, ಕುಂಡಲಕೇಶಿ ಮತ್ತು ವಳೈಯಾಪತಿ - ಇವುಗಳಲ್ಲಿ ಕೆಲವು ಈಗ ಲಭ್ಯವಿಲ್ಲ - ಮತ್ತು ೪. ಪದಿನೇಳ್ಕಣಕ್ಕು (ಹದಿನೇಳು ಕ್ಷುಲ್ಲಕ ಕೃತಿಗಳನ್ನು) ಸೇರಿಸುವರು. ಆದರೆ ಇನ್ನು ಕೆಲವರು ಇದನ್ನು ಮೊದಲೆರಡು ವರ್ಗಗಳಿಗೆ ಮಾತ್ರ ಸೀಮಿತಗೊಳಿಸಿ, ಉಳಿದವು ಶಂಗಂ ಕಾಲಾನಂತರ (ಕ್ರಿ.ಶ.೩ ರಿಂದ ೬ನೆಯ ಶತಕದಲ್ಲಿ)ದಲ್ಲಿ ರಚನೆಗೊಂಡವೆಂದು ವಾದಿಸುವರು. ಎರಡನೆಯ ವಾದಕ್ಕೆ ಈಗ ಹೆಚ್ಚು ಮನ್ನಣೆ ದೊರೆಕಿರುವುದು.

೮. ಮರುಗನ್, ಅದೇ., ಪು.I-XV; ಮೀನಾಕ್ಷಿ ಕೆ., ತೊಲ್ಕಾಪ್ಪಿಯಮ್ ಅಂಡ್ ಅಷ್ಟಾಧ್ಯಾಯಿ, (ಚೆನ್ನೈ, ೧೯೯೭), ಪು.೭-೮

೯. ಮೀನಾಕ್ಷಿ, ಅದೇ., ಪು.೬

೧೦. ಮುರುಗನ್ , ಅದೇ, 'ಪೊರುಳ್ 'ನ ಎರಡನೆಯ ಭಾಗ, ಪ. ೧೨-೫೯, ಪು.೫೪೨-೫೪೩.

೧೧. ಶಿಲಪ್ಪದಿಗಾರಂ, ಸಂ. ದೀಕ್ಷಿತರ್, ರಾಮಚಂದ್ರ, (ಚೆನ್ನೈ, ೧೯೯೭ರ ಮುದ್ರಣ), ಪು.೩೯೬, ಅ.ಟಿ.೩

೧೨. ಮಾರ್್, ಅದೇ

೧೩. ಮುರುಗನ್, ಅದೇ, 'ಶಿಱಪ್ಪುಪ್ಪಾಯಿರಮ್' ಅಥವಾ ಪ್ರಾಸ್ತಾವಿಕ ಸ್ತುತಿಪದ್ಯ, ಸಾ.೧೪, ಪು.xxii.

೧೪. ನಚ್ಚಿನಾರ್ಕ್ಕಿನಿಯಾರ್ ಎಂಬ ಟೀಕಾಕಾರನು ಕ್ರಿ.ಶ.೧೪ನೆಯ ಶತಮಾನದಲ್ಲಿ ಹೆಣೆದ ಕತೆ ಇದಾಗಿದೆ. ಮೀನಾಕ್ಷಿ, ಅದೇ, ಪು.೬

೧೫. ಮುರುಗನ್, ಅದೇ, ಪು.IX; ಕಂದಸ್ವಾಮಿ ಎಸ್.ಎನ್., ತಮಿಳ್ ಲಿಟರೇಚರ್ ಅಂಡ್ ಇಂಡಿಯನ್ ಫಿಲಾಸಫಿ, (ಚೆನ್ನೈ, ೨೦೦೧). ಪು.೮೬. ಕನಿಷ್ಠ ಹತ್ತು ಬಗೆಯ ಅಲಂಕಾರಗಳನ್ನು ತನ್ನ ಪೂರ್ವಾಚಾರ್ಯರಿಂದ ಪಡೆದುಕೊಂಡದ್ದನ್ನು ಸ್ವತಃ ತೊಲ್ಕಾಪ್ಪಿಯನಾರ್ ತಿಳಿಸಿರುವನು. ಅದೇ, ಪು.೬೧

೧೬. ಕಂದಸ್ವಾಮಿ, ಅದೇ., ಪು.೪೮-೪೯

೧೭. ಈ ಪ್ರಾಸ್ತಾವಿಕ ಸ್ತುತಿಪದ್ಯದಲ್ಲಿ ಅಂದಿನ ಪಾಂಡ್ಯ ರಾಜನನ್ನು 'ನಿಲಂತರುತಿರುವನ್ ' ಎಂದು ಮತ್ತು ಶಂಗಂ ಪಂಡಿತ ಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದವನನ್ನು ಅಂದಕೋಟ್ಟಾಸಾನ್ ಎಂದು ಹೆಸರಿಸಲಾಗಿದೆ. ಈ ಆಚಾರ್ಯನು ಶುದ್ಧ ತಮಿಳಿನ ನುಡಿ ನಿಯಮವನ್ನು ಮತ್ತು ಚತುರ್ವೇದಾಂತರ್ಗತ ಜ್ಞಾನವನ್ನು ಪಡೆದವನಾಗಿದ್ದನೆಂದು ಪ್ರತಿಪಾದಿಸಲಾಗಿದೆ. ಇವನ ಸಮ್ಮುಖದಲ್ಲಿ ನೆರವೇರಿದ ಗೋಷ್ಠಿಯಲ್ಲಿ ತೊಲ್ಕಾಪ್ಪಿಯನಾರ್ ತನ್ನ ಗ್ರಂಥವನ್ನು ಮಂಡಿಸಿ, ಮನ್ನಣೆ ಪಡೆದುಕೊಂಡನೆಂದು ಪನಂಪಾರನಾರ್ ತಿಳಿಸುವನು. ಮುರುಗನ್, ಅದೇ, ಪು.XXI-XXIII.

೧೮. ಕರಾಮಾ. ೨-೧೪೩, ೧-೪೭, ೨-೫೧, ೧೫೫, ೧-೩೩; ೧-೪೨; ೧-೯.

೧೯. ಅದೇ, ೧-೨೭, ೪೨, ೨-೬೨; ೧-೪೯; ೧-೪೭; ೧-೨೪; ೨-೧೫೫; ೩-೫೮; ೧-೪, ೧೨ ಮುಂ; ೧-೧೯, ೨-೪೮ ಮುಂ.; ೨-೫೧; ೧-೧೫, ೩೯ ಮುಂ.; ೨-೧೫, ೩-೧೧; ೧-೩೨; ೧-೪೭, ೨-೫೧, ೧೫೫; ೧-೩೩; ೧-೧೪೦, ೧-೧೦೦; ೧-೧೩, ೨೦. ೮೭, ೨-೬೮ ಮುಂ.; ೧-೧೭; ೧-೧೦೯, ೨-೨೮; ೧-೯ ಮುಂ.

೨೦. ಅದೇ, ೧-೧೭; ೧-೩೮; ೩-೯೯; ೧-೭೯; ೧-೫; ೧-೧೯; ೨-೫೧; ೨-೧; ೨-೧೫೫; ೧-೫೦; ೩-೫; ೧-೪೭; ೨-೪೬.

೨೧. ಅದೇ, ೧-೪೫; ೧-೧೪೭; ೩-೨೩೧; ೨-೧೦೭; ೨-೫೩; ೨-೧೫; ೨-೧೦೨; ೧೦೩, ೧೦೮; ೨-೧೫೩; ೨-೧೦; ೧-೧೪೯; ೨-೧೦೧; ೨-೧೫೩.

೨೨. ಮುರುಗನ್, ಅದೇ, II-೯; II-ii, X, ೨೭೫; ಪ. ೮೮೩-೪, ಪು.೩೪೫.

೨೩. ಕಂದಸ್ವಾಮಿ, ಅದೇ, ಪು.೫೨-೫೩. ತಮಿಳುಬ್ರಾಹ್ಮೀ ಶಾಸನಗಳಲ್ಲಿ ಬಳಸಿರುವ ಪರಭಾಷೆಯ - ವಿಶೇಷವಾಗಿ ಪಾಲಿ ಮತ್ತು ಪ್ರಾಕೃತ - ಪದಗಳನ್ನು ಬೌದ್ಧ ಮತ್ತು ಜೈನ ಮೂಲಗಳಿಂದ ಪಡೆದುಕೊಳ್ಳಲಾಗಿದ್ದು ಅವುಗಳನ್ನು ತಮಿಳೀಕರಿಸುವ ಪ್ರಕ್ರಿಯೆ ಅಲ್ಲಲ್ಲಿ ಕುಂಠಿತಗೊಂಡಿರುವುದನ್ನು ಕಾಣಬಹುದು. ಇದು ಅನಂತರ ಕಾಲದ ಪಲ್ಲವ ಮತ್ತು ಚೋಳರ ಶಾಸನಗಳಲ್ಲಿಯೂ ಮುಂದುವರಿಯಿತು. ತೊಲ್ಕಾಪ್ಪಿಯಮ್‌ನಲ್ಲಿ ಕೆಲವು -ಅಂತನ್, ಏತು, ಮಾರಾಯಮ್ ಮುಂ. (ಸೂತ್ರ ೪, 'ಪೊರುಳ್ ' ಸೂ.೬೫, ೬೭) - ಸಂಸ್ಕೃತ ಪದಗಳನ್ನು ಗುರುತಿಸಬಹುದು. ಇವುಗಳ ಅರ್ಥವ್ಯಾಪ್ತಿಯಲ್ಲಿರುವ ಅಂತರವನ್ನೂ ಗಮನಿಸುವುದವಶ್ಯ.

೨೪. 'ರಾಮ' 'ಇರಾಮಣ್ ' ಎಂದು, ಲಂಕೆ 'ಇಲಂಕೈ' ಎಂದು ತಮಿಳೀಕರಿಸಿಕೊಳ್ಳುವುದು, ಈ ಪ್ರಕ್ರಿಯೆ ತಮಿಳಿನಲ್ಲಿ ವಿಶಿಷ್ಟ ಬಗೆಯಲ್ಲಿ ನಡೆದದ್ದೇನೂ ನಿಜ. ಆದರೆ ಒಂದಿಲ್ಲೊಂದು ರೀತಿಯಲ್ಲಿ ಉಳಿದ ದ್ರಾವಿಡ ಭಾಷೆಗಳಲ್ಲೂ ಇದು ನಡೆಯಿತು. ಒಂದು ಭಾಷೆಯ ಪದವನ್ನು ಮತ್ತೊಂದು ಭಾಷೆಗೆ ಅಳವಡಿಸಿಕೊಂಡಾಗ ವಿಭಿನ್ನ ಬಗೆಯ ಸಾಂಸ್ಕೃತಿಕ ಸಂಸ್ಕಾರ ದೀಕ್ಷೆಗೆ ಅವು ಒಳಗಾಗುವುದು ಅನಿವಾರ್ಯ. ಪ್ರಾಕೃತ, ಸಂಸ್ಕೃತ ಮಾತ್ರವಲ್ಲದೆ ಅರಬ್ಬೀ, ಪಾರಸೀ, ಉರ್ದು ಭಾಷೆಗಳಿಂದ ಮತ್ತು ಇತ್ತೀಚೆಗೆ ಇಂಗ್ಲಿಷ್ ನಿಂದ ಪಡೆದುಕೊಂಡು, ತನ್ನದನ್ನಾಗಿಸಿಕೊಂಡಿರುವ ಕನ್ನಡದ ಪ್ರಯೋಗಗಳಿಗೆ ಮಿತಿ ಕಟ್ಟುವುದೇ ಕಷ್ಟ. ಇದು ಬೆಳೆಯುವ ಯಾವುದೇ ಭಾಷೆಯ ಲಕ್ಷಣವಾಗಿದೆ. ಆರಂಭಕಾಲದ

ಭಾಷಾ ಪ್ರಯೋಗಗಳಲ್ಲಿ ತಮಿಳರು ಸಂಸ್ಕೃತ-ಪ್ರಾಕೃತ ಪದಗಳನ್ನು ಉಪಯೋಗಿಸುವಾಗ ವಿಶೇಷ ಮಡಿವಂತಿಕೆ ತೋರಿರುವುದು ನಿಜ, ಅದು ಕ್ರಮೇಣ ಸಡಿಲುಗೊಳ್ಳುತ್ತಾ ಸಾಗಿದ್ದೂ ಸರ್ವವಿದಿತ. ಈ ಪ್ರಕ್ರಿಯೆ ತ್ವರಿತಗತಿಯಲ್ಲಿ, ಮುಕ್ತ ಮಾರ್ಗದಲ್ಲಿ, ಹಲವು ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಒತ್ತಡಗಳಿಗೊಳಗಾಗಿ ಸಾಗಿದ್ದನ್ನು ಇತಿಹಾಸದ ಅನೇಕ ಘಟ್ಟಗಳಲ್ಲಿ ಗುರುತಿಸಬಹುದು. ಇದರ ಹೆಚ್ಚಿನ ಚರ್ಚೆ ಬಹುಶಃ ಇಲ್ಲಿ ಅಪ್ರಸ್ತುತ.

೨೫. ತೊಲ್ಕಾಪ್ಪಿಯಮ್‌ನಲ್ಲಿ ಬಹಳ ಅಪರೂಪವಾಗಿ ಮಾತ್ರ ಕಾಣುವ ಸ್ತ್ರೀ ಮೋಹಕಾಂಗಗಳ ವರ್ಣನೆಯನ್ನು 'ಎಟ್ಟುತ್ತೊಗ್ಗೈ' ಮತ್ತು 'ಪತ್ತುಪಾಟ್ಟು' ಸಂಕಲನಗಳಲ್ಲಿ ವಿರಳವಾಗಿ ಬರುವುದನ್ನು ಗಮನಿಸಿದರೆ, ತೊಲ್ಕಾಪ್ಪಿಯಮ್‌ನ ಕಾಲಾನಂತರದ ತಮಿಳು ಸಾಹಿತ್ಯ ಹೇಗೆ ಹಂತಹಂತವಾಗಿ ಸಂಸ್ಕೃತೀಕರಣಕ್ಕೆ ಒಳಗಾಯಿತೆಂಬುದು ಸ್ಪಷ್ಟಗೊಳ್ಳುವುದು. ಇದು 'ಶಂಗಂ' ಕವಿಗಳ ಕಾಲದಲ್ಲಾದದ್ದೋ ಅಥವಾ ಆನಂತರ ಸಂಕಲನಕಾರರಿಂದ ಸೇರ್ಪಡೆ ಮಾಡಲ್ಪಟ್ಟಿದ್ದೋ ಎಂಬುದರ ಬಗ್ಗೆ ಸ್ಪಷ್ಟತೆ ದೊರಕುವುದಿಲ್ಲ. 'ಪೂರಿಕ್ಕೋ' ಎಂಬವನಿಂದ (ಕ್ರಿ.ಶ.೭ನೆಯ ಶತಮಾನಕ್ಕಿಂತ ಮುಂಚೆ) ಶಂಗಂ ಸಾಹಿತ್ಯವು ಇಂದಿನ ಸಂಕಲನ-ಸ್ವರೂಪವನ್ನು ಪಡೆದುಕೊಂಡಿತೆಂಬ ಅಭಿಮತವಿದೆ. ನೋಡಿ : ಷಣ್ಮುಗ ಪಿಳ್ಳೈ ಎಂ., ಮತ್ತು ಡೇವಿಡ್ ಲುಡ್ ಇ., ಕುಱುಂದೊಗ್ಗೈ, (ಚೆನ್ನೈ, ೧೯೭೬, ಪ್ರ.ಮು), ಪು.೧

೨೬. 'ಕಲಿತ್ತೊಗ್ಗೈ' ಮತ್ತು 'ಕುಱುಂದೊಗ್ಗೈ', ಪ್ರಣಯಗೀತೆ (ಅಹನಾ.)ಯ ಎರಡು ಪ್ರಮುಖ ಅಂಗಗಳು. ಇವುಗಳಲ್ಲಿ ಗುರುತಿಸಲಾದ ತಲೈವಿ (ನಾಯಿಕೆ)ಯ ಪ್ರಧಾನ ಅಂಗಾಂಗಗಳೆಂದರೆ ಅವಳ ಕೇಶ, ನೊಸಲು, ಬಾಹು ಮತ್ತು ದಂತಪಂಕ್ತಿ. ಅವಳ ಸ್ತನಗಳ ವರ್ಣನೆ ಅಪರೂಪಕ್ಕೆ ಬರುವುದೇನೋ ನಿಜ, ಆದರೆ ಅದರ ವಿಧಾನವು ವಿಶಿಷ್ಟ ಬಗೆಯಾದದ್ದು. ನಾಯಿಕೆಯ ತುಟಿ, ನಿತಂಬ, ತೊಡೆ ಮೊದಲಾದವುಗಳ ಬಗ್ಗೆ ಉಲ್ಲೇಖ ಆಕಸ್ಮಿಕ ಮಾತ್ರ.

ತಲೈವಿಯ ಕೇಶವರ್ಣನೆಯನ್ನು ಮಳೆಮೋಡದ ಕಪ್ಪಿಗೆ, ಕತ್ತಲೆಯ ಮೊತ್ತಕ್ಕೆ, ನವಿಲುಗರಿಕಣ್ಣಿನ ಕಡುನೀಲಿ ಬಣ್ಣಕ್ಕೆ ಹೋಲಿಸಿದರೆ, ಅವುಗಳ ಮಾಟವನ್ನು ಅಲ್ಲೊಮ್ಮೆ-ಇಲ್ಲೊಮ್ಮೆ ಜೇನುಹುಟ್ಟಿಗೆ ಹೋಲಿಸಲಾಗಿದೆ. ಅವಳ ನೊಸಲನ್ನು ಒಮ್ಮೆ ಬಾಲಚಂದ್ರನಿಗೆ, ಮತ್ತೊಮ್ಮೆ ಪುಷ್ಪಕ್ಕೆ ಸಮೀಕರಿಸಲಾಗಿದೆ. (ಕೇಶಕ್ಕೆ - ಕಲಿತ್ತೊಗ್ಗೈ ೧೩, ೩೧, ೫೯; ೪೮, ೧೩೦; ಕುಱುಂದೊಗ್ಗೈ, ೨೩೬, ೪೦೧ ಮುಂ.); ಬಾಹುದ್ವಯಗಳನ್ನು ಮೇಲಿಂದ ಮೇಲೆ ಪ್ರಸ್ತಾಪಿಸುವ ಈ ಕವಿಗಳು, ಅವುಗಳನ್ನು ದುಂಡಗಿನ, ತೂಗಾಡುವ ಬೊಂಬೆಗೆ (ಕುಱುಂದೊಗ್ಗೈ ೩೯೮; ಕಲಿತ್ತೊಗ್ಗೈ ೩೮-೩೯, ೪೪), ಕಣ್ಣುಗಳನ್ನು ಅರಳಿದ ಮತ್ತು ನೀರುಂಡ ಪುಷ್ಪಕ್ಕೆ, (ವಿಶೇಷವಾಗಿ, ಕುವಳೈ ಪುಷ್ಪಕ್ಕೆ), ಕೆಂಟೈ ಮತ್ತು ಕಯಲ್ ಮೀನುಗಳಿಗೆ (ಕುಱುಂದೊಗ್ಗೈ ೧೩, ೧೯, ೧೪೨. ೨೨೮; ೧೪, ೨೦೯; ೧೬, ೩೬೯ ಮತ್ತು ೩೯೯; ಕಲಿತ್ತೊಗ್ಗೈ ೧೧೧; ೫೯; ೪೬; ೭೬;) ಹೋಲಿಕೆ ಮಾಡಲಾಗಿದೆ. ಮೊಗ್ಗಿನಂತಹ ದಂತಪಂಕ್ತಿಯನ್ನು (ಕಲಿತ್ತೊಗ್ಗೈ ೫೯), ಹವಳದಂತಹ ತುಟಿಗಳನ್ನು (ಕುಱುಂದೊಗ್ಗೈ ೨; ಕಲಿತ್ತೊಗ್ಗೈ ೫೪), ವಿಶಾಲವಾದ ನಿತಂಬವನ್ನು (ಕಲಿತ್ತೊಗ್ಗೈ ೧೦೬) ಅಪರೂಪವಾಗಿ ಮಾತ್ರ ಈ ಕವಿಗಳು ಉಲ್ಲೇಖಿಸಿರುವರು. ಗಡಿ ಗುರುತಿಸಿಕೊಂಡು ಎದೆಯ ಮೇಲೆ ತುಳು ಕಾಡುವ, 'ಶೆಪ್ಪು'ವಿನ (ಪರಿಪೂರ್ಣ ಕುಂಭ) ಆಕೃತಿಯೊಂದಿಗೆ ಸ್ಪರ್ಧೆಗಿಳಿಯುವಂತಹ, ಕಳಿತ 'ಕೊಂಕು' ಮೊಗ್ಗುಗಳನ್ನು ಮತ್ತು 'ವೇಂಕೈ' ಪುಷ್ಪಗಳನ್ನು ಸರಿಗಟ್ಟುವಂತಹ, ಕೃಷ್ಣವರ್ಣದಿಂದ ಹೊಳೆವ, ದೃಷ್ಟಿಬೊಟ್ಟು ಇಲ್ಲವೇ ಚಂದನದ ರೇಖಾಚಿತ್ರಗಳಿಂದ ಅಲಂಕರಿಸಿಕೊಂಡ ಸ್ತನಗಳನ್ನೂ (ಕುಱುಂದೊಗ್ಗೈ ೧೦, ೬೯, ೬೨, ೮೧, ೧೨೦, ೩೩೬, ೩೪೬; ಕಲಿತ್ತೊಗ್ಗೈ ೩, ೧೩, ೧೬, ೨೧, ೨೨, ೫೫, ೫೬, ೬೬, ೧೧೧, ೧೧೬, ಮುಂ.) ಈ ಕವಿಗಳು ಕಂಡಿದ್ದರು.*

* ಈ ಲೇಖನವನ್ನು ಷ.ಶೆಟ್ಟರ್ ಅವರ 'ಶಂಗಂ, ತಮಿಳಗಂ ಮತ್ತು ಕನ್ನಡ ನಾಡು-ನುಡಿ' ಕೃತಿಯಿಂದ ಆಯ್ದುಕೊಳ್ಳಲಾಗಿದೆ (ಅಭಿನವ ಪ್ರಕಾಶನ, ಬೆಂಗಳೂರು, ೨೦೦೬)

೧೧

ಕವಿರಾಜಮಾರ್ಗದ ಅಧ್ಯಯನಸೂಚಿ : ವಿಮರ್ಶಾತ್ಮಕ ಟಿಪ್ಪಣಿ

ಬಿ.ಎಂ.ಪುಟ್ಟಯ್ಯ

ಇಂದು ನಾವು ಕನ್ನಡ ಸಾಹಿತ್ಯದಲ್ಲಿ ಅಧ್ಯಯನ, ಸಂಶೋಧನೆ ಎಂದು ಕರೆಯುತ್ತಿರುವ ಶೈಕ್ಷಣಿಕ ಚಟುವಟಿಕೆಗಳಿಗೆ ಒಂದು ದೀರ್ಘವಾದ ಇತಿಹಾಸವಿದೆ. ಆರಂಭಿಕ ಹಂತದಲ್ಲಿ ಹಳಗನ್ನಡ ಕೃತಿಗಳ ಸಂಪಾದನೆ ಮತ್ತು ಸಂಕಲನ ಮಾಡುವುದರೊಂದಿಗೆ ಇದು ಶುರುವಾಯಿತು. ಹಳಗನ್ನಡ ಕೃತಿಗಳನ್ನು ಸಂಪಾದನೆಯ ಮಾಡುವಾಗ, ಕೃತಿಯ ಹೆಸರು, ಕೃತಿಕಾರನ ಹೆಸರು ಮತ್ತು ಆತನ ಕಾಲವನ್ನು 'ಅಧಿಕೃತ'ಗೊಳಿಸುವ ಸವಾಲೊಂದು ಎದುರಾಯಿತು. ಹಲವಾರು ಹಸ್ತಪ್ರತಿಗಳನ್ನು ಪರಿಶೀಲಿಸಿ ಒಂದು 'ಶುದ್ಧ ಪಠ್ಯವನ್ನು' ಸಂಪಾದಿಸುವ ಪ್ರವೃತ್ತಿ ಬೆಳೆಯಿತು. ಹಾಗಾಗಿ ಕೃತಿಕಾರನ ಹೆಸರು, ಕೃತಿಯ ಶೀರ್ಷಿಕೆ ಮತ್ತು ಕಾಲ ಇವುಗಳನ್ನು ಕುರಿತು ಹುಡುಕಾಟವೇ ಸಂಶೋಧನೆ ಎನಿಸಿಕೊಂಡಿತು. ಜೊತೆಗೆ ಸಂಶೋಧನೆ ಎಂದರೇನೇ 'ಏನಾದರೂ ಹೊಸದಾಗಿ ಕಂಡುಹಿಡಿಯುವುದು' ಎಂಬ ತಿಳುವಳಿಕೆ ಇದಕ್ಕೆ ಪೂರಕವಾಗಿತ್ತು. ಇದರಿಂದಾಗಿ ಆರಂಭಿಕ ಹಂತದ ಬಹುತೇಕ ಅಧ್ಯಯನಗಳು ಈ ಮೇಲೆ ತಿಳಿಸಿದ ಮಾಹಿತಿಗಳ ಸುತ್ತವೇ ಸುಳಿದಾಡಿದವು. ಫಲವಾಗಿ ಕೃತಿಕಾರ, ಕೃತಿ ಮತ್ತು ಕಾಲ ಇವುಗಳ ನಿರ್ಣಯಕ್ಕೆ ಸಂಬಂಧಿಸಿದ ಶೋಧನೆಯೇ ನಿಜವಾದ ಸಂಶೋಧನೆ ಎಂಬ ಅಭಿಪ್ರಾಯವೊಂದು ಬೆಳೆಯಿತು. ಆರಂಭಿಕ ಹಂತದಲ್ಲಿದ್ದ ಈ ವಿಧಾನವನ್ನು ಇಂದಿಗೂ ಕೂಡ ಬಲವಾಗಿ ನಂಬಿರುವ ಮತ್ತು ಆ ದಿಶೆಯಲ್ಲಿ ಕೆಲಸ ಮಾಡುತ್ತಿರುವ ಪಂಡಿತ ಪರಂಪರೆಯೊಂದಿದೆ. ಈ ವಿಧಾನವು ಒಂದು ರೀತಿಯಲ್ಲಿ ಅತ್ಯಂತ ಯಾಂತ್ರಿಕವೆಂದು ಕಂಡರೂ, ಪುನಾರಚನ ಮಾದರಿಯ ಅಧ್ಯಯನಕ್ಕೆ ವಿಪುಲವಾದ ಆಕರಗಳನ್ನು ಒದಗಿಸಿದೆ. ಪುನಾರಚನ ಮಾದರಿಯ ಅಧ್ಯಯನಗಳು ಮೇಲೆ ಸೂಚಿಸಿದ ವಿಧಾನವನ್ನು ಗಟ್ಟಿಯಾಗಿ ಹಿಡಿದುಕೊಂಡಿವೆ ಮತ್ತು ಬೆಳೆಸಿವೆ.

ಎರಡನೆಯದು ಪಠ್ಯಗಳ ವರ್ಣನಾತ್ಮಕ ಮಾದರಿ. ಒಂದು ಸಾಹಿತ್ಯ ಕೃತಿಯ ಓದು, ಓದುಗನಿಗೆ ಸಂತೋಷವನ್ನು, ಆನಂದವನ್ನು, ಆಹ್ಲಾದವನ್ನು ನೀಡಬೇಕು ಎಂಬ ಪೂರ್ವ

ಅಪೇಕ್ಷೆಯಿಂದ ಈ ಮಾದರಿ ಹೊರಡುತ್ತದೆ. ಓದಿನಿಂದ 'ರಸಾಸ್ವಾದನೆ'ಯನ್ನು ಅಪೇಕ್ಷಿಸುತ್ತದೆ. ಹಾಗಾಗಿ ಇಡೀ ಪಠ್ಯವು ಈ ಪೂರ್ವ ನಿರೀಕ್ಷೆಯನ್ನು ಈಡೇರಿಸದೇ ಇದ್ದಾಗ, ಅದರ ಯಾವುದಾದರೊಂದು ಭಾಗದ ಮೇಲೆ ಕೇಂದ್ರೀಕೃತವಾಗುತ್ತದೆ. ಅದರ ವರ್ಣನೆಯಲ್ಲಿ, ವಿವರಣೆಯಲ್ಲಿ ತಲ್ಲೀನವಾಗುತ್ತದೆ. ಈ ಬಗೆಯ ಶಾಸ್ತ್ರಗ್ರಂಥಗಳು ಮತ್ತು ಲಕ್ಷಣ ಗ್ರಂಥಗಳು ಈ ಬಗೆಯ ಓದಿನ ವ್ಯಾಪ್ತಿಗೆ ಬರಲಿಲ್ಲ. ಇದರಿಂದಾಗಿ ಲಕ್ಷಣ ಗ್ರಂಥಗಳ ಬಗ್ಗೆ ನಡೆದಿರುವ ಅಧ್ಯಯನಗಳಲ್ಲಿ ಕೃತಿ, ಕೃತಿಕಾರ ಮತ್ತು ಕೃತಿಯ ಶೀರ್ಷಿಕೆಯ ಕುರಿತು ವಿಪುಲವಾದ ಚರ್ಚೆಗಳು ನಡೆಯುವಂತಾಯಿತು. 'ಕವಿರಾಜಮಾರ್ಗ'ದ ಬಗ್ಗೆ ಈ ಮಾದರಿಯ ಚರ್ಚೆಗಳೇ ಮೇಲಿಂದ ಮೇಲೆ ನಡೆದಿರುವುದನ್ನು ಈ ಅಧ್ಯಯನ ಸೂಚಿಯಲ್ಲಿ ಗಮನಿಸಬಹುದು.

ಪಠ್ಯವೊಂದನ್ನು ಸಾಮಾಜಿಕ-ಸಾಂಸ್ಕೃತಿಕ ಚೌಕಟ್ಟಿನಲ್ಲಿಟ್ಟು ಅಧ್ಯಯನ ಮಾಡುವ ಶೈಕ್ಷಣಿಕ ಆಸಕ್ತಿ ಇತ್ತೀಚಿನದು. ಹಳಗನ್ನಡದ ಬೇರೆ ಪಠ್ಯಗಳು ಈ ಬಗೆಯ ಅಧ್ಯಯನಗಳಿಗೆ ಒಳಗಾಗಿವೆ. ಆದರೆ 'ಕವಿರಾಜಮಾರ್ಗ'ವನ್ನು ಈ ಬಗೆಯಲ್ಲಿ ಅಧ್ಯಯನ ಮಾಡುವ ಗೋಜಿಗೆ ಹೋಗಿಲ್ಲ. 'ಕವಿರಾಜಮಾರ್ಗ' ಮಾತ್ರವಲ್ಲ; 'ಶಬ್ದಮಣಿದರ್ಪಣ'ದಂಥ ವ್ಯಾಕರಣ ಕೃತಿಯೇ ಇರಲಿ ಅಥವಾ ಮಧ್ಯಕಾಲೀನ ಹಲವಾರು ಶಾಸ್ತ್ರಗ್ರಂಥಗಳೇ ಆಗಿರಲಿ, ಅವುಗಳನ್ನು ಸಾಮಾಜಿಕ-ಸಾಂಸ್ಕೃತಿಕ ಚೌಕಟ್ಟಿನಲ್ಲಿ ಅಧ್ಯಯನ ಮಾಡುವ ತಾತ್ವಿಕತೆಯನ್ನೂ ವಿಧಾನಗಳನ್ನೂ ಹುಟ್ಟುಹಾಕಬೇಕಾದ ಒಂದು ಶೈಕ್ಷಣಿಕ ತುರ್ತು ಮತ್ತು ಅಗತ್ಯ ನಮ್ಮ ಮುಂದಿದೆ. ಶಾಸ್ತ್ರಗ್ರಂಥವೊಂದನ್ನು ಕೇವಲ ಶಾಸ್ತ್ರಗ್ರಂಥವಾಗಿಯೇ ನೋಡುವ ಯಾಂತ್ರಿಕ ವಿಧಾನದಿಂದ ನಾವಿನ್ನೂ ಬಿಡಿಸಿಕೊಳ್ಳಬೇಕಾಗಿದೆ. ಬದಲಾಗಿ ಪಠ್ಯ ಯಾವುದೇ ಇರಲಿ, ಅದನ್ನು ಒಂದು 'ಶೂನ್ಯ ವಾತಾವರಣ'ದಲ್ಲಿ ಗ್ರಹಿಸಲು ಬರುವುದಿಲ್ಲ. ಅದು ಅನಿವಾರ್ಯವಾಗಿ ತಮ್ಮ ಕಾಲದ ಎಲ್ಲ ಬಗೆಯ ಸಂಕೀರ್ಣ ಒತ್ತಡಗಳ ಕುಲುಮೆಯಲ್ಲಿ ಅಧ್ಯಯನಕ್ಕೆ ಒಳಗಾಗುತ್ತದೆ. ಇಂಥ ಸಮಗ್ರವಾದ ತಾತ್ವಿಕ ದೃಷ್ಟಿಕೋನವೊಂದರ ಸೃಷ್ಟಿ ಇಂದು ಅಗತ್ಯವಾಗಿದೆ ಎಂಬುದನ್ನು ಕೂಡ ಈ ಅಧ್ಯಯನ ಸೂಚಿ ಸೂಚಿಸುತ್ತದೆ. ಯಾಕೆಂದರೆ 'ಕವಿರಾಜಮಾರ್ಗ'ವು ಕೇವಲ ಲಕ್ಷಣ ಗ್ರಂಥವಾಗಿರದೆ, ಭಿನ್ನ ತಾತ್ವಿಕತೆಗಳನ್ನು ಮುಖಾಮುಖಿಯಾಗಿಸುವ, ಇಲ್ಲವೆ ಸಂಘರ್ಷಿಸುವ ಸೈದ್ಧಾಂತಿಕತೆಯನ್ನು ತನ್ನ ಒಡಲಲ್ಲಿ ಅಡಗಿಸಿಕೊಂಡಿರುವುದು.

ಅ. ಸಂಪಾದನೆ

೧. ಪಾಠಕ್ ಕೆ.ಬಿ., (೧೮೯೮) 'ಕವಿರಾಜಮಾರ್ಗ', ಬಿಬ್ಲಿಯೊತೀಕ ಕರ್ನಾಟಿಕ ಮಾಲೆ, ಮೈಸೂರು ಪ್ರಾಕ್ತನ ಇಲಾಖೆ, ಮೈಸೂರು

೨. ವೆಂಕಟರಾವ್ ಎ., ಶೇಷಯ್ಯಂಗಾರ್ ಎಚ್.(೧೦೩೦), 'ಕರ್ನಾಟಕ ಕವಿರಾಜಮಾರ್ಗ', ಮದರಾಸು ವಿಶ್ವವಿದ್ಯಾಲಯ, ಮದರಾಸು

೩. ಕೃಷ್ಣಮೂರ್ತಿ ಕೆ.,(೧೯೮೩) 'ನೃಪತುಂಗ ದೇವಾನುಮತಮಪ್ಪ ಶ್ರೀವಿಜಯ ಪ್ರಭೂತಂ ಕವಿರಾಜಮಾರ್ಗ', ಐಬಿಎಚ್ ಪ್ರಕಾಶನ, ಬೆಂಗಳೂರು

೪. ಸೀತಾರಾಮಯ್ಯ ಎಂ.ವಿ.,(೧೯೯೪) 'ಶ್ರೀವಿಜಯಕೃತ ಕವಿರಾಜಮಾರ್ಗ', ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

ಆ. ಕೃತಿಗಳು

೧. ಕಲಬುರ್ಗಿ ಎಂ.ಎಂ.,(೧೯೭೩), 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨. ಭೀಮರಾವ್ ಚಿಟಗುಪ್ಪಿ(೧೯೭೨), 'ಕವಿರಾಜಮಾರ್ಗ ಪ್ರಶಸ್ತಿ', ಮನ್ವಂತರ ಪ್ರಕಾಶನ, ಧಾರವಾಡ

೩. ಮುಳಿಯ ತಿಮ್ಮಪ್ಪಯ್ಯ(೧೯೭೩), 'ಕವಿರಾಜಮಾರ್ಗ ವಿವೇಕ', ಗೀತಾ ಬುಕ್ ಹೌಸ್, ಮೈಸೂರು

೪. ಸೀತಾರಾಮಯ್ಯ ವಿ.(ಸಂ),(೧೯೭೩)'ಕವಿರಾಜಮಾರ್ಗ : (ಕವಿಕಾವ್ಯ ಪರಂಪರೆ-೧)', ಐಬಿಎಚ್ ಪ್ರಕಾಶನ, ಬೆಂಗಳೂರು

೫. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ.೧,(೧೯೭೪) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೬. ಕೃಷ್ಣಕುಮಾರ್ ಸಿ.ಪಿ., 'ಕವಿರಾಜಮಾರ್ಗದ ಕಾವ್ಯಮೀಮಾಂಸೆ', ಪ್ರೇಮಸಾಯಿ ಪ್ರಕಾಶನ, ಬೆಂಗಳೂರು, ೧೯೯೫

೭. ಸುಬ್ಬಣ್ಣ ಕೆ.ವಿ., 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು', ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೦

ಇ. ಲೇಖನಗಳು

೧. ಅರವಿಂದ ಮಾಲಗತ್ತಿ, 'ಕವಿರಾಜಮಾರ್ಗ', ದಲಿತಯುಗ ಮತ್ತು ಕನ್ನಡ ಸಾಹಿತ್ಯ, ೧೯೯೯

೨. ಓಂಕಾರಪ್ಪ ಸಿ., 'ಕವಿರಾಜಮಾರ್ಗದಲ್ಲಿ ಚರಿತ್ರೆ, ವ್ಯಾಕರಣ ಮುಂತಾದ ವಿಚಾರಗಳು', ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ.೧, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೪

೩. ಕಲಬುರ್ಗಿ ಎಂ.ಎಂ., 'ಕವಿರಾಜಮಾರ್ಗದವರೆಗಿನ ಶಾಸನ ಸಾಹಿತ್ಯ', ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ : ಸಂ ೧

೪. ಕಲಬುರ್ಗಿ ಎಂ.ಎಂ., 'ನೃಪತುಂಗಾಭ್ಯುದಯ' : ಕರ್ನಾಟಕ ಭಾರತಿ, ೧೦-೩

೫. ಕೀರ್ತಿನಾಥ ಕುರ್ತಕೋಟಿ, 'ಕವಿರಾಜಮಾರ್ಗ', ಕನ್ನಡ ಸಾಹಿತ್ಯ ಸಂಗಾತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫

೬. ಕೃಷ್ಣಕುಮಾರ್ ಸಿ.ಪಿ., 'ಅಲಂಕಾರ ವಿಚಾರಗಳು', ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ಸಂ. ೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫
೭. ಕೃಷ್ಣಕುಮಾರ್ ಸಿ.ಪಿ., 'ಕವಿರಾಜಮಾರ್ಗದಲ್ಲಿ ಕವಿಸ್ತರಗಳು' : ಸಾಹಿತ್ಯಶೀಲನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭
೮. ಕೃಷ್ಣಕುಮಾರ್ ಸಿ.ಪಿ., 'ಪ್ರಯೋಗವೆಂದರೇನು?' ಶೋಧನೆ, ೧೯೭೬, ೫೫-೬
೮ಅ. ಕೃಷ್ಣಮೂರ್ತಿ ಬಿ., '(ಕವಿರಾಜಮಾರ್ಗದೊಂದಿಗೆ) ದಂಡಿ-ಭಾಮಹರ ಕೃತಿಗಳು : ತುಲನಾತ್ಮಕ ಅಧ್ಯಯನ', ಕವಿರಾಜ ಮಾರ್ಗ (ಕವಿಕಾವ್ಯಪರಂಪರೆ-೧)
೯. ಕೃಷ್ಣಶರ್ಮ.ಯ, 'ಶ್ರೀವಿಜಯನ ಧ್ವನಿ-ಕಂದ' ಲೋಚನ, ೨-೨
೧೦. ಕೃಷ್ಣಶರ್ಮ.ಯ, 'ಧ್ವನಿಯನ್ನು ಕುರಿತ ಮಾರ್ಗಕಾರನ ನಿಲುವು', ಸಾಧನೆ ೫-೬
೧೧. ಕೃಷ್ಣಶಾಸ್ತ್ರಿ ಎ.ಆರ್., 'ಕವಿರಾಜಮಾರ್ಗದ ಕರ್ತೃ ಯಾರು?', ಪ್ರಬುದ್ಧ ಕರ್ನಾಟಕ ೪-೧
೧೨. ಕೃಷ್ಣಶಾಸ್ತ್ರಿ ಎ.ಆರ್., 'ಕವಿರಾಜಮಾರ್ಗವನ್ನು ಕುರಿತು', ಪ್ರಬುದ್ಧ ಕರ್ನಾಟಕ ಸಂ.೩೩
೧೩. ಕೃಷ್ಣಸ್ವಾಮಿ ಅಯ್ಯಂಗಾರ್ ವಿ., 'ಕವಿರಾಜಮಾರ್ಗದಲ್ಲಿ ಕಾರಕ ವಿಚಾರ', ಕನ್ನಡ ನುಡಿ, ೨೮-೨
೧೪. ಕೃಷ್ಣಸ್ವಾಮಿ ಅಯ್ಯಂಗಾರ್ ವಿ., 'ಕವಿರಾಜಮಾರ್ಗದಲ್ಲಿ ಕಾರಕ ವಿಚಾರ', ಸಾಧನೆ ೨-೨
೧೫. ಕೇಶವಭಟ್ಟ ಟಿ., 'ಕನ್ನಡದ ಆದಿ ಗ್ರಂಥ ಕವಿರಾಜಮಾರ್ಗ', ಉತ್ಥಾನ, ಅಕ್ಟೋಬರ್, ೧೯೬೫
೧೬. ಗೋವಿಂದಪೈ 'ನೃಪತುಂಗನ ಮತವಿಚಾರ', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೧೨-೪
೧೭. ಚಿದಾನಂದಮೂರ್ತಿ ಎಂ., 'ಕವಿರಾಜಮಾರ್ಗಕ್ಕೆ ಹಿಂದಿನ ಕನ್ನಡ ಸಾಹಿತ್ಯ', ಹೊಸತು ಹೊಸತು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩
೧೮. ಜೋಷಿ ಪಿ.ವಿ., 'ಕವಿರಾಜಮಾರ್ಗದ ಅಲಂಕಾರಾಂತರ್ಭಾವವಾದ', ಲೋಚನ, ೪-೨
೧೯. ಜಯದೇವ ಹೆಚ್.ಕೆ., 'ಕವಿರಾಜಮಾರ್ಗದವರೆಗಿನ ಸಾಹಿತ್ಯ ಕೃತಿಗಳು ಮತ್ತು ಶಾಸ್ತ್ರಗ್ರಂಥಗಳು, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ.೧
೨೦. ನರಸಿಂಹಾಚಾರ್ ಆರ್. 'ಶ್ರೀವಿಜಯ', ಕರ್ಣಾಟಕ ಕವಿಚರಿತೆ, ಸಂ.೧, ೧೯೧೯
೨೧. ನಾಗರಾಜ್ ಕೆ., 'ಕವಿರಾಜಮಾರ್ಗ: ಕೆಲವು ಸಂದೇಹಗಳು', ಆಸ್ವಾದ
೨೨. ನಾಯಕ ಹಾ.ಮಾ., 'ಕವಿರಾಜಮಾರ್ಗ', ಸಾಹಿತ್ಯ ಸಲ್ಲಾಪ, ಮೈಸೂರು
೨೩. ನೇಗಿನಹಾಳ ಎಂ.ಬಿ., 'ಕವಿರಾಜಮಾರ್ಗ ಪೂರ್ವದ ಕೆಲವು ಅಪೂರ್ವ ಛಂದೋಬಂಧಗಳು', ಸಂಶೋಧನ

೨೪. ಪಂಚಮುಖಿ ಆರ್.ಎಸ್., 'ರಾಜನೂ ಕವಿಯೂ ಆದ ನೃಪತುಂಗ', ಜಯಂತಿ, ೧೦-೬
೨೫. ಪಾಂಡುರಂಗಿ ಕೆ.ಟಿ., 'ಕಾರಕ ವಿಚಾರದ ಬಗೆಗೆ ಒಂದು ಸ್ಪಷ್ಟೀಕರಣ', ಸಾಧನೆ, ೨-೩
೨೬. ಪೂಜಾರ ಮ.ಪ್ರ., 'ನಮ್ಮ ಕನ್ನಡದ ಆದ್ಯ ವೈಯಾಕರಣಿ ನೃಪತುಂಗ', ಜಯಕರ್ನಾಟಕ ೩೩-೧
೨೭. ಬಸವನಾಳ.ಶಿ.ಶಿ., 'ಕವಿರಾಜಮಾರ್ಗ ವಿವೇಕ', ಜಯಕರ್ನಾಟಕ ೨೯-೭
೨೮. ಬೆಟಗೇರಿ ಕೃಷ್ಣಶರ್ಮ 'ಕನ್ನಡ ಸಾಹಿತ್ಯದ ಸೀಮಾಪುರುಷ ರಾಜಕವಿ ನೃಪತುಂಗ', ಜಯಂತಿ, ೧೫-೧೧
೨೯. ಬೇಂದ್ರೆ ದ.ರಾ., 'ಸಮಂತಭದ್ರನೆ ಶ್ರೀವಿಜಯನಿರಬಹುದೆ?', ಪ್ರಬುದ್ಧ ಕರ್ನಾಟಕ ೧೯-೧
೩೦. ಮರಿಯಪ್ಪಭಟ್ಟ ಎಂ., 'ಕವಿರಾಜಮಾರ್ಗ-೯ನೇ ಶತಮಾನ', ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಭಾರತೀ ಪ್ರಕಾಶನ, ಮೈಸೂರು, ೧೯೬೦
೩೧. ಮಲ್ಲಪ್ಪ ಯ., 'ಕವಿರಾಜಮಾರ್ಗ', ಜಯಕರ್ನಾಟಕ ೩೭-೧೦
೩೨. ಮಲ್ಲಾಪುರ ಬಿ.ವಿ., 'ಕವಿರಾಜಮಾರ್ಗದಲ್ಲಿ ಕನ್ನಡಿಗರ ಬಾಳಿನ ಮಾರ್ಗ', ಶರಣ ಸರೋಜ ಭಾಗ-೧
೩೩. ಮಹಾದೇವಯ್ಯ ಪ್ರಸಾದ ಡಿ.ಎಂ., 'ಕವಿರಾಜಮಾರ್ಗನು ಕಂಡ ಕರ್ನಾಟಕ', ಪ್ರಬುದ್ಧ ಕರ್ನಾಟಕ, ೮-೨
೩೪. ಮುಗಳಿ ರಂ.ಶ್ರೀ., 'ಕವಿರಾಜಮಾರ್ಗ', ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್‌ಹೌಸ್, ಮೈಸೂರು, ೧೯೫೩
೩೫. ಮುಗಳಿ ರಂ.ಶ್ರೀ., 'ಕವಿರಾಜಮಾರ್ಗ ವಿವೇಕ ಭಾಗ-೧ ಒಂದು ಸಮೀಕ್ಷೆ', ಶ್ರದ್ಧಾಂಜಲಿ, ಮುಳಿಯ ತಿಮ್ಮಪ್ಪಯ್ಯ ಸ್ಮಾರಕ ಗ್ರಂಥ, ಮುಳಿಯ ತಿಮ್ಮಪ್ಪಯ್ಯ ಸ್ಮಾರಕ ಸಮಿತಿ, ಮಂಗಳೂರು, ೧೯೫೬
೩೬. ಮುಳಿಯ ತಿಮ್ಮಪ್ಪಯ್ಯ, 'ಕವಿರಾಜಮಾರ್ಗ ವಿವೇಕ', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೨೮-೧
೩೭. ರಂಗನಾಥಶರ್ಮ ಎನ್., 'ಕವಿರಾಜಮಾರ್ಗದ ನೂತನ ಸಂಸ್ಕರಣ', ಲೋಚನ, ೧-೨
೩೮. ರಾಜಪುರೋಹಿತ ನಾ.ಶ್ರೀ., 'ಕವಿರಾಜಮಾರ್ಗದ ಗ್ರಂಥ ಕರ್ತೃವು ಯಾರು?', ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ, ಸಂ.೬-೧, ಜುಲೈ ೧೯೨೧
೩೯. ರಾಜಪುರೋಹಿತ ನಾ.ಶ್ರೀ., 'ಕವಿರಾಜಮಾರ್ಗದ ಕರ್ತೃವು ಯಾರು?', ವಾಗ್ಭೂಷಣ, ೨೫-೩

೪೦. ರಾಜಪುರೋಹಿತ ಬಿ.ಬಿ., 'ಕವಿರಾಜಮಾರ್ಗ ಕಾಲದ ಭಾಷೆಯ ಸ್ವರೂಪ', ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ.೧

೪೧. ವೀರಣ್ಣ ಸಿ., 'ಕವಿರಾಜಮಾರ್ಗ' : ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, ಸಂ.೧, ೧೯೮೬

೪೨. ವೆಂಕಟರಾಯಾಚಾರ್ಯ ಕೆ., 'ಕವಿರಾಜಮಾರ್ಗದ ಕವಿ ಯಾರು?', ಜೀವನ ೧೫-೯

೪೩. ವೆಂಕಟರಾಯಾಚಾರ್ಯ ಕೆ., 'ಕವಿರಾಜಮಾರ್ಗದಲ್ಲಿ ಪ್ರಾಚೀನ ಕನ್ನಡದ ಪರಿಚಯ', ಶರಣ ಸಾಹಿತ್ಯ ೧೯, ೮-೯

೪೪. ವೆಂಕಟರಾಯಾಚಾರ್ಯ ಕೆ., 'ಕವಿರಾಜಮಾರ್ಗದ ಚಕ್ರಬಂಧ', ಸಾಹಿತ್ಯ ಪ್ರಭ

೪೫. ವೆಂಕಟಸುಬ್ಬಯ್ಯ ಜಿ., 'ಕವಿರಾಜಮಾರ್ಗದ ಕರ್ತೃ', ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ.೧, ಪು.೭೯-೮೫

೪೫ಅ. ವೆಂಕಟಾಚಲಶಾಸ್ತ್ರೀ ಟಿ.ವಿ., 'ಕವಿರಾಜಮಾರ್ಗ'ದ ಛಂದೋವಿಚಾರಗಳು'(೧೯೭೫), ಶಾಸ್ತ್ರೀಯ, ಸಂ.೨, ಸಪ್ನ ಬುಕ್‌ಹೌಸ್, ಬೆಂಗಳೂರು, ೧೯೯೯

೪೬. ವೆಂಕಟೇಶಯ್ಯ ಎಂ.ಜಿ., 'ಕವಿರಾಜಮಾರ್ಗದ ಪದ ಪ್ರಮಾಣ ಮತ್ತು ಕವಿಯ ಶೈಲಿ ಪದಪ್ರಮಾಣದ ಪರಂಪರೆಗಳ ವಿಚಾರ', ಪ್ರಬುದ್ಧ ಕರ್ನಾಟಕ, ೨೯-೨

೪೭. ವೆಂಕಣ್ಣಯ್ಯ ಟಿ.ಎಸ್., 'ಕವಿರಾಜಮಾರ್ಗ', ಅರ್ಥಸಾಧಕ ಪತ್ರಿಕೆ, ೧-೬

೪೮. ವೆಂಕಣ್ಣಯ್ಯ ಟಿ.ಎಸ್., 'ಕನ್ನಡದಲ್ಲಿ ಬೌದ್ಧರು ಪತ್ರಿಕೆಗಳನ್ನು ಬರೆದಿದ್ದರೆ?', ಪ್ರಬುದ್ಧ ಕರ್ನಾಟಕ ಸಂ.೬(ದೀಪಾವಳಿ ವಿಶೇಷ ಸಂಚಿಕೆ)

೪೯. ಶಶಿಕಲಾ ಚಂದ್ರಶೇಖರ್ ಜೆ., 'ಕವಿರಾಜಮಾರ್ಗ' : ಕನ್ನಡ ವಿಶ್ವಕೋಶ ಸಂ.೫, ೧೯೭೨

೫೦. ಶಾಮರಾವ್ ತ.ಸು. ಮತ್ತು ರಾಜೇಶ್ವರಯ್ಯ ಎಂ., 'ಕವಿರಾಜಮಾರ್ಗ' : ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ

೫೧. ಶೆಲ್ಡನ್ ಪೋಲಾಕ್, 'ವಿಶ್ವಾತ್ಮಕ ದೇಶ ಭಾಷೆ' (ಅನು : ಕೆ.ವಿ.ಅಕ್ಷರ), ಮಾತುಕತೆ ೫-೩

೫೨. ಶೇಷಗಿರಿರಾವ್ ಡಿ.ವಿ., 'ಕನ್ನಡದಲ್ಲಿ ಕಾವ್ಯಮಾರ್ಗ', ಸಂಭಾವನೆ ಬಿಎಂಶ್ರೀ (ಸಂಭಾವನ ಗ್ರಂಥ)

೫೩. ಶ್ರೀಕಂಠಯ್ಯ ಬಿ.ಎಂ., 'ಚಕ್ರವರ್ತಿಯ ಮೆಚ್ಚಿಕೆ' : ಕನ್ನಡ ನುಡಿ, ೧-೧

೫೪. ಶ್ರೀಮತಿ ಎಚ್.ಎಸ್., 'ಕವಿರಾಜಮಾರ್ಗವನ್ನು ಕುರಿತು ಮುಳಿಯರವರ ಅಧ್ಯಯನ', ಹಳಗನ್ನಡ ಸಾಹಿತ್ಯಾಧ್ಯಯನ ಸಮೀಕ್ಷೆ

೫೫. ಶ್ರೀ ರಾ.ಕಿ., 'ಕವಿರಾಜಮಾರ್ಗದ ನಾಡಿನ ಪುಣ್ಯ', ತವಗಶ್ರೀ, ಪು.೮೧೬-೧೯೦

೫೬. ಸೀತಾರಾಮ ಕೆದಿಲಾಯ, 'ಕವಿರಾಜಮಾರ್ಗದ ಕೆಲವು ವೃತ್ತಗಳ ಛಂದಸ್ಸುಗಳು', ಕನ್ನಡ ನುಡಿ, ೨೯-೫, ಮೇ ೧೯೬೬

೫೭. ಸೀತಾರಾಮ ಕೆದಿಲಾಯ 'ಕವಿರಾಜಮಾರ್ಗದ ಎರಡು ವೃತ್ತಗಳು', ಕನ್ನಡ ನುಡಿ, ೨೯-೭, ಜುಲೈ ೧೯೬೬
೫೮. ಸೀತಾರಾಮ ಜಾಗೀರದಾರ್, 'ಕವಿರಾಜಮಾರ್ಗದ ಕರ್ತೃ', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೬೭-೨
೫೯. ಸೀತಾರಾಮಯ್ಯ ಎಂ.ವಿ., 'ಕವಿರಾಜಮಾರ್ಗದ ಕನ್ನಡ ಸಾಹಿತ್ಯ', ಕನ್ನಡ ನುಡಿ, ೧೯-೮
೬೦. ಸೀತಾರಾಮಯ್ಯ ಎಂ.ವಿ., 'ಕವಿರಾಜಮಾರ್ಗ ಶ್ರೀವಿಜಯ ಕತೃತ್ವದ ಬಗೆಗೆ ಹೊಸಬೆಳಕು', ಪ್ರಬುದ್ಧ ಕರ್ನಾಟಕ, ೫೫-೩
೬೦ಅ. ಸೀತಾರಮಯ್ಯ ಎಂ.ವಿ., 'ಕಾಲಕರ್ತೃ ಕೃತಿಸ್ವರೂಪ', ಕವಿರಾಜಮಾರ್ಗ (ಕವಿಕಾವ್ಯ ಪರಂಪರೆ-೧)
೬೧. ಸೀತಾರಾಮಯ್ಯ ಎಂ.ವಿ., 'ಕವಿರಾಜಮಾರ್ಗದಲ್ಲಿ ಕಾವ್ಯಮೀಮಾಂಸೆ', ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ.೧
೬೨. ಸೀತಾರಾಮಯ್ಯ ಎಂ.ವಿ., 'ಕವಿರಾಜಮಾರ್ಗದ ಹೆಸರು - ಒಂದು ಟಿಪ್ಪಣಿ', ಪ್ರಬುದ್ಧ ಕರ್ನಾಟಕ, ೫೩-೧
೬೩. ಸೀತಾರಾಮಯ್ಯ ಎಂ.ವಿ., 'ಕಾಲ, ಕರ್ತೃ, ಕೃತಿ ಸ್ವರೂಪ' , ಕವಿರಾಜಮಾರ್ಗ ಭಾಗ-೨
೬೪. ಸೀತಾರಾಮಯ್ಯ ಎಂ.ವಿ., 'ಪುರುಷವೃತ ಮತ್ತು ಕವಿರಾಜಮಾರ್ಗ', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೫೪-೨
೬೫. ಸೀತಾರಾಮಯ್ಯ ಎಂ.ವಿ., 'ಶ್ರೀವಿಜಯನ ಕವಿರಾಜಮಾರ್ಗ', ಶಾಸ್ತ್ರಸಾಹಿತ್ಯ
೬೬. ಸೀತಾರಾಮ್ಮಯ ಎಂ.ವಿ., 'ಶ್ರೀವಿಜಯನ ಕವಿರಾಜಮಾರ್ಗ - ಒಂದು ವಿವರಣೆ', ಸಾಧನೆ, ೫-೧
೬೭. ಸೀತಾರಾಮಯ್ಯ ಎಂ.ವಿ., 'ಸಭಾಮಧ್ಯಲಬ್ಧವರಂ ಶ್ರೀವಿಜಯಂ', ಸಾಹಿತ್ಯ ಜೀವಿ
೬೮. ಸೀತಾರಾಮಯ್ಯ ಎಂ.ವಿ., 'ಕವಿರಾಜಮಾರ್ಗದ ಮೂರು ಶಬ್ದಗಳ ವಿಚಾರ', ಪ್ರಬುದ್ಧ ಕರ್ನಾಟಕ
೬೯. ಸೀತಾರಾಮಯ್ಯ ಎಂ.ವಿ., 'ಕವಿರಾಜಮಾರ್ಗದ ಮೇಲೆ ಉದ್ಭಟನ ಪ್ರಭಾವ, ಸಾಧನೆ, ೪-೨
೭೦. ಸೀತಾರಾಮಯ್ಯ ಎಂ.ವಿ., 'ಕವಿರಾಜಮಾರ್ಗದ ವೈಶಿಷ್ಟ್ಯ', ಕವಿಹೃದಯ
೭೧. ಸೀತಾರಾಮಯ್ಯ ಎಂ.ವಿ., 'ಕವಿರಾಜಮಾರ್ಗದ ವೈಶಿಷ್ಟ್ಯ' , ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೫೩, ೧-೨
೭೨. ಸೀತಾರಾಮಯ್ಯ ಎಂ.ವಿ., 'ಕವಿರಾಜಮಾರ್ಗದಲ್ಲಿ ರಾಮಾಯಣ ಪದ್ಯಗಳು' : ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ.೫೧, ಡಿಸೆಂಬರ್ ೧೯೬೬
೭೩. ಸೀತಾರಾಮಯ್ಯ ವಿ. 'ಸಮೀಕ್ಷೆ', ಕವಿರಾಜಮಾರ್ಗ ಭಾಗ-೪

೭೪. ಹಿರೇಮಠ ಎಸ್.ಎಸ್., 'ಪುರುಷವೃತ: ಮರುವಿವೇಚನೆ', ಕರ್ನಾಟಕ ಭಾರತಿ ೧೦-೩

೭೫. Fleet, 'Kavisvar's Kavirajamarga', Indian Antiquiry, xxxiii, 258

೭೬. Pathak K.B., 'Nripatunga and the authorship of Kavirajamarga: A reply to Dr.Fleet', Journal of Asiatic soceity of Bombay(New), xxii

೭೭. Pathak K.B., Nripatung's, Kavirajamarga, Ibid, xx

ಲೇಖಕರ ವಿಳಾಸ

೧. ದಿ.ಶ್ರೀ ಕೆ.ವಿ.ಸುಬ್ಬಣ್ಣ, ಕೇರಾಫ್ ಕೆ.ವಿ.ಅಕ್ಷರ, ಹೆಗ್ಗೋಡು-೫೭೭ ೪೧೭ (ಶಿವಮೊಗ್ಗ ಜಿಲ್ಲೆ)

೨. ಪ್ರೊ.ಕೆ.ಜಿ.ನಾಗರಾಜಪ್ಪ, ನಂ.೭೩, ಅಪೂರ್ವ, ೫ನೇ ಮೇನ್, ಮಾರುತಿ, ಎಚ್.ಸಿ.ಬಿ.ಎಸ್.ಬಡಾವಣೆ, ಗುರಪ್ಪನಪಾಳ್ಯ, ಬೆಂಗಳೂರು-೫೬೦ ೦೨೯

೩. ಡಾ. ಬಸವರಾಜ ಕಲ್ಗುಡಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೫೬೦ ೦೫೬

೪. ಪ್ರೊ.ಕಿ.ರಂ.ನಾಗರಾಜ, ೧೩೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬಸವನಗುಡಿ ಬೆಂಗಳೂರು-೫೬೦ ೦೪೧

೫. ಡಾ.ಕೆ.ವಿ.ನಾರಾಯಣ, ಸೀನಿಯರ್ ಫೆಲೊ, ಸಿಐಐಎಲ್, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೬. ಪಾದೇಕಲ್ಲು ನರಸಿಂಹಭಟ್ಟ, ಅಂಚೆ : ಕರೋಪಾಡಿ - ೫೭೪೨೮೯ (ದಕ್ಷಿಣ ಕನ್ನಡ)

೭. ಡಾ. ಬಂಜಗೆರೆ ಜಯಪ್ರಕಾಶ್, ರಂಗನಾಥ ಬಡಾವಣೆ, ಹಾರೋಹಳ್ಳಿ-೫೬೨೧೧೨ (ಬೆಂಗಳೂರು ಗ್ರಾಮಾಂತರ)

೮. ಡಾ. ಎಂ.ಎಂ.ಕಲಬುರ್ಗಿ, ವಿಶ್ರಾಂತ ಕುಲಪತಿಗಳು, ಸೌಜನ್ಯ, ೯ನೇ ಕ್ರಾಸ್, ಕಲ್ಯಾಣನಗರ, ಧಾರವಾಡ-೫೮೦ ೦೦೭

೯. ಡಾ. ಜಿ.ಎಸ್.ಶಿವರುದ್ರಪ್ಪ, ೮೬೭, ಚೈತ್ರ, ೧೮ನೇ ಮೇನ್, ಬನಶಂಕರಿ, ೨ನೇ ಹಂತ, ಬೆಂಗಳೂರು-೫೬೦೦೭೦

೧೦. ಪ್ರೊ.ಷ.ಶೆಟ್ಟರ್, ಗೌರವ ನಿರ್ದೇಶಕರು, ಇಂದಿರಾಗಾಧಿ ರಾಷ್ಟ್ರೀಯ ಕಲಾಕೇಂದ್ರ (IGNAC), ಕೆಂಗುಂಟೆ ಸರ್ಕಲ್, ಮಲ್ಲತಹಳ್ಳಿ, ಜ್ಞಾನಭಾರತಿ ಅಂಚೆ, ಬೆಂಗಳೂರು-೫೬೦ ೦೫೬

೧೧. ಡಾ. ಬಿ.ಎಂ.ಪುಟ್ಟಯ್ಯ, ಪ್ರವಾಚಕರು, ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೫೮೩೨೨೭

೧೨. ರಹಮತ್ ತರೀಕೆರೆ, ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ tarikere86rediffmail.com

ಸಾಂಸ್ಕೃತಿಕ ಮುಖಾಮುಖಿ ಮಾಲಿಕೆ

೧. ಕವಿರಾಜಮಾರ್ಗ : ಸಾಂಸ್ಕೃತಿಕ ಮುಖಾಮುಖಿ
ಸಂ.ರಹಮತ್ ತರೀಕೆರೆ

೨. ವಡ್ಡಾರಾಧನೆ : ಸಾಂಸ್ಕೃತಿಕ ಮುಖಾಮುಖಿ
ಸಂ.ಬಿ.ಎಂ.ಪುಟ್ಟಯ್ಯ

೩. ಶೂನ್ಯ ಸಂಪಾದನೆಗಳು : ಸಾಂಸ್ಕೃತಿಕ ಮುಖಾಮುಖಿ
ಸಂ.ಅಮರೇಶ ನುಗಡೋಣಿ

೪. ರಾಜಾವಳಿ ಕಥೆ : ಸಾಂಸ್ಕೃತಿಕ ಮುಖಾಮುಖಿ
ಸಂ.ವೆಂಕಟೇಶ ಇಂದ್ವಾಡಿ

೫. ಹರಿಹರನ ರಗಳೆಗಳು : ಸಾಂಸ್ಕೃತಿಕ ಮುಖಾಮುಖಿ
ಸಂ.ಶಿವಾನಂದ ವಿರಕ್ತಮಠ

೬. ಕುಮಾರವ್ಯಾಸ ಭಾರತ : ಸಾಂಸ್ಕೃತಿಕ ಮುಖಾಮುಖಿ
ಸಂ.ರಹಮತ್ ತರೀಕೆರೆ

೭. ಬಸವಣ್ಣನ ವಚನಗಳು : ಸಾಂಸ್ಕೃತಿಕ ಮುಖಾಮುಖಿ
ಸಂ.ಅಮರೇಶ ನುಗಡೋಣಿ

೮. ಮಂಟೇಸ್ವಾಮಿ ಕಾವ್ಯ : ಸಾಂಸ್ಕೃತಿಕ ಮುಖಾಮುಖಿ
ಸಂ.ವೆಂಕಟೇಶ ಇಂದ್ವಾಡಿ

೯. ಆದಿಪುರಾಣ : ಸಾಂಸ್ಕೃತಿಕ ಮುಖಾಮುಖಿ
ಸಂ.ಬಿ.ಎಂ.ಪುಟ್ಟಯ್ಯ

೧೦. ಅಕ್ಕಮಹಾದೇವಿ ವಚನಗಳು : ಸಾಂಸ್ಕೃತಿಕ ಮುಖಾಮುಖಿ
ಸಂ.ರಹಮತ್ ತರೀಕೆರೆ

೧೧. ಹರಿಶ್ಚಂದ್ರಕಾವ್ಯ : ಸಾಂಸ್ಕೃತಿಕ ಮುಖಾಮುಖಿ
ಸಂ.ಅಮರೇಶ ನುಗಡೋಣಿ

೧೨. ಧರ್ಮಾಮೃತ : ಸಾಂಸ್ಕೃತಿಕ ಮುಖಾಮುಖಿ
ಸಂ.ಬಿ.ಎಂ.ಪುಟ್ಟಯ್ಯ

೧೩. ಇಂಗ್ಲಿಷ್ ಗೀತಗಳು : ಸಾಂಸ್ಕೃತಿಕ ಮುಖಾಮುಖಿ
ಸಂ.ರಹಮತ್ ತರೀಕೆರೆ

೧೪. ಮಲೆಮಾದಪ್ಪನ ಮಹಾಕಾವ್ಯ : ಸಾಂಸ್ಕೃತಿಕ ಮುಖಾಮುಖಿ
ಸಂ.ವೆಂಕಟೇಶ ಇಂದ್ವಾಡಿ

೧೫. ಸಿರಿ ಮಹಾಕಾವ್ಯ : ಸಾಂಸ್ಕೃತಿಕ ಮುಖಾಮುಖಿ(ಅಚ್ಚಿನಲ್ಲಿ)
ಸಂ.ವೆಂಕಟೇಶ ಇಂದ್ವಾಡಿ

೧೬. ಜೈಮಿನಿ ಭಾರತ : ಸಾಂಸ್ಕೃತಿಕ ಮುಖಾಮುಖಿ(ಅಚ್ಚಿನಲ್ಲಿ)
ಸಂ.ಅಮರೇಶ ನುಗಡೋಣಿ

೧೭. ತಾಯಿ : ನೂರು-ಒಂದು ಅವಲೋಕನ(ಅಚ್ಚಿನಲ್ಲಿ)
ಸಂ.ಬಿ.ಎಂ.ಪುಟ್ಟಯ್ಯ

೧೮. ಹಾಲುಮತ ಮಹಾಕಾವ್ಯ : ಸಾಂಸ್ಕೃತಿಕ ಮುಖಾಮುಖಿ(ಅಚ್ಚಿನಲ್ಲಿ)
ಸಂ.ವೆಂಕಟೇಶ ಇಂದ್ವಾಡಿ

ಕವಿರಾಜಮಾರ್ಗ ಒಂದು ಐತಿಹಾಸಿಕ ಕೃತಿ, ನಾಡು-ನಾಡವರು- ನುಡಿ ಮುಂತಾದ ವಿವರಗಳನ್ನು ಉಳ್ಳ ಕೃತಿ. ಇದೊಂದು ಐತಿಹಾಸಿಕ ಕೃತಿಯೂ ಹೌದು. ಇಂದಿನ ಭಾಷಿಕ, ಸಾಹಿತ್ಯಿಕ, ನಾಡು, ಇನ್ನಿತರ ಬಹುಮುಖ್ಯ ವಿಚಾರಗಳ ಸಂದರ್ಭದಲ್ಲಿ ಪ್ರಸ್ತುತ ಗ್ರಂಥ ಆಕರವಾಗಿ ಉಲ್ಲೇಖಿತವಾಗುತ್ತಿರುವುದು ಈ ಕೃತಿಯ ಮೌಲಿಕತೆಯನ್ನು ಎತ್ತಿ ಹಿಡಿಯುತ್ತದೆ ಎಂಬುದು ಈ ಅಧ್ಯಯನದಿಂದ ತಿಳಿಯುತ್ತದೆ. ಹೀಗಾಗಿ ಕಾವೇರಿಯಿಂದಮಾ ಗೋದಾವರಿ ವರಮಮಿರ್ದ ಎಂಬ ಉಕ್ತಿ, ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್ ಎಂಬ ಉಕ್ತಿ ಹಾಗೂ ದಕ್ಷಿಣೋತ್ತರ ಮಾರ್ಗ ಎಂಬ ಭಾಷಿಕ ವಿಭಜನೆ ಇವು ಇಂದಿಗೂ ಮೇಲಿಂದ ಮೇಲೆ ಉಲ್ಲೇಖವಾಗುತ್ತಿವೆ. ಇದರ ಹಿಂದಿನ ಪ್ರೇರಣೆ ಹಾಗೂ ಪರಿಣಾಮಗಳನ್ನು ವಿಸ್ತೃತವಾಗಿ ಅವಲೋಕಿಸುವುದು ಆಗತ್ಯ. ಸಂಸ್ಕೃತ ಹಾಗೂ ಪಾಶ್ಚಿಮಾತ್ಯ ಪ್ರೇರಣೆಗಳನ್ನು ಗಮನದಲ್ಲಿಟ್ಟು ನಡೆವ ಅಧ್ಯಯನಕ್ಕಿಂತ ಭಿನ್ನವಾಗಿ- ಡಾ. ಶೆಟ್ಟರ್ ಅವರು ತಿಳಿಸುವಂತೆ- ಪ್ರಾದೇಶಿಕ ಪ್ರೇರಣೆಯನ್ನು ಸಹ ಗಮನಿಸುವುದು ಅಗತ್ಯವಾಗಿದೆ. ಕನ್ನಡ ಸಾಹಿತ್ಯ ಹಾಗೂ ಭಾಷೆಯ ಮೇಲೆ ಸೋದರ ಭಾಷೆಗಳಾದ ತಮಿಳು ತೆಲುಗು ಭಾಷೆಗಳು, ಅಂತೆಯೇ ವಿದೇಶಿ ಭಾಷೆಗಳಾದ ಇಂಗ್ಲಿಶ್, ಅರಾಬಿಕ್, ಪರ್ಶಿಯನ್ ಇನ್ನಿತರ ಭಾಷೆಗಳ ಪ್ರಭಾವವನ್ನು ಗುರುತಿಸಬೇಕಾಗಿದೆ. ಸಂಸ್ಕೃತ ಭಾಷೆ ಧಾರ್ಮಿಕವಾಗಿ ಮತ್ತು ಭಾವನಾತ್ಮಕವಾಗಿ ಪ್ರಭಾವ ಬೀರಿದಂತೆ, ವಿದೇಶಿ ಭಾಷೆಗಳು ವೈಚಾರಿಕವಾಗಿ, ಆಡಳಿತಾತ್ಮಕವಾಗಿ ಒತ್ತಡವನ್ನು ಹೇರಿವೆ. ಈ ಒತ್ತಡಗಳು ಕನ್ನಡ ಭಾಷೆಯ ಭಾಷಾ ಸ್ವರೂಪ ಹಾಗೂ ಶೈಲಿಯ ಮೇಲೆ ತಮ್ಮ ಪ್ರಭಾವವನ್ನು ಬೀರಿರುವುದು ಖಚಿತವಾಗಿದೆ. ಸ್ವೀಕೃತ ಭಾಷೆಗಳನ್ನು ಪ್ರಮಾಣೀಕರಿಸುವ ನೆಲೆಯಲ್ಲಿ ಸಾಂಪ್ರದಾಯಿಕ ವ್ಯಾಕರಣ ಆರಂಭದಿಂದಲೂ ಅಧ್ಯಯನ ಮಾಡಿದೆ. ಈ ಎಲ್ಲ ನೆಲೆಗಳಲ್ಲೂ ಕನ್ನಡ ಸಾಹಿತ್ಯ ಕೃತಿಗಳನ್ನು ಅವಲೋಕಿಸುವುದು ಉಚಿತವಾಗಿದೆ.

ಡಾ. ಎ. ಮುರಿಗೆಪ್ಪ

ಕುಲಪತಿ